ಬೆಂಗಳೂರು Bengaluru | ಹುಬ್ಬಳ್ಳಿ Hubballi | ಮಂಗಳೂರು Mangaluru | ಕಲಬುರಗಿ Kalaburagi | ದಾವಣಗೆರೆ Davanagere | ಬಾಗಲಕೋಟೆ Bagalakote | ಬೆಳಗಾವಿ Belagavi | ಸಂಪುಟ Volume 68 | ಸಂಚಿಕೆ Issue 100 | ಪುಟ Pages 10 + 2
ಬುಧವಾರ 6 ಮೇ 2026
RNI Regn. No. 3864/59 www.epaper.samyukthakarnataka.com Samyuktha Karnataka @samyuktakarnat2
₹ 5-00

ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ

ಸಂಯುಕ್ತ ಕರ್ನಾಟಕ

ಶತಕದತ್ತ ಓಟ... ತೊಂಬತ್ತರ ನೋಟ
ಕನ್ನಡಿಗರ ಸಾಕ್ಷಿಪ್ರಜ್ಞೆ
samyuktha karnataka

ಮುಸ್ಲಿಮರ ಓಟು ಕಸಿದು ಕಾಂಗ್ರೆಸ್‌ಗೆ ಮಗ್ಗುಲಮುಳ್ಳು ಆಗುತ್ತಾ ಎಸ್‌ಡಿಪಿಐ? 7

ಬಂಗಾಳ: ಚುನಾವಣೋತ್ತರ ಹಿಂಸಾಚಾರ, ಇಬ್ಬರು ಟಿಎಂಸಿ ಕಾರ್ಯಕರ್ತರು ಬಲಿ 9

ಐಪಿಎಲ್‌ನಲ್ಲಿ 277 ಪಂದ್ಯ ಆಡಿ ಕೊಹ್ಲಿ ದಾಖಲೆ ಮುರಿದ ರೋಹಿತ್ ಶರ್ಮ 10

ಡೊನಾಲ್ಡ್ ಟ್ರಂಪ್ ರೀತಿ ಬಂಗಾಳದಲ್ಲಿ ದೀದಿ ಹುಚ್ಚಾಟ!

ನಾನ್ ಕುರ್ಚಿ ಬಿಡಲ್ಲ: ಮಮತಾ

ಮೋಸ ಮಾಡಿ ಬಿಜೆಪಿ ಗೆದ್ದಿದೆ, ಹೀಗಾಗಿ ನಾನು ಸೋತಿಲ್ಲ: ಬಂಗಾಳ ಸಿಎಂ ಬಿಗಿ ಪಟ್ಟು

2021ರಲ್ಲಿ ಬೈಡೆನ್‌ಗೆ ಅಧಿಕಾರ ಬಿಡೋದಿಲ್ಲ ಎಂದು ಟ್ರಂಪ್ ಹೀಗೇ ಗಲಾಟೆ ಮಾಡಿದ್ದರು

ಕೋಲ್ಕತಾ: 2020ರ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಸೋತರೂ ವೈಟ್ ಹೌಸ್ ಬಿಟ್ಟು ಬರಲು ಡೊನಾಲ್ಡ್ ಟ್ರಂಪ್ ನಿರಾಕರಿಸಿದಂತೆಯೇ ಈಗ ಪಶ್ಚಿಮ ಬಂಗಾಳ



ಚುನಾವಣೆಯಲ್ಲಿ ಹೀನಾಯವಾಗಿ ಸೋಲುಂಡ ಬಳಿಕವೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ ಎಂದು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಪಟ್ಟು ಹಿಡಿದಿದ್ದಾರೆ.

ಸೋಮವಾರ ಪ್ರಕಟವಾದ ಪಶ್ಚಿಮ ಬಂಗಾಳ ಫಲಿತಾಂಶದಲ್ಲಿ ಬಿಜೆಪಿ 207 ಸ್ಥಾನಗಳೊಂದಿಗೆ ಬಹುಮತ ಪಡೆದಿದ್ದರೆ, ಟಿಎಂಸಿ ಕೇವಲ 80 ಸ್ಥಾನಗಳಿಗೆ ಸೀಮಿತವಾಗಿದೆ. ಸ್ವತಃ ಮಮತಾ ಅವರೇ ಭವಾನಿಪುರದಲ್ಲಿ ಸೋಲುಂಡಿದ್ದಾರೆ.

ಈ ಬೆನ್ನಲ್ಲೇ ಮಂಗಳವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿರುವ ಅವರು, ನಾನು ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ. ನಾವು ಚುನಾವಣೆಯಲ್ಲಿ ಸೋತಿಲ್ಲ, ನಮ್ಮನ್ನು ಪಿತೂರಿಯ ಮೂಲಕ ಸೋಲಿಸಲಾಗಿದೆ. ಇದು ಜನರ ತೀರ್ಪಲ್ಲ, ಬದಲಾಗಿ ಚುನಾವಣಾ ಆಯೋಗ ಮತ್ತು ಬಿಜೆಪಿ ಲೂಟಿ ಎಂದು ಆರೋಪಿಸಿದರು. ಈ ಹೇಳಿಕೆಯು 2021ರಲ್ಲಿ ಟ್ರಂಪ್ ಅವರು "ನಮ್ಮಿಂದ ಚುನಾವಣೆಯನ್ನು ಕದಿಯಲಾಗಿದೆ" ಎಂದು ಮಾಡಿದ್ದ ಆರೋಪವನ್ನೇ ಹೋಲುತ್ತಿದೆ. ಪುಟ 7

100 ಕ್ಷೇತ್ರ ಲೂಟಿ

"ಚುನಾವಣೆಯಲ್ಲಿ ನಾನು ಸೋತಿಲ್ಲ. ಪಿತೂರಿ ನಡೆಸಿ, ವ್ಯವಸ್ಥಿತವಾಗಿ ನಮ್ಮನ್ನು ಸೋಲಿಸಲಾಗಿದೆ. ಇದು ಜನರ ತೀರ್ಪಲ್ಲ, ಬದಲಾಗಿ ಬಿಜೆಪಿ ಮತ್ತು ಚುನಾವಣಾ ಆಯೋಗದಿಂದ 100 ಕ್ಷೇತ್ರಗಳ ಲೂಟಿ ಮಾಡಲಾಗಿದೆ. ನಮ್ಮಿಂದ ಚುನಾವಣೆಯಲ್ಲಿ ಕದಿಯಲಾಗಿದೆ. ಹೀಗಾಗಿ ನಾನು ರಾಜೀನಾಮೆ ನೀಡುವ ಪ್ರಶ್ನೆಯೇ ಬರಲ್ಲ.

▪ ಮಮತಾ ಬ್ಯಾನರ್ಜಿ, ಟಿಎಂಸಿ ನಾಯಕಿ

ನಿರ್ಗಮಿತ ಸಿಎಂ ಕುರ್ಚಿ ಬಿಡದಿದ್ದರೆ ಮುಂದೇನಾಗುತ್ತೆ?

- ಮುಖ್ಯಮಂತ್ರಿಯೊಬ್ಬರು ವಿಧಾನಸಭೇಲಿ ಬಹುಮತ ಕಳೆದುಕೊಂಡಾಗ ಮತ್ತು ಚುನಾವಣೇಲಿ ಸೋತಾಗ ರಾಜೀನಾಮೆ ನೀಡುವುದು ಅನಿವಾರ್ಯ ಆಗಿರುತ್ತದ
- ಚುನಾವಣೇಲಿ ಬಹುಮತ ಕಳೆದುಕೊಂಡ ಸರ್ಕಾರಕ್ಕೆ ರಾಜ್ಯಪಾಲರು ಬಹುಮತ ಸಾಬೀತುಪಡಿಸಲು ಅಥವಾ ರಾಜೀನಾಮೆ ನೀಡಲು ಸೂಚಿಸುವ ಅಧಿಕಾರ ಇದೆ.
- ಬಹುಮತವಿಲ್ಲದಿದ್ದರೂ ಸಿಎಂ ಪಟ್ಟ ಬಿಡದಿದ್ದರೆ, ಸಂವಿಧಾನದ ಆರ್ಟಿಕಲ್ 164ರ ಅಡಿಯಲ್ಲಿ ರಾಜ್ಯಪಾಲರು ಸರ್ಕಾರವನ್ನು ವಜಾಗೊಳಿಸಬಹುದು.
- ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷದ ನಾಯಕನನ್ನು, ಸರ್ಕಾರ ರಚಿಸಲು ರಾಜ್ಯಪಾಲರು ಆಹ್ವಾನಿಸುತ್ತಾರೆ.
- ಮಮತಾ ತಮ್ಮ ಹಠ ಮುಂದುವರಿಸಿದರೇ ಈ ಬಿಕ್ಕಟ್ಟು ಸುಪ್ರೀಂ ಮೆಟ್ಟಿಲೇರುತ್ತದೆ.

9ಕ್ಕೆ ಬಿಜೆಪಿ ಸಿಎಂ ಸುವೇಂದು ಪ್ರಮಾಣ?

ಪಶ್ಚಿಮ ಬಂಗಾಳದಲ್ಲಿ ದಶಕಗಳ ಟಿಎಂಸಿ ಆಡಳಿತಕ್ಕೆ ಅಂತ್ಯ ಹಾಡಿರುವ ಬಿಜೆಪಿ ಇದೀಗ ಸರ್ಕಾರ ರಚನೆಗೆ ಸಜ್ಜಾಗಿವೆ. ಮೇ 9ರಂದು ರವೀಂದ್ರನಾಥ್ ಠಾಗೂರ್ ಅವರ ಜನ್ಮದಿನದಂದೇ ಸುವೇಂದು ಅಧಿಕಾರಿ ಮುಖ್ಯಮಂತ್ರಿ ಆಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಯಿದೆ. ಅದಾಗ್ಯೂ ದಿಲೀಪ್ ಘೋಷ್ ಅವರ ಹೆಸರೂ ಸಿಎಂ ರೇಸ್‌ನಲ್ಲಿ ಕೇಳಿಬರುತ್ತಿದೆ. ಈ ನಡುವೆ ಪಶ್ಚಿಮ ಬಂಗಾಳದ ಮುಂದಿನ ರಾಜನೀತಿ ನಿರ್ಧರಿಸಲು ಸಚಿವ ಅಮಿತ್ ಶಾ ಅವರನ್ನು ಕೇಂದ್ರ ವೀಕ್ಷಕರನ್ನಾಗಿ ನೇಮಿಸಲಾಗಿದೆ.

ಬಿಜೆಪಿ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದ ಎಸ್‌ಐಆರ್

ಪಶ್ಚಿಮ ಬಂಗಾಳದಲ್ಲಿ 5000ದಿಂದ 15,000 ಮತಗಳ ಡಿಲೀಟ್ ಆಗಿರುವ 62 ಕ್ಷೇತ್ರಗಳಿವೆ. ಈ ಪೈಕಿ 50 ಕ್ಷೇತ್ರಗಳಲ್ಲಿ ಬಿಜೆಪಿ ಜಯ ಸಾಧಿಸಿದೆ. 15ರಿಂದ 25 ಸಾವಿರ ಮತಗಳು ಡಿಲೀಟ್ ಆಗಿರುವ 67 ಕ್ಷೇತ್ರಗಳಿದ್ದು, ಆ ಪೈಕಿ 47 ಕ್ಷೇತ್ರಗಳಲ್ಲಿ ಬಿಜೆಪಿ, 19ರಲ್ಲಿ ಟಿಎಂಸಿ ಮತ್ತು ಒಂದರಲ್ಲಿ ಕಾಂಗ್ರೆಸ್ ಗೆದ್ದಿದೆ. 25 ಸಾವಿರಕ್ಕೂ ಹೆಚ್ಚು ಮತ ಡಿಲೀಟ್ ಆಗಿರುವ 147 ಕ್ಷೇತ್ರಗಳ ಪೈಕಿ 95ರಲ್ಲಿ ಬಿಜೆಪಿ ಗೆದ್ದಿದ್ದರೆ, 51ರಲ್ಲಿ ಟಿಎಂಸಿ ಮತ್ತು 1ರಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ.

ಬಂಗಾಳ ಜಯ: ಮೋದಿಗೆ ಟ್ರಂಪ್ ಅಭಿನಂದನೆ!

ಬಂಗಾಳದಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸಿದ್ದಕ್ಕೆ ಪ್ರಧಾನಿ ಮೋದಿ ಅವರಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಭಿನಂದನೆ ಕೋರಿರುವುದಾಗಿ ವೈಟ್‌ಹೌಸ್ ತಿಳಿಸಿದೆ. ಇತ್ತೀಚಿನ ಚುನಾವಣೆಯಲ್ಲಿ ಸಾಧಿಸಿರುವ ಐತಿಹಾಸಿಕ ಜಯಕ್ಕೆ ಟ್ರಂಪ್ ಅಭಿನಂದನೆ ಕೋರಿದ್ದಾರೆ ಎಂದು ವೈಟ್‌ಹೌಸ್ ವಕ್ತಾರರಾದ ಕುಶ್ ದೇಸಾಯಿ ಹೇಳಿದ್ದಾರೆ.

ಸರ್ಕಾರ ರಚನೆಗೆ ವಿಜಯ್ ಕಸರತ್ತು

ಇಂದು ಗೌರ್ನರ್ ಬಳಿ ಹಕ್ಕು ಮಂಡನೆ? ನಾಳೆ ನೆಹರೂ ಸ್ಟೇಡಿಯಂನಲ್ಲಿ ಶಪಥ?

ಚೆನ್ನೈ: ತಮಿಳುನಾಡಿನಲ್ಲಿ 50 ವರ್ಷಗಳ ಕಾಲ ಆಡಳಿತ ನಡೆಸಿದ ದ್ರಾವಿಡ ಪಕ್ಷಗಳ ಭದ್ರಕೋಟೆ ಛಿದ್ರಗೊಳಿಸಿದ ಟಿವಿಕೆ ನಾಯಕ ವಿಜಯ್ ಈಗ ಹೊಸ ಸರ್ಕಾರ

ರಚನೆಗೆ ಕಸರತ್ತು ನಡೆಸಿದ್ದಾರೆ. ಚೆನ್ನೈಯ ಜವಾಹರ್‌ಲಾಲ್ ನೆಹರೂ ಇನ್‌ಡೋರ್ ಸ್ಟೇಡಿಯಂನಲ್ಲಿ ಮೇ 7ರಂದು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲು ಅವರು ನಿರ್ಧರಿಸುವುದರ ಜೊತೆಗೆ ಸರಳ ಬಹುಮತಕ್ಕೆ ಅಗತ್ಯವಿರುವ 10 ಸ್ಥಾನಗಳ ಕೊರತೆ ನೀಗಿಸುವ ಪ್ರಯತ್ನ ಮುಂದುವರಿಸಿದ್ದಾರೆ. ವಿಜಯ್ ಅವರ ಟಿವಿಕೆ ಒಟ್ಟು 108 ಸ್ಥಾನಗಳಲ್ಲಿ ಗೆದ್ದಿದೆ.

ಇದೇ ವೇಳೆ ವಿಜಯ್ ಅವರು ರಾಜ್ಯಪಾಲ ರನ್ನು ಬುಧವಾರ ಭೇಟಿಯಾಗಿ ಸರ್ಕಾರ ರಚನೆಗೆ ಅಹವಾಲು ಮಂಡಿಸುವ ಸಾಧ್ಯತೆ ಇದೆ. ವಿಜಯ್ ಅವರೇ ಟಿವಿಕೆ ಪ್ರಮುಖರಾಗಿರುವುದರಿಂದ ವಿಧಾನಸಭೆಯಲ್ಲಿ ಅವರು ಪಕ್ಷದ ನಾಯಕರಾಗಿರುತ್ತಾರೆ. ತನ್ಮೂಲಕ ಮುಖ್ಯಮಂತ್ರಿ ಪದವಿಗೇರಲಿದ್ದಾರೆ.

ಈ ಮಧ್ಯೆ ತಿರುಚ್ಚಿ ಹಾಗೂ ಪೆರಂಬೂರು ಕ್ಷೇತ್ರಗಳಲ್ಲಿ ಜಯ ದಾಖಲಿಸಿರುವ ವಿಜಯ್ ಈಗ ತಿರುಚ್ಚಿ ಕ್ಷೇತ್ರಕ್ಕೆ ರಾಜೀನಾಮೆ ನೀಡಿ ಪೆರಂಬೂರು ಕ್ಷೇತ್ರಗಳನ್ನು ಉಳಿಸಿಕೊಳ್ಳಲು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನಿಗೆ ಧನ್ಯವಾದ

"ರಾಜಕೀಯವನ್ನೂ ಮೀರಿ, ನಾವು ತಮಿಳುನಾಡಿನ ಪ್ರಗತಿ ಮತ್ತು ಜನರ ಕಲ್ಯಾಣದ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸುತ್ತೇವೆ. ಈ ಪ್ರಯತ್ನದಲ್ಲಿ ಕೇಂದ್ರ ಸರ್ಕಾರದ ಬೆಂಬಲವನ್ನು ಎದುರು ನೋಡುತ್ತಿದ್ದೇವೆ

▪ ವಿಜಯ್, ಟಿವಿಕೆ ನಾಯಕ

ಬಹುಮತ ಹೇಗೆ ಗಿಟ್ಟಿಸಬಹುದು?

- ಪಿಎಂಕೆ, ಎಡಪಕ್ಷಗಳು, ವಿಸಿಕೆ ಪಕ್ಷಗಳ ಬೆಂಬಲ ಪಡೆದರೆ ಟಿವಿಕೆ ಬಹುಮತದ ಬಲ 121ಕ್ಕೇರುವ ಸಾಧ್ಯತೆ ಇದೆ.
- ಐದು ಸ್ಥಾನ ಗೆದ್ದಿರುವ ಕಾಂಗ್ರೆಸ್ ಮತ್ತು ಸಣ್ಣಪುಟ್ಟ ಪಕ್ಷಗಳ ಬೆಂಬಲಕ್ಕೆ ಮೊರೆ ಹೋದರೂ ಬಹುಮತ ನಿಶ್ಚಿತ
- ಟಿವಿಕೆ ಭರವಸೆಗಳ ಈಡೇರಿಸಲು ಕೇಂದ್ರದ ಅನುದಾನ ಅಗತ್ಯವಿರುವುದರಿಂದ ಎಐಎಡಿಎಂಕೆ ಬಾಹ್ಯ ಬೆಂಬಲ ಕೋರಬಹುದು

ಪಿಣರಾಯಿ, ಸ್ಟಾಲಿನ್ ರಿಸೈನ್; ಕೇರಳ ಸಿಎಂ ಗಾದಿಗೆ ಪೈಪೋಟಿ

ದಿಲ್ಲಿಗೆ ತೆರಳಿದ ಸಿಎಂ ಆಕಾಂಕ್ಷಿ ವೇಣುಗೋಪಾಲ್

ತಿರುವನಂತಪುರಂ: ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ. ಕೇರಳಂ

ವಿಧಾನಸಭಾ ಚುನಾವಣೆಯಲ್ಲಿ 2 ದಶಕಗಳ ನಂತರ ಕಾಂಗ್ರೆಸ್ ನೇತೃತ್ವದ ಯು.ಡಿಎಫ್ (ಸಂಯುಕ್ತ ಪ್ರಜಾಸತ್ತಾತ್ಮಕ ರಂಗ) ಸ್ಪಷ್ಟ ಬಹುಮತಗೊಂದಿಗೆ ವಿಜಯ ಸಾಧಿಸಿದ ನಂತರ ಇದೀಗ ಮುಖ್ಯಮಂತ್ರಿ ಗಾದಿಗೆ ಪೈಪೋಟಿ ಆರಂಭವಾಗಿದೆ. ಮುಖ್ಯಮಂತ್ರಿ ರೇಸ್‌ನಲ್ಲಿ ಪ್ರಮುಖವಾಗಿ ಕಾಂಗ್ರೆಸ್‌ನ ಮೂವರು ಕಾಣಿಸಿಕೊಂಡಿದ್ದಾರೆ. ಪುಟ 7

- ವಿಧಾನಸಭೆ ವಿರೋಧಪಕ್ಷದ ನಾಯಕರಾಗಿದ್ದ ವಿ.ಡಿ.ಸತೀಶನ್, ಹಿರಿಯ ನಾಯಕ ರಮೇಶ್ ಚೆನ್ನಿತಾಲ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮುಖ್ಯಮಂತ್ರಿ ಹುದ್ದೆಯ ಪ್ರಮುಖ ಆಕಾಂಕ್ಷಿಗಳು
- ಎಐಸಿಸಿ ಪ್ರತಿನಿಧಿಗಳು ಶಾಸಕರೊಂದಿಗೆ ಸಮಾಲೋಚನೆ ನಡೆಸಿ, ಇನ್ನೊಂದು ವಾರದಲ್ಲಿ ನೂತನ ಮುಖ್ಯಮಂತ್ರಿಯ ಆಯ್ಕೆ ಮಾಡಲು ಹೈಕಮಾಂಡ್‌ನಿಂದ ತಯಾರಿ ನಡೆದಿದೆ

ಬಿಜೆಪಿ ಕ್ರಿಮಿನಲ್ ಸಂಚಿನಿಂದ ಜೀವರಾಜ್ ಗೆಲುವು: ಸಿಎಂ ಕಿಡಿ

250 ಮತಗಳನ್ನು ತಿದ್ದಿ ಅಕ್ರಮ ಎಸಗಿರುವ ಬಿಜೆಪಿ

ಸಂ.ಕ.ಸಮಾಚಾರ, ಬೆಂಗಳೂರು

ಶೃಂಗೇರಿಯಲ್ಲಿ ನಡೆದ ಅಂಚೆ ಮತಗಳ ಮರು ಎಣಿಕೆಯಲ್ಲಿ ಬಿಜೆಪಿಯವರು ಕ್ರಿಮಿನಲ್ ಪಿತೂರಿ ಮಾಡಿ ವೋಟ್ ಚೋರಿ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಆರೋಪ ಮಾಡಿದರು.

ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕೋರ್ಟ್ ಆದೇಶದ ಮೇರೆಗೆ ಶೃಂಗೇರಿ ಕ್ಷೇತ್ರದಲ್ಲಿ ಅಂಚೆ ಮತಗಳ ಮರು ಎಣಿಕೆ ಆಯಿತು. ರಾಜೇಗೌಡ ಕಳೆದ ವಿಧಾನಸಭೆಯಲ್ಲಿ 201 ಮತಗಳಿಂದ ಗೆದ್ದಿದ್ದರು. ರಾಜೇಗೌಡಗೆ ಇವಿಎಂನಲ್ಲಿ 59,171 ಮತ, 569 ಅಂಚೆಮತಗಳು ಬಂದಿತ್ತು, ಪುಟ 7

ಕಾನೂನು ಹೋರಾಟ ನಡೆಸುತ್ತೇವೆ: ಡಿಕೆಶಿ

"ಶೃಂಗೇರಿ ಕ್ಷೇತ್ರದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಬಿದ್ದಿರುವ ಅಂಚೆ ಮತಗಳನ್ನು ತಿದ್ದುವ ಮೂಲಕ ಮರುಎಣಿಕೆಯಲ್ಲಿ ಅಸಿಂಧುಗೊಳಿಸಲಾಗಿದೆ. ಇದರ ವಿರುದ್ಧ ಕಾನೂನು ಹೋರಾಟ ಮಾಡ್ತೀವಿ. ಚುನಾವಣೆ ಬಳಿಕ ಬಿಜೆಪಿ ಅಭ್ಯರ್ಥಿ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡು ಅಂಚೆ ಮತಗಳನ್ನು ತಿದ್ದಲಾಗಿದೆ.

▪ ಡಿ.ಕೆ.ಶಿವಕುಮಾರ್, ಡಿಸಿಎಂ

ಸಂಯುಕ್ತ ಕರ್ನಾಟಕ
ಜಾಣರ ಗುರು
1 ರೂ.ಗೆ ಮಾಹಿತಿಗಳ ರಸದೌತಣ
ಹದಿಹರೆಯದವರಿಗೆ ಅರಿವಿನ ಹರಿವು
ಇಂದೇ ಕೊಂಡು ಓದಿರಿ
ಪ್ರತಿಗಳಿಗಾಗಿ: ಬಸಪ್ಪ-70220 22063

ವಿಜಯ್ CM ಯಾರ್ ಯಾರ ಬೆಂಬಲ?
QR CODE ಸ್ಕ್ಯಾನ್ ಮಾಡಿ ವಿಡಿಯೋ ನೋಡಿ
Samyukta_Karnataka

ಜಮೀರ್ ಮನೇಲಿ ಸಂಬಂಧಿಕರಿಂದಲೇ 1 ಕೋ. ಚಿನ್ನ ಕಳವು

ಬೆಂಗಳೂರು: ಕಳೆದ ತಿಂಗಳು ವಸತಿ ಸಚಿವ ಬಿ.ಝಡ್ ಜಮೀರ್ ಅಹ್ಮದ್ ಖಾನ್ ಮನೆಯಲ್ಲಿ 1.13 ಕೋಟಿ ರೂ. ಮೌಲ್ಯದ ಚಿನ್ನಾಭರಣಗಳನ್ನು ಕದ್ದ ಆರೋಪದ ಮೇಲೆ ಇಬ್ಬರನ್ನು ಬಂಧಿಸಲಾಗಿದೆ. ಏ.15ರಂದು ಸಚಿವರ ಪುಲಕೇಶಿನಗರದ ನಿವಾಸದಲ್ಲಿ ಕಳ್ಳತನ ನಡೆದಿದ್ದು, ಶಿವಾಜಿನಗರ ಠಾಣೆಯಲ್ಲಿ ದೂರು ದಾಖಲಾಗಿತ್ತು. ಸಚಿವರ ಸಂಬಂಧಿಯೇ ಕಳ್ಳತನದ ಮಾಸ್ಟರ್ ಮೈಂಡ್ ಪೊಲೀಸರು ತಿಳಿಸಿದ್ದಾರೆ.

ಪಿಐಎಲ್ ಈಗ ಪೈಸಾ ಇಂಟ್ರೆಸ್ಟ್ ಲಿಟಿಗೇಶನ್ ಆಗಿದೆ: ಸುಪ್ರೀಂ ಕಿಡಿ

ನವದೆಹಲಿ: ಸಾರ್ವಜನಿಕ ಹಿತಾಸಕ್ತಿ ಅರ್ಜಿಯು ದುರ್ಬಳಕೆ ಆಗುತ್ತಿದ್ದು ಈಗ ಪೈಸಾ ಮತ್ತು ರಾಜಕೀಯ ಹಿತಾಸಕ್ತಿ

ಅರ್ಜಿಯಾಗಿ ಮಾರ್ಪಟ್ಟಿದೆ ಎಂದು ಮಂಗಳವಾರ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಸಿಜೆಐ ನೇತೃತ್ವದ ಪೀಠದಲ್ಲಿ ನ್ಯಾ. ಬಿ.ವಿ.ನಾಗರತ್ನ ಅವರು ಮಾತನಾಡಿ, ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಈಗ ಖಾಸಗಿ ಹಿತಾಸಕ್ತಿ, ಪ್ರಚಾರದ ಹಿತಾಸಕ್ತಿ, ಪೈಸಾ ಹಿತಾಸಕ್ತಿ ಮತ್ತು ರಾಜಕೀಯ ಹಿತಾಸಕ್ತಿಯ ಅರ್ಜಿಗಳಾಗಿ ಮಾರ್ಪಟ್ಟಿವೆ ಎಂದರು.

ಸುಪ್ರೀಂ ಜಡ್ಜ್‌ಗಳ ಸಂಖ್ಯೆ 38ಕ್ಕೇರಿಸಲು ಕೇಂದ್ರದ ಸಮ್ಮತಿ

ನವದೆಹಲಿ: ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಾಧೀಶರ ಪ್ರಮಾಣವನ್ನು 34 ರಿಂದ 38ಕ್ಕೆ ಏರಿಸಲು ಮಂಗಳವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಈ ಹಿಂದೆ 2019ರಲ್ಲಿ ನ್ಯಾಯಾಧೀಶರುಗಳ ಸಂಖ್ಯೆಯನ್ನು (ಮು.ನ್ಯಾ. ಹೊರತು) 30 ರಿಂದ 33ಕ್ಕೆ ಏರಿಸಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕ್ಯಾಬಿನೆಟ್ ಸಭೆಯಲ್ಲಿ 'ಸುಪ್ರೀಂ ಕೋರ್ಟ್ ತಿದ್ದುಪಡಿ ಮಸೂದೆ 2026ರಲ್ಲಿ ಸಂಖ್ಯೆಯನ್ನು 4ಕ್ಕೆ ಏರಿಸಲು 1956ರ ಕಾಯ್ದೆಗೆ ತಿದ್ದುಪಡಿ ತರಬೇಕಾಗುತ್ತದೆ ಎಂದು ಸಭೆಗೆ ತಿಳಿಸಲಾಗಿದೆ.

ಇರಾನ್ ದಾಳಿಯಲ್ಲಿ 3 ಭಾರತೀಯರಿಗೆ ಗಾಯ: ಖಂಡನೆ

ಅಬುಧಾಬಿ: ಯುಎಇನ ಪುಜೈರಾ ತೈಲ ಕೈಗಾರಿಕಾ ವಲಯದ ಮೇಲೆ ಇರಾನ್ ನಡೆಸಿದ ಡ್ರೋನ್ ದಾಳಿಯಲ್ಲಿ ಮೂವರು ಭಾರತೀಯರು ಗಾಯಗೊಂಡಿದ್ದಾರೆ. ಆಯಕಟ್ಟಿನ ಬಂದರು ನಗರಿ ಪುಜೈರಾದ ಮೇಲೆ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆದಾಗ ಅಲ್ಲಿ ಕೆಲಸ ಮಾಡುತ್ತಿದ್ದ ಮೂವರು ಭಾರತೀಯ ಕಾರ್ಮಿಕರು ಗಾಯಗೊಂಡಿದ್ದಾರೆ. ಈ ದಾಳಿಯನ್ನು ಪ್ರಧಾನಿ ಮೋದಿ ಖಂಡಿಸಿದ್ದು, ನಾಗರಿಕರು ಹಾಗೂ ಮೂಲಸೌಕರ್ಯಗಳ ಮೇಲಿನ ದಾಳಿ ಸ್ವೀಕಾರಾರ್ಹವಲ್ಲ ಎಂದಿದ್ದಾರೆ.

ಪಂಚಮಸಾಲಿ ಹರಪೀಠದ ಸುತ್ತ ನಿಷೇಧಾಜ್ಞೆ ಜಾರಿ

ದಾವಣಗೆರೆ: ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ನಡೆದಿರುವ ಗೊಂದಲದಿಂದಾಗಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಮೇ 31ರವರೆಗೆ ಮಠದ ಸುತ್ತ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ವಿವರ: 6

ಗೋಡೆ ಕುಸಿತದ ಪ್ರಕರಣ: ತನಿಖೆಗೆ 'ಲೋಕಾ' ತಂಡ 7

ಕುಂಚತಂತ್ರ

ಕಾಂತೇಶ ಮ. ಬಡಿಗೇರ

8ನೇ ಕ್ಲಾಸ್‌ವರೆಗೆ ಪ್ರಾಥಮಿಕ, 12ನೇ ಕ್ಲಾಸ್‌ವರೆಗೆ ಹೈಸ್ಕೂಲ್

ರಾಜ್ಯದ ನೂತನ ಶಿಕ್ಷಣ ನೀತಿ | ನಾಳೆ ಸಚಿವ ಸಂಪುಟದ ಸಭೆಯಲ್ಲಿ ನಿರ್ಣಯ ಆಗುವ ಸಾಧ್ಯತೆ

ಸಂ.ಕ.ಸಮಾಚಾರ, ಬೆಂಗಳೂರು

ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಎನ್‌ಡಿಎ ಸರಕಾರ ಜಾರಿಗೊಳಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಸಂಪೂರ್ಣವಾಗಿ ಹಿಂಪಡೆದು ಕರ್ನಾಟಕಕ್ಕೆ ಪ್ರತ್ಯೇಕ ರಾಜ್ಯ ಶಿಕ್ಷಣ ನೀತಿಯನ್ನು (ಎಸ್‌ಇಪಿ) ರಾಜ್ಯ ಸರಕಾರ ಘೋಷಿಸುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಮೇ 7ರಂದು ಗುರುವಾರ ನಡೆಯಲಿರುವ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಶಿಕ್ಷಣ ನೀತಿ ಆಯೋಗವು ನೀಡಿರುವ ಅಂತಿಮ ವರದಿಯ ಕುರಿತಂತೆ ಪರಾಮರ್ಶೆ ನಡೆಯುವ ಸಾಧ್ಯತೆಗಳಿದ್ದು, ಇದರ ಬೆನ್ನಲ್ಲೇ ಮುಂದಿನ ಶೈಕ್ಷಣ ವರ್ಷದ (2026–2027) ಆರಂಭಕ್ಕೂ ಮೊದಲೇ ಕರ್ನಾಟಕ ರಾಜ್ಯ ಶಿಕ್ಷಣ ನೀತಿ (ಕೆಎಸ್‌ಇಪಿ) ಘೋಷಿಸುವ ನಿರೀಕ್ಷೆ ಇದೆ.

ಏನಿದು ನೂತನ ರಾಜ್ಯ ಶಿಕ್ಷಣ ನೀತಿ?: ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬಂದ ಬೆನ್ನಲ್ಲೇ 2023ರ ಅಕ್ಟೋಬರ್ 11ರಂದು ಶಿಕ್ಷಣ ತಜ್ಞ ಪ್ರೊ.ಸುಖದೇವ್ ಥೋರಟ್ ನೇತೃತ್ವದಲ್ಲಿ ರಾಜ್ಯ ಶಿಕ್ಷಣ ನೀತಿ ಆಯೋಗವನ್ನು ರಚಿಸಲಾಗಿತ್ತು. ಈ ಆಯೋಗವು 2024ರ ಮೇನಲ್ಲಿ ಮಧ್ಯಂತರ ವರದಿ ಹಾಗೂ 2025ರ ಆಗಸ್ಟ್ 9ರಂದು ಅಂತಿಮ ವರದಿಯನ್ನು ಸಲ್ಲಿಸಿತ್ತು. ಈ ಎರಡೂ ವರದಿಗಳ ಆಧಾರದ ಮೇಲೆ ಇದೀಗ ನೂತನ ರಾಜ್ಯ ಶಿಕ್ಷಣ ನೀತಿ ಅಂತಿಮಗೊಳಿಸಲು ಸಚಿವ ಸಂಪುಟ ಮುಂದಾಗಿದೆ.

ಥೋರಟ್ ಆಯೋಗದ ಶಿಫಾರಸುಗಳೇನು?

- ಶಾಲಾ ಶಿಕ್ಷಣದಲ್ಲಿ 2 ವರ್ಷ ಪೂರ್ವಪ್ರಾಥಮಿಕ, 8 ವರ್ಷ ಪ್ರಾಥಮಿಕ ಹಾಗೂ ನಾಲ್ಕು ವರ್ಷ ಪ್ರೌಢಶಿಕ್ಷಣ ಅನುಸರಿಸುವುದು. ಅಂದರೆ 2+8+4ರ ಆಧಾರದಲ್ಲಿ 2 ವರ್ಷ ಪ್ರಿಪ್ರೈಮರಿ ನಂತರ 8 ವರ್ಷ ಪ್ರಾಥಮಿಕ ಹಾಗೂ 9ನೇ ತರಗತಿಯಿಂದ 12ನೇ ತರಗತಿವರೆಗೆ ಪ್ರೌಢ ಶಿಕ್ಷಣ ಅನುಸರಿಸುವುದು.
- ಒಂದನೇ ತರಗತಿ ಪ್ರವೇಶಕ್ಕೆ 6 ವರ್ಷ ವಯಸ್ಸು ನಿಗದಿಪಡಿಸಿ, 3 ತಿಂಗಳ ವಿನಾಯ್ತಿ ಕಲ್ಪಿಸುವುದು.
- ರಾಜ್ಯದಲ್ಲಿ ಪ್ರೌಢಶಿಕ್ಷಣವನ್ನು ಅಂದರೆ 9ರಿಂದ 12ನೇ ತರಗತಿ ಕಲಿಕೆ ಎಲ್ಲರಿಗೂ ದೊರೆಯಲು ಅನುಕೂಲವಾಗುವಂತೆ ಸಾರ್ವತ್ರೀಕರಿಸುವುದು.
- ವಲಸೆ ಕಾರ್ಮಿಕರ ಮಕ್ಕಳಿಗಾಗಿ ವಸತಿ ಶಾಲೆಗಳನ್ನು ಆರಂಭಿಸುವುದು. ಸರಕಾರಿ ಶಾಲೆಗಳ ಗುಣಮಟ್ಟ ವನ್ನು ಕೇಂದ್ರೀಯ ವಿದ್ಯಾಲಯ ಮಟ್ಟಕ್ಕೆ ಬೆಳೆಸುವುದು.
- ಅತಿಥಿ ಶಿಕ್ಷಕರ ಪದ್ಧತಿ ತೆಗೆದು ಗುಣಮಟ್ಟದ ಶಿಕ್ಷಣಕ್ಕೆ ಕಾಯಂ ಶಿಕ್ಷಕರ ನೇಮಕಾತಿ ನಡೆಸುವುದು. ಪುಟ 7

ಭಾರತದ ಇಬ್ಬರು ಪತ್ರಕರ್ತರಿಗೆ ಅತ್ಯುನ್ನತ ಪುಲಿಟ್ಜರ್ ಪ್ರಶಸ್ತಿ ಗರಿ

ತನಿಖಾ ವರದಿಗಾಗಿ ಆನಂದ್, ಸುಪರ್ಣಗೆ ಗೌರವ

ನವದೆಹಲಿ: ಭಾರತದಲ್ಲಿ ಸೈಬರ್ ಕ್ರೈಂ (ಡಿಜಿಟಲ್

ಅರೆಸ್ಟ್) ಕುರಿತು ಬ್ಲೂಂಬರ್ಗ್ ಮಾಧ್ಯಮ ಸಂಸ್ಥೆಗೆ ಸಚಿತ್ರ ವರದಿ ಹಾಗೂ ಕಾರ್ಯಕ್ರಮ ತಯಾರಿಸಿಕೊಟ್ಟ ಭಾರತದ ಇಬ್ಬರು ಪತ್ರಕರ್ತರಿಗೆ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿ ಲಭಿಸಿದೆ. ಭಾರತೀಯ ಪತ್ರಕರ್ತರಾದ ಆನಂದ್ ಆರ್.ಕೆ. ಹಾಗೂ ಸುಪರ್ಣ ಶರ್ಮ ಅವರು ಈ ಪ್ರಶಸ್ತಿಯನ್ನು ಮತ್ತೊಬ್ಬ ಪತ್ರಕರ್ತರಾದ ನಟಾಲಿಯೆ ಒಬಿಕೊ ಎಂಬುವರೊಂದಿಗೆ ಹಂಚಿಕೊಳ್ಳಲಿದ್ದಾರೆ. ಪುಟ 7

ಗಮನ ಸೆಳೆದ ವರದಿ

ವಿಷುಯಲ್ ಆರ್ಟಿಸ್ಟ್ ಆನಂದ್, ತನಿಖಾ ವರದಿಗಾರ್ತಿ ಸುಪರ್ಣ ಮತ್ತು ನಟಾಲಿಮೂವರೂ ಸೇರಿ 'ಪ್ರಾಜೆಕ್ಟ್ ಟ್ರ್ಯಾಪ್ಡ್' ಹೆಸರಿನಲ್ಲಿ ಬ್ಲೂಮ್‌ಬರ್ಗ್‌ಗೆ ಭಾರತದ ನರರೋಗ ತಜ್ಞರೊಬ್ಬರ ಡಿಜಿಟಲ್ ಅರೆಸ್ಟ್ ಕುರಿತ ವರದಿಯೊಂದು ಮಾಡಿದ್ದರು. ಕಾಮಿಕ್ ರೀತಿಯ ದೃಶ್ಯ ಸಹಿತವಾದ ಈ ವರದಿಯಲ್ಲಿ ಡಿಜಿಟಲ್ ಸ್ಕ್ಯಾಮ್‌ಗಳ ಕುರಿತು ಜಾಗತಿಕ ಸವಾಲುಗಳ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಲಾಗಿತ್ತು.

₹60000 ಕೋಟಿ ಬಯೋಕಾನ್ ಸಾಮ್ರಾಜ್ಯಕ್ಕೆ ಕ್ಲೇರ್ ಉತ್ತರಾಧಿಕಾರಿ

ಸೋದರಸೊಸೆಗೆ ಚುಕ್ಕಾಣಿ ನೀಡಲು ಕಿರಣ್ ಸಜ್ಜು

ನವದೆಹಲಿ: ಬಯೋಕಾನ್ ಸಂಸ್ಥಾಪಕಿ ಕಿರಣ್ ಮಜುಂದಾರ್ ಷಾ ಈಗ ತಮ್ಮ ಜೈವಿಕ ತಂತ್ರಜ್ಞಾನ ಕಂಪನಿಗೆ ಸೊಸೆ ಕ್ಲೇರ್ ಮಜುಂದಾರ್ ಅವರೇ ತಮ್ಮ ಉತ್ತರಾಧಿಕಾರಿಯಾಗಲು

ಸೂಕ್ತ ಎಂದು ಹೆಸರಿಸಿದ್ದಾರೆ. ಬಯೋ ಕಾನ್‌ಗೆ ತಾನೊಬ್ಬಳೇ ನಾಯಕಿಯಾಗಿರು ವುದರಿಂದ ಅದು ಉತ್ತಮ ಕೈ ಸೇರ ಬೇಕೆಂಬ ಉದ್ದೇಶ ಎಂದು ಕಿರಣ್ ಮಜುಂದಾರ್ ಷಾ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಕ್ಲೇರ್ ಅನ್ನು ಉತ್ತರಾಧಿಕಾರಿಯಾಗಿ ಇನ್ನೂ ಅಧಿಕೃತವಾಗಿ ಘೋಷಣೆ ಮಾಡದಿದ್ದರೂ, ಇರಾದೆ ವ್ಯಕ್ತಪಡಿಸಿದ್ದಾರೆ. ಪುಟ 7

ನಾನೀಗಲೇ ನಿವೃತ್ತಿಯಾಗಲ್ಲ

"ಹಂತಹಂತವಾಗಿ ಬಯೋಕಾನ್ ಜವಾಬ್ದಾರಿಯನ್ನು ಕ್ಲೇರ್ ಹೊರಬೇಕೆನ್ನುವುದು ನನ್ನ ಉದ್ದೇಶ. ಹೀಗಾಗಿ ನಾನು ಈಗಲೇ ನಿವೃತ್ತಳಾಗಲ್ಲ. ನಿರ್ದೇಶಕ ಸ್ಥಾನದಿಂದ ಉಪಾಧ್ಯಕ್ಷ ಸ್ಥಾನಕ್ಕೆ, ನಂತರ ಅಧ್ಯಕ್ಷ ಸ್ಥಾನವನ್ನು ಕ್ಲೇರ್‌ಗೆ ವಹಿಸ್ತೀನಿ.

▪ ಕಿರಣ್ ಮಜುಂದಾರ್ ಷಾ, ಬಯೋಕಾನ್ ಮುಖ್ಯಸ್ಥೆ

ಮೊಟ್ಟೆ ಧಾರಣೆ 100ಕ್ಕೆ-₹590, 10ಕ್ಕೆ- ₹64 | ಚಿಕನ್ ದರ ಕೆಜಿಗೆ ₹260 | ಶುದ್ಧ ಬಂಗಾರ (99.90) ₹1,48,900 | ಸ್ಟ್ಯಾಂಡರ್ಡ್ ಬಂಗಾರ (22 ಕ್ಯಾ.) ₹1,36,750 | ಶುದ್ಧ ಬೆಳ್ಳಿ (.999 ಶುದ್ಧತೆ) ₹2,54,100 | ಪ್ರತಿ ಡಾಲರ್‌ಗೆ ₹95.13

CMYK

ಕರ್ನಾಟಕ ಚಾಲಕರಿಗೆ ಕನ್ನಡ ಜ್ಞಾನ ಕಡ್ಡಾಯ ಅನುಷ್ಠಾನಗೊಳಿಸಿ

ಇಲಾಖೆ ಆಯುಕ್ತರಿಗೆ ಅಧ್ಯಕ್ಷ ಬಿಳಿಮಲೆ ಪತ್ರ

ಸಂ.ಕ. ಸಮಾಚಾರ, ಬೆಂಗಳೂರು

ಸಾರಿಗೆ ಇಲಾಖೆಯ ಮೋಟಾರು ವಾಹನ ಕಾಯ್ದೆಯಡಿಯಲ್ಲಿ 2016ರಲ್ಲಿ ಜಾರಿಗೆ ಬಂದಿರುವ ಆನ್ ಡಿಮ್ಯಾಂಡ್ ಸೇವೆಗಳ ನಿಯಮಗಳನ್ನು ಸಾರಿಗೆ ಇಲಾಖೆ ಸಮರ್ಪಕವಾಗಿ ಅನುಷ್ಠಾನಗೊಳಿಸುವ ಮೂಲಕ ಸಾರ್ವಜನಿಕರು ಮತ್ತು ಅನ್ಯ ಭಾಷಾ ಚಾಲಕರ ನಡುವೆ ಕಾಲಕಾಲಕ್ಕೆ ಉಂಟಾಗುವ ಭಾಷಾ ಸಂಘರ್ಷದ ಶಾಶ್ವತ ಪರಿಹಾರಕ್ಕೆ ಮುಂದಾಗಬೇಕೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಆಗ್ರಹಿಸಿದ್ದಾರೆ. ಈ ಕುರಿತಂತೆ ಇಲಾಖೆಯ ಆಯುಕ್ತರಿಗೆ ಪತ್ರ ಮುಖೇನ ಸೂಚನೆ ನೀಡಿರುವ ಬಿಳಿಮಲೆ, ಸಾರ್ವಜನಿಕ ಸೇವಾ ವಲಯದಲ್ಲಿ ಕಾರ್ಯನಿರ್ವಹಿಸುವಂತಹ ವ್ಯಕ್ತಿಗಳು ಸ್ಥಳೀಯ ಭಾಷೆಯ ಕನಿಷ್ಠ ಜ್ಞಾನವನ್ನು ಹೊಂದಿರುವುದು ಕಡ್ಡಾಯವಾಗಿದ್ದು, ನಿಯಮಗಳಲ್ಲಿ ಅವಕಾಶವಿದ್ದರೂ ಅದನ್ನು ಸಮರ್ಪಕವಾಗಿ ಅನುಷ್ಠಾನ ಮಾಡದ ಕಾರಣ ಹಲವಾರು ಬಾರಿ ಅನ್ಯಭಾಷಿಕ ವಾಹನ ಚಾಲಕರು ಮತ್ತು ಕನ್ನಡಿಗ ಪ್ರಯಾಣಿಕರ ನಡುವೆ ವಾಗ್ವಾದಗಳು ಸಂಭವಿಸುತ್ತಿದ್ದು, ಇದು ಕಳವಳಕಾರಿ.ಕರ್ನಾಟಕದಲ್ಲಿ ವಾಹನ ಚಾಲನೆಯನ್ನು ಮಾಡುವ ಚಾಲಕ ಈ ನಾಡಿನಲ್ಲಿ ಕನಿಷ್ಠ ಎರಡು ವರ್ಷಗಳು ವಾಸವಿರಬೇಕಿದ್ದು, ಕನ್ನಡ ಭಾಷೆಯನ್ನು ಸ್ಪಷ್ಟವಾಗಿ ಮಾತನಾಡುವಂತವನಾಗಿರಬೇಕಾಗುತ್ತದೆ ಮತ್ತು ಇಲ್ಲಿನ ನಾಗರಿಕರೊಂದಿಗೆ ಸಂಯಮದಿಂದ ವರ್ತಿಸುವ ವ್ಯಕ್ತಿಯಾಗಿರಬೇಕಾಗುತ್ತದೆ ಎಂಬ ಅಂಶವನ್ನು ಸ್ಪಷ್ಟವಾಗಿ ಅಳವಡಿಸಲಾಗಿರುತ್ತದೆ ಎಂದಿರುವ ಬಿಳಿಮಲೆ, ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಮೂಲಕ ವಿಶೇಷವಾಗಿ ಬೆಂಗಳೂರು ನಗರದ ಕನ್ನಡಿಗರು ಎದುರಿಸುತ್ತಿರುವ ಸುದೀರ್ಘ ಸಮಸ್ಯೆಗೆ ಸಾರಿಗೆ ಇಲಾಖೆ ಪರಿಹಾರ ದೊರಕಿಸಬೇಕು.

ನಗರದ ಮತ್ತೊಂದು ಫ್ಲೈಓವರ್ ಕೆಡವಲು ಸಿದ್ಧತೆ

ಬಾಣಸವಾಡಿ ರಸ್ತೆಯ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಬಳಿ ಇರುವ ಸೇತುವೆ

ಸಂ.ಕ. ಸಮಾಚಾರ ಬೆಂಗಳೂರು

ಜಯದೇವ ಆಸ್ಪತ್ರೆ ಬಳಿ ಮತ್ತು ಡಾಲ್ಮಿಯಾ ಫ್ಲೈ ಓವರ್‌ಗಳ ತೆರವು ಕಾರ್ಯಾಚರಣೆಯ ಬೆನ್ನಲ್ಲೇ, ಈಗ ಪೂರ್ವ ಬೆಂಗಳೂರಿನ ಮತ್ತೊಂದು ಪ್ರಮುಖ ಮೇಲ್ಸೇತುವೆ ಇತಿಹಾಸ ಸೇರಲು ಸಿದ್ಧವಾಗಿದೆ.

ಐಒಸಿ ಜಂಕ್ಷನ್‌ನಲ್ಲಿರುವ ಹಳೆಯ ಮೇಲ್ಸೇತುವೆ ತೆರವು ಮಾಡಿ, ಅಲ್ಲಿ 436 ಕೋಟಿ ರೂ. ವೆಚ್ಚದಲ್ಲಿ ಬೃಹತ್ ಎಲಿವೇಟೆಡ್ ರೋಟರಿ ಫ್ಲೈ ಓವರ್ ನಿರ್ಮಿಸಲು ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಯೋಜನೆ ರೂಪಿಸಿದೆ. 2001–02ರ ಅವಧಿಯಲ್ಲಿ ರೈಲ್ವೆ ಇಲಾಖೆಯಿಂದ ನಿರ್ಮಾಣವಾಗಿದ್ದ ಈ ಹಳೆಯ ಸೇತುವೆಯು ಹೊಸ ವಿನ್ಯಾಸದ ಸುಗಮ ಸಂಚಾರಕ್ಕೆ ಅಡ್ಡಿಯಾಗಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಯೋಜನೆಯ ವೆಚ್ಚ ಮತ್ತು ವಿನ್ಯಾಸದ ಬದಲಾವಣೆ: ಆರಂಭದಲ್ಲಿ ಈ ರೋಟರಿ ಫ್ಲೈ ಓವರ್ ಯೋಜನೆಯನ್ನು 263 ಕೋಟಿ ರೂ. ವೆಚ್ಚದಲ್ಲಿ ಅಂದಾಜಿಸಲಾಗಿತ್ತು. ಆದರೆ ಕಾಮಗಾರಿ ವಿಳಂಬ ಮತ್ತು ಯೋಜನೆಯ ವಿನ್ಯಾಸದಲ್ಲಿ ಮಾಡಲಾದ ಮಹತ್ವದ ಬದಲಾವಣೆಗಳಿಂದಾಗಿ ಈಗ ಇದರ ವೆಚ್ಚ 436 ಕೋಟಿ ರೂ.ಗೆ ಏರಿಕೆಯಾಗಿದೆ. ಮಾರುತಿ ಸೇವಾನಗರ ರಸ್ತೆಯಿಂದ ಸುಮಾರು 1.5 ಕಿಲೋಮೀಟರ್ ಉದ್ದದ ಹೆಚ್ಚುವರಿ ಫ್ಲೈ ಓವರ್ ಅನ್ನು ಈ ಯೋಜನೆಗೆ ಸೇರ್ಪಡೆಗೊಳಿಸಿರುವುದು ಈ ದುಬಾರಿ ವೆಚ್ಚಕ್ಕೆ ಪ್ರಮುಖ ಕಾರಣವಾಗಿದೆ. ಜಿಎಸ್‌ಟಿ ಮತ್ತು ಇತರ ತಾಂತ್ರಿಕ ಘಟಕಗಳ ಸೇರ್ಪಡೆಯೂ ಅಂತಿಮ ಅಂದಾಜು ಮೊತ್ತದ

ಮೇಲೆ ಪ್ರಭಾವ ಬೀರಿದೆ ಎಂದು ಬಿ-ಸ್ಮೈಲ್ ಅಧಿಕಾರಿಗಳು ತಿಳಿಸಿದ್ದಾರೆ.

ವಿಶ್ವೇಶ್ವರಯ್ಯ ಟರ್ಮಿನಲ್‌ಗೆ ಸುಗಮ ಸಂಪರ್ಕ: 2022ರಲ್ಲಿ ಉದ್ಘಾಟನೆಗೊಂಡ ಸರ್ ಎಂ. ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ (ಎಸ್‌ಎಂವಿಟಿ) ಸದ್ಯ ಕಿರಿದಾದ ರಸ್ತೆಗಳು ಮತ್ತು ಸಂಪರ್ಕದ ಕೊರತೆಯಿಂದಾಗಿ ಪ್ರಯಾಣಿಕರಿಗೆ ತಲೆನೋವಾಗಿ ಪರಿಣಮಿಸಿದೆ. ಹೊಸ ಎಲಿವೇಟೆಡ್ ರೋಟರಿ ಫ್ಲೈ ಓವರ್ ನಿರ್ಮಾಣವಾದರೆ, ಹಳೆ ಮದ್ರಾಸ್ ರಸ್ತೆ, ಕಮ್ಮನಹಳ್ಳಿ, ಬಾಣಸವಾಡಿ ಮತ್ತು ಬೈಯಪ್ಪನಹಳ್ಳಿ ಭಾಗಗಳಿಂದ ಬರುವ ಜನರಿಗೆ ಯಾವುದೇ ಅಡೆತಡೆಯಿಲ್ಲದೆ ರೈಲ್ವೇ ನಿಲ್ದಾಣ ತಲುಪಲು ಸಾಧ್ಯವಾಗುತ್ತದೆ. ಇದರ ಜೊತೆಗೆ ಬೈಯಪ್ಪನಹಳ್ಳಿ ರಸ್ತೆಯಲ್ಲಿ ಹೊಸ ರೈಲ್ವೆ ಮೇಲ್ಸೇತುವೆಯನ್ನು ಕೂಡ ನಿರ್ಮಿಸಲು ಉದ್ದೇಶಿಸಲಾಗಿದ್ದು, ಇದು ಎಸ್.ವಿ. ರಸ್ತೆ ಮೆಟ್ರೋ ನಿಲ್ದಾಣದ ಕಡೆಯಿಂದ ಬರುವವರಿಗೂ ಸಹಕಾರಿಯಾಗಲಿದೆ.

ಪರ್ಯಾಯ ಮಾರ್ಗಗಳ ಸವಾಲು

ಈ ಬೃಹತ್ ಕಾಮಗಾರಿ ಆರಂಭವಾದರೆ ದೊಡ್ಡ ಬಾಣಸವಾಡಿ ರಸ್ತೆ, ಕಮ್ಮನಹಳ್ಳಿ ಮುಖ್ಯ ರಸ್ತೆ ಮತ್ತು ಬೈಯಪ್ಪನಹಳ್ಳಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಾರೀ ಸಂಚಾರ ದಟ್ಟಣೆ ಉಂಟಾಗುವ ಆತಂಕವಿದೆ. ಈಗಾಗಲೇ ಟ್ರಾಫಿಕ್ ಸಮಸ್ಯೆಯಿಂದ ಕಂಗೆಟ್ಟಿರುವ ಈ ಭಾಗದ ಜನರಿಗೆ ಕಾಮಗಾರಿಯ ಅವಧಿಯಲ್ಲಿ ಮತ್ತಷ್ಟು ಸಂಕಷ್ಟ ಎದುರಾಗಲಿದೆ. ಈ ಸವಾಲನ್ನು ಎದುರಿಸಲು ಬಿ-ಸ್ಮೈಲ್ ಸಂಸ್ಥೆಯು ಸಂಚಾರಿ ಪೊಲೀಸರೊಂದಿಗೆ ಸಭೆ ನಡೆಸಿ, ಕಾಮಗಾರಿ ಆರಂಭವಾಗುವ ಮುನ್ನವೇ ವೈಜ್ಞಾನಿಕವಾದ ಟ್ರಾಫಿಕ್ ಡೈವರ್ಷನ್ ಪ್ಲಾನ್ ಸಿದ್ಧಪಡಿಸಲು ಮುಂದಾಗಿದೆ. ಸ್ಥಳೀಯ ವಾಹನಗಳು ಮತ್ತು ಟರ್ಮಿನಲ್‌ಗೆ ಹೋಗುವ ವಾಹನಗಳನ್ನು ಪ್ರತ್ಯೇಕಿಸುವ ಮೂಲಕ ದಟ್ಟಣೆ ಕಡಿಮೆ ಮಾಡುವುದು ಯೋಜನೆಯ ಮುಖ್ಯ ಗುರಿಯಾಗಿದೆ.

PUBLIC NOTICE

General Public is hereby notified that my client/s has/ve entered into Sale negotiation to purchase Agricultural lands bearing Sy.Nos.43/1, 43/2A, 43/2B, 43/2C, 43/2D, 43/2E, 43/3 and 46 situated at HIREBALLA Village, Jangamakote Hobli, Shidlaghatta Taluk, Chikkaballapura District, which are described in various items of schedule herein below from **Mrs.AKHILA BEGUM W/o LATE JAHEERUDDIN** and other children of Late Jaheeruddin namely Mr.Syed Salahuddin @ Javeed, Mr.Syed Shaifuddin Shah and their family members, who have represented to be its owners. If any person/s having any objections/claims, they may raise the same along with documentary evidence before the under mentioned within 10 days from the date of publication of this Notice, failing which my clients will proceed with the transaction treating as there are no claim/s whatsoever to the schedule property.

SCHEDULE PROPERTY

Sl. No.	Description of Property/ies	Measurement	Boundaries East	West	North	South
Item No.1	a) Sy.No.43/1 b) Sy.No.43/2A c) Sy.No.43/2B d) Sy.No.43/2C These properties are commonly bounded on	(11 guntas) (6 guntas (1 acre 1 gunta) (4 guntas)	Land of Narayana gowda and Nagaraju	Land of Akhila Begum	Lands of Yerrappa Puttappa etc.	Lands in Sy.Nos. 43/2D, 43/2E and 43/3
Item No.2	a) Sy.No.43/2D b) Sy.No.43/2E c) Sy.No.43/3 These properties are commonly bounded on	(18 guntas) (33 guntas) (30 guntas)	Govt Land & Remaining land of Srinivasappa in Sy.No.43/3	Land of Akhila Begum	Lands in Sy.No.43/1 43/2A to 2C	Land of Krishnappa
Item No.3	Sy.No.46	3 acres 18 gunta	Land of Narayanappa	Land of Ballada Chowd appa and others	Land of Ballada Puttanna	Kaluve

All are situated at HIREBALLA Village, Jangamakote Hobli, Shidlaghatta Taluk, Chikkaballapura District.

H.R.MANJUNATHA, Advocate
No.195, 3rd Floor, K.V.Shobha Enclave, Subbaramachetty Road, Basavanagudi, Bangalore-560 004. Mob: 9980740085

ಬಾರ್ಟನ್ ಪ್ರಶಸ್ತಿಗೆ ಸುಭಾನಿ

ಬೆಂಗಳೂರು: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯು ಈ ವರ್ಷದ ಪ್ರತಿಷ್ಠಿತ 'ಬಾರ್ಟನ್ ಪ್ರಶಸ್ತಿ 2026' ಗೆ ಹೈದ್ರಾಬಾದಿನ ಖ್ಯಾತ ವ್ಯಂಗ್ಯಚಿತ್ರಕಾರ ಸುಭಾನಿ ಶೇಖ್ ಅವರನ್ನು ಆಯ್ಕೆ ಮಾಡಿದೆ. ಸುಭಾನಿ ಶೇಖ್ ಅವರು ದೇಶದ ಖ್ಯಾತ ವ್ಯಂಗ್ಯಚಿತ್ರಕಾರರಲ್ಲಿ ಒಬ್ಬರು. ಅವರು ಹೈದ್ರಾಬಾದಿನ 'ಡೆಕ್ಕನ್ ಕ್ರಾನಿಕಲ್' ಪತ್ರಿಕೆಯಲ್ಲಿ 1990ರಿಂದ ವ್ಯಂಗ್ಯಚಿತ್ರಕಾರರಾಗಿ ಕೆಲಸ

ಮಾಡುತ್ತಿದ್ದಾರೆ. ಅವರು ತಮ್ಮ ವೃತ್ತಿ ಜೀವನವನ್ನು ಆಂಧ್ರಭೂಮಿ ಪತ್ರಿಕೆಯಿಂದ 1985ರಲ್ಲಿ ಪ್ರಾರಂಭಿಸಿದರು. ಅವರು ತಮ್ಮ ಮೊನಚಾದ ವ್ಯಂಗ್ಯಚಿತ್ರಗಳ ಮೂಲಕ ಜನಪ್ರಿಯತೆಯನ್ನು ಗಳಿಸಿದ್ದಾರೆ. ಅವರಿಗೆ ಈಗಾಗಲೇ ಅನೇಕ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ಆದಾಬ್ ಹೈದ್ರಾಬಾದ್, ಸ್ಕ್ರೀನ್ ಟೂನ್ಸ್ ಮತ್ತು ತಮ್ಮ 40 ವರ್ಷದ ಯಶಸ್ವಿ ವೃತ್ತಿ ಜೀವನದಲ್ಲಿ ಬರೆದ ವ್ಯಂಗ್ಯಚಿತ್ರಗಳಲ್ಲಿನ ಆಯ್ದ ಕೃತಿಗಳ 'ಟು ದಿ ಪಾಯಿಂಟ್' ಎಂಬ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆಯ ವಾರ್ಷಿಕೋತ್ಸವದ ಅಂಗವಾಗಿ ಜೂನ್ 13ರಂದು ಸುಭಾನಿ ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಅಲ್ಲದೇ ಇತ್ತೀಚೆಗೆ ಏರ್ಪಡಿಸಿದ 'ಅಂತಾರಾಷ್ಟ್ರೀಯ ಮಾಯಾ ಕಾಮತ್ ಸ್ಮಾರಕ' ವ್ಯಂಗ್ಯಚಿತ್ರ ಸ್ಪರ್ಧೆಯ ವಿಜೇತರಿಗೆ ಬಹುಮಾನಗಳನ್ನೂ ಇದೇ ಸಂದರ್ಭದಲ್ಲಿ ವಿತರಿಸಲಾಗುವುದು.

ಇ–ಖಾತಾಗಾಗಿ ಸಿಎಂಗೆ ಬಿಲ್ಡರ್‌ಗಳ ಮನವಿ

ಸರ್ಕಾರ ಜಾರಿಗೆ ತಂದಿರುವ ಈ ವ್ಯವಸ್ಥೆ ಮಹತ್ವದ್ದು: ವೆಂಕಟಪ್ಪ

ಸಂ.ಕ.ಸಮಾಚಾರ, ಕೆ.ಆರ್.ಪುರ

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ 2024 ಅಕ್ಟೋಬರ್ 1ಕ್ಕಿಂತ ಮೊದಲು ನಿರ್ಮಾಣಗೊಂಡ ನಿವಾಸ ಅನುಮತಿ ಪತ್ರ (ಒಸಿ) ರಹಿತ ಅಪಾರ್ಟ್‌ಮೆಂಟ್‌ಗಳು ಹಾಗೂ ಬಡಾವಣೆಗಳಲ್ಲಿ ನಿರ್ಮಿತ ಮನೆಗಳಿಗೆ ಇ–ಖಾತಾ ಸೌಲಭ್ಯ ನೀಡುವಂತೆ ಬೆಂಗಳೂರು ಬಿಲ್ಡರ್ಸ್ ಮತ್ತು ಡೆವಲಪರ್ಸ್ ಅಸೋಸಿಯೇಷನ್ ಪದಾಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿದರು.

ಬೆಂಗಳೂರು ಬಿಲ್ಡರ್ಸ್ ಮತ್ತು ಡೆವಲಪರ್ಸ್ ಅಸೋಸಿಯೇಷನ್ ಅಧ್ಯಕ್ಷ

ಕನ್ನಡ ಮಿತ್ರ ವೆಂಕಟಪ್ಪ ಮಾತನಾಡಿ, ಸಾರ್ವಜನಿಕರ ಹಿತದೃಷ್ಟಿಯಿಂದ ಸರ್ಕಾರ ಜಾರಿಗೆ ತಂದಿರುವ ಇ–ಖಾತಾ ವ್ಯವಸ್ಥೆ ಅತ್ಯಂತ ಮಹತ್ವ ಹಾಗೂ ಶ್ಲಾಘನೀಯ ಕ್ರಮವಾಗಿದೆ ಎಂದರು.

ಸರ್ಕಾರದ ನಿಯಮಗಳು ಹಾಗೂ ಆದೇಶಗಳನ್ನು ನಾವು ಗೌರವಿಸುತ್ತೇವೆ ಮತ್ತು ಅವುಗಳನ್ನು ಪಾಲಿಸಲು ಬದ್ಧರಾಗಿದ್ದೇವೆ. ಅಕ್ರಮ ಬಡಾವಣೆಗಳು ಹಾಗೂ ಆಯೋಜಿತ ಅಭಿವೃದ್ಧಿಯನ್ನು ನಿಯಂತ್ರಿಸಲು ಕೈಗೊಂಡಿರುವ ಆದೇಶಗಳಿಗೆ ನಮ್ಮ ಸಂಪೂರ್ಣ ಬೆಂಬಲವಿದೆ. ನಗರ ಅಭಿವೃದ್ಧಿಯ ದೃಷ್ಟಿಯಿಂದ ಇವು ಅಗತ್ಯವೆಂದು ನಾವು ಅರಿತಿದ್ದೇವೆ.

ಇ–ಖಾತಾ ಕಡ್ಡಾಯಗೊಳಿಸುವುದಕ್ಕೂ ಮೊದಲು ಸಮರ್ಪಕ ಮಾಹಿತಿಯ ಕೊರತೆಯಿಂದ ಅನೇಕ ಕಟ್ಟಡಗಳಿಗೆ ನಿವಾಸ ಅನುಮತಿ ಪತ್ರ ಇಲ್ಲದೆ ನಿರ್ಮಾಣಗೊಂಡಿವೆ. ಇದರ ಪರಿಣಾಮವಾಗಿ ಇಂತಹ ಯೋಜನೆಗಳಿಗೆ ಪ್ರಸ್ತುತ ಬಹು ಮಹಡಿ ನಿವೇಶನಗಳು ಇ–ಖಾತಾ ಹಾಗೂ ವಿದ್ಯುತ್ ಸಂಪರ್ಕ ಪಡೆಯುವುದು ಕಷ್ಟಕರವಾಗಿದೆ ಎಂದು ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿದರು.

ಕ್ಯಾನ್ ಫಿನ್ ಹೋಮ್ಸ್ ಲಿ.,

Can Fin Homes Ltd (Sponsor: CANARA BANK) HOME LOANS + DEPOSITS
ಜಯನಗರ ಶಾಖೆ

"ಸಜಿನಿ", ನಂ. 69, (ಹಳೆ ನಂ. 35), ನೆಲ ಮಹಡಿ
12ನೇ ಮುಖ್ಯ ರಸ್ತೆ, ಜಯನಗರ, 3ನೇ ಬ್ಲಾಕ್ ಬೆಂಗಳೂರು – 560 011,
ಮೊ: 7625079101, ಫೋನ್ : 080–26630501
E-mail Id: jayanagar@canfinhomes.com
CIN:L85110KA1987PLC008699

ಸ್ಥಿರಾಸ್ತಿಯ ಮಾರಾಟಕ್ಕಾಗಿ ಮಾರಾಟ ಸೂಚನೆ

[ನಿಯಮ 8(6)ರ ಅನ್ವಯ]

ಸೆಕ್ಯುರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ನಿಯಮ 8(6)ರ ನಿಬಂಧನೆಗಳನ್ನು ಓದಿಕೊಂಡಂತೆ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ಅನ್ವಯ ಸ್ಥಿರಾಸ್ತಿಯ ಇ-ಹರಾಜು ಮಾರಾಟ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ/ಜಾಮೀನುದಾರರಿಗೆ ಹಾಗೂ ಸಾಮಾನ್ಯವಾಗಿ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರವರಿಗೆ ಅಡಮಾನ /ಚಾರ್ಜ್ ಮಾಡಿರುವ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಯನ್ನು ಕ್ಯಾನ್‌ಫಿನ್‌ಹೋಮ್ಸ್ ಲಿ., ಜಯನಗರ ಶಾಖೆ, ಇದರ ಅಧಿಕೃತ ಅಧಿಕಾರಿಯವರು ಭೌತಿಕವಾಗಿ ಸ್ವಾಧೀನಕ್ಕೆ ಪಡೆದುಕೊಂಡಿದ್ದು ಅವುಗಳನ್ನು **'ಎಲ್ಲಿ ಹೇಗಿದೆಯೊ ಹಾಗೆ', 'ಎಲ್ಲಿ ಏನಿದೆಯೋ ಹಾಗೆ'** ಮತ್ತು **'ಮತ್ಯಾವುದಾದರೂ ಅಲ್ಲಿ ಇದ್ದಲ್ಲಿ'** ಆಧಾರದ ಮೇಲೆ ಕ್ಯಾನ್‌ಫಿನ್‌ಹೋಮ್ಸ್‌ಲಿ., ಇವರಿಗೆ ಸಾಲಗಾರರಾದ **ಶ್ರೀ ಕೆ. ಶ್ಯಾಮಸುಂದರ ರಾವ್,** ಮತ್ತು **ಶ್ರೀಮತಿ ಕೆ. ದೇವಿ ,** ಇವರಿಂದ ಬರಬೇಕಾದ ಬಾಕಿ ಮೊತ್ತ **ರೂ.47,51,000/-** (ರೂಪಾಯಿ ನಲವತ್ತೇಳು ಲಕ್ಷ ಐವತ್ತೊಂದು ಸಾವಿರ ಮಾತ್ರ) ದಿನಾಂಕ 05.05.2026 ರಂತೆ ಮತ್ತು ಮುಂದಿನ ಬಡ್ಡಿ ಮತ್ತು ಸಾಂದರ್ಭಿಕ ಖರ್ಚು,ವೆಚ್ಚ ಇತ್ಯಾದಿಗಳ ವಸೂಲಿಗಾಗಿ ದಿನಾಂಕ **10.06.2026** ರಂದು ಮಾರಾಟ ಮಾಡಲಾಗುವುದು.

ಮೀಸಲು ಬೆಲೆ ರೂ. 46,50,000/- (ರೂಪಾಯಿ ನಲವತ್ತಾರು ಲಕ್ಷ ಐವತ್ತು ಸಾವಿರ ಮಾತ್ರ) ಮತ್ತು **ಮುಂಗಡ ಠೇವಣಿ ರೂ.4,65,000/-** (ರೂಪಾಯಿ ನಾಲ್ಕು ಲಕ್ಷ ಅರವತ್ತೈದು ಸಾವಿರ ಮಾತ್ರ)

ಸ್ಥಿರಾಸ್ತಿಯ ವಿವರ

ಬೆಂಗಳೂರು ಪೂರ್ವ ತಾಲೂಕು, (ಈ ಮೊದಲು ಬೆಂಗಳೂರು ದಕ್ಷಿಣ ತಾಲೂಕು), ಬಿದರಹಳ್ಳಿ ಹೋಬಳಿ, ಕಿತಿಗನೂರು ಗ್ರಾಮ, ಇಲ್ಲಿರುವ ನಿವೇಶನ ನಂ. 149ರ ಉತ್ತರದ ಭಾಗ, ಈ ಮೊದಲು ಆಸ್ತಿ ನಂ.221, ಖಾತಾ ನಂ.410, ಹಾಲಿ ಖಾತಾ ನಂ. 956, ಒಟ್ಟು 600 ಚದರ ಅಡಿ ಈ ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ. 150, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಅದೇ ನಿವೇಶನ ನಂ. 149ರ ಭಾಗ.

ಋಣಭಾರಗಳು : ಏನೂ ಇಲ್ಲ.

ಮೇಲ್ಕಂಡ ಹರಾಜಿಗೆ ಸಂಬಂಧಿಸಿದ ನಿಯಮ ಮತ್ತು ನಿಬಂಧನೆಗಳ ವಿವರಗಳಿಗೆ ಕ್ಯಾನ್‌ಫಿನ್‌ಹೋಮ್ಸ್ ಲಿ., ಇವರ ಅಫೀಷಿಯಲ್ ವೆಬ್‌ಸೈಟ್ https://www.canfinhomes.com/SearchAuction.aspx ನಲ್ಲಿ ವೀಕ್ಷಿಸಬಹುದು. ಇ- ಹರಾಜಿನಲ್ಲಿ ಭಾಗವಹಿಸಲು ನೀಡಲಾದ ಲಿಂಕ್ www.auctionbazaar.com

ದಿನಾಂಕ : 05.05.2026
ಸ್ಥಳ : ಬೆಂಗಳೂರು

ಸಹಿ/–
ಅಧಿಕೃತ ಅಧಿಕಾರಿ
ಕ್ಯಾನ್ ಫಿನ್ ಹೋಮ್ಸ್ ಲಿ.,

ಅಂಚೆ ಮತಗಳನ್ನು ತಿದ್ದುವಲ್ಲಿ ಜೀವರಾಜ್ ಕೈವಾಡ: ಶಂಕರ್

ಇಂತಹ ದುಷ್ಕೃತ್ಯ ದೇಶದಲ್ಲಿಯೇ ಇದೇ ಮೊದಲು

ಸಂ.ಕ.ಸಮಾಚಾರ, ಬೆಂಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದ ಮರು ಅಂಚೆ ಮತ ಎಣಿಕೆಯಲ್ಲಿ ಅಕ್ರಮ ನಡೆದಿದ್ದು, ಇದರಲ್ಲಿ ಚುನಾವಣಾ ಕೆಲಸದಲ್ಲಿ ಭಾಗಿಯಾಗದ ಅಧಿಕಾರಿಗಳು, ಕೆಳಮಟ್ಟದ ಸಿಬ್ಬಂದಿ ಮತ್ತು ಇಂದು ಗೆದ್ದಿರುವ ಜೀವರಾಜ್ ಕೈವಾಡವಿದೆ. ಇದನ್ನು ಹೊರಗಡೆಯವರು ಮಾಡಲು ಸಾಧ್ಯವೇ ಇಲ್ಲ. ಈ ಕುರಿತು ಚಿಕ್ಕಮಗಳೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಎಂದು ಬಿ.ಎಲ್.ಶಂಕರ್ ಬಿ.ಎಲ್.ಶಂಕರ್ ತಿಳಿಸಿದ್ದಾರೆ.

ನಗರದ ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಅಂದು ಸಿಂಧುವಾಗಿದ್ದ ಮತಗಳು ಈಗ ಅಸಿಂಧುವಾಗಲು ಕಾರಣವೇನು. ಯಾರೋ ಅತಿಕ್ರಮ ಪ್ರವೇಶ ಮಾಡಿ ಕಾನೂನು ಬಾಹಿರ ಕೆಲಸ ಮಾಡಿದ್ದಾರೆ. ಇದರಿಂದ ಅಂದು ಪರಾಜಿತಗೊಂಡಿದ್ದ ಜೀವರಾಜ್‌ಗೆ 52 ಮತಗಳು ಹೆಚ್ಚು ಬರುವಂತೆ ಆಗಿದೆ ಎಂದರು.

ಮರುಮತ ಎಣಿಕೆ ವೇಳೆ ಅಂಚೆ ಮತಗಳನ್ನು ಇಟ್ಟಿದ್ದ ಪೆಟ್ಟಿಗೆಯ ಬೀಗ ತೆರೆಯಲಾಗಿತ್ತು. ಇದರ ಬಗ್ಗೆ ತಕರಾರು ಸಲ್ಲಿಸಿದರೂ ಎಣಿಕೆ ಮಾಡಬೇಕು ಎಂದು ರಿಟರ್ನಿಂಗ್ ಅಧಿಕಾರಿ ತೀರ್ಮಾನ ಮಾಡುತ್ತಾರೆ.

ಮೊದಲ ಬಾರಿಗೆ ಅಸಿಂಧುವಾಗಿದ್ದ 279 ಅಂಚೆ ಮತಗಳನ್ನು ಮರು ಎಣಿಕೆ ಮಾಡುತ್ತಾರೆ. ಯಾವುದೇ ಮತಪತ್ರವನ್ನು ಎಲೆಕ್ಷನ್ ಏಜೆಂಟ್‌ಗೆ ತೋರಿಸಿ ಅದು ಸರಿಯಿದೆ ಎಂದು ಗೊತ್ತಾದ ಮೇಲೆ ಅದನ್ನು ಪರಿಗಣಿಸಲಾಗುತ್ತದೆ. ಆದರೆ ಈ ಮೊದಲು ಸಿಂಧುವಾಗಿದ್ದ ಮತಗಳು ಈಗ ಅಸಿಂಧುವಾಗಿದ್ದ ಸ್ಥಿತಿಯಲ್ಲಿ ಇದ್ದವು.

ಇದು ಹೇಗಾಯಿತು ಎಂದು ಗೊತ್ತಿಲ್ಲ. 2023ರಲ್ಲಿ ರಾಜೇಗೌಡರ ಪರವಾಗಿ 257 ಮತಗಳು ಬಿದ್ದಿದ್ದವು. ಆದರೆ ಈಗ ಅದೇ ಮತಪತ್ರಗಳ ಮೇಲೆ ಇನ್ನೊಬ್ಬರಿಗೆ ಮತ ಹಾಕಿದಂತೆ ಗುರುತು ಮಾಡಲಾಗಿತ್ತು ಎಂದರು.

ಟಿ.ಡಿ.ರಾಜೇಗೌಡರ ಪರವಾಗಿ ಬಂದಿದ್ದ 170 ಅಂಚೆ ಮತಗಳನ್ನು ತಿದ್ದುವ ಕೆಲಸ ಮಾಡಲಾಗಿದೆ.

ಇಂತಹ ದುಷ್ಕೃತ್ಯ ಇಡೀ ದೇಶದಲ್ಲಿಯೇ ಇದು ಮೊದಲು. ರಾಜೇಗೌಡರಿಗೆ ಮತ ಹಾಕಿರುವ ಇಂಕ್ ಬೇರೆಯಿದ್ದು, ಬೇರೆಯವರಿಗೆ ಗುರುತು ಮಾಡಿರುವ ಇಂಕ್ ಕೂಡ ಬೇರೆಯಾಗಿದೆ. ಪರಾಜಿತ ಅಭ್ಯರ್ಥಿ ಹೈಕೋರ್ಟಿನಲ್ಲಿ ಒತ್ತಾಯಪೂರ್ವಕವಾಗಿ ಅಂಚೆ ಮತಗಳನ್ನೇ ಮರು ಎಣಿಕೆ ಮಾಡಬೇಕು ಎಂದು ಏಕೆ ಕೇಳಿದ್ದಾರೆ ಎಂದು ಪ್ರಶ್ನಿಸಿದರು.

ಮತಗಳಿಗೆ ಇರಬೇಕಾದ ಭದ್ರತೆ, ಪಾವಿತ್ರ್ಯತೆ ಎಲ್ಲವೂ ಸಹ ಈ ಘಟನೆಯಿಂದ ಹಾಳಾಗಿದೆ. ಇದು ಅಂತ್ಯವಲ್ಲ ಇದು ಆರಂಭ. ಇದರಲ್ಲಿ ಭಾಗಿಯಾದ ಎಲ್ಲರನ್ನ ಕಾನೂನು ವ್ಯಾಪ್ತಿಯಲ್ಲಿ ಶಿಕ್ಷೆಗೆ ಕೊಡಿಸುವುದೇ ನಮ್ಮ ಹೋರಾಟ ಎಂದು ತಿಳಿಸಿದರು.

ಎಲ್‌ಪಿಜಿ ದರ ಏರಿಕೆ: ಆಟೋ ದರ ಕನಿಷ್ಠ 50 ರೂ. ಹೆಚ್ಚಳಕ್ಕೆ ಒತ್ತಾಯ

ಕಿಲೋಮೀಟರ್‌ಗೆ 25 ರೂ. ಹೆಚ್ಚಳ ಮಾಡಿ: ಚಾಲಕರು

ಸಂ.ಕ. ಸಮಾಚಾರ, ಬೆಂಗಳೂರು

ಆಟೋ ಎಲ್‌ಪಿಜಿ ದರ ಏರಿಕೆಯಾಗಿರುವ ಬೆನ್ನಲೇ ಆಟೋ ದರವನ್ನು ಕನಿಷ್ಠ 50 ರೂ.ಗೆ ಏರಿಕೆ ಮಾಡುವಂತೆ ಆಟೋ ಚಾಲಕರು ಸರ್ಕಾರದ ಮೇಲೆ ಒತ್ತಡ ಹಾಕಲು ಮುಂದಾಗಿದ್ದಾರೆ.

ಕೇಂದ್ರ ಸರ್ಕಾರವು ಆಟೋ ಎಲ್.ಪಿ.ಜಿ ದರವನ್ನು ಪ್ರತಿ ಲೀಟರ್‌ಗೆ 5.73 ರೂಪಾಯಿಗಳಷ್ಟು ದಿಢೀರ್ ಏರಿಕೆ ಮಾಡಿದೆ. ಸರ್ಕಾರದ ಈ ನಿರ್ಧಾರವನ್ನು ತೀವ್ರವಾಗಿ ವಿರೋಧಿಸಿರುವ ಆಟೋ ಚಾಲಕರು, ಪ್ರಯಾಣ ದರವನ್ನು ಹೆಚ್ಚಿಸುವಂತೆ ರಾಜ್ಯ ಸರ್ಕಾರದ ಮೇಲೆ ತೀವ್ರ ಒತ್ತಡ ಹೇರಲಾರಂಭಿಸಿದ್ದಾರೆ.

ಸದ್ಯ ಬೆಂಗಳೂರಿನಲ್ಲಿ ಆಟೋ ಕನಿಷ್ಠ ದರ (ಮೊದಲ 2 ಕಿಲೋ ಮೀಟರ್‌ಗೆ) 36 ರೂ. ನಿಗದಿಪಡಿಸಲಾಗಿದೆ. ಆ ನಂತರದ ಪ್ರತಿ ಕಿಲೋಮೀಟರ್‌ಗೆ 18 ರೂ. ಇದೆ. ಆದರೆ, ಈಗ ಗ್ಯಾಸ್ ಬೆಲೆ ವಿಪರೀತವಾಗಿ ಏರಿಕೆಯಾಗಿರುವುದರಿಂದ ಈ ದರದಲ್ಲಿ ಆಟೋ ಓಡಿಸಿದರೆ ನಮಗೆ ಯಾವುದೇ ಲಾಭವಿಲ್ಲ. ಹೀಗಾಗಿ ಕನಿಷ್ಠ ದರವನ್ನು 50 ರೂ.ಗಳಿಗೆ ಹಾಗೂ ನಂತರದ ಪ್ರತಿ ಕಿಲೋಮೀಟರ್‌ಗೆ 25 ರೂ.ಗಳಿಗೆ ಏರಿಸಬೇಕು ಎಂದು ವಿವಿಧ ಆಟೋ ಚಾಲಕರ ಸಂಘಟನೆಗಳು ಒತ್ತಾಯಿಸಿವೆ.

ದರ ಪರಿಷ್ಕರಣೆಗೆ ಆಗ್ರಹ: ಕೇಂದ್ರ ಸರ್ಕಾರದ ಈ ನಿರ್ಧಾರಕ್ಕೆ ಆಟೋ ಚಾಲಕರಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಈಗಾಗಲೇ ದಿನಬಳಕೆಯ ವಸ್ತುಗಳ ಬೆಲೆ ಏರಿಕೆಯಿಂದ ಕಂಗೆಟ್ಟಿರುವ ಚಾಲಕರು, ಈಗ ಇಂಧನ ದರ ಏರಿಕೆಯು ತಮಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಅಸಮಾಧಾನ ಹೊರಹಾಕಿದ್ದಾರೆ. ಪದೇ ಪದೇ ಆಟೋ ಗ್ಯಾಸ್ ಏರಿಸುತ್ತಿದ್ದರೆ ಅದನ್ನು ಭರಿಸುವುದು ಅಸಾಧ್ಯ. ಇದರಿಂದ ನಮ್ಮ ದೈನಂದಿನ ಆದಾಯಕ್ಕೆ ಭಾರಿ ಹೊಡೆತ ಬೀಳಲಿದೆ ಎಂದು ಆಟೋ ಚಾಲಕರ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ.

ಪ್ರಯಾಣ ದರ ಹೆಚ್ಚಳ ಸಾಧ್ಯತೆ: ಇಂಧನ ದರ ಏರಿಕೆಯ ಬೆನ್ನಲ್ಲೇ ಆಟೋ ಚಾಲಕರು ಮತ್ತು ಸಂಘಟನೆಗಳು ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲಾರಂಭಿಸಿವೆ. ಆಟೋ ಕನಿಷ್ಠ ಪ್ರಯಾಣ ದರವನ್ನು ಹೆಚ್ಚಿಸಬೇಕು ಅಥವಾ ಸಬ್ಸಿಡಿ ನೀಡಬೇಕು ಎಂಬುದು ಅವರ ಪ್ರಮುಖ ಬೇಡಿಕೆಯಾಗಿದೆ. ಒಂದು ವೇಳೆ ಸರ್ಕಾರ ದರ ಏರಿಕೆಗೆ ಅನುಮತಿ ನೀಡಿದರೆ, ಬೆಂಗಳೂರಿನಲ್ಲಿ ಸಂಚರಿಸುವ ಲಕ್ಷಾಂತರ ಪ್ರಯಾಣಿಕರಿಗೆ ಆಟೋ ಪ್ರಯಾಣ ದರ ಮತ್ತಷ್ಟು ದುಬಾರಿಯಾಗಲಿದೆ. ಇದು ಮೆಟ್ರೋ ಮತ್ತು ಬಸ್‌ಗಳ ಮೇಲಿನ ಅವಲಂಬನೆಯನ್ನು ಹೆಚ್ಚಿಸುವ ಸಾಧ್ಯತೆಯೂ ಇದೆ.

ಸಾಮಾನ್ಯ ಜನರಿಗೆ ಹೊರೆ

ಬೆಂಗಳೂರಿನಂತಹ ಮಹಾನಗರದಲ್ಲಿ ಕಚೇರಿಗಳಿಗೆ ತೆರಳಲು, ಶಾಲಾ ಮಕ್ಕಳಿಗೆ ಮತ್ತು ತುರ್ತು ಸಂಚಾರಕ್ಕೆ ಆಟೋಗಳೇ ಪ್ರಮುಖ ಆಸರೆಯಾಗಿವೆ. ಈಗಿನ 5.73 ರೂಪಾಯಿಗಳ ಏರಿಕೆಯು ಪರೋಕ್ಷವಾಗಿ ಸಾರಿಗೆ ವೆಚ್ಚವನ್ನು ಹೆಚ್ಚಿಸಲಿದ್ದು, ಮಧ್ಯಮ ವರ್ಗದ ಜನರ ಮಾಸಿಕ ಬಜೆಟ್ ಮೇಲೆ ಪರಿಣಾಮ ಬೀರಲಿದೆ. ಆಟೋ ದರ ಈಗಾಗಲೇ ಹೆಚ್ಚಿದೆ, ಈಗ ಗ್ಯಾಸ್ ಬೆಲೆ ನೆಪದಲ್ಲಿ ದರ ಇನ್ನು ಹೆಚ್ಚಾದರೆ ನಾವು ಸಂಚರಿಸುವುದಾದರೂ ಹೇಗೆ ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ.

ಇಂಟರ್‌ನ್ಯಾಷನಲ್ ಅಸೆಟ್ ರಿಕನ್ಸ್ಟ್ರಕ್ಷನ್ ಕಂಪನಿ ಪ್ರೈ. ಲಿಮಿಟೆಡ್

IARC RESOLUTION REDEFINED

ಡಿ. ನಂ. 1, 9 ನೇ ಮಹಡಿ, "ಪ್ರಶಾಂತ್ ರಿಯಲ್ ಗೋಲ್ಡ್ ಟವರ್",
ನಂ.39, ಉತ್ತರ ಉಸ್ಮಾನ್ ರಸ್ತೆ, ಟಿ. ನಗರ, ಚೆನ್ನೈ – 600 017.
ದೂರವಾಣಿ: 044–45544039/49,ಸಿಐಎನ್: U74999DL2002PTC117367, ವೆಬ್‌ಸೈಟ್: www.iarc.co.in

ಖಾಸಗಿ ಒಪ್ಪಂದದ ಮೂಲಕ ಮಾರಾಟದ ಸೂಚನೆ

ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಬಡ್ಡಿ ಜಾರಿ ಕಾಯ್ದೆ 2002 (ಸರ್ಫೇಸಿ ಕಾಯ್ದೆ) ಅಡಿಯಲ್ಲಿ ಬ್ಯಾಂಕಿಗೆ ವಿಧಿಸಲಾದ ಸ್ಥಿರ ಆಸ್ತಿಗಳ ಮಾರಾಟ

ಇಂಟರ್ನ್ಯಾಷನಲ್ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಪ್ರೈವೇಟ್ ಲಿಮಿಟೆಡ್ (ಇನ್ನು ಮುಂದೆ IARC ಎಂದು ಉಲ್ಲೇಖಿಸಲಾಗುತ್ತದೆ) ನ ಅಧಿಕೃತ ಅಧಿಕಾರಿ ಎಂದು ಸಹಿ ಮಾಡಲಾದವರು OA ಸಂಖ್ಯೆ 229/2008 ರಲ್ಲಿ 2015 ರ ಖಅ ಸಂಖ್ಯೆ 8847 ರಲ್ಲಿ ಸಾಲಗಳ ವಸೂಲಾತಿ ಮತ್ತು ದಿವಾಳಿತನ ಕಾಯ್ದೆ, 1993 ರ ಸೆಕ್ಷನ್ 25 (AA) ಅಡಿಯಲ್ಲಿ ಆಸ್ತಿಯ ಭೌತಿಕ ಸ್ವಾಧೀನವನ್ನು ವಹಿಸಿಕೊಂಡಿದ್ದಾರೆ. IARC ಯ ಅಧಿಕೃತ ಅಧಿಕಾರಿ ಈಗಾಗಲೇ SARFAESI ಕಾಯ್ದೆಯಡಿಯಲ್ಲಿ ಆಸ್ತಿಯನ್ನು ಮಾರಾಟ ಮಾಡಲು ಹಲವಾರು ಹರಾಜುಗಳನ್ನು ನಡೆಸಿದ್ದರು ಆದರೆ ಯಾವುದೇ ಬಿಡ್‌ಗಳು ಬರದ ಕಾರಣ ಅವು ವಿಫಲವಾದವು. ಆದ್ದರಿಂದ, ದಯವಿಟ್ಟು ತಿಳಿಸಿ ಒಟ್ಟು ಬಾಕಿ ರೂ. 31 ಡಿಸೆಂಬರ್ 2025 ರಂತೆ 12,20,57,412/– (ರೂಪಾಯಿಗಳು ಹನ್ನೆರಡು ಕೋಟಿ ಇಪ್ಪತ್ತು ಲಕ್ಷ ಐವತ್ತೇಳು ಸಾವಿರದ ನಾಲ್ಕುನೂರ ಹನ್ನೆರಡು ಮಾತ್ರ) ಹೆಚ್ಚಿನ ಬಡ್ಡಿ ಮತ್ತು ಅದರ ಮೇಲೆ ದಾಖಲಿಸಲಾದ ಇತರ ಮೊತ್ತಗಳನ್ನು ಈ ಸೂಚನೆಯ ಪ್ರಕಟಣೆಯ ದಿನಾಂಕದಿಂದ ಮೂವತ್ತು (30) ದಿನಗಳಲ್ಲಿ ಪಾವತಿಸದಿದ್ದರೆ, ಅಧಿಕೃತ ಅಧಿಕಾರಿಯು ಕೆಳಗೆ ಹೇಳಿದಂತೆ 06 ಜೂನ್ 2026 ರಂದು ಅಥವಾ ನಂತರ ಖಾಸಗಿ ಒಪ್ಪಂದದ ಮೂಲಕ ಮಾರಾಟಕ್ಕೆ ಮುಂದುವರಿಯುತ್ತಾರೆ.

ಸಾರ್ವಜನಿಕರಿಗೆ ತಿಳಿಸುವಂತೆ, ವೇಳಾಪಟ್ಟಿಯಲ್ಲಿ ಉಲ್ಲೇಖಿಸಲಾದ ಸುರಕ್ಷಿತ ಆಸ್ತಿಯು, IARC ಗೆ ಒಪ್ಪಬಹುದಾದ ನಿಯಮಗಳ ಪ್ರಕಾರ, ಖಾಸಗಿ ಒಪ್ಪಂದದ ಮೂಲಕ ಮಾರಾಟಕ್ಕೆ ಲಭ್ಯವಿದೆ.

ಖಾಸಗಿ ಒಪ್ಪಂದದ ಮೂಲಕ ಆಸ್ತಿ ಮಾರಾಟಕ್ಕೆ ಪ್ರಮಾಣಿತ ನಿಯಮಗಳು ಮತ್ತು ಷರತ್ತುಗಳು ಈ ಕೆಳಗಿನಂತಿವೆ:

1. ಖಾಸಗಿ ಒಪ್ಪಂದದ ಮೂಲಕ ಮಾರಾಟವು "ಎಲ್ಲಿ ಇದೆಯೋ ಹಾಗೆಯೇ" ಮತ್ತು "ಯಾವುದೇ ಇದೆಯೋ ಹಾಗೆಯೇ" ಎಂಬ ಆಧಾರದ ಮೇಲೆ ಇರುತ್ತದೆ.
2. ಈ ಸೂಚನೆಯ ಪ್ರಕಟಣೆಯ ಅವಧಿ ಮುಗಿದ ನಂತರ ಖರೀದಿದಾರರು ಮಾರಾಟದ ಪರಿಗಣನೆಯ 100% ಅನ್ನು ಠೇವಣಿ ಮಾಡಬೇಕಾಗುತ್ತದೆ.
3. ಖರೀದಿದಾರರು ತಮ್ಮ ತೃಪ್ತಿಗಾಗಿ (ಖಾಸಗಿ ಒಪ್ಪಂದದ ಮೂಲಕ ಮಾರಾಟದಲ್ಲಿರುವ) ಆಸ್ತಿಗೆ ಸಂಬಂಧಿಸಿದ ಎಲ್ಲಾ ಅಂಶಗಳ ಬಗ್ಗೆಯೂ ಸೂಕ್ತ ಎಚ್ಚರಿಕೆ ವಹಿಸಬೇಕು. ಖರೀದಿದಾರರು ಈ ವಿಷಯದಲ್ಲಿ ಅಧಿಕೃತ ಅಧಿಕಾರಿ/ಸೆಕ್ಯೂರ್ಡ್ ಕ್ರೆಡಿಟ್‌ದಾರರ ವಿರುದ್ಧ ನಂತರದ ದಿನಾಂಕದಂದು ಯಾವುದೇ ಕ್ಲೇಮ್ ಮಾಡಲು ಅರ್ಹರಾಗಿರುವುದಿಲ್ಲ.
4. ಯಾವುದೇ ಕಾರಣವನ್ನು ನೀಡದೆ ಯಾವುದೇ ಖರೀದಿಯ ಪ್ರಸ್ತಾಪವನ್ನು ತಿರಸ್ಕರಿಸುವ ಹಕ್ಕನ್ನು IARC ಕಾಯ್ದಿರಿಸಿದೆ.
5. ಆಸ್ತಿ ಖರೀದಿಗೆ ಸಂಬಂಧಿಸಿದಂತೆ ಖಾತಾ, ಸ್ಟಾಂಪ್ ಡ್ಯೂಟಿ, ನೋಂದಣಿ ಶುಲ್ಕ ಮತ್ತು ಇತರ ವೆಚ್ಚಗಳು, ತೆರಿಗೆಗಳು, ಸುಂಕಗಳು, ಸೊಸೈಟಿ ಬಾಕಿಗಳನ್ನು ಪಡೆಯುವ ಎಲ್ಲಾ ವೆಚ್ಚಗಳನ್ನು ಖರೀದಿದಾರರು ಭರಿಸಬೇಕು.
6. ಮಾರಾಟವು SARFAESI ಕಾಯ್ದೆ/ನಿಯಮಗಳ ನಿಬಂಧನೆಗಳಿಗೆ ಅನುಸಾರವಾಗಿರಬೇಕು.

ಎಸ್. ನಂ.	ಸಾಲಗಾರರ / ಜಾಮೀನುದಾರರ ಹೆಸರು	ಸರ್ಫೇಸಿ ಕಾಯ್ದೆಯಡಿ 13(2) ಡಿಮ್ಯಾಂಡ್ ನೋಟಿಸ್ ಪ್ರಕಾರ ಮೊತ್ತ.	ಖಾಸಗಿ ಒಪ್ಪಂದಕ್ಕೆ ಮೀಸಲು ಬೆಲೆ
1. 2. 3. 4. 5. 6. 7. 8.	ESVEE ಎಕ್ಸ್‌ಪ್ರೆಸ್ ಲಾಜಿಸ್ಟಿಕ್ಸ್ ಲಿಮಿಟೆಡ್ ಶ್ರೀಮತಿ ಪಿ. ಪೆದ್ರಾ ಶ್ರೀ ಕೆ. ಪದ್ಮನಾಭನ್ ಶ್ರೀ ಪಿ. ಪನ್ನೀರ್ ಸೆಲ್ವಂ ಶ್ರೀ. ಎಸ್. ಪದ್ಮನಾಭನ್ ಶ್ರೀ ಅರುಣ್ ಪದ್ಮನಾಭನ್ ಶ್ರೀ ನರೇಂದ್ರ ರುಸ್ತೋಗಿ ಶ್ರೀಮತಿ ಪೂಂಗೊಡಿ ರಾಜ್‌ಕುಮಾರ್	ರೂ.1,23,78,027.89 (ಒಂದು ಕೋಟಿ ರೂಪಾಯಿಗಳು ಇಪ್ಪತ್ತೂರು ಲಕ್ಷ ಎಪ್ಪತ್ತೆಂಟು ಸಾವಿರ ಅಕ್ಟೋಬರ್ 18, 2007 ರಂತೆ ಇಪ್ಪತ್ತೇಳು ಮತ್ತು ಎಂಬತ್ತೊಂಬತ್ತು ಪೈಸೆಗಳು ಮಾತ್ರ)	ರೂ. 3,60,00,000/– (ರೂಪಾಯಿ ಮೂರು ಕೋಟಿ ಅರವತ್ತು ಲಕ್ಷ ಮಾತ್ರ)

ಸುರಕ್ಷಿತ ಆಸ್ತಿಗಳ ವಿವರಗಳು: ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿಯ ಚಿಕ್ಕಲಸಂದ್ರ ಗ್ರಾಮದಲ್ಲಿ ಪಿ.ಪನೀರ್ ಸೆಲ್ವಂ ಅವರ ಹೆಸರಿನಲ್ಲಿ ನೆಲೆಗೊಂಡಿರುವ ಗ್ರಾಮ ಪಂಚಾಯತ್ ಖಾತಾ ಸಂಖ್ಯೆ 29 ಮತ್ತು ಬೆಂಗಳೂರು ಉಪ ಆಯುಕ್ತರು 30.05.1968 ರಂದು ಹೊರಡಿಸಿದ ಪರಿವರ್ತನಾ ಆದೇಶ ಸಂಖ್ಯೆ ALN S.R.1549 ರ ಪ್ರಕಾರ ಮನೆಯ ಪ್ಲಾಟ್ ಸಂಖ್ಯೆ 160 ಮತ್ತು 161 (ಭಾಗ) ದ ಎಲ್ಲಾ ಭಾಗಗಳನ್ನು ಪರಿವರ್ತಿಸಲಾಗಿದೆ. ಈ ಗ್ರಾಮ ಪಂಚಾಯತ್ ಖಾತಾ ಸಂಖ್ಯೆ 29, ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿಯಲ್ಲಿ ಪಿ.ಪನೀರ್ ಸೆಲ್ವಂ ಅವರ ಹೆಸರಿನಲ್ಲಿದೆ ಮತ್ತು ಗಡಿಗಳು:– ಸೈಟ್ ಸಂಖ್ಯೆ 160: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ಸಂಖ್ಯೆ 159, ಉತ್ತರಕ್ಕೆ: ಸೈಟ್ ಸಂಖ್ಯೆ 163 ಮತ್ತು ದಕ್ಷಿಣಕ್ಕೆ: ರಸ್ತೆ, ಸೈಟ್ ಸಂಖ್ಯೆ 161 (ಭಾಗ): ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ಸಂಖ್ಯೆ 160, ಉತ್ತರಕ್ಕೆ: ಅದೇ ಸೈಟ್‌ನ ಒಂದು ಭಾಗವನ್ನು ರಾಮಚಂದ್ರ ಮತ್ತು ದಕ್ಷಿಣಕ್ಕೆ: ರಸ್ತೆಗೆ ಮಾರಾಟ ಮಾಡಲಾಗಿದೆ.

ಮೇಲೆ ತಿಳಿಸಲಾದ ಸುರಕ್ಷಿತ ಸ್ವತ್ತುಗಳ ಮರುಪಾವತಿಗಾಗಿ ಖಂಖಈಂಇಖಘ ಕಾಯ್ದೆಯ ಸೆಕ್ಷನ್ 13(8) ರ ನಿಬಂಧನೆಗಳಿಗೆ ಮೇಲೆ ತಿಳಿಸಲಾದ ಸುರಕ್ಷಿತ ಸ್ವತ್ತುಗಳ ಮಾರಾಟದ ಮೊದಲು ಬ್ಯಾಂಕ್‌ನಿಂದ ಉಂಟಾದ ಎಲ್ಲಾ ವೆಚ್ಚಗಳು, ಶುಲ್ಕಗಳು ಮತ್ತು ವೆಚ್ಚಗಳೊಂದಿಗೆ ಮೇಲೆ ತಿಳಿಸಲಾದ ಬಾಕಿಗಳನ್ನು ಸಲ್ಲಿಸುವ ಮೂಲಕ ಮೇಲೆ ತಿಳಿಸಲಾದ ಸುರಕ್ಷಿತ ಸ್ವತ್ತುಗಳ ಮರುಪಾವತಿಗಾಗಿ ಮೇಲೆ ತಿಳಿಸಲಾದ ಸಾಲಗಾರರು/ಖಾತರಿದಾರರು/ಅಡಮಾನದಾರರ ಗಮನವನ್ನು ಸೆಳೆಯಲಾಗಿದೆ.

ದಿನಾಂಕ: 06.05.2026
ಸ್ಥಳ: ಚೆನ್ನೈ

ಅಧಿಕೃತ ಅಧಿಕಾರಿ
IARC ಪ್ರೈವೇಟ್ ಲಿಮಿಟೆಡ್
(IARF । ಟ್ರಸ್ಟ್ ಸ್ಕೀಮ್ । ರ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುವುದು)

ಮೇ 8ರಿಂದ ಮಾವು, ಹಲಸು ಮೇಳ

50 ಮಾವು, 7 ಹಲಸು ಮಳಿಗೆಗಳ ಸ್ಥಾಪನೆ | ವಿವಿಧ ತಳಿಯ ಹಣ್ಣುಗಳ ಪ್ರದರ್ಶನ

ಸಂ.ಕ. ಸಮಾಚಾರ, ಬೆಂಗಳೂರು

ತೋಟಗಾರಿಕೆ ಇಲಾಖೆ, ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಸಂಯುಕ್ತಾಶ್ರಯದಲ್ಲಿ ಮೇ. 8ರಿಂದ 17ರವರೆಗೆ ನಗರದ ಕಬ್ಬನ್ ಪಾರ್ಕ್‌ನಲ್ಲಿ ಮಾವು ಮತ್ತು ಹಲಸು ಪ್ರದರ್ಶನ ಹಾಗೂ ಮಾರಟ ಮೇಳವನ್ನು ಆಯೋಜಿಸಲಾಗಿದೆ ಎಂದು ರಾಜ್ಯ ಮಾವು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ.ಬಿ.ಸಿ. ಮುದ್ದುಗಂಗಾಧರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಮೇಳದಲ್ಲಿ ಗ್ರಾಹಕರಿಗೆ ಕಾರ್ಬೈಡ್ ಮುಕ್ತ, ಸಹಜವಾಗಿ ಮಾಗಿದ ಮಾವು ಹಾಗೂ ಹಲಸು ಹಣ್ಣುಗಳನ್ನು ರೈತರಿಂದ ನೇರವಾಗಿ ಖರೀದಿಸುವ ಅವಕಾಶ ಕಲ್ಪಿಸಲಾಗಿದೆ. ಬೆಳೆಗಾರರಿಗೆ ಯೋಗ್ಯ ಬೆಲೆ ಮತ್ತು ಗ್ರಾಹಕರಿಗೆ ತಾಜಾ, ರುಚಿಕರ ಹಣ್ಣುಗಳು ಸಮರ್ಪಕ ದರದಲ್ಲಿ ದೊರೆಯುವಂತೆ ಮಾಡವುದು ಈ ಮೇಳದ ಉದ್ದೇಶವಾಗಿದೆ ಎಂದರು.

ಮೇಳದಲ್ಲಿ ಬಾದಾಮಿ, ಮಲ್ಲಿಕಾ, ಸೆಂದೂರಾ, ರಸಪೂರಿ, ಕರಿ ಇಶಾಡ್ ಸೇರಿದಂತೆ ಹಲವು

ಮಾವಿನ ತಳಿಗಳು ಹಾಗೂ ರುದ್ರಾಕ್ಷಿ, ಶಿವರಾತ್ರಿ, ಏಕಾದಶಿ, ತೂಬಗೆರೆ ಸೇರಿದಂತೆ ಹಲಸಿನ ತಳಿಗಳು ಲಭ್ಯವಿರಲಿವೆ. ರಾಮನಗರ, ಮಂಡ್ಯ, ತುಮಕೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳ ಬೆಳೆಗಾರರು ಮೇಳದಲ್ಲಿ ಭಾಗವಹಿಸುತ್ತಿದ್ದು, ಒಟ್ಟು 50 ಮಾವು ಮಳಿಗೆಗಳು ಮತ್ತು 7 ಹಲಸು ಮಳಿಗೆಗಳನ್ನು ಸ್ಥಾಪಿಸಲಾಗುತ್ತಿದೆ. ಮೇಳದಲ್ಲಿ ವಿವಿಧ ತಳಿಗಳ ಹಣ್ಣುಗಳನ್ನು ವೀಕ್ಷಿಸುವ ಹಾಗೂ ಸವಿಯುವ ಅವಕಾಶವೂ ಕಲ್ಪಿಸಲಾಗಿದೆ.

ಮಾವು ಹಂಗಾಮಿಗೆ ಪೂರಕವಾಗಿ ನಿಗಮವು ಹಲವು ಕ್ರಮಗಳನ್ನು ಕೈಗೊಂಡಿದೆ. ಮಾಡಿಕೆರೆ ಮಾವು ಅಭಿವೃದ್ಧಿ ಕೇಂದ್ರದ ಪ್ಯಾಕ್‌ಹೌಸ್ ಮೂಲಕ ಈ ವರ್ಷ 11 ಟನ್ ಮಾವು ಹಣ್ಣನ್ನು ಸಂಸ್ಕರಿಸಿ ಅಮೆರಿಕಾ, ಜರ್ಮನಿ ಮತ್ತು ಯುಕೆಗೆ ರಫ್ತು ಮಾಡಲಾಗಿದೆ. ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಬೈರಾಪಟ್ಟಣದಲ್ಲಿ ಹೊಸ ಪ್ಯಾಕ್‌ಹೌಸ್ ಘಟಕವನ್ನು ಪ್ರಾರಂಭಿಸಲಾಗಿದೆ ಎಂದರು.

ಶೇ.60–70ರಷ್ಟು ಬೆಳೆ ನಷ್ಟ

ಈ ವರ್ಷದಲ್ಲಿ ಅಂದಾಜು ಶೇ.60ರಿಂದ 70 ಬೆಳೆ ನಷ್ಟವಾಗಿದ್ದು, ಉಳಿದ ಹಣ್ಣಿನ ಮೇಲೂ ಇತ್ತೀಚಿನ ಮಳೆಯಿಂದ ಶೇ. 8ರಿಂದ 10 ಹಾನಿ ಉಂಟಾಗಿದೆ. ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಹಿನ್ನೆಲೆ ತುರ್ತಾಗಿ ಸಭೆ ನಡೆಸಿದ ಅಧಿಕಾರಿಗಳು, ನಷ್ಟಕ್ಕೊಳಗಾದ ರೈತರಿಗೆ ಪರಿಹಾರ ಒದಗಿಸಲು ಕ್ರಮ ಕೈಗೊಂಡಿದ್ದಾರೆ. ಶೇ.33ಕ್ಕಿಂತ ಹೆಚ್ಚು ನಷ್ಟವಾದ ಬೆಳೆಗಳಿಗೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ ಮೂಲಕ ನೆರವು ನೀಡುವಂತೆ ಸೂಚಿಸಲಾಗಿದೆ.

ಇಂದಿನ ಕಾರ್ಯಕ್ರಮ

06-05-2026, ಬುಧವಾರ

ಬೆಳಗ್ಗೆ: ನಾರಾಯಣ ಹೆಲ್ತ್ ಸಿಟಿ: 100ನೇ ವೆಲ್‌ನೆಸ್ ಆನ್ ವೀಲ್ಸ್ ವೈದ್ಯಕೀಯ ಶಿಬಿರ, ಹೃದಯ ರೋಗ, ಕ್ಯಾನ್ಸರ್, ಮಧುಮೇಹ ಮತ್ತು ರಕ್ತದೊತ್ತಡಕ್ಕೆ ಉಚಿತ ಪೂರ್ವ ತಪಾಸಣೆ. ಮುಖ್ಯ ಅತಿಥಿ: ಜಾಗತಿಕ ಆಧ್ಯಾತ್ಮಿಕ ನಾಯಕ ರವಿ ಶಂಕರ್, ವೆಲ್ ನೆಸ್ ಆನ್ ವೀಲ್ಸ್ ಸಂಸ್ಥಾಪಕ ದೇವಿ ಪ್ರಸಾದ ಶೆಟ್ಟಿ. ಸ್ಥಳ: ಆಗಾರ ಪಂಚಾಯತ್. 10

ಸಂಜೆ: ಕರ್ನಾಟಕ ಚಿತ್ರಕಲಾ ಪರಿಷತ್ತು: ನಮ್ಮ ಆರ್ಟ್ ಬೆಂಗಳೂರು, ರಾಷ್ಟ್ರೀಯ ಕಲಾ ಉತ್ಸವದ 2ನೇ ಆವೃತ್ತಿಯ ಉದ್ಘಾಟನಾ ಸಮಾರಂಭ. ಮುಖ್ಯ ಅತಿಥಿ: ಕಿರ್ಲೋಸ್ಕರ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕಿ ಗೀತಾಂಜಲಿ ವಿಕ್ರಂ ಕಿರ್ಲೋಸ್ಕರ್, ಅಧ್ಯಕ್ಷತೆ: ಕರ್ನಾಟಕ ಚಿತ್ರಕಲಾ ಪರಿಷತ್ತು ಅಧ್ಯಕ್ಷ ಡಾ.ಬಿ. ಎಲ್. ಶಂಕರ್. ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು. 5.00 ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ : ಮತ್ತಿಕೆರೆಯ ಶ್ರೀ ಲಕ್ಷ್ಮೀ ವೆಂಕಟೇಶ್ವರ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, ಶ್ರೀ ಪ್ರಶಾಂತ ಭಾರ್ಗವಾಚಾರ್ಯರಿಂದ ಧಾರ್ಮಿಕ ಪ್ರವಚನ. ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಸುಧೀಂದ್ರನಗರ, ಈಜುಕೊಳದ ಬಡಾವಣೆ. 6

ಶಿಥಿಲಾವಸ್ಥೆ ಕಟ್ಟಡಗಳನ್ನು ಗುರುತಿಸಿ, ಕೂಡಲೇ ತೆರವುಗೊಳಿಸಿ: ರಮೇಶ್

ಸಂ.ಕ.ಸಮಾಚಾರ, ಬೆಂಗಳೂರು

ಮುಂಗಾರು ಮಳೆಯ ಸಂದರ್ಭದಲ್ಲಿ ಸಾರ್ವಜನಿಕರ ಸುರಕ್ಷತೆಯನ್ನು ಖಚಿತಪಡಿಸುವ ನಿಟ್ಟಿನಲ್ಲಿ ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಶಿಥಿಲಗೊಂಡಿರುವ ಕಟ್ಟಡಗಳು, ಕಾಪೌಂಡ್‌ಗಳು, ತಡೆಗೋಡೆಗಳನ್ನು ಗುರುತಿಸಿ ತೆರವುಗೊಳಿಸಲು ತುರ್ತು ಕಾರ್ಯಾಚರಣೆಯನ್ನು ಆರಂಭಿಸುವಂತೆ ಪಾಲಿಕೆ ಆಯುಕ್ತರಾದ ಡಿ.ಎಸ್.ರಮೇಶ್ ಪಾಲಿಕೆ ಅಭಿಯಂತರರುಗಳಿಗೆ ಸೂಚನೆ ನೀಡಿದರು.

ಇತ್ತೀಚೆಗೆ ಬೋರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಆವರಣದಲ್ಲಿ ಕಾಂಪೌಂಡ್ ಗೋಡೆ ಕುಸಿತದಿಂದ ಸಂಭವಿಸಿದ ದುರ್ಘಟನೆಯನ್ನು ಗಂಭೀರವಾಗಿ ಪರಿಗಣಿಸಿ, ಇಂತಹ ಘಟನೆಗಳು ಮರುಕಳಿಸದಂತೆ ವಿಶೇಷ ಅಭಿಯಾನದ ಮೂಲಕ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ವಾರ್ಡ್‌ವಾರು ಅಪಾಯಕಾರಿ ಕಟ್ಟಡಗಳ ಪ್ರಾಥಮಿಕ ಪಟ್ಟಿಯನ್ನು 48 ಗಂಟೆಗಳೊಳಗೆ ಸಲ್ಲಿಸಬೇಕು. ಇನ್ನು 5 ದಿನಗಳೊಳಗೆ ಫೋಟೋಗಳೊಂದಿಗೆ ವಿವರವಾದ ಪರಿಶೀಲನಾ ವರದಿ ಸಲ್ಲಿಸುವಂತೆ ಮತ್ತು ಅತ್ಯಂತ ಅಪಾಯಕಾರಿ ಎಂದು ಗುರುತಿಸಲಾದ ಕಟ್ಟಡಗಳ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳಲು ವಿಭಾಗದ ಕಾರ್ಯಪಾಲಕ ಅಭಿಯಂತರಿಗೆ ಸೂಚಿಸಿದರು.

ಅಪಾಯಕಾರಿ ಪ್ರದೇಶಗಳನ್ನು ಬ್ಯಾರಿಕೇಡ್ ಮಾಡಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಎಚ್ಚರಿಕೆ ಫಲಕಗಳನ್ನು ಅಳವಡಿಸಬೇಕು. ಜೀವಾಪಾಯ ಇರುವ ಪ್ರದೇಶಗಳಲ್ಲಿ ತಕ್ಷಣ ಜನರನ್ನು ತೆರವುಗೊಳಿಸಬೇಕು. ಅಪಾಯಕಾರಿ ಸ್ಥಳಗಳ ಸಮೀಪ ವಾಹನ ನಿಲುಗಡೆ, ವಾಹನ ಸಂಚಾರ, ವ್ಯಾಪಾರ ಚಟುವಟಿಕೆ ಹಾಗೂ ಜನಸಮೂಹವನ್ನು ನಿರ್ಬಂಧಿಸುವುದು.

ವಿದ್ಯುತ್, ನೀರು ಹಾಗೂ ಅನಿಲ ಸಂಪರ್ಕ ಕಡಿತಕ್ಕೆ ಬೆಸ್ಕಾಂ, ಜಲಮಂಡಳಿ ಹಾಗೂ ಗೇಲ್ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದರ ಮೂಲಕ ಸೂಕ್ತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ನಗರ ಪಾಲಿಕೆ ವ್ಯಾಪ್ತಿಯಲ್ಲಿ ಶಿಥಿಲಗೊಂಡಿರುವ, ಹಳೆಯ ಕಟ್ಟಡಗಳು, ಅಪಾಯಕಾರಿ ಕಟ್ಟಡ ರಚನೆಗಳು ಕಂಡುಬಂದಲ್ಲಿ ಕೂಡಲೇ ನಗರ ಪಾಲಿಕೆ ಕಂಟ್ರೋಲ್ ರೂಮ್ ಸಂಖ್ಯೆ 9480685706ಗೆ ಮಾಹಿತಿ ನೀಡಲು ಹಾಗೂ ಅಂತಹ ಅಪಾಯಕಾರಿ ಕಟ್ಟಡಗಳ ಬಳಿ ಆಶ್ರಯ ಪಡೆಯುವುದು, ನಿಲ್ಲುವುದು ಸಂಚರಿಸುವುದು, ಹಾಗೂ ವ್ಯಾಪಾರ ಮಾಡುವುದನ್ನು ತಪ್ಪಿಸುವಂತೆ ಸಾರ್ವಜನಿಕರಲ್ಲಿ ಆಯುಕ್ತರು ಮನವಿ ಮಾಡಿದ್ದಾರೆ.

ಬೆಂಗ್ಳೂರು ವಿಶ್ವದರ್ಜೆ ಪ್ರಗತಿ ಹಬ್‌ಆಗಿ ಪರಿವರ್ತನೆ

ಮಾಸ್ಟರ್ ಪ್ಲಾನ್ ರೂಪಿಸಲು ಐಎಸ್‌ಇಜಿ ಜೊತೆ ಒಡಂಬಡಿಕೆ | ಡಿಸಿಎಂ ಡಿಕೆಶಿ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ

ಸಂ.ಕ. ಸಮಾಚಾರ ಬೆಂಗಳೂರು

ಬೆಂಗಳೂರನ್ನು ವಿಶ್ವದರ್ಜೆಯ ಪ್ರಗತಿಯ ಹಬ್ ಆಗಿ ಪರಿವರ್ತಿಸಲು ರಾಜ್ಯ ಸರ್ಕಾರ ಮುಂದಾಗಿದ್ದು, ಇದಕ್ಕೆ ಅಗತ್ಯವಿರುವ ಆರ್ಥಿಕ ಮಾಸ್ಟರ್ ಪ್ಲಾನ್ ರೂಪಿಸಲು ಸುಸ್ಥಿರ ಉದ್ಯೋಗ ಮತ್ತು ಅಭಿವೃದ್ಧಿ ದತ್ತಿ (ಐಎಸ್‌ಇಜಿ) ಸಂಸ್ಥೆಯೊಂದಿಗೆ ಉದ್ದೇಶ ಪತ್ರಕ್ಕೆ ಸಹಿ ಹಾಕಲಾಗಿದೆ.

ವಿಧಾನಸೌಧದಲ್ಲಿ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿ ನಾಥ್ ಹಾಗೂ ಐಎಸ್‌ಇಜಿ ನಿರ್ದೇಶಕ ಡಾ. ಶಿರೀಶ್ ಸಂಖೆರವರು ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಸಮ್ಮುಖದಲ್ಲಿ ಪರಸ್ಪರ ಸಹಿ ಹಾಕಿ ಪತ್ರ ವಿನಿಮಯ ಮಾಡಿಕೊಂಡರು. ಈ ಸಂದರ್ಭದಲ್ಲಿ ಡಿಸಿಎಂ ಡಿ.ಕೆ ಶಿವಕುಮಾರ್ ಅವರು ಒಡಂಬಡಿಕೆ ಉದ್ದೇಶದ ಬಗ್ಗೆ ವಿವರಿಸಿ, ಬೆಂಗಳೂರಿನಲ್ಲಿ ವಿಶ್ವದರ್ಜೆ ಪ್ರಗತಿ ಹಬ್ ಮಾಡಲು ಕಳೆದ ಮೂರು ವರ್ಷಗಳಿಂದ ಪ್ರಯತ್ನ ಮಾಡುತ್ತಲೇ ಇದ್ದೇವೆ. ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ದಾಖಲೆ ಪ್ರಮಾಣದಲ್ಲಿ ಆರ್ಥಿಕ ಶಕ್ತಿ ನೀಡಿದ್ದೇವೆ. ಬೆಂಗಳೂರು

ಮೆಟ್ರೋ ಪಾಲಿಟನ್ ಪ್ರದೇಶದಲ್ಲಿ ತಲಾದಾಯ 8.850 ಡಾಲರ್‌ನಷ್ಟಿದೆ ಇದೆ. ರಾಜ್ಯದ ಸರಾಸರಿಗಿಂತ ದುಪ್ಪಟ್ಟಿದೆ. 8 ಸಾವಿರ ಚದರ ಕಿ.ಮೀಗಿಂತ ಹೆಚ್ಚು ಪ್ರದೇಶದಲ್ಲಿ ಬೆಂಗಳೂರು ನಗರ, ಗ್ರಾಮಾಂತರ ಹಾಗೂ ದಕ್ಷಿಣ ಜಿಲ್ಲೆಗಳು ಹರಡಿದ್ದು, 1.6 ಕೋಟಿ ಜನ ಇಲ್ಲಿದ್ದಾರೆ. ಭಾರತದ ಸಾಫ್ಟ್ ವೇರ್ ರಫ್ತಿನಲ್ಲಿ ಶೇ. 42ರಷ್ಟು ಕೊಡುಗೆ ಬೆಂಗಳೂರು ನೀಡುತ್ತಿದೆ. ಬೆಂಗಳೂರು ನಗರಕ್ಕೆ 500 ವರ್ಷಗಳು ಪೂರ್ಣಗೊಳ್ಳುತ್ತಿದ್ದು, ಈ ಸಂದರ್ಭದಲ್ಲಿ 2032ರಿಂದ 2037ರ ಅವಧಿಯಲ್ಲಿ ಕೈಗೊಳ್ಳಬೇಕಾದ ಆರ್ಥಿಕ ಮಾಸ್ಟರ್ ಪ್ಲಾನ್ ಅನ್ನು ರೂಪಿಸಲು ಚಿಂತನೆ ನಡೆಸಿದ್ದೇವೆ. ಹೀಗಾಗಿ ಬೆಂಗಳೂರಿಗೆ ಹೊಸ ರೂಪ, ಶಕ್ತಿ ನೀಡಬೇಕು ಎಂದು ತೀರ್ಮಾನಿಸಿದ್ದೇವೆ ಎಂದು ತಿಳಿಸಿದರು.

4 ತಿಂಗಳ ಕಾಲಾವಕಾಶ: ದತ್ತಾಂಶ ಆಧಾರಿತ ಆರ್ಥಿಕ ಮಾಸ್ಟರ್ ಪ್ಲಾನ್ ರೂಪಿಸಲು ಸೂಚಿಸಲಾಗುತ್ತಿದೆ. ಇದಕ್ಕೆ ನಮ್ಮ ಆರ್ಥಿಕ ಹೊರೆ ಇರುವುದಿಲ್ಲ. ಇಂಧನ, ಪಾಲಿಕೆ, ಜಲ, ನಗರಾಭಿವೃದ್ಧಿ, ಮಾಹಿತಿ ತಂತ್ರಜ್ಞಾನ, ಕೈಗಾರಿಕೆ ಕ್ಷೇತ್ರಗಳು ಸೇರಿದಂತೆ ಪ್ರಮುಖ ನಾಗರೀಕರ ಅಭಿಪ್ರಾಯ, ಸಲಹೆ ಪಡೆಯಲಾಗುವುದು. ಬೆಂಗಳೂರನ್ನು ವಿಶ್ವದರ್ಜೆ ಪ್ರಗತಿ ಹಬ್ ಮಾಡಲು ಕೈಗೊಳ್ಳಲಾಗಿರುವ ತೀರ್ಮಾನಕ್ಕೆ ಹೊಸರೂಪ ನೀಡುತ್ತಿದ್ದೇವೆ. ಜಾಗತಿಕ ನಗರಗಳ ಜೊತೆ ಸ್ಪರ್ಧೆ ಮಾಡಲಾಗುತ್ತಿದೆ. ನಮ್ಮ ಜತೆ ಒಡಂಬಡಿಕೆ ಮಾಡಿಕೊಳ್ಳಲು ಮುಂದೆ ಬಂದಿರುವ ಐಎಸ್‌ಇಜಿ ಫೌಂಡೇಷನ್ ಸಂಸ್ಥೆ ಮುಂಬೈ, ವಿಶಾಖಪಟ್ಟಣ, ಪುಣೆ, ವಾರಣಾಸಿಗಳಲ್ಲಿ ಈ ಯೋಜನೆ ರೂಪಿಸಿದ್ದಾರೆ. ಇವರಿಗೆ 4 ತಿಂಗಳ ಕಾಲಾವಕಾಶ ನೀಡಿದ್ದು, ಈ ಅವಧಿಯಲ್ಲಿ ಅವರು ನಕ್ಷೆ ರೂಪಿಸಲಿದ್ದಾರೆ. ಇವರಿಗೆ ಅಗತ್ಯವಿರುವ ಸಹಕಾರವನ್ನು ನೀಡಬೇಕು ಎಂದು ನಮ್ಮ ಅಧಿಕಾರಿಗಳಿಗೆ ಸೂಚಿಸುತ್ತಿದ್ದೇನೆ. ಬೆಂಗಳೂರಿನ ನಾಗರೀಕರು, ಉದ್ದಿಮೆದಾರರು, ಶೈಕ್ಷಣಿಕ ಸಂಸ್ಥೆಗಳನ್ನು ವಿಶ್ವಾಸಕ್ಕೆ ಪಡೆದು ದೊಡ್ಡ ಮಾಸ್ಟರ್ ಪ್ಲಾನ್ ಸೃಷ್ಟಿಸಬೇಕು ಎಂದು ಸೂಚಿಸಿದರು.

2 ಲಕ್ಷ ಕೋಟಿ ಯೋಜನೆ

ಎಲ್ಲಿ ಉದ್ಯೋಗ ಸೃಷ್ಟಿಸಬೇಕು, ಎಲ್ಲಿ ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಬೇಕು, ಎಲ್ಲಿ ವಸತಿ ಯೋಜನೆಗಳನ್ನು ತರಬೇಕು, ಸಂಚಾರ ದಟ್ಟಣೆ ನಿವಾರಣೆಗೆ ಸಂಬಂಧಿಸಿದಂತೆ ನಕ್ಷ ರೂಪಿಸಲಾಗುವುದು. ದಶದ ಇತರೆ ನಗರಗಳಾದ ಮುಂಬೈ, ದೆಹಲಿ, ಕೋಲ್ಕತ್ತಾಗಳಲ್ಲಿ ಇಲ್ಲಿಗಿಂತ ಹೆಚ್ಚು ಸಂಚಾರ ದಟ್ಟಣೆ ನೋಡಿದ್ದೇನೆ. ನಾನು ಅವರನ್ನು ದೂರುತ್ತಿಲ್ಲ. ಈ ಸಮಸ್ಯೆಗೆ ಪರಿಹಾರ ಯಾವ ರೀತಿ ನೀಡಬೇಕು ಯೋಜನೆ ರೂಪಿಸಿದ್ದೇವೆ. ಸುಮಾರು 2 ಲಕ್ಷ ಕೋಟಿ ಮೌಲ್ಯದ ಯೋಜನೆ ರೂಪಿಸಿದ್ದು ಹಂತ ಹಂತವಾಗಿ ಇದನ್ನು ಕಾರ್ಯಗತಗೊಳಿಸಲಾಗುತ್ತಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ ಹೇಳಿದರು.

ಚುಟುಕು ಸುದ್ದಿ

ಇಂಡೆಕ್ಸ್ ಫಂಡ್ ಬಿಡುಗಡೆ

ಬೆಂಗಳೂರು: ಆಕ್ಸಿಸ್ ಮ್ಯೂಚುವಲ್ ಫಂಡ್ ಆಕ್ಸಿಸ್ ನಿಫ್ಟಿ ಕ್ಯಾಪಿಟಲ್ ಮಾರ್ಕೆಟ್ಸ್ ಇಂಡೆಕ್ಸ್ ಫಂಡ್ ಬಿಡುಗಡೆ ಮಾಡಿದೆ. ಇದು ನಿಫ್ಟಿ ಕ್ಯಾಪಿಟಲ್ ಮಾರ್ಕೆಟ್ಸ್ ಟೋಟಲ್ ರಿಟರ್ನ್ ಇಂಡೆಕ್ಸ್ (ಟಿಆರ್‌ಐ) ಅನ್ನು ಅನುಸರಿಸಲು ವಿನ್ಯಾಸಗೊಳಿಸಲಾದ ಓಪನ್ ಎಂಡೆಡ್ ಇಂಡೆಕ್ಸ್ ಫಂಡ್ ಆಗಿದ್ದು, ಹೂಡಿಕೆದಾರರಿಗೆ ಭಾರತದ ವೇಗವಾಗಿ ಬೆಳೆಯುತ್ತಿರುವ ಬಂಡವಾಳ ಮಾರುಕಟ್ಟೆಗಳಲ್ಲಿ ಹೂಡಿಕೆ ಮಾಡುವ ಅವಕಾಶವನ್ನು ಒದಗಿಸುತ್ತದೆ.

ಈ ಹೊಸ ಫಂಡ್ ಆಫರ್ (ಎನ್‌ಎಫ್‌ಒ) ಮೇ. 4, 2026 ರಂದು ಆರಂಭವಾಗಿದ್ದು, ಮೇ. 15, 2026 ರಂದು ಮುಕ್ತಾಯಗೊಳ್ಳಲಿದೆ. ಟ್ರಾಕಿಂಗ್ ದೋಷಕ್ಕೆ ಒಳಪಟ್ಟು, ವೆಚ್ಚಗಳಿಗಿಂತ ಮೊದಲು ನಿಫ್ಟಿ ಕ್ಯಾಪಿಟಲ್ ಮಾರ್ಕೆಟ್ಸ್ ಟಿಆರ್‌ಐನ ಕಾರ್ಯಕ್ಷಮತೆಗೆ ನಿಕಟವಾಗಿ ಹೊಂದಿಕೆಯಾಗುವ ಆದಾಯವನ್ನು ನೀಡುವುದು ಈ ಫಂಡ್‌ನ ಗುರಿಯಾಗಿದೆ.

ನಾಳೆ ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ಜಲ ಮಂಡಳಿಯ ವಿವಿಧ ಉಪ ವಿಭಾಗಗಳಾದ ಪೂರ್ವ–1–1, ಪೂರ್ವ–2–1,



ಆಗ್ನೇಯ –1, ಆಗ್ನೇಯ –4, ಪಶ್ಚಿಮ –1–1, ಪಶ್ಚಿಮ –2–1, ವಾಯುವ್ಯ–1, ವಾಯುವ್ಯ– 3, ಕೇಂದ್ರ–1–1 ಈಶಾನ್ಯ– 1 ಮತ್ತು ಉತ್ತರ–1–1, ಉಪವಿಭಾಗಗಳಲ್ಲಿ ಮೇ 7 ರಂದು ಬೆಳಿಗ್ಗೆ 9.30 ರಿಂದ 11ರವರೆಗೆ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ. ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ನೀರಿನ ಅದಾಲತ್ ನಡೆಸಲಾಗುವುದು. ಸಾರ್ವಜನಿಕರು ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಕ್ಕೆ ಕರೆ ಮಾಡಿ ಅಥವಾ ವಾಟ್ಸ್ ಆಪ್ ಸಂಖ್ಯೆ 8762228888ಕ್ಕೆ ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದಾಗಿದೆ.

ಇಂಗ್ಲಿಷ್ ಕಡ್ಡಾಯ ವಿರೋಧಿಸಿ ವಿದ್ಯಾರ್ಥಿಗಳಿಂದ ಪ್ರತಿಭಟನೆ

ಬೆಂಗಳೂರು: ರಾಜ್ಯ ಸರ್ಕಾರ ಈ ಶೈಕ್ಷಣಿಕ ವರ್ಷದಿಂದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮದ ಹೆಸರಿನಲ್ಲಿ ಕಡ್ಡಾಯ ಇಂಗ್ಲಿಷ್ ಮಾಧ್ಯಮವ ಹೇರುತ್ತಿರುವುದನ್ನು ವಿರೋಧಿಸಿ, ಕನ್ನಡ ಮಾಧ್ಯಮ ಆಯ್ಕೆಯ ಸ್ವಾತಂತ್ರ್ಯವನ್ನು ಉಳಿಸಲು ಆಗ್ರಹಿಸಿ ಎಐಡಿಎಸ್‌ಒ ಸಂಘಟನೆಯ ನೇತೃತ್ವದಲ್ಲಿ, ಮಂಗಳವಾರ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಎಐಡಿಎಸ್‌ಒ ರಾಜ್ಯ ಸೆಕ್ರೆಟೇರಿಯಟ್ ಸದಸ್ಯ ತುಳಜಾರಾಮ್ ಎನ್. ಕೆ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿ, ನಾವು ಇಂಗ್ಲಿಷ್ ಮಾಧ್ಯಮದ ವಿರೋಧಿಗಳಲ್ಲ, ಆದರೆ ಕನ್ನಡ ಭಾಷೆ ಕಸಿದು ಇಂಗ್ಲಿಷ್ ಮಾಧ್ಯಮವನ್ನು ಕಡ್ಡಾಯಗೊಳಿಸುವುದನ್ನು ಒಪ್ಪುವುದಿಲ್ಲ. ಮಾತೃಭಾಷೆಯ ಅಧ್ಯಯನದ ಕುರಿತು ಹಲವು ಸಾಹಿತಿಗಳು, ಶಿಕ್ಷಣ ತಜ್ಞರು ಹಾಗೂ ಭಾಷಾ ತಜ್ಞರ ಅಭಿಪ್ರಾಯಗಳನ್ನ ಗಾಳಿಗೆ ತೂರಿ, ಪೋಷಕರ ಬೇಡಿಕೆಯ ನೆಪವೊಡ್ಡಿ ಸರ್ಕಾರವು ಕನ್ನಡ ಮಾಧ್ಯಮವನ್ನು ತೆಗೆದು ಹಾಕುತ್ತಿರುವುದು ಖಂಡನೀಯ ಎಂದರು. ಶಿಲ್ಪಾ ಬಿ.ಕೆ, ಅಶ್ವಿನಿ ಕೆ.ಎಸ್, ಅಜಯ್ ಕಾಮತ್ ಸೇರಿದಂತೆ ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪೀಣ್ಯ ಮೇಲ್ಸೇತುವೆ ಬಂದ್: ವಾಹನ ಸಂಚಾರ ದಟ್ಟಣೆ

2 ಕಿ.ಮೀ. ಕ್ರಮಿಸಲು ಒಂದು ಗಂಟೆ ಬೇಕು ಟ್ರಾಫಿಕ್‌ನಲ್ಲಿ ಸಿಲುಕಿ ಸವಾರರ ಪರದಾಟ

ಸಂ.ಕ. ಸಮಾಚಾರ ಬೆಂಗಳೂರು

ಸುಮಾರು 22 ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವ ಬೆಂಗಳೂರು–ತುಮಕೂರು ರಸ್ತೆಯ ಪೀಣ್ಯ ಮೇಲ್ಸೇತುವೆಯನ್ನು ಮೂರು ದಿನಗಳ ಕಾಲ ಬಂದ್ ಮಾಡಲಾಗಿದ್ದು, ಇದರಿಂದ ವಾಹನ ಸವಾರರು ಬೆಳಗ್ಗೆಯಿಂದಲೇ ಸಂಚಾರ ದಟ್ಟಣೆಗೆ ಸಿಲುಕಿ ಪರದಾಡಿದರು. ಕೇಬಲ್ ಅಳವಡಿಕೆ ಮತ್ತು ಲೋಡ್ ಟೆಸ್ಟಿಂಗ್‌ಗಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ದುರಸ್ತಿ ಕಾರ್ಯ ನಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ಸಂಚಾರಿ ಪೊಲೀಸರು ಮಂಗಳವಾರ ಬೆಳಗ್ಗೆಯಿಂದಲೇ ಮೇಲ್ಸೇತುವೆ ಮೇಲೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಇದರಿಂದ ಮೂರು ದಿನಗಳ ಕಾಲ ಈ ರಸ್ತೆಯಲ್ಲಿ ವಾಹನ ಸವಾರರು ಸಂಚಾರ ದಟ್ಟಣೆಯಲ್ಲಿ ಸಿಲುಕುವಂತಾಗಿದೆ.

ಫ್ಲೈಓವರ್‌ನಲ್ಲಿರುವ 1422 ಕೇಬಲ್‌ಗಳ ದುರಸ್ತಿ ಮತ್ತು ಲೋಡ್ ಪರೀಕ್ಷೆಗಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಸಾಮಾನ್ಯವಾಗಿ 15–20 ನಿಮಿಷಗಳಲ್ಲಿ ಸಂಚರಿಸಬಹುದಾದ ಮಾರ್ಗವನ್ನು ಈಗ ಕೆಳರಸ್ತೆಯಲ್ಲಿ ಸಂಚರಿಸಲು ಸುಮಾರು ಒಂದೂವರೆ ಗಂಟೆ ಸಮಯ ಹಿಡಿಯುತ್ತಿದೆ ಎಂದು ವಾಹನ ಸವಾರರು ಅಳಲು ತೋಡಿಕೊಂಡಿದ್ದಾರೆ. ಮಂಗಳವಾರ ಬೆಳಗ್ಗೆಯಿಂದ ಗೊರಗುಂಟೆಪಾಳ್ಯ, ಪೀಣ್ಯ, ಜಾಲಹಳ್ಳಿ ಸರ್ಕಲ್, 8ನೇ ಮೈಲಿ, ಎಸ್‌ಆರ್‌ಎಸ್ ಜಂಕ್ಷನ್‌ಗಳ ಸುತ್ತಮುತ್ತ ಸಂಚಾರ ದಟ್ಟಣೆ ಉಂಟಾಗಿ, ವಾಹನ ಸವಾರರು ಪರದಾಡಿದರು.

ಪರ್ಯಾಯ ಮಾರ್ಗಗಳು

ನೆಲಮಂಗಲ ಕಡೆಯಿಂದ ನಗರದತ್ತ ಬರೋ ವಾಹನ ಸವಾರರು ಕೆನ್ನಮೆಟಲ್ ಫ್ಯಾಕ್ಟರಿ ಹತ್ತಿರ ಫ್ಲೈಓವರ್ ಕೆಳಭಾಗದ ರಾಷ್ಟ್ರೀಯ ಹೆದ್ದಾರಿ ಮತ್ತು ಸರ್ವಿಸ್ ರಸ್ತೆಯ ಮೂಲಕ ಸಾಗಬೇಕು. ಅಲ್ಲಿಂದ 8ನೇ ಮೈಲಿ, ದಾಸರಹಳ್ಳಿ, ಪೀಣ್ಯ ಪೊಲೀಸ್ ಠಾಣೆ ಜಂಕ್ಷನ್, ಎಸ್.ಆರ್.ಎಸ್ ಜಂಕ್ಷನ್, ಗೊರಗುಂಟೆಪಾಳ್ಯ ಮಾರ್ಗವಾಗಿ ಜಾಲಹಳ್ಳಿ ಕ್ರಾಸ್ ಮೂಲಕ ಹೋಗಬಹುದು. ಬೆಂಗಳೂರು ನಗರದ ಕಡೆಯಿಂದ ನೆಲಮಂಗಲದತ್ತ ಪ್ರಯಾಣಿಸುವ ವಾಹನ ಸವಾರರು ಸಿ.ಎಂ.ಟಿ.ಐ ಬಳಿ ಫ್ಲೈಓವರ್ ಕೆಳಭಾಗದ ರಾಷ್ಟ್ರೀಯ ಹೆದ್ದಾರಿ ಮತ್ತು ಸರ್ವಿಸ್ ರಸ್ತೆಯನ್ನ ಬಳಸಬೇಕು. ಅಲ್ಲಿಂದ ಎಸ್‌ಆರ್‌ಎಸ್ ಜಂಕ್ಷನ್, ಪೊಲೀಸ್ ಠಾಣೆ ಜಂಕ್ಷನ್, ಜಾಲಹಳ್ಳಿ ಕ್ರಾಸ್, ದಾಸರಹಳ್ಳಿ, 8 ನೇ ಮೈಲಿ ದಾಟಿ ಪಾರ್ಲೆ–ಜಿ ಟೋಲ್ ಮೂಲಕ ನೆಲಮಂಗಲದತ್ತ ಹೋಗಬಹುದು.

ಬೆಂಗಳೂರಿನಲ್ಲಿ ಇತ್ತೀಚೆಗೆ ಸುರಿದ ಭಾರೀ ಮಳೆಯಿಂದಾಗಿ ಜಯನಗರದ 4ನೇ ಹಂತದ ರಸ್ತೆ ಡಾಂಬರೀಕರಣ ಕುಸಿದು ಗುಂಡಿ ಬಿದ್ದಿರುವ ದೃಶ್ಯ.

ಮೇ 9,10ರ ಪರೀಕ್ಷೆ ರದ್ದು

ಬೆಂಗಳೂರು: ಆರ್‌ಜಿಯುಹೆಚ್‌ಎಸ್, ಬೆಂಗಳೂರು ಜಲಮಂಡಲಿ, ಕೃಷಿ ಮಾರಾಟ ಇಲಾಖೆ ಹಾಗೂ ಕೆಎಸ್‌ಎಸ್‌ಐಡಿಸಿಯ ವಿವಿಧ ಹುದ್ದೆಗಳ ನೇಮಕಾತಿಗೆ ಮೇ. 9 ಮತ್ತು 10ರಂದು ನಡೆಸಬೇಕಿದ್ದ ಲಿಖಿತ ಪರೀಕ್ಷೆಯನ್ನು ರದ್ದುಪಡಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ಪರೀಕ್ಷೆ ನಡೆಸದಿರುವ ಹುದ್ದೆಗಳಿಗೆ ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಅಳವಡಿಸಿಕೊಂಡು ಹೊಸದಾಗಿ ಅಧಿಸೂಚನೆ ಹೊರಡಿಸಲು ಏ.4ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿರುವ ಕಾರಣ ಈ ಪರೀಕ್ಷೆಯನ್ನು ರದ್ದುಪಡಿಸಲಾಗಿದೆ. ಆದರೆ ವ್ಯವಸ್ಥಾಪಕರು, ಸಹಾಯಕ ವ್ಯವಸ್ಥಾಪಕರು ಮತ್ತು ಸಹಾಯಕ ಎಂಜಿನಿಯರ್ (ವಿದ್ಯುತ್) ಹುದ್ದೆಗಳಿಗೆ ಏ.26 ಮತ್ತು 27ರಂದು ಪತ್ರಿಕೆ–2 (ನಿರ್ದಿಷ್ಟ ಪತ್ರಿಕೆ) ರ ಪರೀಕ್ಷೆ ನಡೆಸಿದ್ದು, ಅಂತಹವರಿಗೆ ಮೇ 9 ಮತ್ತು 10 ರಂದು ಸಾಮಾನ್ಯ ಜ್ಞಾನ ಪತ್ರಿಕೆಯ (ಪತ್ರಿಕೆ–1) ಪರೀಕ್ಷೆ ನಡೆಸಲಾಗುವುದು. ಇದಕ್ಕೆ ಪ್ರವೇಶ ಪತ್ರವನ್ನು ಕೆಇಎ ವೆಬ್ ಸೈಟ್ ನಿಂದ ಡೌನ್ ಲೋಡ್ ಮಾಡಿಕೊಳ್ಳಬೇಕು ಎಂದು ಹೆಚ್.ಪ್ರಸನ್ನ ತಿಳಿಸಿದ್ದಾರೆ.

ಪಶುವೈದ್ಯಕೀಯ ಬೋಧಕರಿಗೆ ಗೌರವಧನ ಸ್ಥಗಿತ: ಪ್ರತಿಭಟನೆ

ಬೋಧನೆಗೆ ಕೇವಲ 200-250ಮಂದಿ ಮಾತ್ರ

ಸಂ.ಕ.ಸಮಾಚಾರ ಬೆಂಗಳೂರು

ರಾಜ್ಯಾದ್ಯಂತ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಬೋಧಕರಿಗೆ ಗೌರವಧನವನ್ನು ಸ್ಥಗಿತಗೊಳಿಸಲಾಗಿದೆ. ಜತೆಗೆ ಮಾರ್ಚ್–ಏಪ್ರಿಲ್ ತಿಂಗಳ ವೇತನವನ್ನೂ ಸರಕಾರ ತಡೆಹಿಡಿದಿದೆ ಎಂದು ಖಂಡಿಸಿ ರಾಜ್ಯದ ಎಲ್ಲಾ ಏಳು ಪಶುವೈದ್ಯ ಕಾಲೇಜುಗಳ ನೂರಾರು ಬೋಧಕರು ನಗರದ ಬಳ್ಳಾರಿ ರಸ್ತೆಯ ಪಶುವೈದ್ಯ ಕಾಲೇಜು ಆವರಣದಲ್ಲಿ ಮಂಗಳವಾರದಿಂದ ಬೃಹತ್ ಪ್ರತಿಭಟನೆ ಕೈಗೊಂಡಿದ್ದಾರೆ.

ಪಶು ವೈದ್ಯ ಶಿಕ್ಷಕರು ಪೂರ್ಣ ಪ್ರಮಾಣದ ಸೇವೆಯನ್ನು ವಿವಿಗೆ ಮೀಸಲಿಡಬೇಕು. ಬೋಧನೆ ಮತ್ತು ಸಂಶೋಧನೆಯಲ್ಲಿ ತೊಡಬೇಕು. ಆದರೆ ಖಾಸಗಿಯಾಗಿ ಪಶುಗಳಿಗೆ ಚಿಕಿತ್ಸೆ ಕೊಡುವಂತಹ ಕೆಲಸ ಮಾಡಬಾರದು ಎಂಬ ಸದುದ್ದೇಶದಿಂದ ಇದೀಗ ಸರಕಾರ ನಿಗದಿ ಮಾಡಿರುವ ಮೂಲ ವೇತನಕ್ಕೆ ಶೇ.20ರಷ್ಟ ಗೌರವಧನವಾಗಿ ನೀಡಲು 2017ರಲ್ಲಿ ಆದೇಶ ಹೊರಡಿಸಲಾಯಿತು. 2019ರಲ್ಲಿ ಅನುಷ್ಠಾನಗೊಳಿಸಲಾಯಿತು. 2026ರ ಫೆಬ್ರುವರಿಯವರೆಗೆ ಆ ಗೌರವಧನವು ವೇತನದ ಜತೆಗೆ ಬರುತ್ತಿತ್ತು.

ಆದರೆ ನಿವೃತ್ತ ನೌಕರರೊಬ್ಬರು ಗೌರವಧನ ನೀಡಬಾರದು ಎಂದು ದುರುದ್ದೇಶದಿಂದ ದೂರು ನೀಡಿದ್ದಾರೆ. ಇದರ ಪರಿಣಾಮ ಆರ್ಥಿಕ ಇಲಾಖೆಯು ಗೌರವಧನವನ್ನು ತಡೆಹಿಡಿಯಲು ಸೂಚಿಸಿದೆ. ಇದರ ಪರಿಣಾಮ ವೇತನವೂ ಬಿಡುಗಡೆಯಾಗಿಲ್ಲ ಎಂದು ಪ್ರತಿಭಟನಾ ನಿರತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕರ್ನಾಟಕ ಸರಕಾರ ತಕ್ಷಣ ಕಾರ್ಯಪ್ರವೃತ್ತರಾಗಿ ಪಶು ವೈದ್ಯ ಬೋಧಕರಿಗೆ ಗೌರವಧನದೊಂದಿಗೆ ವೇತನ ನೀಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಸಂಘದ ಪದಾಧಿಕಾರಿಗಳು ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ. ಬುಧವಾರವೂ ಪ್ರತಿಭಟನೆ ಮುಂದುವರಿಯಲಿದೆ.

ಕೆಲಸದ ಹೊರೆಯೂ ಹೆಚ್ಚಳ

ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ್‌ನ ಶಿಕ್ಷಕರ ಸಂಘದ ನೇತೃತ್ವದಲ್ಲಿ ಬೆಂಗಳೂರು, ಹಾಸನ, ಗದಗ, ಅಥಣಿ ಸೇರಿದಂತೆ ರಾಜ್ಯದ ಏಳು ಪಶುವೈದ್ಯ ಕಾಲೇಜುಗಳ ಬೋಧಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಪ್ರಸ್ತುತ ಕಾಲೇಜುಗಳಲ್ಲಿ 600ಕ್ಕೂ ಹೆಚ್ಚು ಶಿಕ್ಷಕರಿರಬೇಕು. ಆದರೆ ಇರುವುದು ಕೇವಲ 200–250 ಮಂದಿ ಮಾತ್ರ. ಹೀಗಿರುವಾಗ ಕೆಲಸದ ಹೊರೆಯೂ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ವೇತನ ತಡೆಹಿಡಿಯುವುದು ಯಾವ ನ್ಯಾಯ ಎಂದು ಪ್ರಶ್ನಿಸಿದ್ದಾರೆ.

ಏಪ್ರಿಲ್‌ನಲ್ಲಿ ದಾಖಲೆಯ ಮದ್ಯ ಮಾರಾಟ

ವಿಸ್ಕಿ, ಬ್ರಾಂಡಿ, ರಮ್, ಜಿನ್ ಸೇರಿ 68.17 ಲಕ್ಷ ಬಾಕ್ಸ್ ಮಾರಾಟ

ಸಂ.ಕ.ಸಮಾಚಾರ ಬೆಂಗಳೂರು

ರಾಜ್ಯದಲ್ಲಿ ಏಪ್ರಿಲ್ ತಿಂಗಳಿನಲ್ಲಿ ದಾಖಲೆಯ ಪ್ರಮಾಣದಲ್ಲಿ ಮದ್ಯ ಮಾರಾಟವಾಗಿದೆ. ಅಬಕಾರಿ ಇಲಾಖೆಯ ಕಳೆದ 13 ವರ್ಷದ ಇತಿಹಾಸದಲ್ಲೇ ತಿಂಗಳೊಂದರಲ್ಲಿ ಇಷ್ಟೊಂದು ಭಾರೀ ಪ್ರಮಾಣದಲ್ಲಿ ಮದ್ಯ ಮಾರಾಟ ಆಗಿರುವುದು ದಾಖಲೆ ಎನಿಸಿದೆ.

ವಿಸ್ಕಿ, ಬ್ರಾಂಡಿ, ರಮ್, ಜಿನ್ ಸೇರಿದಂತೆ 68.17 ಲಕ್ಷ ಬಾಕ್ಸ್ ದಾಖಲೆಯ ಐಎಂಎಲ್ ಮದ್ಯ ಮಾರಾಟವಾಗಿದ್ದರೆ, ಮತ್ತೊಂದೆಡೆ, 50.39 ಲಕ್ಷ ಬಾಕ್ಸ್ ಬಿಯರ್ ಮಾರಾಟವಾಗಿದೆ. ಒಟ್ಟಾರೆ 118.56 ಲಕ್ಷ ಬಾಕ್ಸ್ ಮದ್ಯ ಮಾರಾಟವಾಗಿದ್ದು 2013ರಿಂದ ಈಚೆಗೆ ಕಳೆದ 13 ವರ್ಷದಲ್ಲಿ ಯಾವ ತಿಂಗಳಿನಲ್ಲೂ ಈ ಪ್ರಮಾಣದಲ್ಲಿ ಮದ್ಯ ಮಾರಾಟವಾಗಿಲ್ಲ ಎಂಬುದು ವಿಶೇಷವಾಗಿದೆ.

ಶೇ.21.13 ಬೆಳವಣಿಗೆ: 2025 ಏಪ್ರಿಲ್‌ನಲ್ಲಿ 57.44 ಲಕ್ಷ ಬಾಕ್ಸ್ ಐಎಂಎಲ್ ಮದ್ಯ ಮಾರಾಟವಾಗಿದ್ದು ಕಳೆದ ವರ್ಷದ ದಾಖಲೆಯಾಗಿತ್ತು. ಪ್ರಸಕ್ತ ಸಾಲಿನ ಏಪ್ರಿಲ್‌ನಲ್ಲಿ 68.17 ಲಕ್ಷ ಬಾಕ್ಸ್ ಮಾರಾಟವಾಗಿ ಶೇ.18.68 ರಷ್ಟು ಬೆಳವಣಿಗೆಯಾಗಿದೆ. ಇನ್ನು ಬಿಯರ್ ವಿಷಯಕ್ಕೆ ಬರುವುದಾದರೆ, 2025 ಏಪ್ರಿಲ್‌ನಲ್ಲಿ 41.60 ಲಕ್ಷ ಬಾಕ್ಸ್ ಮಾರಾಟವಾಗಿತ್ತು. ಪ್ರಸಕ್ತ ಏಪ್ರಿಲ್‌ನಲ್ಲಿ 50.39 ಲಕ್ಷ ಬಾಕ್ಸ್ ಮಾರಾಟವಾಗಿ ಶೇ.21.13 ಬೆಳವಣಿಗೆಯಾಗಿದೆ.

ಚುನಾವಣೆ ಪ್ರಭಾವ: ಕರ್ನಾಟಕದ ಗಡಿಗೆ ಹೊಂದಿಕೊಂಡಿರುವ ಕೇರಳ ಮತ್ತು ತಮಿಳುನಾಡು ವಿಧಾನ ಸಭೆಗೆ ಏಪ್ರಿಲ್‌ನಲ್ಲಿ ನಡೆದ ಚುನಾವಣೆಯು ರಾಜ್ಯದಲ್ಲಿ ಮದ್ಯ ಮಾರಾಟ ಹೆಚ್ಚಳವಾಗಲು ಕಾರಣವಾಗಿರಬಹುದು. ಮತದಾನಕ್ಕೂ ಮುನ್ನ ಈ ರಾಜ್ಯಗಳಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿತ್ತು. ಆದ್ದರಿಂದ ಕೇರಳ, ತಮಿಳುನಾಡಿಗೆ ಹೊಂದಿಕೊಂಡ ರಾಜ್ಯದ ಗಡಿ ಭಾಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮದ್ಯ ಮಾರಾಟವಾಗಿದೆ. ಅಷ್ಟೇ ಅಲ್ಲದೆ ರಾಜ್ಯದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನ ಸಭಾ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯೂ ಮದ್ಯ ಮಾರಾಟ ಹೆಚ್ಚಳವಾಗಲು ಕಾರಣವಾಗಿದೆ ಎಂಬುದು ಗಮನಾರ್ಹ.

3688 ಕೋಟಿ ರಾಜಸ್ವ

2023 ಜುಲೈನಲ್ಲಿ 66.22 ಲಕ್ಷ ಬಾಕ್ಸ್ ಐಎಂಎಲ್ ಮದ್ಯ ಮಾರಾಟವಾಗಿದ್ದೇ ಕಳೆದ 13 ವರ್ಷಗಳಲ್ಲಿನ ದಾಖಲೆಯಾಗಿತ್ತು. ಈ ದಾಖಲೆಯನ್ನು ಏಪ್ರಿಲ್‌ನ ಮದ್ಯ ಮಾರಾಟ ಹಿಂದಿಕ್ಕಿದೆ. 2025 ಏಪ್ರಿಲ್‌ನಲ್ಲಿ ಮದ್ಯ ಮರಾಟದಿಂದ ಒಟ್ಟಾರೆ 2904 ಕೋಟಿ ರೂ. ರಾಜಸ್ವ ಸಂಗ್ರಹವಾಗಿತ್ತು. ಪ್ರಸಕ್ತ ಏಪ್ರಿಲ್‌ನಲ್ಲಿ 3688 ಕೋಟಿ ರಾಜಸ್ವ ಸಂಗ್ರಹವಾಗಿ ಶೇ.27 ರಷ್ಟು ಬೆಳವಣಿಗೆಯಾಗಿದೆ.

ಶಾಶ್ವತ ಆರೋಗ್ಯಕ್ಕೆ ಹೋಮಿಯೋಪತಿ

ಹೋಮಿಯೋಪತಿ ದಿನಾಚರಣೆ | ಗೆಹ್ಲೋಟ್ ಅಭಿಪ್ರಾಯ

ಸಂ.ಕ.ಸಮಾಚಾರ, ಬೆಂಗಳೂರು

ಭಾರತದಲ್ಲಿ ಹೋಮಿಯೋಪತಿ ಒಂದು ಶಕ್ತಿಶಾಲಿ ಮತ್ತು ಜನಪ್ರಿಯ ವೈದ್ಯಕೀಯ ಪದ್ಧತಿಯಾಗಿ ಸ್ಥಾಪಿಸಿಕೊಳ್ಳುತ್ತಿದೆ. ದೇಶಾದ್ಯಂತ ಲಕ್ಷಾಂತರ ಜನರು ಈ ಪದ್ಧತಿ ಯಿಂದ ಪ್ರಯೋಜನ ಪಡೆಯುತ್ತಿದ್ದಾರೆ. ಭಾರತ ಸರ್ಕಾರದ ಆಯುಷ್ ಸಚಿವಾಲಯವು ಈ ದಿಕ್ಕಿನಲ್ಲಿ ಗಮನಾರ್ಹ ಪ್ರಗತಿ ಸಾಧಿಸುತ್ತಿದೆ ಎಂದು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಹೇಳಿದರು. ಹೋಮಿಯೋಪತಿ ಫೌಂಡೇಶನ್ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವ ಹೋಮಿಯೋಪತಿ ದಿನಾಚರಣೆಯಲ್ಲಿ ಮಾತನಾಡಿ, ರಾಜ್ಯದಲ್ಲಿ ಉತ್ತಮ ಗುಣಮಟ್ಟದ ವೈದ್ಯಕೀಯ ಶಿಕ್ಷಣ, ಸಮರ್ಪಿತ ವೈದ್ಯರು ಮತ್ತು ಸಂಶೋಧನಾ–ಆಧಾರಿತ ವಿಧಾನವು ಹೋಮಿಯೋಪತಿಯ ಬೆಳವಣಿಗೆಗೆ ಕಾರಣವಾಗಿದೆ

ಎಂದರು. ಜೀವನಶೈಲಿ ಕಾಯಿಲೆಗಳು, ದೀರ್ಘಕಾಲದ ಕಾಯಿಲೆಗಳು ಹೆಚ್ಚುತ್ತಿವೆ. ಹೋಮಿಯೋಪತಿಯ ಸಮಗ್ರ ವಿಧಾನವು ಸಮತೋಲಿತ ಮತ್ತು ಶಾಶ್ವತ ಆರೋಗ್ಯದ ಕಡೆಗೆ ನಮ್ಮನ್ನು ಕರೆದೊಯ್ಯುತ್ತದೆ ಎಂದು ತಿಳಿಸಿದರು. ಹೋಮಿಯೋಪತಿ ಮಂಡಳಿಯ ಅಧ್ಯಕ್ಷ ಡಾ. ಬಿ.ಟಿ. ರುದ್ರೇಶ್ ಮಾತನಾಡಿ, ನಾವು ಕಾಣುವ ಶೇ.50ರಷ್ಟು ರೋಗಗಳಿಗೆ ಔಷಧಿಗಳು ಬೇಕಾಗಿಲ್ಲ, ಬದಲಾಗಿ ಪ್ರೀತಿ, ಕಾಳಜಿ, ಸ್ನೇಹ ಅಗತ್ಯವಿದೆ. ಎಂದು ತಿಳಿಸಿದರು. ಶಾಸಕ ಸಿ.ಕೆ. ರಾಮಮೂರ್ತಿ ಮಾತನಾಡಿದರು.

> ರೋಗಕ್ಕೆ ಚಿಕಿತ್ಸೆ ನೀಡುವುದು ಮಾತ್ರವಲ್ಲ, ಅದರ ಮೂಲ ಹುಡುಕುವ ಕೆಲಸವನ್ನು ಹೋಮಿಯೋಪತಿ ಮಾಡುತ್ತದೆ. ಇದು ಈ ಆಧುನಿಕ ಯುಗದ ಅಗತ್ಯಗಳಲ್ಲಿ ಒಂದು. ಹೀಗಾಗಿ ಹೋಮಿಯೋಪತಿ ಶಿಕ್ಷಣವನ್ನು ಬಲಪಡಿಸುವುದು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಬದ್ಧತೆಯಾಗಿದೆ.
>
> ▪ ಕುಲಪತಿ ಡಾ. ಭಗವಾನ್ ಬಿ.ಸಿ.

ಬೆಂಗ್ಳೂರಲ್ಲಿ 14.75 ಕೋಟಿಯ ಡ್ರಗ್ಸ್ ವಶ

ಪ್ರತ್ಯೇಕ ಪ್ರಕರಣ | ಕೇರಳದ ಇಬ್ಬರು, ಕರ್ನಾಟಕದ ನಾಲ್ವರ ಸೆರೆ

ನೈಜೀರಿಯಾ ಪ್ರಜೆಗಳಿಗಾಗಿ ಪೊಲೀಸರಿಂದ ಕಾರ್ಯಾಚರಣೆ

ಸಂ.ಕ.ಸಮಾಚಾರ ಬೆಂಗಳೂರು

ಬೆಂಗಳೂರಿನಲ್ಲಿ ಡ್ರಗ್ಸ್ ದಂಧೆ ನಡೆಯುವ, ಪೆಡ್ಲರ್‌ಗಳು ಸಿಕ್ಕಿ ಬೀಳುವ ಘಟನೆಗಳು ಇತ್ತೀಚೆಗೆ ಹೆಚ್ಚಾಗಿವೆ. ಇದೀಗ ಮತ್ತೊಮ್ಮೆ ಮಾದಕ



ವಸ್ತುಗಳ ವಿರುದ್ಧ ಪೊಲೀಸರು ಬೃಹತ್ ಕಾರ್ಯಚರಣೆ ನಡೆಸಿದ್ದು, ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಒಟ್ಟು 14 ಕೋಟಿ 75 ಲಕ್ಷ ರೂ.ಮೌಲ್ಯದ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ.

ನಂದಿನಿ ಲೇಔಟ್ ಮತ್ತು ಯಶವಂತಪುರ ಪೊಲೀಸರು ಒಟ್ಟು 13 ಕೆಜಿ 700 ಗ್ರಾಂ ತೂಕದ ಹೈಡ್ರೋ ಗಾಂಜಾ ಹಾಗೂ ಎಂಡಿಎಂಎ ಕ್ರಿಸ್ಟಲ್ ಅನ್ನು ಸೀಜ್ ಮಾಡಿದ್ದಾರೆ.

ನಂದಿನಿ ಲೇಔಟ್ ಪೊಲೀಸರು ಖಚಿತ ಮಾಹಿತಿ ಮೇರೆಗೆ ಕೇರಳ ಮೂಲದ ಇಬ್ಬರು ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ. ಸೌಗೇಶ್ ಮತ್ತು ಅಲ್ತಾಫ್ ಬಂಧಿತ ಆರೋಪಿಗಳಾಗಿದ್ದು, ಇವರಿಂದ 5.75 ಕೋಟಿ ರೂ.ಮೌಲ್ಯದ 5 ಕೆಜಿ 700 ಗ್ರಾಂ ಹೈಡ್ರೋ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಗಳು ವಿದೇಶದಿಂದ ಈ ಹೈಡ್ರೋ ಗಾಂಜಾವನ್ನು ತರಿಸಿ ಸ್ಥಳೀಯರಿಗೆ ಮಾರಾಟ ಮಾಡಲು ಯತ್ನಿಸುತ್ತಿದ್ದರು. ಕೇರಳದಲ್ಲಿ ಸಣ್ಣಪುಟ್ಟ ಕೆಲಸ ಮಾಡಿಕೊಂಡಿದ್ದ ಇವರ ಮೇಲೆ ಈ ಹಿಂದೆಯೇ ಅಲ್ಲಿನ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣಗಳು ದಾಖಲಾಗಿವೆ ಎಂಬುದು ತನಿಖೆಯಲ್ಲಿ ತಿಳಿದು ಬಂದಿದೆ. ಸದ್ಯ ನಂದಿನಿ ಲೇಔಟ್ ಪೊಲೀಸರು ತನಿಖೆಯನ್ನು ಮುಂದುವರಿಸಿದ್ದಾರೆ.

9 ಕೋಟಿ ಮೌಲ್ಯದ ಎಂಡಿಎಂಎ ಸೀಜ್

ಮತ್ತೊಂದು ಪ್ರತ್ಯೇಕ ಕಾರ್ಯಾಚರಣೆಯಲ್ಲಿ ಯಶವಂತಪುರ ಪೊಲೀಸರು ಅಂತಾರಾಷ್ಟ್ರೀಯ ಮಟ್ಟದ ಡ್ರಗ್ ಜಾಲವನ್ನು ಬೇಧಿಸಿದ್ದಾರೆ. ಮಾದಕ ವಸ್ತುಗಳ ಮಾರಾಟಕ್ಕೆ ಯತ್ನಿಸುತ್ತಿದ್ದ ಆರೋಪಿಗಳಾದ ಸೈಯದ್ ಸುಹೇಲ್, ಮೊಹಮ್ಮದ್ ಸಮೀರ್, ಸಾದಿಕ್ ಪಾಷಾ ಮತ್ತು ಮೊಹಮ್ಮದ್ ಹಕ್‌ರನ್ನು ಬಂಧಿಸಲಾಗಿದ್ದು, ಈ ನಾಲ್ವರಿಂದ 9 ಕೋಟಿ ರೂ. ಮೌಲ್ಯದ 8 ಕೆಜಿ ಎಂಡಿಎಂಎ ಸೀಜ್ ಮಾಡಲಾಗಿದೆ. ಆರೋಪಿಗಳು ನೈಜೀರಿಯಾ ಪ್ರಜೆಗಳಿಂದ ಡ್ರಗ್ಸ್ ಖರೀದಿಸಿ ನಗರದಲ್ಲಿ ಸ್ಥಳೀಯರಿಗೆ ಪೂರೈಸುತ್ತಿದ್ದರು ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ. ಬಂಧಿತರಿಂದ ಒಂದು ಕಾರು ಹಾಗೂ ಐದು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳಲ್ಲಿ ಸೈಯದ್ ಸುಹೇಲ್ ಹೊಸಕೋಟೆ ಠಾಣೆಯ ರೌಡಿಶೀಟರ್ ಆಗಿದ್ದು, ಈ ಹಿಂದೆ ಪ್ರಕರಣವೊಂದರಲ್ಲಿ ಪೊಲೀಸರು ಈತನ ಕಾಲಿಗೆ ಗುಂಡು ಹಾರಿಸಿ ಬಂಧಿಸಿದ್ದರು. ಸದ್ಯ ಈ ಜಾಲಕ್ಕೆ ಡ್ರಗ್ಸ್ ಪೂರೈಕೆ ಮಾಡುತ್ತಿದ್ದ ನೈಜೀರಿಯಾ ಪ್ರಜೆಗಳಿಗಾಗಿ ಪೊಲೀಸರು ಬಲೆ ಬೀಸಿದ್ದಾರೆ.

ಕೆಲಸಕ್ಕಿದ್ದ ಮನೆಯಲ್ಲೇ ಕಳ್ಳತನ ಮಾಡುತ್ತಿದ್ದ ದಂಪತಿ: ಬಂಧನ

14 ಲಕ್ಷ ನಗದು, 199 ಗ್ರಾಂ. ಚಿನ್ನಾಭರಣ ಜಪ್ತಿ

ಸಂ.ಕ.ಸಮಾಚಾರ ಬೆಂಗಳೂರು

ಕೆಲಸ ಕೊಟ್ಟು, ಆಶ್ರಯ ನೀಡಿದ್ದ ಮಾಲೀಕನ ಮನೆಯಲ್ಲೇ ಕಳ್ಳತನ ಮಾಡಿದ್ದ ದಂಪತಿಯನ್ನ ಸಿ.ಕೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉದ್ಯಮಿ ಹಾಗೂ ಗುತ್ತಿಗೆದಾರ ಮಲ್ಲಿಕಾರ್ಜುನ್ ನಾಯ್ಡು ಎಂಬುವರ ಮನೆಯಲ್ಲಿ ಕೃತ್ಯ ಎಸಗಿದ್ದ ಐಶ್ವರ್ಯಾ (21) ಹಾಗೂ ಮಣಿಕಂಠ (26) ಬಂಧಿತರು. ಆರೋಪಿಗಳಿಂದ 14 ಲಕ್ಷ ರೂ. ನಗದು, 199 ಗ್ರಾಂ ಚಿನ್ನದ ಆಭರಣಗಳು, 730 ಗ್ರಾಂ ಬೆಳ್ಳಿಯ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಒಂದೂವರೆ ವರ್ಷದ ಪುಟ್ಟ ಮಗುವಿದ್ದ ದಂಪತಿಗೆ ಮಲ್ಲಿಕಾರ್ಜುನ್ ನಾಯ್ಡು ಅವರು 4 ತಿಂಗಳುಗಳ ಹಿಂದೆ ಮನೆಯಲ್ಲಿ ಕೆಲಸ ನೀಡಿ ಆಶ್ರಯ ನೀಡಿದ್ದರು.

ಮಾಲೀಕರ ನಂಬಿಕೆ ಗಳಿಸಿದ್ದ ಆರೋಪಿಗಳು ಮನೆಯಲ್ಲಿ ಯಾರೂ ಇಲ್ಲದ ವೇಳೆ ಹಂತ ಹಂತವಾಗಿ ಮನೆಯಲ್ಲಿದ್ದ ಹಣ ಮತ್ತು ಒಡವೆಗಳನ್ನು ದೋಚುತ್ತಿದ್ದರು. ಎಪ್ರಿಲ್ 25ರಂದು ಮನೆಯಲ್ಲಿದ್ದ ಚಿನ್ನದ ಒಡವೆಗಳು ನಾಪತ್ತೆಯಾದಾಗ ಅನುಮಾನಗೊಂಡ ಮಾಲೀಕ ಮಲ್ಲಿಕಾರ್ಜುನ್ ನಾಯ್ಡು ಈ ಬಗ್ಗೆ ಸಿ.ಕೆ ಅಚ್ಚುಕಟ್ಟು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರಿನ ಆಧಾರದ ಮೇಲೆ ತನಿಖೆ ಕೈಗೊಂಡ ಪೊಲೀಸರು, ಮನೆಗೆಲಸದ ದಂಪತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಸತ್ಯಾಂಶ ಹೊರಬಂದಿತ್ತು. ಪ್ರಸ್ತುತ ಆರೋಪಿಗಳನ್ನು ಬಂಧಿಸಿರುವ ನ್ಯಾಯಾಂಗ ಬಂಧನಕ್ಕೊಪ್ಪಿಸಿದ್ದಾರೆ.

- ಐಶ್ವರ್ಯಾ (21) ಮಣಿಕಂಠ (26) ಬಂಧಿತ ಆರೋಪಿಗಳು
- ಕೇವಲ ನಾಲ್ಕು ತಿಂಗಳ ಹಿಂದೆ ಕೆಲಸಕ್ಕೆ ಸೇರಿದ ದಂಪತಿ: ಮಾಲೀಕ

1.30 ಕೋಟಿ ಮೌಲ್ಯದ ಚಿನ್ನಾಭರಣ ಜಪ್ತಿ: ಬಂಧನ

ಪ್ರಕಾಶ್ ಅಲಿಯಾಸ್ ಜಂಗ್ಲಿ ಬಂಧಿತ ಆರೋಪಿ

ಸಂ.ಕ.ಸಮಾಚಾರ ಬೆಂಗಳೂರು

ಬೀಗ ಹಾಕಿದ ಮನೆಗಳನ್ನೇ ಗುರಿಯಾಗಿಸಿಕೊಂಡು ಕಳ್ಳತನ ಮಾಡುತ್ತಿದ್ದ, ಕುಖ್ಯಾತ ಕಳ್ಳನನ್ನು ಇಂದಿರಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪ್ರಕಾಶ್ ಅಲಿಯಾಸ್ ಜಂಗ್ಲಿ ಬಂಧಿತ ಆರೋಪಿ. ಆತನಿಂದ 1 ಕೋಟಿ 30 ಲಕ್ಷ ರೂ. ಮೌಲ್ಯದ 885 ಗ್ರಾಂ ಚಿನ್ನಾಭರಣವನ್ನು ವಶಪಡಿಸಿ ಕೊಳ್ಳಲಾದೆ. ಬರೋಬ್ಬರಿ 18 ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಹಗಲು ಕಾರಿನಲ್ಲಿ ನಗರದಾದ್ಯಂತ ಸುತ್ತಾಡುತ್ತಿದ್ದ ಆರೋಪಿ, ಬೀಗ ಹಾಕಿರುವ ಮನೆಗಳನ್ನು ಗುರುತಿಸುತ್ತಿದ್ದ. ನಂತರ ರಾತ್ರಿ ವೇಳೆ ಆ ಮನೆಗಳ ಕಿಟಕಿಗಳನ್ನು ಕತ್ತರಿಸಿ, ಒಳನುಗ್ಗಿ ಕಳ್ಳತನ ಮಾಡುತ್ತಿದ್ದ. ಆರೋಪಿಯ ವಿರುದ್ಧ ಬೆಂಗಳೂರಿನ ವಿವಿಧ ಪೊಲೀಸ್ ಠಾಣೆಗಳಲ್ಲಿ ಒಟ್ಟು 64 ಪ್ರಕರಣಗಳು ದಾಖಲಾಗಿದ್ದವು. ಇಂದಿರಾನಗರ ಠಾಣೆ ಪೊಲೀಸರು ಕಳ್ಳತನ ಪ್ರಕರಣವೊಂದರ ತನಿಖೆ ನಡೆಸಿದಾಗ ಪ್ರಕಾಶ್‌ನನ್ನ ಬಂಧಿಸಿದ್ದು, ಆತನಿಂದ 8 ಪ್ರಕರಣಗಳಿಗೆ ಸಂಬಂಧಿಸಿದ ಆಭರಣಗಳನ್ನು ವಶಪಡಿಸಿಕೊಂಡಿರುವ ಬಗ್ಗೆ ಮಾಹಿತಿ ನೀಡಿದ್ದಾರೆ.

ಧಾರ್ಮಿಕ ಸ್ಥಳಗಳಿಗೆ ರೈಲುಯಾತ್ರೆ

ಬೆಂಗಳೂರು: ಪ್ರವಾಸ ಸಂಸ್ಥೆಯಾದ ಟೂರ್ ಟೈಮ್ಸ್, ಭಾರತೀಯ ರೈಲ್ವೆಯ ಸಹಯೋಗದಲ್ಲಿ ಯಮುನಾ ಪುಷ್ಕರಗಳ ಯಾತ್ರೆಯನ್ನು ಸಬ್ಸಿಡಿ ದರದಲ್ಲಿ ಘೋಷಿಸಿದೆ.

ರೈಲುಗಳಲ್ಲಿ ಸಂಪೂರ್ಣ ಸೌಲಭ್ಯಗಳನ್ನು ಒದಗಿಸಲಾಗುವುದು. ರೈಲು ಯಾತ್ರೆಯು ಮಥುರಾ (ಯಮುನಾ ನದಿ ಸ್ನಾನಕ್ಕಾಗಿ), ಬೃಂದಾವನ, ಕಾಶಿ (ವಾರಣಾಸಿ), ಅಯೋಧ್ಯೆ ಮತ್ತು ಪ್ರಯಾಗರಾಜ್‌ನಂತಹ ಪ್ರಮುಖ ಯಾತ್ರಾ ಸ್ಥಳಗಳನ್ನು ಒಳಗೊಂಡಿದ್ದು ಮೇ. 7 ರಿಂದ ಈ ರೈಲು ಆರಂಭಗೊಳ್ಳಲಿದೆ ಎಂದು ಸಂಸ್ಥೆ ತಿಳಿಸಿದೆ.

ಸಹಕಾರ ಸಂಘಗಳ ಅಪರ ನಿಬಂಧಕರು (ನಿ 441) ದಾವಾ ಪಂಚಾಯ್ತಿ ನ್ಯಾಯಾಲಯ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು
ನಂ. 132, 2ನೇ ಮಹಡಿ, ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು–560 027

ವ್ಯಾಜ್ಯ ಸಂಖ್ಯೆ: ಎ.ಆರ್.ಡಿ/ಯುಬಿಎಫ್/1385/2025–2026

ವಾದಿ: ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು, ಸರ್ ಎಂ.ವಿಶ್ವೇಶ್ವರಯ್ಯ ಕೋ ಆಪರೇಟಿವ್ ಬ್ಯಾಂಕ್ ಲಿ., ಪ್ರಧಾನ ಕಛೇರಿ: 109, ಶಂಕರಮಠದ ರಸ್ತೆ, ಶಂಕರಪುರಂ, ಬೆಂಗಳೂರು – 560 004. –ವಿರುದ್ಧ– **ಪ್ರತಿವಾದಿಗಳು: 1. ಹೆಸರು: ಶ್ರೀಮತಿ ಸೌಜನ್ಯ ಎಂ.ಎಸ್.,** ವೃತ್ತಿ: ಹೆಚ್.ಆರ್. ಅಡ್ವೈಸರ್, ಮೆ. ಭೂಮಿಗೀತ ಮೀಡಿಯಾ ಪ್ರೈ. ಲಿ. **ವಾಸಸ್ಥಳ:** ವಾಸಸ್ಥಳ: ನಂ. 67/1, 5ನೇ ಅಡ್ಡರಸ್ತೆ, ಗುರುದತ್ತಾ ಬಡಾವಣೆ, ದತ್ತಾತ್ರೇಯ ನಗರ, ಹೊಸಕೆರೆಹಳ್ಳಿ, ಬೆಂಗಳೂರು–560 085. **2. ಹೆಸರು: ಶ್ರೀ ಮಹೇಶ್ ಜೆ. ಸೇಠ್.** ವೃತ್ತಿ: ಸೂಪರ್ ವೈಸರ್. ಮೆ.: ರಾಜಾಜಿನಗರ ಕೋ–ಆಪರೇಟೀವ್ ಬ್ಯಾಂಕ್, ವಾಸಸ್ಥಳ: ನಂ.1791, 23ನೇ ಅಡ್ಡರಸ್ತೆ, ಗೋವಿಂದರಾಜನಗರ, ವಿಜಯನಗರ, ಬೆಂಗಳೂರು–560 040. **3. ಶ್ರೀ ರಾಜ್ ಕುಮಾರ್ ಬಿ. ನಾಯರ್,** ವೃತ್ತಿ: ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಮೆ. ಭೂಮಿಗೀತ ಮೀಡಿಯಾ ಪ್ರೈ. ಲಿ. ವಾಸಸ್ಥಳ: ನಂ. 56, ಚನ್ನಮ್ಮನಕೆರೆ ಅಚ್ಚುಕಟ್ಟು, ಬನಶಂಕರಿ 3ನೇ ಹಂತ, ಬೆಂಗಳೂರು–560 085. **ದಾವಾ ಮೊತ್ತ: ರೂ. 1,53,036/– ಪ್ರತಿವಾದಿ: 1 ಇವರಿಗೆ**

ಪ್ರತಿವಾದಿಗಳಿಗೆ ದಿನ ಪತ್ರಿಕೆಯ ಪ್ರಕಟಣೆಯ ಮೂಲಕ ನ್ಯಾಯಾಲಯದ ಸಮನ್ಸ್

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70(1)ರ ಪ್ರಕಾರ ವಾದಿಯು ಪ್ರತಿವಾದಿಗಳ ವಿರುದ್ಧ ಮೇಲೆ ನಮೂದಿಸಿರುವ ಸಾಲದ ಮೊತ್ತದ ವಸೂಲಾತಿಗಾಗಿ ಅವಾರ್ಡ ನೀಡಲು ಕೋರಿ ಈ ದಾವೆಯನ್ನು ದಾಖಲಿಸಿರುತ್ತಾರೆ, ಪ್ರತಿವಾದಿಗಳಿಗೆ ಅಂಚೆ ಹಾಗೂ ಮುದ್ದಾಂ ಮೂಲಕ ಸಮನ್ಸ್ ಜಾರಿಯಾಗದ ಕಾರಣ, ದಿನಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಸಮನ್ಸ್ ಜಾರಿ ಮಾಡಲು ಮೆಮೋ ಮೂಲಕ ಅನುಮತಿ ಕೋರಿದ್ದು, ಅನುಮತಿಸಿ, ವಿಚಾರಣೆಯನ್ನು ದಿನಾಂಕ: **22–05–2026** ರಂದು **ಬೆಳಿಗ್ಗೆ 11.00 ಘಂಟೆಗೆ** ಸಹಕಾರ ಸಂಘಗಳ ಅಪರ ನಿಬಂಧಕರು (ನಿ 441), ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು, ಇವರ ನ್ಯಾಯಾಲಯ ಇಲ್ಲಿ ನಿಗದಿಪಡಿಸಿದ್ದು, ವಿಚಾರಣೆಗೆ ಹಾಜರಾಗಲು ಪ್ರತಿವಾದಿಗಳಿಗೆ ಈ ಮೂಲಕ ತಿಳಿಸಲಾಗಿದೆ. ಈ ದಾವೆಯ ವಿಷಯದಲ್ಲಿ ತಮ್ಮ ಪರವಾದ ಲೆಕ್ಕಪತ್ರಗಳನ್ನು/ದಾಖಲೆಗಳನ್ನು ಮತ್ತು ಸಾಕ್ಷಿಗಳನ್ನು ಆ ದಿವಸ ಹಾಜರುಪಡಿಸಲು ತಿಳಿಸಲಾಗಿದೆ. ತಪ್ಪಿದಲ್ಲಿ, ದಾವೆಯನ್ನು ತಮ್ಮ ಗೈರು ಹಾಜರಿಯಲ್ಲಿಯೇ ವಿಚಾರಣೆ ಮಾಡಿ ಇತ್ಯರ್ಥ ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ದಿನಾಂಕ: 24–04–2026 ರಂದು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.
ಸಹಕಾರ ಸಂಘಗಳ ಅಪರ ನಿಬಂಧಕರು (ನಿ 441) (ಅ.ಪ್ರ),
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು
ಇವರ ಆದೇಶದ ಮೇರೆಗೆ

ಸಹಿ/– **ಅಧಿಕೃತ ಅಧಿಕಾರಿ**

ಕ್ಯಾನ್ ಫಿನ್ ಹೋಮ್ಸ್ ಲಿ.,

Can Fin Homes Ltd (Sponsor: CANARA BANK) HOME LOANS + DEPOSITS
ದೊಡ್ಡಬಳ್ಳಾಪುರ ಶಾಖೆ

ಅನನ್ಯ ಸ್ಕೂಲ್ ಡ್ರೈವಿಂಗ್ ಶಾಲೆ ಹತ್ತಿರ
ಮೊದಲ ಮಹಡಿ, ರಂಗಪ್ಪಸರ್ಕಲ್, ದೊಡ್ಡಬಳ್ಳಾಪುರ,
ಬೆಂಗಳೂರು ಗ್ರಾಮಾಂತರ – 561 203.
ಫೋನ್ : 080–29562115/7625079229
e-mail Id:doddaballapur@canfinhomes.com
CIN: L85110KA1987PLC008699

ಡಿಮ್ಯಾಂಡ್ ನೋಟೀಸ್

ಸೆಕ್ಯೂರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ (ನಂ. 54ರ 2002) ಪ್ರಕರಣ 13(2)ರ ಅನ್ವಯ ನೋಟೀಸು

ಇವರಿಗೆ
1. ಶ್ರೀಮತಿ ಹೇಮಲತಾ ಕೆ., W/o ಶ್ರೀ ನಟರಾಜ ಆರ್., ಫ್ಲಾಟ್ ನಂ. 301, ರಾಯಲ್ ವಿಸ್ಟಾ ಅಪಾರ್ಟ್‌ಮೆಂಟ್ ಶ್ರೀ ರಾಮಪುರ ಮುಖ್ಯ ರಸ್ತೆ, ಅಮೃತಹಳ್ಳಿ, ಬೆಂಗಳೂರು ಉತ್ತರ, ಬೆಂಗಳೂರು – 560 092 **(ಸಾಲಗಾರರು)**
2. ಶ್ರೀಮತಿ ಪೂಜಾ ಎನ್. D/o ಶ್ರೀ ನಟರಾಜ ಆರ್., ಫ್ಲಾಟ್ ನಂ. 301, ರಾಯಲ್ ವಿಸ್ಟಾ ಅಪಾರ್ಟ್‌ಮೆಂಟ್ ಶ್ರೀ ರಾಮಪುರ ಮುಖ್ಯ ರಸ್ತೆ, ಅಮೃತಹಳ್ಳಿ, ಬೆಂಗಳೂರು ಉತ್ತರ, ಬೆಂಗಳೂರು – 560 092 **(ಸಹ-ಸಾಲಗಾರರು)**
3. ಶ್ರೀಮತಿ ಯಶಸ್ವಿನಿ ಎನ್. D/o ಶ್ರೀ ನಟರಾಜ ಆರ್., ಫ್ಲಾಟ್ ನಂ. 301, ರಾಯಲ್ ವಿಸ್ಟಾ ಅಪಾರ್ಟ್‌ಮೆಂಟ್ ಶ್ರೀ ರಾಮಪುರ ಮುಖ್ಯ ರಸ್ತೆ, ಅಮೃತಹಳ್ಳಿ, ಬೆಂಗಳೂರು ಉತ್ತರ, ಬೆಂಗಳೂರು – 560 092 **(ಜಾಮೀನುದಾರರು)**
4. ಶ್ರೀ ನಟರಾಜ್ ಆರ್. D/o ಶ್ರೀ ರಂಗಪ್ಪ ಆರ್., ಫ್ಲಾಟ್ ನಂ. 301, ರಾಯಲ್ ವಿಸ್ಟಾ ಅಪಾರ್ಟ್‌ಮೆಂಟ್ ಶ್ರೀ ರಾಮಪುರ ಮುಖ್ಯ ರಸ್ತೆ, ಅಮೃತಹಳ್ಳಿ, ಬೆಂಗಳೂರು ಉತ್ತರ, ಬೆಂಗಳೂರು – 560 092 **(ಜಾಮೀನುದಾರರು)**

ನಂ. 1 ಮತ್ತು 2 ಆದ ನೀವು, ನಂ. 1 ಮತ್ತು 2 ಆದ ನಿಮಗೆ ಸೇರಿರುವ ಆಸ್ತಿಯನ್ನು ಅಡಮಾನ ಮಾಡುವ ಮೂಲಕ ನಮ್ಮ ಶಾಖೆಯಿಂದ ಗೃಹ ಸಾಲವನ್ನು ಪಡೆದುಕೊಂಡಿದ್ದು, ದಿನಾಂಕ **05.05.2026** ರಂತೆ **ರೂ.17,59,394/–** (ರೂಪಾಯಿ ಹದಿನೇಳು ಲಕ್ಷ ಐವತ್ತೊಂಬತ್ತು ಸಾವಿರದ ಮುನ್ನೂರ ತೊಂಬತ್ತ ನಾಲ್ಕು ಮಾತ್ರ) ಮತ್ತು ಒಪ್ಪಿದ ದರದಲ್ಲಿ ಮುಂದಿಯ ಬಡ್ಡಿಯೊಂದಿಗೆ, ಕ್ಯಾನ್ ಫಿನ್ ಹೋಮ್ಸ್ ಲಿ., ಇವರಿಗೆ ನಿಮ್ಮಿಂದ ಬಾಕಿ ಇರುತ್ತದೆ.

ಅಡಮಾನ ಮಾಡಿರುವ ಆಸ್ತಿಯ ವಿವರ

ಬೆಂಗಳೂರು ಜಿಲ್ಲೆ, ಯಲಹಂಕ ತಾಲೂಕು, ಹೇಸರಘಟ್ಟ ಹೋಬಳಿ, ಶಾನುಭೋಗನಹಳ್ಳಿ ಗ್ರಾಮ ಇಲ್ಲಿರುವ ವಾಸಯೋಗ್ಯ ನಿವೇಶನದ ನಂ. 34, ಹಳೆ ಅಸೆಸ್‌ಮೆಂಟ್ ನಂ. 37, ಹೊಸ ಅಸೆಸ್‌ಮೆಂಟ್ ನಂ. 37/2, ಹಳೆ ಖಾತಾ ನಂ. 37/34, ಹೊಸ ಖಾತಾ ನಂ. 37/2/34, ಅಳತೆ ಪೂರ್ವ ದಿಂದ ಪಶ್ಚಿಮಕ್ಕೆ:40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 35 ಅಡಿ ಒಟ್ಟು 1400 ಚದರ ಅಡಿ. ಅಳತೆಯಲ್ಲಿ ಕಟ್ಟಡವನ್ನು ಒಳಗೊಂಡ ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ: ಖಾಸಗಿ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ. 35 ದಕ್ಷಿಣಕ್ಕೆ: ನಿವೇಶನ ನಂ. 33.

ಸರ್ಫೇಸಿ ಆಕ್ಟ್, 2002ರ ಸೆಕ್ಷನ್ 13(2)ರ ಅನ್ವಯ ರಿಜಿಸ್ಟರ್‌ಆದ ಡಿಮ್ಯಾಂಡ್ ನೋಟೀಸ್ ಅನ್ನು ನಿಮ್ಮ ವಿಳಾಸಕ್ಕೆ ಕಳುಹಿಸಲಾಗಿದ್ದು ಬಟವಾಡೆಯಾಗದೆ ಹಿಂದಿರುಗಿರುತ್ತವೆ. ಆದ್ದರಿಂದ ಈ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿದೆ. ಮಂಜೂರಾತಿಯ ನಿಯಮಗಳನ್ನು ನೀವು ಪಾಲಿಸಲು ವಿಫಲರಾಗಿರುವುದರಿಂದ ಎನ್‌ಹೆಚ್‌ಬಿಯ ಮಾರ್ಗದರ್ಶಿ ಸೂತ್ರಗಳ ಪ್ರಕಾರ **01.05.2026**ರಿಂದ ಖಾತೆಯನ್ನು ಅನುತ್ಪಾದಕ ಆಸ್ತಿಯೆಂದು ವರ್ಗೀಕರಿಸಲಾಗಿದೆ. ಸಾಲಗಾರರಿಗೆ ಮತ್ತು ಅವರ ಅಡಿಯಲ್ಲಿ ಕ್ಲೈಮ್ ಮಾಡುವ ಇತರರಿಗೆ ಈ ಮೂಲಕ ಕರೆ ನೀಡುವುದೇನೆಂದರೆ ಸದರಿ ಮೊತ್ತವನ್ನು ದಿನಾಂಕ **05.05.2026** ರಿಂದ ಒಪ್ಪಿದ ದರಗಳೊಂದಿಗೆ ಬಡ್ಡಿ ಮತ್ತು ಇತರ ವೆಚ್ಚಗಳನ್ನು ಈ ನೋಟೀಸಿನ ದಿನಾಂಕದಿಂದ 60 ದಿನಗಳ ಒಳಗೆ ಪಾವತಿಸಬೇಕು, ವಿಫಲರಾದಲ್ಲಿ ಸರ್ಫೇಸಿ ಆಕ್ಟ್‌ನ ಅನ್ವಯ ಸದರಿ ಭದ್ರತಾ ಸ್ವತ್ತುಗಳ ಮೇಲೆ ಕೆಳಸಹಿದಾರರು ಆಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಲು ಮುಂದಾಗಬಹುದೆಂಬುದನ್ನು ಗಮನಿಸಿ.

ದಿನಾಂಕ : 05.05.2026
ಸ್ಥಳ : ದೊಡ್ಡಬಳ್ಳಾಪುರ

ಸಹಿ/–
ಅಧಿಕೃತ ಅಧಿಕಾರಿ
ಕ್ಯಾನ್‌ಫಿನ್ ಹೋಮ್ಸ್ ಲಿ.,

ಕರ್ನಾಟಕ ಬ್ಯಾಂಕ್ ಲಿಮಿಟೆಡ್

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೊಂದಾಯಿತ ಮತ್ತು ಪ್ರಧಾನ ಕಛೇರಿ : ಅಂಚೆಪೆಟ್ಟಿಗೆ ಸಂಖ್ಯೆ 599, ಮಹಾವೀರ ವೃತ್ತ, ಕಂಕನಾಡಿ, ಮಂಗಳೂರು–575002.	ದೂರವಾಣಿ: 0824–2228146 ಇ–ಮೇಲ್: legal.recovery@ktkbank.com ವೆಬ್‌ಸೈಟ್: www.karnatakabank.bank.in CIN: L85110KA1924PLC001128

ಕಾನೂನು ಮತ್ತು ವಸೂಲಾತಿ ವಿಭಾಗ
ಡಿಮ್ಯಾಂಡ್ ನೋಟೀಸ್ (ತಗಾದೆ ನೋಟೀಸ್)

(1) ಶ್ರೀ.ನಾಗರಾಜು ಹೆಚ್ ಎ ಬಿನ್ ಅಪ್ಪಯ್ಯ ಹೆಚ್,
ವಿಳಾಸ : ನಂ.2, ಹಾಡೋನಹಳ್ಳಿ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ –561205
(2) ಶ್ರೀಮತಿ. ಮಂಜುಳಾ ಎಂ ಡಿ ಕೋಂ ನಾಗರಾಜು ಹೆಚ್ ಎ
ವಿಳಾಸ : ನಂ.2, ಹಾಡೋನಹಳ್ಳಿ, ತೂಬಗೆರೆ ಹೋಬಳಿ, ದೊಡ್ಡಬಳ್ಳಾಪುರ –561205

ಸಾಲಗಾರರಾಗಿ ನೀವು ನಂ. 1] ಶ್ರೀ ಅಪ್ಪಯ್ಯ ಎಚ್ (ಮರಣ ಹೊಂದಿರುತ್ತಾರೆ) ಸಾಲಗಾರರು, ನೀವು ನಂ.1] ಶ್ರೀ ನಾಗರಾಜು ಹೆಚ್ ಎ, ನೀವು ನಂ. 2] ಶ್ರೀಮತಿ. ಮಂಜುಳಾ ಎಂ ಡಿ, ಶ್ರೀಮತಿ ಸುಬ್ಬಮ್ಮ (ಮರಣ ಹೊಂದಿರುತ್ತಾರೆ) ಜಾಮೀನುದಾರರಾಗಿ, ರವರು ಪಿಎಸ್ ಟರ್ಮ್‌ಲೋನ್ ಖಾತೆ ಸಂಖ್ಯೆ 9707001800001201 ರ ಅಡಿಯಲ್ಲಿ ದಿನಾಂಕ: 05.11.2019 ರಂದು ರೂ.94,00,000.00 ಗಳನ್ನು ನಮ್ಮ ಬೆಂಗಳೂರು–ಬುಲ್ ಟೆಂಪಲ್ ರಸ್ತೆ ಶಾಖೆಯಲ್ಲಿ ಸಾಲವಾಗಿ ಪಡೆದುಕೊಂಡಿರುತ್ತೀರಿ. ಸಾಲ ಸೌಲಭ್ಯವನ್ನು ಪಡೆದ ನಂತರ ಶ್ರೀ ಅಪ್ಪಯ್ಯ ಹೆಚ್ ಮತ್ತು ಶ್ರೀಮತಿ ಸುಬ್ಬಮ್ಮ ನಿಧನರಾಗಿರುವುದರಿಂದ ನಂ.1] ಶ್ರೀ.ನಾಗರಾಜು ಹೆಚ್ ಎ ಅವರ ಕಾನೂನುಬದ್ಧ ಉತ್ತರಾಧಿಕಾರಿಯಾಗಿರುತ್ತಾರೆ. ಆದ್ದರಿಂದ ಈ ಸೂಚನೆಯನ್ನು ನಿಮಗೆ ನೀಡಲಾಗಿದ್ದು, ಅವರು ದಿವಂಗತ ಶ್ರೀ ಅಪ್ಪಯ್ಯ ಹೆಚ್ ಮತ್ತು ಶ್ರೀಮತಿ ಸುಬ್ಬಮ್ಮ ಅವರ ಕಾನೂನುಬದ್ಧ ಉತ್ತರಾಧಿಕಾರಿಯಾಗಿರುತ್ತಾರೆ. ಈ ಮೇಲೆ ತಿಳಿಸಿದ ಸಾಲದ ಖಾತೆಯನ್ನು ಜಾರಿಗೆ ಬರುವಂತೆ ದಿನಾಂಕ: 03.08.2025 ರಿಂದ ಜಾರಿಗೆ ಬರುವಂತೆ ಅನುತ್ಪಾದಕ ಆಸ್ತಿ ಎಂದು ವರ್ಗೀಕರಿಸಲಾಗಿರುತ್ತದೆ. ಮತ್ತು ಸರ್ಫೇಸಿ ಖಾಯಿದೆ 2002ರ ಅನ್ವಯ ಕ್ರಮ ಜರುಗಿಸಿ ವಿವರವಾದ ನೋಟೀಸನ್ನು ಸೆಕ್ಯೂರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಪೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆ್ಯಕ್ಟ್ 2002ರ (SARFAESI) ಕಲಂ 13(2) ಮತ್ತು (3) ರಲ್ಲಿ ಅಧಿಕೃತ ಅಧಿಕಾರಿಯವರು ದಿನಾಂಕ 24.10.2025 ರಂದು ತಗಾದೆ ನೋಟೀಸನ್ನು ನೀವು ನಂ.1] ಶ್ರೀ ನಾಗರಾಜು ಎಚ್ ಎ , ಮತ್ತು ನೀವು ನಂ. 2] ಶ್ರೀಮತಿ. ಮಂಜುಳಾ ಎಂ ಡಿ ರವರಿಗೆ ನೀಡಿರುತ್ತಾರೆ. ಹಾಗೂ ಈ ತಗಾದೆ ನೋಟೀಸನ್ನು ನಿಮಗೆಲ್ಲರಿಗೂ ಸ್ಪೀಡ್ ಪೋಸ್ಟ್ (ಅಕ್ನಾಲೆಡ್ಜ್‌ಮೆಂಟ್ ಕಾರ್ಡ್) ಮೂಲಕ ಕಳುಹಿಸಿದ್ದು, ನಿಮಗೆಲ್ಲರಿಗೂ ಬಟವಾಡೆಯಾಗದೆ ವಾಪಸ್ಸು ಬಂದಿರುತ್ತದೆ. ಆದ್ದರಿಂದ ಈ ತಗಾದೆ ನೋಟೀಸನ್ನು ಸರ್ಫೇಸಿ ಖಾಯಿದೆ 2002ರಲ್ಲಿ ತಿಳಿಸಿದ ಕ್ರಮದ ಅನ್ವಯ ಪ್ರಕಟಿಸಲಾಗಿದೆ. ಒಟ್ಟು ಮೊತ್ತ ರೂ.32,31,550.17 (ರೂಪಾಯಿ ಮೂವತ್ತೆರಡು ಲಕ್ಷದ ಮೂವತ್ತೊಂದು ಸಾವಿರದ ಐದುನೂರ ಐವತ್ತು ಮತ್ತು ಹದಿನೇಳು ಪೈಸೆ ಮಾತ್ರ) ಜೊತೆಗೆ ಇಲ್ಲಿ ಕೆಳಗೆ ನಮೂದಿಸಿದ ದರದಲ್ಲಿ ಭವಿಷ್ಯದ ಬಡ್ಡಿಯೊಂದಿಗೆ 60 ದಿನಗಳ ಒಳಗಾಗಿ ಈ ಮೊತ್ತವನ್ನು ಪಾವತಿ ಮಾಡಲು ನಿಮಗೆ ಕರೆ ನೀಡಲಾಗಿದೆ.

ಸಾಲದ ಸ್ವರೂಪ & ಖಾತೆ ಸಂಖ್ಯೆ	ಬಾಕಿ ಉಳಿದಿರುವ ಮೊತ್ತ (ರೂ.)	ಬಡ್ಡಿಯ ದರ (ಸಂಯೋಜಿತ ಮಾಸಿಕ)	ಲೆಕ್ಕ ಹಾಕಲಾದ ಬಡ್ಡಿ (ವರೆಗೆ)	ಸೇರಿಸಲಾಗಿರುವ ಬಡ್ಡಿ (ಯಿಂದ)
ಪಿಎಸ್‌ಟಿಎಲ್ ಖಾತೆ ಸಂಖ್ಯೆ 9707001 800001201	ರೂ. 32,31,550,.17	10.92%	05.11.2024	06.11.2024

ಅಡಮಾನ ಮಾಡಿದ ಸ್ವತ್ತುಗಳ ಸಂಕ್ಷಿಪ್ತ ವಿವರ (ಭದ್ರತಾ ಸ್ವತ್ತುಗಳು):
ಶ್ರೀಮತಿ. ಮಂಜುಳಾ ಎಂ ಡಿ ರವರಿಗೆ ಸೇರಿದ ಎಲ್ಲಾ ಭಾಗ ಮತ್ತು ವಿಭಾಗ ಗಳನ್ನೊಳಗೊಂಡಿರುವ ಇಂಡಸ್ಟ್ರಿಯಲ್ ಸ್ವತ್ತಿನ ವಿಸ್ತೀರ್ಣ 3270.19 ಚದರ ಮೀಟರ್‌ಗಳು, ಸರ್ವೆ ನಂ. 160/2, ಗ್ರಾಮ ಪಂಚಾಯತ್ ಖಾನೇಷುಮಾರಿ ಖಾತಾ ನಂ. 311/160/2, ಇ–ಖಾತಾ ನಂ. 150300302600800326, ಜೊತೆಗೆ ಕಟ್ಟಡವನ್ನು ನಿರ್ಮಿಸಲಾಗಿದೆ. ಈ ಆಸ್ತಿಯು ಹಡೋನಹಳ್ಳಿ ಗ್ರಾಮ, ತೂಬುಗೆರೆ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–561205.

ಟಿಪ್ಪಣಿ:– ಸಾಲಗಾರರಾದ ದಿವಂಗತ ಶ್ರೀ ಅಪ್ಪಯ್ಯನವರ ಜವಾಬ್ದಾರಿಯ ಜೊತೆಗೆ ದೊಡ್ಡಬಳ್ಳಾಪುರದಲ್ಲಿ 2.50 ಎಕರೆ ಕೃಷಿ ಭೂಮಿಯನ್ನು ಹೊಂದಿರುವ ಕೃಷಿ ಆಸ್ತಿ ಮತ್ತು ಪಾಲಿ ಹೌಸ್ ರಚನೆ, ನೀರಾವರಿ ಉಪಕರಣಗಳು, ದಾಸ್ತಾನುಗಳು ಇತ್ಯಾದಿಗಳನ್ನು ಅಡಮಾನ ಇಡುವ ಮೂಲಕವೂ ಸುರಕ್ಷಿತವಾಗಿದೆ. ಸದರಿ ಆಸ್ತಿಗಳ ವಿರುದ್ಧ ಸೂಕ್ತ ಕಾನೂನು ಮತ್ತು ವಸೂಲಾತಿ ಕ್ರಮ ಕೈಗೊಳ್ಳಲು ಬ್ಯಾಂಕ್ ತನ್ನ ಅಧಿಕಾರವನ್ನು ಕಾಯ್ದಿರಿಸಿದೆ.

ಈ ಪ್ರಕಟಣೆಯ ದಿನಾಂಕದಿಂದ 60 ದಿನಗಳ ಅವಧಿಯ ಮುಕ್ತಾಯ ಮೊದಲು ಅಥವಾ ಅದಕ್ಕಿಂತ ಮುಂಚಿತವಾಗಿ ನಿಮ್ಮ ಹೊಣೆಗಾರಿಕೆಗಳನ್ನು ಪೂರ್ಣವಾಗಿ ಪೂರೈಸುವಲ್ಲಿ ವಿಫಲರಾದಲ್ಲಿ ಸುರಕ್ಷಿತ ಸಾಲಗಾರ ಬ್ಯಾಂಕಿನ ಅಧಿಕೃತ ಅಧಿಕಾರಿಯಾದ ನಾನು ಮೇಲಿನ ಭದ್ರತೆಗಳನ್ನು ಜಾರಿಗೊಳಿಸಲು ಉದ್ದೇಶಿಸಿರುತ್ತೇನೆ ಎಂಬುದನ್ನು ದಯವಿಟ್ಟು ಗಮನಿಸಿ.

ಇದಲ್ಲದೆ, ಅಧಿನಿಯಮ ಸೆಕ್ಷನ್ 13(8)ರ ನಿಬಂಧನೆಗಳ ಅಡಿಯಲ್ಲಿ, ಅಡಮಾನುಗಳನ್ನು ಹಿಂದೆ ಪಡೆದುಕೊಳ್ಳಲು ಟೆಂಡರ್‌ಗಳನ್ನು ಆಹ್ವಾನಿಸುವವರೆಗೆ ಅಥವಾ ಸಾರ್ವಜನಿಕ ಹರಾಜಿನ ಸೂಚನೆಯು ಪ್ರಕಟಣೆಗೊಳ್ಳುವ ದಿನಾಂಕದವರೆಗೆ ಮಾತ್ರ ಸಮಯ ಲಭ್ಯವಿದೆ ಎಂಬುದು ಗಮನದಲ್ಲಿರಲಿ.

ಸ್ಥಳ: ಮಂಗಳೂರು
ದಿನಾಂಕ: 05.05.2026

ಸಹಿ/– ಮುಖ್ಯ ವ್ಯವಸ್ಥಾಪಕರು & ಅಧಿಕೃತ ಅಧಿಕಾರಿ
ಕರ್ನಾಟಕ ಬ್ಯಾಂಕ್ ಲಿ.,

ಬಿಬಿಸಿ, ಎನ್‌ಎಬಿಎಲ್ ಒಪ್ಪಂದಕ್ಕೆ ಸಹಿ

ಬೆಂಗಳೂರು ಕರ್ನಾಟಕದ ನಾವೀನ್ಯತಾ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಮಹತ್ವದ ಹೆಜ್ಜೆಯಾಗಿ ಹಾಗೂ ಸ್ಟಾರ್ಟ್‌ಅಪ್‌ಗಳ ಸಂಶೋಧನೆಗಳಿಗೆ ಜಾಗತಿಕ ಮಾನ್ಯತೆ ಒದಗಿಸುವ ಉದ್ದೇಶದಿಂದ ಬೆಂಗಳೂರು ಬಯೋ–ಇನ್ನೋವೇಷನ್ ಸೆಂಟರ್ (ಬಿಬಿಸಿ) ಮತ್ತು ರಾಷ್ಟ್ರೀಯ ಪರೀಕ್ಷೆ ಮತ್ತು ಮಾಪನಾಂಕ ನಿರ್ಣಯ ಪ್ರಯೋಗಾಲಯಗಳ ಮಾನ್ಯತಾ ಮಂಡಳಿ NABL (QCI) ಜತೆಗೆ ಒಪ್ಪಂದ ಮಾಡಿಕೊಂಡಿದೆ.

ಈ ಒಪ್ಪಂದಕ್ಕೆ ರಾಜ್ಯ ಸರ್ಕಾರದ (ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಇಲಾಖೆ) ಕಾರ್ಯದರ್ಶಿ ಹಾಗೂ ಬಿಬಿಸಿ ಅಧ್ಯಕ್ಷೆ ಡಾ. ಎನ್. ಮಂಜುಳಾ ಅವರ ಸಮ್ಮುಖದಲ್ಲಿ, ಬಿಬಿಸಿ ವ್ಯವಸ್ಥಾಪಕ ನಿರ್ದೇಶಕ ಡಾ. ಮೊಹಮ್ಮದ್ ಆದಿಲ್ ಎ.ಎ. ಮತ್ತು ಎನ್‌ಎಬಿಎಲ್ ಸಿಇಒ ಡಾ. ರಮಾನಂದ್ ಶುಕ್ಲಾ ಅವರು ಸಹಿ ಹಾಕಿದರು. ಈ ಬಗ್ಗೆ ಮಾತನಾಡಿದ ಸರ್ಕಾರದ ಕಾರ್ಯದರ್ಶಿ ಡಾ. ಎನ್. ಮಂಜುಳಾ ಅವರು, ಜೀವ ವಿಜ್ಞಾನ ಕ್ಷೇತ್ರದಲ್ಲಿ ಕರ್ನಾಟಕವನ್ನು ಜಾಗತಿಕ ಹಬ್ ಆಗಿ ಗುರುತಿಸಿಕೊಳ್ಳುವುದಕ್ಕೆ ಈ ಒಪ್ಪಂದ ಬಹಳ ಸಹಕಾರಿಯಾಗಲಿದೆ. ಎಂದರು. NABL (QCI) ನ ಸಿಇಒ ಡಾ. ರಮಾನಂದ್ ಎನ್. ಶುಕ್ಲಾ ಮಾತನಾಡಿ, ಜಾಗತಿಕ ಮಾರುಕಟ್ಟೆ ಮತ್ತು ಹೂಡಿಕೆಗೆ ಮುಕ್ತ ಅವಕಾಶ ಕಲ್ಪಿಸುವುದಕ್ಕೆ ಈ ರೀತಿಯ ಒಪ್ಪಂದದ ಅವಶ್ಯಕತೆ ಇತ್ತು. ಇದು ಜಾಗತಿಕ ಮಾರುಕಟ್ಟೆ ಪ್ರವೇಶಿಸಲು ಮತ್ತು ಗ್ರಾಹಕರಲ್ಲಿ ನಂಬಿಕೆ ಸೃಷ್ಟಿಸಲು ಸಹಕಾರಿಯಾಗಲಿದೆ ಎಂದರು.

ಕ್ಯಾನ್ ಫಿನ್ ಹೋಮ್ಸ್ ಲಿ.,

Can Fin Homes Ltd (Sponsor: CANARA BANK) HOME LOANS + DEPOSITS
ಅತ್ತಿಬೆಲೆ ಶಾಖೆ

ನಂ. 2, ತಿಲಕ್‌ನಗರ, ಮೊದಲ ಮಹಡಿ, ಭವೇನ್ ಕಾಂಪ್ಲೆಕ್ಸ್,
ವೆಂಕಟೇಶ್ವರ ಗಾರ್ಮೆಂಟ್ಸ್ ಹತ್ತಿರ ಆತ್ತಿಬೆಲೆ – 562 107,
ಫೋನ್ : 080-27844440,7625079245
e-mail:attibele@canfinhomes.com
CIN NO.L85110KA1987PLC008699

ಸ್ಥಿರಾಸ್ತಿಯ ಮಾರಾಟಕ್ಕಾಗಿ ಹರಾಜು ಮಾರಾಟ ಸೂಚನೆ

[ನಿಯಮ 8(6)ರ ಅನ್ವಯ]

ಸೆಕ್ಯುರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ನಿಯಮ 8(6)ರ ನಿಬಂಧನೆಗಳನ್ನು ಓದಿಕೊಂಡಂತೆ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ಅನ್ವಯ ಸ್ಥಿರಾಸ್ತಿಯ ಇ–ಹರಾಜು ಮಾರಾಟ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ/ಅಡಮಾನುದಾರರಿಗೆ ಹಾಗೂ ಸಾಮಾನ್ಯವಾಗಿ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರವರಿಗೆ ಅಡಮಾನ /ಚಾರ್ಜ್ ಮಾಡಿರುವ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು, ಕ್ಯಾನ್‌ಫಿನ್‌ಹೋಮ್ಸ್ ಲಿ., **ಅತ್ತಿಬೆಲೆ ಶಾಖೆ** ಇದರ ಅಧಿಕೃತ ಅಧಿಕಾರಿಯವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು ಅವುಗಳನ್ನು **'ಎಲ್ಲಿ ಹೇಗಿದೆಯೊ ಹಾಗೆ'**, **'ಎಲ್ಲಿ ಏನಿದೆಯೋ ಹಾಗೆ'** ಮತ್ತು **'ಮತ್ತ್ಯಾವುದಾದರೂ ಅಲ್ಲಿ ಇದ್ದಲ್ಲಿ'** ಆಧಾರದ ಮೇಲೆ ಕ್ಯಾನ್‌ಫಿನ್‌ಹೋಮ್ಸ್ ಲಿ., ಇವರಿಗೆ ಕೆಳಕಂಡ ಸಾಲಗಾರರು/ ಜಾಮೀನುದಾರರಿಂದ ಕ್ರಮವಾಗಿ ಬಾಕಿ ಮೊತ್ತ **ರೂ.18,50,000/–** (ರೂಪಾಯಿ ಹದಿನೆಂಟು ಲಕ್ಷ ಐವತ್ತು ಸಾವಿರ ಮಾತ್ರ) ಮತ್ತು ಮುಂದಿನ ಬಡ್ಡಿ ಮತ್ತು ಸಾಂದರ್ಭಿಕ ಖರ್ಚು,ವೆಚ್ಚ ಇತ್ಯಾದಿಗಳ ವಸೂಲಿಗಾಗಿ ದಿನಾಂಕ **09.06.2026**ರಂದು ಇ– ಹರಾಜಿನ ಮೂಲಕ ಮಾರಾಟ ಮಾಡಲಾಗುವುದು.

ಕ್ರ. ಸಂ.	ಸಾಲಗಾರರ ಮತ್ತು ಜಾಮೀನುದಾರರ ಹೆಸರು	ದಿನಾಂಕ 05.05.2026 ರಂತೆ ಬಾಕಿ ಮೊತ್ತ	ಮೀಸಲು ಬೆಲೆ	ಮುಂಗಡ ಠೇವಣಿ	ಸ್ವಾಧೀನದ ಸ್ವರೂಪ	ಆಸ್ತಿಗಳ ವಿವರ
1	ಶ್ರೀ ಮಹೇಶ್ ಸಿ (ಸಾಲಗಾರರು) ಮತ್ತು ಶ್ರೀಮತಿ ಇಂದುಮತಿ ಜಿ. (ಸಹ ಸಾಲಗಾರರು)	ರೂ. 18,50,000/– (ರೂಪಾಯಿ ಹದಿನೆಂಟು ಲಕ್ಷ ಐವತ್ತು ಸಾವಿರ ಮಾತ್ರ)	ರೂ. 17,10,000/– (ರೂಪಾಯಿ ಹದಿನೇಳು ಲಕ್ಷ ಹತ್ತು ಸಾವಿರ ಮಾತ್ರ)	ರೂ. 1,71,000/– (ರೂಪಾಯಿ ಒಂದು ಲಕ್ಷ ಎಪ್ಪತ್ತೊಂದು ಸಾವಿರ ಮಾತ್ರ)	ಭೌತಿಕ	ಬೆಂಗಳೂರು ಜಿಲ್ಲೆ– 560 083, ಆನೇಕಲ್ ತಾಲೂಕು, ಜಿಗಣಿ ಹೋಬಳಿ, ಮಂಟಪ ಗ್ರಾಮ ಪಂಚಾಯತ್, ರಾಮಸಂದ್ರ ಗ್ರಾಮ, ಇಲ್ಲಿರುವ ಆಸ್ತಿಯ ನಿವೇಶನ ನಂ. 38, ಖಾತಾ ನಂ. 39/2, ಅಳತೆ ಪೂರ್ವ ದಿಂದ ಪಶ್ಚಿಮಕ್ಕೆ ಉತ್ತರದ ಕಡೆ 40 ಅಡಿ, ಮತ್ತು ದಕ್ಷಿಣದ ಕಡೆ 44 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ ಪೂರ್ವದ ಕಡೆ 35.2 ಅಡಿ ಮತ್ತು ಪಶ್ಚಿಮದ ಕಡೆ 21.10 ಅಡಿ ಒಟ್ಟು ವಿಸ್ತೀರ್ಣ 1182.30 ಚದರ ಅಡಿ. ಈ ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ: ನಿವೇಶನ ನಂ. 57 ಮತ್ತು 58, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ. 39, ದಕ್ಷಿಣಕ್ಕೆ: ಖಾಸಗಿ ಆಸ್ತಿ.
	ಶ್ರೀ ಮಹೇಶ್ ಸಿ (ಸಾಲಗಾರರು) ಮತ್ತು ಶ್ರೀಮತಿ ಇಂದುಮತಿ ಜಿ. (ಸಹ ಸಾಲಗಾರರು)		ರೂ. 12,80,000/– (ರೂಪಾಯಿ ಹನ್ನೆರಡು ಲಕ್ಷ ಎಂಬತ್ತು ಸಾವಿರ ಮಾತ್ರ)	ರೂ. 1,28,000/– (ರೂಪಾಯಿ ಒಂದು ಲಕ್ಷ ಇಪ್ಪತ್ತೆಂಟು ಸಾವಿರ ಮಾತ್ರ)	ಭೌತಿಕ	ಬೆಂಗಳೂರು ಜಿಲ್ಲೆ– 560 083, ಆನೇಕಲ್ ತಾಲೂಕು, ಜಿಗಣಿ ಹೋಬಳಿ, ಮಂಟಪ ಗ್ರಾಮ ಪಂಚಾಯತ್, ರಾಮಸಂದ್ರ ಗ್ರಾಮ, ಇಲ್ಲಿರುವ ಆಸ್ತಿಯ ನಿವೇಶನ ನಂ. 68, ಖಾತಾ ನಂ. 39/2, ಅಳತೆ ಪೂರ್ವ ದಿಂದ ಪಶ್ಚಿಮಕ್ಕೆ ಉತ್ತರದ ಕಡೆ 20.5 ಅಡಿ ಮತ್ತು ದಕ್ಷಿಣದ ಕಡೆ 23.8 ಅಡಿ ಉತ್ತರದಿಂದ ದಕ್ಷಿಣಕ್ಕೆ 40 ಅಡಿ ಒಟ್ಟು ವಿಸ್ತೀರ್ಣ 886 ಚದರ ಅಡಿ. ಈ ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ: ಖಾಸಗಿ ಆಸ್ತಿ. ಪಶ್ಚಿಮಕ್ಕೆ: ನಿವೇಶನ ನಂ. 67, ಉತ್ತರಕ್ಕೆ: ನಿವೇಶನ ನಂ. 65, ದಕ್ಷಿಣಕ್ಕೆ: ರಸ್ತೆ

ಋಣಭಾರಗಳು : ಏನೂ ಇಲ್ಲ, ನಿವೇಶನ ನಂ. 68ರ ಎಲ್ಲಾ ಡೀಡ್‌ಗಳ ಪ್ರಮಾಣೀಕೃತ ಪ್ರತಿಗಳು ಮಾತ್ರ ಲಭ್ಯ ಇವೆ.
ಮೇಲ್ಕಂಡ ಹರಾಜಿಗೆ ಸಂಬಂಧಿಸಿದ ನಿಯಮ ಮತ್ತು ನಿಬಂಧನೆಗಳ ವಿವರಗಳಿಗೆ ಕ್ಯಾನ್‌ಫಿನ್‌ಹೋಮ್ಸ್ ಲಿ., ಇವರ ಅಫೀಷಿಯಲ್ ವೆಬ್‌ಸೈಟ್ https://www.canfinhomes.com/Search Auction.aspx ನಲ್ಲಿ ವೀಕ್ಷಿಸಬಹುದು. ಇ– ಹರಾಜಿನಲ್ಲಿ ಭಾಗವಹಿಸಲು ನೀಡಲಾದ ಲಿಂಕ್ https://www.bankeauctionwizard.com

ದಿನಾಂಕ : 05.05.2026
ಸ್ಥಳ : ಅತ್ತಿಬೆಲೆ

ಸಹಿ/–
ಅಧಿಕೃತ ಅಧಿಕಾರಿ
ಕ್ಯಾನ್ ಫಿನ್ ಹೋಮ್ಸ್ ಲಿ.,

ಭಾರತೀಯ ಸ್ಟೇಟ್ ಬ್ಯಾಂಕ್

ಅಧಿಕೃತ ಅಧಿಕಾರಿಗಳ ವಿವರಗಳು: ಹೆಸರು : ಶ್ರೀ ನಾಗರಾಜ .ವಿ ಇಮೇಲ್ ಐಡಿ: sbi.05173@sbi.co.in ಮೊಬೈಲ್ ನಂ: + 91 9448441455	ಶಾಖೆಯ ವಿಳಾಸ : ಒತ್ತಡಗ್ರಸ್ತ ಆಸ್ತಿಗಳ ವಸೂಲಿ ಶಾಖೆ ಬಿಲ್ಡಿಂಗ್ ನಂ. 11/90, 3ನೇ ಮಹಡಿ, ಹಳೆ ಶಿವಾಜಿ ಥಿಯೇಟರ್ ಹತ್ತಿರ, ಜೆ.ಸಿ. ರಸ್ತೆ, ಬೆಂಗಳೂರು–560002. ದೂರವಾಣಿ : 70222 520004

ಅಪೆಂಡಿಕ್ಸ್ IV-A [ನಿಯಮ 8(6)ರ ಪ್ರಾವಿಜೋ ಅಡಿಯಲ್ಲಿ]
ಸ್ಥಿರಾಸ್ತಿಯ ಮಾರಾಟಕ್ಕಾಗಿ ಸೂಚನೆ

29.05.2026 ರಂದು ಸ್ಥಿರ ಆಸ್ತಿಯ ಮಾರಾಟಕ್ಕೆ ಇ–ಹರಾಜು ಮಾರಾಟ ಸೂಚನೆ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ಸೆಕ್ಯೂರಿಟಿ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 8(6)ರ ನಿಬಂಧನೆಗಳನ್ನು ಓದಿಕೊಂಡಂತೆ (ಆವರಣದಲ್ಲಿ ಇರುವ ಯಾವುದೇ ಚರ ವಸ್ತುಗಳನ್ನು ಹೊರತು ಪಡಿಸಿ) ಇದರನ್ವಯ ಸ್ಥಿರಾಸ್ತಿಯ ಇ–ಹರಾಜು ಮಾರಾಟ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಈ ಕೆಳಗೆ ವಿವರಿಸಿರುವ ಅಡಮಾನವಿಟ್ಟ/ಚಾರ್ಜ್ ಮಾಡಿರುವ ಸ್ಥಿರಾಸ್ತಿಯನ್ನು **ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು** ಭದ್ರತಾ ಸಾಲ ಕೊಟ್ಟವರು ಇವರ ಅಧಿಕೃತ ಅಧಿಕಾರಿಯವರು ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿದ್ದು ಅವುಗಳನ್ನು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಎಲ್ಲಿ ಏನಿದೆಯೋ ಹಾಗೆ" ಆಧಾರದ ಮೇಲೆ ಭದ್ರತಾ ಸಾಲ ಕೊಟ್ಟ ಭಾರತೀಯ ಸ್ಟೇಟ್ ಬ್ಯಾಂಕ್ ಇವರಿಗೆ **ಸಾಲಗಾರರಾದ : ಶ್ರೀ ಅಲ್ತಾಫ್‌ಹುಸೇನ್ ನಾಡಾಫ್** ಬಿನ್ ಮುಕ್ತುಮ್‌ಸಾಬ್ ನಾಡಾಫ್, "ಎಂ.ಎಸ್.ಆರ್. ನೀಪ", ಫ್ಲಾಟ್ ನಂ. ಟಿಎಫ್–1, ಮೂರನೇ ಮಹಡಿ, ಅರೇಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು–560061. ಇವರಿಂದ ಬರಬೇಕಾದ ಬಾಕಿ ಮೊತ್ತ **ರೂ. 1,01,52,522/–** (ರೂಪಾಯಿ ಒಂದು ಕೋಟಿ ಒಂದು ಲಕ್ಷದ ಐವತ್ತೆರಡು ಸಾವಿರದ ಐನೂರ ಇಪ್ಪತ್ತೆರಡು ಮಾತ್ರ) 04.05.2026 ರಂದು ಇದ್ದಂತೆ + ಬಡ್ಡಿ + ಇತರೆ ಖರ್ಚು ವೆಚ್ಚಗಳ ವಸೂಲಿಗಾಗಿ ಅಡಮಾನು ಮಾಡಿರುವ ಸ್ಥಿರಾಸ್ತಿಯನ್ನು **ದಿನಾಂಕ : 29.05.2026 ರಂದು** ಇ–ಹರಾಜು ಮಾರಾಟ ಮಾಡಲಾಗುತ್ತಿದೆ.

ಮೀಸಲು ಬೆಲೆ, ಮುಂಗಡ ಠೇವಣಿ (ಇಎಂಡಿ) ಬಿಡ್ ಗುಣಾಂಕ ಮತ್ತು ಇ–ಹರಾಜಿನ ಸಮಯ ಮತ್ತು ಮಾರಾಟ ಮಾಡಲು ಸ್ಥಿರ ಆಸ್ತಿಗಾಗಿ ಕೆವೈಸಿ ದಾಖಲೆಗಳೊಂದಿಗೆ ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ ಈ ಕೆಳಗಿನಂತಿವೆ.

ಮೀಸಲು ಬೆಲೆ (ಈ ಮೊತ್ತಕ್ಕಿಂತ ಕಡಿಮೆ ಬೆಲೆಗೆ ಸ್ವತ್ತನ್ನು ಮಾರಾಟ ಮಾಡಲಾಗುವುದಿಲ್ಲ)	ಮುಂಗಡ ಠೇವಣಿ	ಬಿಡ್ ಏರಿಕೆಯ ಮೊತ್ತ	ಆಸ್ತಿಯ ಇ–ಹರಾಜು ದಿನಾಂಕ ಮತ್ತು ಸಮಯ	ಕೆವೈಸಿ ದಾಖಲೆಗಳೊಂದಿಗೆ ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ
ರೂ. 60,55,000/-	ರೂ. 6,05,500/-	ರೂ. 25,000/-	29.05.2026, ಬೆಳಿಗ್ಗೆ 11.00 ರಿಂದ ಸಂಜೆ 4.00 ಗಂಟೆಯವರೆಗೆ	28.05.2026 ರಂದು ಸಂಜೆ 4.00 ಗಂಟೆಯವರೆಗೆ

ಟೆಂಡರ್ ನಂ. : SBI/SARB/2026-27/47
ಸ್ಥಿರಾಸ್ತಿಯ ವಿವರಗಳು :

(ಆಸ್ತಿಯ ಮಾಲೀಕರು : ಶ್ರೀ ಅಲ್ತಾಫ್ ಹುಸೇನ್ ನಾಡಾಫ್ ಬಿನ್ ಮಕ್ತುಮ್‌ಸಾಬ್ ನಾಡಾಫ್) ಶೆಡ್ಯೂಲ್ 'ಎ' ಆಸ್ತಿ : (ಸ್ಥಿರಾಸ್ತಿಯ ವಿವರಗಳು) : ಶೆಡ್ಯೂಲ್ "ಸಿ" : ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಂತೆ ವಾಸಯೋಗ್ಯ ಆಸ್ತಿ ಸೈಟ್ ನಂ. 16, ಖಾತಾ ನಂ. 675/145/128/400/8 ಮತ್ತು 10/16, ಹಿಂದಿನ ಸರ್ವೇ ನಂ. 8 ಮತ್ತು 9 ರಲ್ಲಿ ರಚಿಸಲಾಗಿದೆ. ಪರಿವರ್ತಿತ ಆದೇಶ ಸಂಖ್ಯೆ B.DIS.ALN.SR(S)216/1997-98, ದಿನಾಂಕ 30.03.1998, ಬೆಂಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಅಂಗೀಕರಿಸಿದ್ದಾರೆ ಇದು ಅರೇಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದ್ದು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 59+67.6/2 ಅಡಿ, ಒಟ್ಟು ವಿಸ್ತೀರ್ಣ 2530 ಚದರ ಅಡಿ. **ಚಕ್ಕುಬಂದಿ : ಪೂರ್ವಕ್ಕೆ :** ಸರ್ವೇ ನಂ. 15, **ಪಶ್ಚಿಮಕ್ಕೆ :** ಖಾಸಗಿ ಆಸ್ತಿ, **ಉತ್ತರಕ್ಕೆ :** 30 ಅಡಿ ರಸ್ತೆ, **ದಕ್ಷಿಣಕ್ಕೆ :** ಖಾಸಗಿ ರಸ್ತೆ.

ಶೆಡ್ಯೂಲ್ 'ಸಿ–1' ಆಸ್ತಿ : (ಅವಿಭಾಜಿತ ಶೇರು ಮಾರಾಟ ಮಾಡಲು ಒಪ್ಪಿಗೆ) ಶೆಡ್ಯೂಲ್ – "ಸಿ" ಆಸ್ತಿಯಲ್ಲಿ 24 ಚದರ ಅಡಿ ಅವಿಭಾಜಿತ ಪಾಲು, ಹಕ್ಕು, ಶೀರ್ಷಿಕೆ ಮತ್ತು ಆಸಕ್ತಿಯನ್ನು ಹೊಂದಿದೆ.

ಶೆಡ್ಯೂಲ್ 'ಸಿ–2' ಆಸ್ತಿ ("ಸಿ–1" ಅವಿಭಾಜಿತ ಪಾಲು, ಅನುಗುಣವಾಗಿ ಅಪಾರ್ಟ್‌ಮೆಂಟ್‌ನ ವಿವರಣೆ) : ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಂತೆ ಫ್ಲಾಟ್ ನಂ. ಟಿಎಫ್–1, 3ನೇ ಮಹಡಿ, ಸೂಪರ್ ನಿರ್ಮಿತ ಪ್ರದೇಶ 1400 ಚದರ ಅಡಿ ಮತ್ತು ಯುಡಿಎಸ್ 240 ಚದರ ಅಡಿ, 2 ಬಿಹೆಚ್‌ಕೆ, "ಎಂ.ಎಸ್. ಆರ್. ನೀಪಾ" ಎಂದು ಕರೆಯಲ್ಪಡುವ ಬಹುಮಹಡಿ ಕಟ್ಟಡವನ್ನು ಹೊಂದಿದ್ದು, ಬಾಲ್ಕನಿಗಳು ಮತ್ತು ಸಾಮಾನ್ಯ ಪ್ರದೇಶಗಳಲ್ಲಿ ಅನುಪಾತದ ಪಾಲು, ಜೊತೆಗೆ ಕಾರ್ ಪಾರ್ಕಿಂಗ್ ಜಾಗ, ಅಪಾರ್ಟ್‌ಮೆಂಟ್‌ನ ಮೇಲ್ಛಾವಣಿ ಮತ್ತು ಅದರ ಮೇಲಿನ ಜಾಗದ ನೆಲದ ನಡುವಿನ ಕೀಲುಗಳ ಆಳದಲ್ಲಿ ಅರ್ಧದಷ್ಟು ಭಾಗದೊಂದಿಗೆ ಮತ್ತು ಎಲ್ಲಾ ಮಹಡಿಗಳಲ್ಲಿ ಅನುಪಾತದ ಪಾಲನ್ನು ಹೊಂದಿರುವ ಗುಪ್ತ ವೈರಿಂಗ್‌ನೊಂದಿಗೆ ಮಟ್ಟದಂತಹ ಆಂತರಿಕ ಮತ್ತು ಬಾಹ್ಯ ಗೋಡೆಯಂತಹ ಕೀಲುಗಳ ಆಳದಲ್ಲಿ ಅರ್ಧದಷ್ಟು, ಟೆರೇಸ್‌ಗೆ ಇಳಿಯುವುದು ಸೇರಿದಂತೆ ಮೆಟ್ಟಿಲುಗಳು, ಯಂತ್ರ ಕೊಠಡಿ, ವಸತಿ ಮತ್ತು ಪ್ರಯಾಣಿಕರ ಲಿಫ್ಟ್‌ನ ಲಿಫ್ಟ್ ಯಂತ್ರಗಳು ಮತ್ತು ಅಗತ್ಯ ಕ್ಯಾಬಿನ್‌ಗಳು, ವಿಂಚ್‌ಗಳು ಮತ್ತು ಮೋಟರ್ ಇತ್ಯಾದಿಗಳೊಂದಿಗೆ, ಪಂಪ್‌ಸೆಟ್‌ಗಳು, ಪಂಪ್‌ರೂಮ್‌ನಲ್ಲಿರುವ ಮನೆಗಳು ಮತ್ತು ಅಗತ್ಯ ಕವಾಟಗಳು, ಸ್ಟಾರ್ಟರ್‌ಗಳು ಇತ್ಯಾದಿಗಳೊಂದಿಗೆ ಮತ್ತು ಸಾಮಾನ್ಯ ಪ್ರದೇಶ, ವಿದ್ಯುತ್ ಸಿಸ್ಟಂ ಮತ್ತು ಫ್ಲಾಟ್. **ಚಕ್ಕುಬಂದಿ : ಪೂರ್ವಕ್ಕೆ :** ಸಾಮಾನ್ಯ ಮಾರ್ಗ, **ಪಶ್ಚಿಮಕ್ಕೆ :** ಇತರರ ಆಸ್ತಿ, **ಉತ್ತರಕ್ಕೆ :** ಫ್ಲಾಟ್ ನಂ. ಟಿಎಫ್–2, **ದಕ್ಷಿಣಕ್ಕೆ :** ಇತರರ ಆಸ್ತಿ.

ಶಾಸನಬದ್ಧ 15 ದಿನಗಳ ಮಾರಾಟದ ಸೂಚನೆ "ಸರ್ಫೇಸಿ" ಕಾಯಿದೆ 2002ರ ಅಡಿಯಲ್ಲಿ ಹರಾಜು : ಸಾಲಗಾರರು/ಅಡಮಾನದಾರರು ಈ ನೋಟೀಸಿನ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗೆ ಮೇಲೆ ತಿಳಿಸಲಾದ ಮೊತ್ತವನ್ನು ಪಾವತಿಸಲು ಈ ಮೂಲಕ ತಿಳಿಸಲಾಗಿದೆ, ಅದು ವಿಫಲವಾದರೆ ಬ್ಯಾಂಕ್ ಸರ್ಫೇಸಿ ಕಾಯಿದೆ, 2002ರಲ್ಲಿ ನಿಗಧಿಪಡಿಸಿದ ನಿಬಂಧನೆಗಳ ಪ್ರಕಾರ ಆಸ್ತಿಗಳನ್ನು ಮಾರಾಟ ಮಾಡುತ್ತದೆ.

ಹರಾಜಿನ ಹೆಚ್ಚಿನ ನಿಯಮ ಮತ್ತು ನಿಬಂಧನೆಗಳಿಗಾಗಿ ಅಧಿಕೃತ ಅಧಿಕಾರಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಸ್‌ಎಆರ್‌ಬಿ, ಬೆಂಗಳೂರು ಪ್ರತಿನಿಧಿಸುವ ಅಧಿಕೃತ ಅಧಿಕಾರಿಗಳು ಒದಗಿಸಿದ ಲಿಂಕ್‌ಗಳನ್ನು ದಯವಿಟ್ಟು ನೋಡಿ. https://baanknet.com

ಆಸ್ತಿಗಳ ಪರಿಶೀಲನೆಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗಾಗಿ ಉದ್ದೇಶಿತ ಬಿಡ್‌ದಾರರು ಮೇಲೆ ತಿಳಿಸಿದ ಅಧಿಕೃತ ಅಧಿಕಾರಿ ಅಥವಾ ಬ್ಯಾಂಕಿನ ಅನುಮೋದಿತ ರೆಸೆಲ್ಯೂಷನ್ ಪ್ರೈ., ಲಿ., ಪ್ರತಿನಿಧಿಸುವವರು : ಚಂದ್ರಶೇಖರ್ ಇವರನ್ನು ಸಂಪರ್ಕಿಸಬಹುದು. ಮೊಬೈಲ್ ನಂ. **70222 52004.**

ದಿನಾಂಕ: 05.05.2026
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿಗಳು
ಭಾರತೀಯ ಸ್ಟೇಟ್ ಬ್ಯಾಂಕ್, ಎಸ್‌ಎಆರ್‌ಬಿ, ಬೆಂಗಳೂರು

ಕಾಲುವೆ ಅಭಿವೃದ್ಧಿ ಕಾಮಗಾರಿ ಮೊದಲ ಆದ್ಯತೆಯಲ್ಲಿ ಪೂರ್ಣಗೊಳಿಸಿ: ರಮೇಶ್

ಸಂ.ಕ.ಸಮಾಚಾರ, ಬೆಂಗಳೂರು

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಕೈಗೊಳ್ಳಲಾಗುತ್ತಿರುವ ಮಳೆ ನೀರು ಕಾಲುವೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆ ನೀಡಿ ಶೀಘ್ರವಾಗಿ ಪೂರ್ಣಗೊಳಿಸಬೇಕೆಂದು ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಸೂಚನೆ ನೀಡಿದರು.

ನಗರದಲ್ಲಿ ಮಂಗಳವಾರ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿಶ್ವಬ್ಯಾಂಕ್ ಅನುದಾನದಡಿ ಕೈಗೊಳ್ಳಲಾಗುತ್ತಿರುವ ಕಾಲುವೆಗಳ ಅಭಿವೃದ್ಧಿ, ನಿರ್ವಹಣೆ, ಕಾಮಗಾರಿ ಅನುಷ್ಠಾನ ಹಾಗೂ ಪ್ರದೇಶದ ಒಟ್ಟಾರೆ ಜವಾಬ್ದಾರಿ ಕಾಮಗಾರಿ ನಿರ್ವಹಿಸುತ್ತಿರುವ ಯೋಜನಾ ಅನುಷ್ಠಾನ ಘಟಕದ ಅಧಿಕಾರಿಗಳದ್ದಾಗಿರುತ್ತದೆ ಎಂದರು.

ಕಾಲುವೆಗಳ ಗಡಿ ಗುರುತಿಸುವಿಕೆ ಹಾಗೂ ಒತ್ತುವರಿ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯೊಂದಿಗೆ ಸಮನ್ವಯ ಸಾಧಿಸುವ ಮೂಲಕ ಯೋಜನಾ ಅನುಷ್ಠಾನ ಘಟಕವು ಕಾಲುವೆಗಳ ಒತ್ತುವರಿ ತೆರವುಗೊಳಿಸಿ ಅಭಿವೃದ್ಧಿ ಕಾಮಗಾರಿ ನಡೆಸುವ ಸಂಪೂರ್ಣ ಹೊಣೆಯನ್ನು ಹೊಂದಿರುತ್ತದೆ ಎಂದು ತಿಳಿಸಿದರು.

ಮುಂಗಾರು ಮಳೆಯ ಹಿನ್ನಲೆಯಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವುದು ಸೇರಿದಂತೆ ತುರ್ತು ಕಾಮಗಾರಿಗಳು ಹಾಗೂ ಆದ್ಯತೆಯ ಕಾಮಗಾರಿಗಳನ್ನು ಯೋಜನಾ ಅನುಷ್ಠಾನ ಘಟಕವು ಕೂಡಲೇ ನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಳೆಗಾಲದ ಸಂದರ್ಭದಲ್ಲಿ ನಗರದಲ್ಲಿ ನೀರು ನಿಲ್ಲುವ ಸಸಭೆಯಲ್ಲಿ ಅಭಿವೃದ್ಧಿ ಅಪರ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್, ಮುಖ್ಯ ಅಭಿಯಂತರ ಕೃಷ್ಣಮೂರ್ತಿ, ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನಾ ಅನುಷ್ಠಾನ ಘಟಕದ ಅಧಿಕಾರಿಗಳು ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕ್ಯಾನ್ ಫಿನ್ ಹೋಮ್ಸ್ ಲಿ.,

Can Fin Homes Ltd (Sponsor: CANARA BANK) HOME LOANS + DEPOSITS
ಜಯನಗರ ಶಾಖೆ

"ಸಜಿನಿ", ನಂ. 69, (ಹಳೆ ನಂ. 35), ನೆಲ ಮಹಡಿ
12ನೇ ಮುಖ್ಯ ರಸ್ತೆ, ಜಯನಗರ, 3ನೇ ಬ್ಲಾಕ್ ಬೆಂಗಳೂರು – 560 011,
ಮೊ: 7625079101, ಫೋನ್ : 080–26630501
E-mail Id: jayanagar@canfinhomes.com
CIN:L85110KA1987PLC008699

ಸ್ಥಿರಾಸ್ತಿಯ ಮಾರಾಟಕ್ಕಾಗಿ ಮಾರಾಟ ಸೂಚನೆ

[ನಿಯಮ 9(1)ರ ಅನ್ವಯ]

ಸೆಕ್ಯುರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ನಿಯಮ 9(1)ರ ನಿಬಂಧನೆಗಳನ್ನು ಓದಿಕೊಂಡಂತೆ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ಅನ್ವಯ ಸ್ಥಿರಾಸ್ತಿಯ ಇ–ಹರಾಜು ಮಾರಾಟ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ/ಜಾಮೀನುದಾರರಿಗೆ ಹಾಗೂ ಸಾಮಾನ್ಯವಾಗಿ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರವರಿಗೆ ಅಡಮಾನ /ಚಾರ್ಜ್ ಮಾಡಿರುವ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಯನ್ನು, ಕ್ಯಾನ್‌ಫಿನ್‌ಹೋಮ್ಸ್ ಲಿ., ಜಯನಗರ ಶಾಖೆ, ಇದರ ಅಧಿಕೃತ ಅಧಿಕಾರಿಯವರು ಭೌತಿಕವಾಗಿ ಸ್ವಾಧೀನಕ್ಕೆ ಪಡೆದುಕೊಂಡಿದ್ದು ಅವುಗಳನ್ನು **'ಎಲ್ಲಿ ಹೇಗಿದೆಯೊ ಹಾಗೆ'**, **'ಎಲ್ಲಿ ಏನಿದೆಯೋ ಹಾಗೆ'** ಮತ್ತು **'ಮತ್ತ್ಯಾವುದಾದರೂ ಅಲ್ಲಿ ಇದ್ದಲ್ಲಿ'** ಆಧಾರದ ಮೇಲೆ ಕ್ಯಾನ್‌ಫಿನ್‌ಹೋಮ್ಸ್ ಲಿ., ಇವರಿಗೆ ಸಾಲಗಾರರಾದ **ಶ್ರೀ ಶಿವರಾಮು ಸನಸ** ಮತ್ತು **ಶ್ರೀ ಕೆ. ಎಸ್. ವಿ. ರಘುಮಿತ್ರ, (ಜಾಮೀನುದಾರರು)** ಇವರಿಂದ ಬರಬೇಕಾದ ಬಾಕಿ ಮೊತ್ತ **ರೂ.23,00,000/–** (ರೂಪಾಯಿ ಇಪ್ಪತ್ತ ಮೂರು ಲಕ್ಷ ಮಾತ್ರ) ದಿನಾಂಕ 05.05.2026 ರಂತೆ ಮತ್ತು ಮುಂದಿನ ಬಡ್ಡಿ ಮತ್ತು ಸಾಂದರ್ಭಿಕ ಖರ್ಚು,ವೆಚ್ಚ ಇತ್ಯಾದಿಗಳ ವಸೂಲಿಗಾಗಿ ದಿನಾಂಕ **27.05.2026** ರಂದು ಮಾರಾಟ ಮಾಡಲಾಗುವುದು.

ಮೀಸಲು ಬೆಲೆ ರೂ. 33,00,000/– (ರೂಪಾಯಿ ಮೂವತ್ತ ಮೂರು ಲಕ್ಷ ಮಾತ್ರ) ಮತ್ತು **ಮುಂಗಡ ಠೇವಣಿ ರೂ.3,30,000/–** (ರೂಪಾಯಿ ಮೂರು ಲಕ್ಷ ಮೂವತ್ತು ಸಾವಿರ ಮಾತ್ರ)

ಸ್ಥಿರಾಸ್ತಿಯ ವಿವರ

ಬೆಂಗಳೂರು, ಬೆಂಗಳೂರು ದಕ್ಷಿಣ ತಾಲೂಕು, ಬೇಗೂರು ಹೋಬಳಿ, ದೊಡ್ಡತೋಗೂರು ಗ್ರಾಮ, ಇಲ್ಲಿ ಪರಿವರ್ತಿತ ಸರ್ವೆ ನಂ. 122/3 ಮತ್ತು 122/10ರಲ್ಲಿ ನಿರ್ಮಾಣವಾದ ಗ್ರೀನ್ ಹೌಸ್ ಲೇಔಟ್‌ನಲ್ಲಿನ ನಿವೇಶನ ನಂ. 151, 152 ಮತ್ತು 153 ರಲ್ಲಿ ನಿರ್ಮಾಣವಾದ ಶ್ರೀಕರ ವಾಸಾಸ್ ಎಂಬ ಕಟ್ಟಡದಲ್ಲಿನ ಫ್ಲಾಟ್ ನಂ. 308, 3ನೇ ಮಹಡಿ, ವಿಟ್ರಿಫೈಡ್ ನೆಲಹಾಸು ಮತ್ತು ಫ್ಲಷ್ ಬಾಗಿಲುಗಳು ಹಾಗೂ ಅಲ್ಯುಮೀನಿಯಂ ಕಿಟಕಿಗಳನ್ನು ಹೊಂದಿರುವ ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ಗಾಳಿಯಾಡುವ ಪ್ರದೇಶ ಸೆಟ್ ಬ್ಯಾಕ್ ಪ್ರದೇಶ, ಪಶ್ಚಿಮಕ್ಕೆ: ಕಾರಿಡಾರ್ ಮತ್ತು ಫ್ಲಾಟ್ ನಂ. 301, ಉತ್ತರಕ್ಕೆ: ಫ್ಲಾಟ್ ನಂ. 307, ದಕ್ಷಿಣಕ್ಕೆ: ಗಾಳಿಯಾಡುವ ಪ್ರದೇಶ ಸೆಟ್ ಬ್ಯಾಕ್ ಪ್ರದೇಶ.
ಋಣಭಾರಗಳು : ಏನೂ ಇಲ್ಲ.

ಮೇಲ್ಕಂಡ ಹರಾಜಿಗೆ ಸಂಬಂಧಿಸಿದ ನಿಯಮ ಮತ್ತು ನಿಬಂಧನೆಗಳ ವಿವರಗಳಿಗೆ ಕ್ಯಾನ್‌ಫಿನ್‌ಹೋಮ್ಸ್ ಲಿ., ಇವರ ಅಫೀಷಯಲ್ ವೆಬ್‌ಸೈಟ್ https://www.canfinhomes.com/SearchAuction.aspx ನಲ್ಲಿ ವೀಕ್ಷಿಸಬಹುದು. ಇ– ಹರಾಜಿನಲ್ಲಿ ಭಾಗವಹಿಸಲು ನೀಡಲಾದ ಲಿಂಕ್ www.auctionbazaar.com

ದಿನಾಂಕ : 05.05.2026
ಸ್ಥಳ : ಬೆಂಗಳೂರು

ಸಹಿ/–
ಅಧಿಕೃತ ಅಧಿಕಾರಿ
ಕ್ಯಾನ್ ಫಿನ್ ಹೋಮ್ಸ್ ಲಿ.,

ಕ್ಯಾನ್ ಫಿನ್ ಹೋಮ್ಸ್ ಲಿ.,

Can Fin Homes Ltd (Sponsor: CANARA BANK) HOME LOANS + DEPOSITS
ಅತ್ತಿಬೆಲೆ ಶಾಖೆ

ನಂ. 2, ತಿಲಕ್‌ನಗರ, ಮೊದಲ ಮಹಡಿ, ಭವೇನ್ ಕಾಂಪ್ಲೆಕ್ಸ್,
ವೆಂಕಟೇಶ್ವರ ಗಾರ್ಮೆಂಟ್ಸ್ ಹತ್ತಿರ ಆತ್ತಿಬೆಲೆ – 562 107,
ಫೋನ್ : 080-27844440,7625079245
e-mail:attibele@canfinhomes.com
CIN NO.L85110KA1987PLC008699

ಡಿಮ್ಯಾಂಡ್ ನೋಟೀಸ್

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ (ನಂ. 54ರ 2002) ಪ್ರಕರಣ 13(2)ರ ಅನ್ವಯ ನೋಟೀಸು

ಇವರಿಗೆ,
ಸಾಲಗಾರರು : ಶ್ರೀ ಚಂದ್ರಶೇಖರ್ ಸಿ (ಸಾಲಗಾರರು), ಫ್ಲಾಟ್ ನಂ. ಸಿ–308, ಬ್ಲಾಕ್ ಸಿ., 2ನೇ ಮಹಡಿ, ಗಾರ್ಡನ್ ರೆಸಿಡೆನ್ಸಿ, ಕಚನಾಯಕನಹಳ್ಳಿ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು.
ಮೇಲ್ಕಂಡ ನೀವು, ಕೆಳಗೆ ಸೂಚಿಸಿರುವ ನಿಮಗೆ ಸೇರಿರುವ ಆಸ್ತಿಯನ್ನು ಅಡಮಾನ ಮಾಡುವ ಮೂಲಕ ನಮ್ಮ ಶಾಖೆಯಿಂದ ಗೃಹ ಸಾಲವನ್ನು ಪಡೆದುಕೊಂಡಿದ್ದು, ದಿನಾಂಕ **05.05.2026** ರಂತೆ **ರೂ.31,48,776/–** (ರೂಪಾಯಿ ಮೂವತ್ತೊಂದು ಲಕ್ಷ ನಲವತ್ತೆಂಟು ಸಾವಿರದ ಏಳು ನೂರ ಎಪ್ಪತ್ತಾರು ಮಾತ್ರ) ಮತ್ತು ಒಪ್ಪಿದ ದರದಲ್ಲಿ ಮುಂದಿಯ ಬಡ್ಡಿಯೊಂದಿಗೆ, ಕ್ಯಾನ್ ಫಿನ್ ಹೋಮ್ಸ್ ಲಿ., ಇವರಿಗೆ ನಿಮ್ಮಿಂದ ಬಾಕಿ ಇರುತ್ತದೆ.

ಅಡಮಾನ ಮಾಡಿರುವ ಆಸ್ತಿಯ ವಿವರ

ಬೆಂಗಳೂರು ಜಿಲ್ಲೆ – 560 015, ಆನೇಕಲ್ ತಾಲೂಕು, ಜಿಗಣಿ ಹೋಬಳಿ, ಕಚನಾಯಕನಹಳ್ಳಿ ಗ್ರಾಮ, ಪೊಲೀಸ್ ಲೇಔಟ್, ಇಲ್ಲಿ ಸರ್ವೆ ನಂ. 108/2 ರಲ್ಲಿರುವ ಗಾರ್ಡನ್ ರೆಸಿಡೆನ್ಸಿ ಎಂಬ ಕಟ್ಟಡದಲ್ಲಿನ ಫ್ಲಾಟ್ ನಂ. ಸಿ–308, ಬ್ಲಾಕ್ ಸಿ, 2ನೇ ಮಹಡಿ, ಖಾತಾ ನಂ. 522/108/3, ಇ–ಖಾತಾ ನಂ. 150200103200821135, ನಿರ್ಮಿತ ಪ್ರದೇಶ 1089 ಚದರ ಅಡಿ, ಅವಿಭಜಿತ ಪಾಲು, 270 ಚದರ ಅಡಿ ಇಲ್ಲಿರುವ ಆಸ್ತಿ.
ಫ್ಲಾಟ್‌ನ ಚಕ್ಕುಬಂದಿ : ಪೂರ್ವಕ್ಕೆ: ಮೆಟ್ಟಲು ಮತ್ತು ಫ್ಲಾಟ್ ನಂ ಸಿ–301, ಪಶ್ಚಿಮಕ್ಕೆ: ಫ್ಲಾಟ್ ನಂ. ಸಿ–307, ಉತ್ತರಕ್ಕೆ : ಸೆಟ್ ಬ್ಯಾಕ್ ಮತ್ತು ಆಕಾಶಕ್ಕೆ ತೆರೆದ ಪ್ರದೇಶ, ದಕ್ಷಿಣಕ್ಕೆ : ಪ್ಯಾಸೇಜ್ ಮತ್ತು ಫ್ಲಾಟ್ ನಂ. ಸಿ–305,
ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ: ಸರ್ವೆ ನಂ. 108/2ರಲ್ಲಿರುವ ಜಮೀನು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಕೆರೆ ದಂಡೆ.

ಸರ್ಫೇಸಿ ಆಕ್ಟ್, 2002ರ ಸೆಕ್ಷನ್ 13(2)ರ ಅನ್ವಯ ರಿಜಿಸ್ಟರ್‌ಆದ ಡಿಮ್ಯಾಂಡ್ ನೋಟೀಸ್ ಅನ್ನು ನಮ್ಮ ದಾಖಲೆಗಳ ಪ್ರಕಾರ ಕೊನೆಯದಾಗಿ ತಿಳಿದಿರುವ ನಿಮ್ಮ ವಿಳಾಸಕ್ಕೆ ಕಳುಹಿಸಲಾಗಿದೆ. ಮಂಜೂರಾತಿಯ ನಿಯಮಗಳನ್ನು ನೀವು ಪಾಲಿಸಲು ವಿಫಲರಾಗಿರುವುದರಿಂದ ಎನ್‌ಹೆಚ್‌ಬಿಯ ಮಾರ್ಗದರ್ಶಿ ಸೂತ್ರಗಳ ಪ್ರಕಾರ **01.05.2026**ರಿಂದ ಖಾತೆಯನ್ನು ಅನುತ್ಪಾದಕ ಆಸ್ತಿಯೆಂದು ವರ್ಗೀಕರಿಸಲಾಗಿದೆ. ಸಾಲಗಾರರಿಗೆ ಮತ್ತು ಅವರ ಅಡಿಯಲ್ಲಿ ಕ್ಲೈಮ್ ಮಾಡುವ ಇತರರಿಗೆ ಈ ಮೂಲಕ ಕರೆ ನೀಡುವುದೇನೆಂದರೆ ಸದರಿ ಮೊತ್ತವನ್ನು ದಿನಾಂಕ **05.05.2026** ರಿಂದ ಒಪ್ಪಿದ ದರಗಳೊಂದಿಗೆ ಬಡ್ಡಿ ಮತ್ತು ಇತರ ವೆಚ್ಚಗಳನ್ನು ಈ ನೋಟೀಸಿನ ದಿನಾಂಕದಿಂದ 60 ದಿನಗಳ ಒಳಗೆ ಪಾವತಿಸಬೇಕು, ವಿಫಲರಾದಲ್ಲಿ ಸರ್ಫೇಸಿ ಆಕ್ಟ್‌ನ ಅನ್ವಯ ಸದರಿ ಭದ್ರತಾ ಸ್ವತ್ತುಗಳ ಮೇಲೆ ಕೆಳಸಹಿದಾರರು ಆಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಲು ಮುಂದಾಗಬಹುದೆಂಬುದನ್ನು ಗಮನಿಸಿ.

ದಿನಾಂಕ : 05.05.2026
ಸ್ಥಳ : ಅತ್ತಿಬೆಲೆ

ಸಹಿ/–
ಅಧಿಕೃತ ಅಧಿಕಾರಿ
ಕ್ಯಾನ್‌ಫಿನ್ ಹೋಮ್ಸ್ ಲಿ.,

ಮುಂಗಾರು ಆರಂಭ: ಮುಂಜಾಗ್ರತೆಗೆ ಸೂಚನೆ

ಬೆಂಗಳೂರು: ಜೂನ್‌ನಲ್ಲಿ ಮುಂಗಾರು ಆರಂಭವಾಗುವುದಕ್ಕೂ ಮುನ್ನ ಎಲ್ಲ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚಿಸಿದರು.

ಜಿಬಿಎ ವ್ಯಾಪ್ತಿಯ ಐದು ಪಾಲಿಕೆಗಳ ಎಲ್ಲ ಮುಖ್ಯ, ಉಪ ಮುಖ್ಯರಸ್ತೆ ಮತ್ತು ಇತರೆ ಪ್ರಮುಖ ರಸ್ತೆಗಳಲ್ಲಿ ಮಳೆ ನೀರು ಸರಾಗವಾಗಿ ಹರಿಯಲು ಚರಂಡಿ ಹೂಳು ತೆಗೆಯುವುದು, ಶೋಲ್ಡರ್ ಡ್ರೈನ್ಸ್ ಹಾಗೂ ಗ್ರೇಟಿಂಗ್ಸ್ ಸ್ವಚ್ಛತೆಯನ್ನು ಖಾತರಿಪಡಿಸಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ತಂಡಗಳನ್ನು ರಚಿಸಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳ ಕುರಿತು ಮೇ 8ರೊಳಗೆ ಚಿತ್ರ ಸಹಿತ ವರದಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

IN THE COURT OF THE ADDITIONAL CITY CIVIL AND SESSIONS JUDGE AT BANGALORE CITY

O.S. No. 2217/2025

BETWEEN: Muniyappa, aged about 80 years, S/o Late Doddananjaiah, Residing at No. 520, Peenya First stage, 2nd Block, Bangalore - 560 058. ... **PLAINTIFF**

AND: Ramakka and others ... **DEFENDANTS**

NOTICE/SUMMONS TO THE DEFENDANT

2. Jayarama, aged about 55 years, Son of Late Doddakapanaiah, Residing at 9th Cross, 4th Main, Ravindranagara, T. Dasarahalii, Bangalore - 560 057. **3. Ramesha**, aged about 53 years, Son of Late Doddakapanaiah, Residing at 9th Cross, 4th Main, Ravindranagara, T. Dasarahalli, Bangalore - 560 057. **4. Parvathi,** aged about 54 years, Wife of Lingaraju, Residing at 9th Cross, 4th Main, Ravindranagara, T. Dasarahalli, Bangalore - 560 057. **5. Saraswathi**, aged about 48 years, Wife of Ramesh, Daughter of Late Doddakapanaiah, Residing at 9th Cross, 4th Main, Ravindranagara, T. Dasarahalli, Bangalore - 560 057. **6. Siddagangamma**, aged about 46 years, Wife of Prasanna, Daughter of Late Doddakapanaiah, Residing at 9th Cross, 4th Main, Ravindranagara, T. Dasarahalli, Bangalore - 560 057. **7. Smt. Jayamma**, aged about 65 years, Wife of Chikkakapaniah. Residing at Totadaguddadahalli Village, Bangalore North Taluk, Bangalore - 560 073. **9. Mahesha**, Son of Chikkakapaniah, aged about 44 years, Residing at Chennanayakana Palya Village, Doddabidurukallu, Bangalore North Taluk, Bangalore - 560 073

SUIT FOR PARTITION PLAINTIFF INSTITUTED TO 1/3 SHARE OF THE SUIT SCHEDULE PROPERTY

You are hereby summoned to appear before this court on **09/06/2026** at **11:00 A.M** E£A in person or through advocate / pleader to answer the questions to the same. failing which the suit will be heard and determined as ex-parte.

SCHEDULE

All the piece and parcel of the property bearing site No. 569, Survey No. 119, Laggere Village, Peenya Grama Panchayat, Bangalore-560052, measuring East to west 40 feet and north to south 30 feet is bounded on: **East by:** Site No. 570, **West by:** Road, **North by:** Site No. 567, **South by:** Site No. 571

Given under my hand and seal of the court on this 02/05/2026

By Order of the Court, Senior Sheristedar, City Civil Court, Bengaluru

C.R. SUBRAMANYA, Advocate
Champalal Building, No. 83/84, II Main, Vinayaka Circle, Palace Guttahalli Post Malleswaram, Bangalore - 560 003

IN THE COURT OF THE 1st ADDL. CITY CIVIL JUDGE, AT BENGALURU (CCH-2)

ORIGINAL SUIT No.7279/2025

BETWEEN: 1) Mr.Syed Mujahid Bilal, S/o. Syed Mohsin, aged about 53 years, Residing at No.7, Flat No.3, United Vista Apartment, 1st Cross, Nagaraj Layout, Kavalabyrasandra, R.T. Nagar, Bengaluru-560 032 & another ... **PLAINTIFFS**

AND: Mr. H.M. Mujeeb Ahamed, S/o. H.P. Mohamed Khasim Sab, aged about 71 years, Duly represented by his GPA Holder: Sri.Vedachalam.K, S/o. Kodandapani, aged about 65 years, Residing at No.1000A, First Floor, Behind IIM, Vijaya Bank Layout, Bannerghatta Road, Bengaluru-560 076. ... **DEFENDANT**

SUMMONS TO DEFENDANT UNDER ORDER V RULE 20 OF CODE OF CIVIL PROCEDURE

Mr. H.M. Mujeeb Ahamed, S/o. H.P. Mohamed Khasim Sab, aged about 71 years, Residing at Hukunda, Uyyamballi Hobli, Kanakapura Taluk, Ramanagar District Bangalore District Duly represented by his GPA Holder: Sri.Vedachalam.K, S/o. Kodandapani, aged about 65 years, Residing at No.1000A, First Floor, Behind IIM, Vijaya Bank Layout, Bannerghatta Road, Bengaluru-560 076.

Whereas, plaintiffs have instituted the above suit against the defendant for specific performance of the contract, wherein a sale agreement entered into between plaintiffs and the defendant and defendant is required to register the sale deed over the Plaint Schedule Property.

You are hereby summon to appear in I ADDITIONAL CITY CIVIL JUDGE AT BANGALORE (CCH-02) in person or by pleader on the **13/07/2026** at **11:00 A.M** to answer the same, failing which the plaint will be determined of ex-parte.

SCHEDULE PROPERTY

All that piece and parcel of the site bearing Nos.25 and 26, formed in property Gramathana land bearing Sy.No.12, Khaneshumari No.230, V.P. Demand Register Sl.No.149, situated at Kavalbyrasandra village, Kasaba Hobli, Bangalore North Taluk, Bangalore, present within the limits of BBMP, Bangalore, both the sites are measuring East to West: 30 feet and North to South: 41 feet, totally measuring 1230 square feet, and both the site Nos.25 and 26 are jointly bounded on the: **East by:** Road, **West by:** Site Nos.27 and 28, **North by:** House Private Property, **South by:** House No.24,

Given under my hand and the seal of the court on this 30/04/2026

By order of the Court, Senior Sheristedar, City Civil Court, Bengaluru

JANARDHANA .G, Advocate
No.5.44/14, 1st Floor, K. Kamaraja Road, Bangalore-42

बैंक ऑफ़ बड़ौदा Bank of Baroda

ಬ್ಯಾಂಕ್ ಆಫ್ ಬರೋಡ, ROSARB - ಬೆಂಗಳೂರು ದಕ್ಷಿಣ, 4ನೇ ಮಹಡಿ, ವಿಜಯ ಟವರ್ಸ್
ಟ್ರಿನಿಟಿ ಸರ್ಕಲ್, ಬೆಂಗಳೂರು–560001. ದೂರವಾಣಿ ಸಂಖ್ಯೆ : 080–25011441, Ext. 128,
ಇ–ಮೇಲ್: sarbes@bankofbaroda.com

ಇ–ಹರಾಜು ಮಾರಾಟ ಸೂಚನೆ ಇ–ಹರಾಜು ಮಾರಾಟ ಪ್ರಕಟಣೆ ನಿಯಮ 6(2) & 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್)

ನಿಯಮ 2002ರ ಸೆಕ್ಯೂರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ. ಪ್ರೊವಿಜನ್ ನಿಯಮ 8(6) ಮತ್ತು (9)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನದಾರರಿಗೆ / ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್‌ಕ್ರೆಡಿಟರ್‌ಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ, ಬೆಂಗಳೂರು ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, ಸದರಿ ಆಸ್ತಿಗಳನ್ನು "ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ" ಮಾರಾಟ ಮಾಡಲಾಗುವುದು. ಸಾಲಗಾರರ / ಜಾಮೀನುದಾರರ / ಅಡಮಾನದಾರರ ಆಸ್ತಿಯ ವಿವರ / ಬಾಕಿ ಮೊತ್ತ / ಮೀಸಲು ಬೆಲೆ / ಹರಾಜಿನ ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಗುಣಾಂಕಗಳನ್ನು ಕೆಳಗೆ ವಿವರಿಸಿದೆ.

ಸಾಲಗಾರರ / ಅಡಮಾನದಾರ / ಜಾಮೀನುದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಯ / ಚರಾಸ್ತಿಯ ವಿವರಗಳು	ಬಾಕಿ ಮೊತ್ತ	ಇ–ಹರಾಜಿನ ದಿನಾಂಕ ಮತ್ತು ಸಮಯ	ಮೀಸಲು ಬೆಲೆ, ಇಎಂಡಿ ಬಿಡ್ ಗುಣಾಂಕ ಮೊತ್ತ	ಸ್ವಾಧೀನದ ರೀತಿ (ರಚನಾತ್ಮಕವಾಗಿ/ ಭೌತಿಕವಾಗಿ)	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
1) ಶ್ರೀ ಮೊಹಮ್ಮದ್ ಆಜಂ ಹುಸೇನ್ ಬಿನ್ ಮೊಹಮ್ಮದ್ ಅಜಹರುಲ್, ಫ್ಲಾಟ್ ನಂ. 306, 3ನೇ ಮಹಡಿ, 'ಡಿ' ಬ್ಲಾಕ್, ಪೃಥ್ವಿ ರಾಯಲ್ ಅಪಾರ್ಟ್‌ಮೆಂಟ್ಸ್, ಗೊಟ್ಟಿಗೆರೆ, ಉತ್ತರಹಳ್ಳಿ ಹೋಬಳಿ, ಬೆಂಗಳೂರು–560076. 2) ಶ್ರೀಮತಿ ರೌನಕ್ ಜಹಾನ್ ಕೋಂ. ಶ್ರೀ ಮೊಹಮ್ಮದ್ ಆಜಮ್ ಹುಸೇನ್, ಫ್ಲಾಟ್ ನಂ. 306, 3ನೇ ಮಹಡಿ, 'ಡಿ' ಬ್ಲಾಕ್, ಪೃಥ್ವಿ ರಾಯಲ್ ಅಪಾರ್ಟ್‌ಮೆಂಟ್ಸ್, ಗೊಟ್ಟಿಗೆರೆ, ಉತ್ತರಹಳ್ಳಿ ಹೋಬಳಿ, ಬೆಂಗಳೂರು–560076. 3) ಶ್ರೀ ಗೋಪಾಲಕೃಷ್ಣ .ಆರ್ ಬಿನ್ ರಾಮಕೃಷ್ಣಯ್ಯ (ಜಾಮೀನುದಾರರು), ನಂ. 187, 4ನೇ ಕ್ರಾಸ್, ಚಿಕ್ಕಸ್ವಾಮಿ ಬಡಾವಣೆ, ಜರಗನಹಳ್ಳಿ, ಜೆ.ಪಿ. ನಗರ 6ನೇ ಹಂತ, ಬೆಂಗಳೂರು–560078.	**ಶೆಡ್ಯೂಲ್ "ಎ" ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಂತೆ ಭೂಮಿಯ ಪರಿವರ್ತಿತ ಸರ್ವೆ ನಂ. 43 (ಆದೇಶ ಸಂಖ್ಯೆ ಎಎಲ್‌ಎನ್ (ಎಸ್.ಯು) ಎಸ್‌ಆರ್ 174/2010–11, ದಿನಾಂಕ 03.05.2011), ವಿಸ್ತೀರ್ಣ 1 ಎಕರೆ 14 ಗುಂಟೆಗಳು, ಅದರಲ್ಲಿ 4 ಗುಂಟೆಗಳು ಖರಾಬ್, ಇದು ಗೊಟ್ಟಿಗೆರೆ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದೆ, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿದೆ ಮತ್ತು **ಚಕ್ಕುಬಂದಿ : ಪೂರ್ವಕ್ಕೆ :** ಮರು ಸರ್ವೆ ನಂ. 61 (ಕ್ವಾರಿ), **ಪಶ್ಚಿಮಕ್ಕೆ :** ಖಾಸಗಿ ಆಸ್ತಿ, **ಉತ್ತರಕ್ಕೆ :** ಸರ್ವೆ ನಂ. 44, **ದಕ್ಷಿಣಕ್ಕೆ :** ಹಿಮಗಿರಿ ಆಸ್ತಿಗಳು. **ಶೆಡ್ಯೂಲ್ "ಬಿ" ಆಸ್ತಿ :** ಶೆಡ್ಯೂಲ್ 'ಎ' ಆಸ್ತಿಯಲ್ಲಿ 382.24 ಚದರ ಅಡಿ ಅವಿಭಾಜಿತ ಪಾಲು, ಹಕ್ಕು, ಶೀರ್ಷಿಕೆ ಮತ್ತು ಆಸಕ್ತಿ ಹಾಗೂ ಮಾಲೀಕತ್ವವನ್ನು ಹೊಂದಿದೆ. **ಶೆಡ್ಯೂಲ್ "ಸಿ" ಆಸ್ತಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಂತೆ ಫ್ಲಾಟ್ ನಂ. 306, ಡಿ–ಬ್ಲಾಕ್, 3ನೇ ಮಹಡಿ, "ಪೃಥ್ವಿ ರಾಯಲ್" ಅಪಾರ್ಟ್‌ಮೆಂಟನ್ನು, ಶೆಡ್ಯೂಲ್ "ಎ" ಆಸ್ತಿಯಲ್ಲಿ ನಿರ್ಮಿಸಲಾಗಿದೆ. ವಿಸ್ತೀರ್ಣ 1483.12 ಚದರ ಅಡಿ ಸೂಪರ್ ನಿರ್ಮಿತ ಪ್ರದೇಶ, ಮೂರು ಬೆಡ್ ರೂಮ್‌ಗಳು ಶೌಚಾಲಯದೊಂದಿಗೆ, ಲಿವಿಂಗ್ ಹಾಲ್, ಕಿಚನ್, ಬಾಲ್ಕನಿ, ವಿಟ್ರಿಫೈಡ್ ಟೈಲ್ಸ್ ನೆಲಹಾಸು ಮತ್ತು ಸಾಮಾನ್ಯ ಪ್ರದೇಶಗಳಲ್ಲಿ ಅನುಪಾತದ ಪಾಲನ್ನು ಒಳಗೊಂಡಂತೆ ಪ್ಯಾಸೇಜ್‌ಗಳು, ಲಾಬೀಸ್, ಲಿಫ್ಟ್‌ಗಳು, ಮೆಟ್ಟಿಲುಗಳು ಮತ್ತು ಸಾಮಾನ್ಯ ಬಳಕೆಯ ಇತರ ಪ್ರದೇಶಗಳು ಜೊತೆಗೆ ಒಂದು ಕವರ್ಡ್ ಕಾರ್‌ಪಾರ್ಕಿಂಗ್ ಜಾಗ ಮತ್ತು ಅಪಾರ್ಟ್‌ಮೆಂಟ್‌ನ **ಚಕ್ಕುಬಂದಿ : ಪೂರ್ವಕ್ಕೆ :** ಆಕಾಶಕ್ಕೆ ಬಿಟ್ಟ ಜಾಗ, **ಪಶ್ಚಿಮಕ್ಕೆ :** ಕಾರಿಡಾರ್ ಮತ್ತು ಫ್ಲಾಟ್ ನಂ. 301, **ಉತ್ತರಕ್ಕೆ :** ಫ್ಲಾಟ್ ನಂ. 307, **ದಕ್ಷಿಣಕ್ಕೆ :** ಆಕಾಶಕ್ಕೆ ಬಿಟ್ಟ ಜಾಗ.	1) ಆರ್‌ಓಎಸ್‌ಎಆರ್‌ಬಿ– ಬೆಂಗಳೂರು ದಕ್ಷಿಣ (ಮೂಲ ಶಾಖೆ – ಜಯನಗರ) 1. ಖಾತೆ ಸಂಖ್ಯೆ 07640600002760 ಒಟ್ಟು ರೂ. 48,56,886/- ದಿನಾಂಕ 30.04.2026 ರಂದು ಇದ್ದಂತೆ ಮತ್ತು ಮುಂದುವರಿದ ಬಡ್ಡಿ, ಸಾಂದರ್ಭಿಕ ವೆಚ್ಚಗಳು + ಇತರ ಶುಲ್ಕಗಳು ಅನ್ವಯಿಸುತ್ತದೆ.	ದಿನಾಂಕ 09.06.2026 ಮಧ್ಯಾಹ್ನ 2.00 ರಿಂದ ಸಂಜೆ 6.00 ಗಂಟೆಯವರೆಗೆ	ಆಸ್ತಿಯ ಮೀಸಲು ಬೆಲೆ ರೂ. 58,64,000/- ಇಎಂಡಿ ರೂ. 5,86,400/- ಬಿಡ್ ಗುಣಾಂಕ ಮೊತ್ತ ರೂ. 10,000/–	ಸಾಂಕೇತಿಕವಾಗಿ (ಭೌತಿಕ ಸ್ವಾಧೀನ ಪ್ರಕ್ರಿಯೆ ಹಂತದಲ್ಲಿದೆ)	ಅಧಿಕೃತ ಅಧಿಕಾರಿಯಿಂದ ಪೂರ್ವ ನೇಮಕಾತಿಯೊಂದಿಗೆ (06.05.2026ರ ನಂತರ)

ಹರಾಜಿನ ಬಗ್ಗೆ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ಈ ವೆಬ್‌ಸೈಟ್ ಲಿಂಕ್ https://www.bankofbaroda.in/e-auction ಮತ್ತು ಆನ್‌ಲೈನ್ ಆಕ್ಷನ್ ಪೋರ್ಟಲ್ Baanknet.com. ನ್ನು ನೋಡಿ ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ ಬಾಕಿ ಇರುವ ಶುಲ್ಕಗಳು, ವಿದ್ಯುತ್, ಇ–ಖಾತಾ ಶುಲ್ಕಗಳು ಮತ್ತು ಯಾವುದೇ ಇತರ ಕಾನೂನು ಶುಲ್ಕಗಳು ಅತಿ ಹೆಚ್ಚು ಬಿಡ್ ಮಾಡಿದವರು ಭರಿಸಬೇಕು, ಅಲ್ಲದೇ ನಿರೀಕ್ಷಿತ ಬಿಡ್‌ದಾರರು ಅಧಿಕೃತ ಅಧಿಕಾರಿ ದೂ. 080–25011441 ಮತ್ತು ಮೊಬೈಲ್ ನಂ. 9137960132 ಗೆ ಸಂಪರ್ಕಿಸಿ.

ದಿನಾಂಕ: 05.05.2026, ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ

ಸಂಯುಕ್ತ ಕರ್ನಾಟಕ

ಚುಟುಕು ಸುದ್ದಿ

ಅರಣ್ಯ ಇಲಾಖೆಗೆ ವಾಹನಗಳ ವಿತರಣೆ

ರಾಮನಗರ: ಟೊಯೋಟಾ ಕಿರ್ಲೋಸ್ಕರ್ ಮೋಟಾರ್‌ನ ಸಾಮಾಜಿಕ ಸೇವಾ ಕಾರ್ಯಗಳ ನಿರಂತರ ಬೆಂಬಲವನ್ನು ನಾವು ಪ್ರಾಮಾಣಿಕವಾಗಿ ಪ್ರಶಂಸಿಸುತ್ತೇವೆ. ತುರ್ತು ಸಂದರ್ಭಗಳಲ್ಲಿ, ವಿಶೇಷವಾಗಿ ಕಷ್ಟಕರವಾದ ಅರಣ್ಯದ ಭೂಪ್ರದೇಶಗಳಲ್ಲಿ ಕಾಡ್ಗಿಚ್ಚು, ಸೇರಿದಂತೆ ವನ್ಯ ಜೀವಿಗಳ ರಕ್ಷಣೆಯಲ್ಲಿ ಈ ವಾಹನಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಇಂತಹ ಸುಸಜ್ಜಿತ ವಾಹನಗಳು ಅರಣ್ಯ ಇಲಾಖೆಗೆ ಸೇರ್ಪಡೆಯಾಗುವ ಮೂಲಕ ತಳಮಟ್ಟದ ಸಂರಕ್ಷಣಾ ಪ್ರಯತ್ನಗಳನ್ನು ಬಲಪಡಿಸುತ್ತದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಕನಕಪುರದಲ್ಲಿ ನಡೆದ ಸಮಾರಂಭದಲ್ಲಿ ಟೊಯೊಟಾ ಕಿರ್ಲೋಸ್ಕರ್ ಮೋಟಾರ್ (ಟಿಕೆಎಂ) ತನ್ನ ಕಾರ್ಪೊರೇಟ್ ಪರಿಸರ ಜವಾಬ್ದಾರಿ (ಸಿಇಆರ್) ಉಪಕ್ರಮದ ಅಡಿಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ವಿಭಾಗಕ್ಕೆ ಎರಡು ವಿಶೇಷ ಸುಸಜ್ಜಿತವಾದ, ಛದ್ಮವೇಶದ ಟೊಯೊಟಾ ಹೈಲಕ್ಸ್ ವಾಹನಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಿ ಮಾತನಾಡಿ, ಟಿಕೆಎಂ ಅವರ ಸಾಮಾಜಿಕ ಕಾರ್ಯವನ್ನು ಶ್ಲಾಘಿಸಿದರು.

ಟಿಕೆಎಂನ ಮುಖ್ಯ ಸಂವಹನ ಅಧಿಕಾರಿ, ಯೋಜನಾ ಹಿರಿಯ ಉಪಾಧ್ಯಕ್ಷ ಮತ್ತು ರಾಜ್ಯ ವ್ಯವಹಾರಗಳ ಮುಖ್ಯಸ್ಥರಾದ ಸುದೀಪ್ ದಳವಿ ಮಾತನಾಡಿದರು.

ಪಶು ಔಷಧಿ ಮಳಿಗೆ ತೆರೆಯಲು ಅರ್ಜಿ ಆಹ್ವಾನ

ರಾಮನಗರ: ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಕೇಂದ್ರ ಪುರಸ್ಕೃತ ಯೋಜನೆಯಡಿ ಪಶು ಔಷಧಿ ಮಳಿಗೆಗಳನ್ನು ತೆರೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.ಬಿ-ಫಾರ್ಮ್ ಅಥವಾ ಡಿ-ಫಾರ್ಮ ವಿದ್ಯಾರ್ಹತೆ ಹೊಂದಿದ ಆಸಕ್ತಿಯುಳ್ಳ ಎಲ್ಲಾ ವರ್ಗದ ಯುವಕ ಮತ್ತು ಯುವತಿಯರು https://pashuaushadhi.dahd.gov.in ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಆಸಕ್ತರು ಹೆಚ್ಚಿನ ಮಾಹಿತಿಗೆ ತಾಲ್ಲೂಕಿನ ಮುಖ್ಯಪಶುವೈದ್ಯಾಧಿಕಾರಿ (ಆಡಳಿತ) ಯವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸುವಂತೆ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಉಪನಿರ್ದೇಶಕರು ಮನವಿ ಮಾಡಿದ್ದಾರೆ.

ಜಿಟಿಟಿಸಿ ಡಿಪ್ಲೋಮ ಕೋರ್ಸ್‌ಗೆ ಅರ್ಜಿ ಆಹ್ವಾನ

ದೇವನಹಳ್ಳಿ: ಜಿ.ಟಿ.ಟಿ.ಸಿ ಕೇವಲ ಸೈದ್ಧಾಂತಿಕ ಶಿಕ್ಷಣವಲ್ಲದೆ, ಕೈಗಾರಿಕೆಗಳಿಗೆ ಅಗತ್ಯವಿರುವ ಪ್ರಾಯೋಗಿಕ ಜ್ಞಾನಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ ಎಂದು ಜಿ.ಟಿ.ಟಿ.ಸಿ ದೇವನಹಳ್ಳಿ ಕೇಂದ್ರದ ಪ್ರಾಂಶುಪಾಲರಾದ ರವಿಚಂದ್ರ ತಿಳಿಸಿದರು.ಸುದ್ದಿಗಾರರೊಡನೆ ಮಾತನಾಡಿದ ಅವರು, ಜಿ.ಟಿ.ಟಿ.ಸಿ ತರಬೇತಿ ಪಡೆದವರು ಆಟೋಮೊಬೈಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಸುಲಭವಾಗಿ ಉದ್ಯೋಗ ಪಡೆಯಬಹುದು ಎಂದರು.ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಕೂಡಲೇ 9036144417, 9686268737, 9980956422, 8123866007, 9844801122.ಸಂಪರ್ಕಿಸಬಹುದು ಎಂದರು.

ಮನೆಯ ಬೀಗ ಮುರಿದು ಕಳವು

ಕನಕಪುರ: ಮನೆಯ ಹಿಂದಿನಿಂದ ಬಂದು ಬೀಗ ಮುರಿದು ಒಳನುಗ್ಗಿದ ಕಳ್ಳರು, ನಗದು ಹಾಗೂ ಲಕ್ಷಾಂತರ ರೂ ಮೌಲ್ಯದ ಚಿನ್ನಾಭರಣ ಕದ್ದು ಪರಾರಿಯಾಗಿರುವ ಘಟನೆ ಕನಕಪುರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಪಿಚ್ಚನಕೆರೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕೊನೆಯ ಮನೆಯ ನಾಗೇಶ್ ಮತ್ತು ಕುಟುಂಬದವರು ಕೆಂಗೇರಿ ಸಮೀಪದ ಅಂಚೆಪಾಳ್ಯದದಲ್ಲಿನ ಮೊಮ್ಮಗನ ಹುಟ್ಟುಹಬ್ಬಕ್ಕೆ ತೆರಳಿದ್ದ ವೇಳೆ ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಗಮನಿಸಿದ ಕಳ್ಳರು ಮನೆಯ ಹಿಂದಿನಿಂದ ಬಂದು ಮನೆಯ ಬಾಗಿಲಿನ ಡೋರ್ ಲಾಕ್‌ನ್ನು ಮುರಿದು ಒಳನುಗ್ಗಿ 90 ಸಾವಿರ ನಗದು, ಸುಮಾರು 9 ಗ್ರಾಂ. ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ.

ಮನೆಯ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿ, ಕಾಗದ ಪತ್ರಗಳನ್ನು ಪರಿಶೀಲಿಸಿರುವ ಕಳ್ಳರು, ಒಂದು ಕಪಾಟು, 2 ಬೀರುಗಳನ್ನು ಒಡೆದಿದ್ದಾರೆ. ಬಟ್ಟೆಗಳ ಮಧ್ಯೆ ಸೀರೆಯೊಳಗೆ ಬಚ್ಚಿಟ್ಟಿದ್ದ ಚಿನ್ನಾಭರಣಗಳನ್ನು ತೆಗೆದುಕೊಂಡು ಹೋಗಿಲ್ಲ, ಬೆಳ್ಳಿ ಸಾಮಾನುಗಳನ್ನು ಬಿಟ್ಟು ಹೋಗಿದ್ದಾರೆ ಎಂದು ಮನೆಯ ಮಾಲೀಕ ನಾಗೇಶ್‌ರವರ ಪತ್ನಿ ದೂರು ನೀಡಿದ್ದಾರೆ, ಗ್ರಾಮಾಂತರ ಪೊಲೀಸರು ಪ್ರಕಣ ದಾಖಲಿಸಿಕೊಂಡಿದ್ದಾರೆ.

ಸ್ಥಳಕ್ಕೆ ಸಬ್‌ಇನ್ಸ್‌ಪೆಕ್ಟರ್ ಆಕಾಶ್, ಬೆರಳಚ್ಚು ತಜ್ಞರು ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ರಾಮನಗರದ ರೈಲು ನಿಲ್ದಾಣದಲ್ಲಿ ಕೆ.ಎಸ್.ಆರ್. ಬೆಂಗಳೂರು-ಮೈಸೂರು ಒಡೆಯರ್ ಎಕ್ಸ್‌ಪ್ರೆಸ್ ರೈಲು ನಿಲುಗಡೆಗೆ ಹಸಿರು ನಿಶಾನೆ

ಚತುಷ್ಪಥ ರೈಲ್ವೇ ಹಳಿ ಅಭಿವೃದ್ಧಿ ಕಾಮಗಾರಿಗೆ ಕ್ರಮ

ಸಂ.ಕ. ಸಮಾಚಾರ, ರಾಮನಗರ

ಬೆಂಗಳೂರು-ಮೈಸೂರು ರೈಲ್ವೇ ಮಾರ್ಗದಲ್ಲಿ ನಾಲ್ಕು ಪಥದ ರೈಲ್ವೇ ಹಳಿ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸಲು ಕ್ರಮ ವಹಿಸಲಾಗುವುದು ಎಂದು ಕೇಂದ್ರ ರೈಲ್ವೇ ಮತ್ತು ಜಲಶಕ್ತಿ ರಾಜ್ಯ ಸಚಿವರಾದ ವಿ.ಸೋಮಣ್ಣ ತಿಳಿದರು.

ರಾಮನಗರದ ರೈಲು ನಿಲ್ದಾಣದಲ್ಲಿ ಕೆ.ಎಸ್. ಆರ್. ಬೆಂಗಳೂರು-ಮೈಸೂರು ಒಡೆಯರ್ ಎಕ್ಸ್‌ಪ್ರೆಸ್ ರೈಲು ನಿಲುಗಡೆಗೆ ಹಸಿರು ನಿಶಾನೆ ತೋರಿ ಮಾತನಾಡಿ, ಬೆಂಗಳೂರು-ಮೈಸೂರು ಒಡೆಯರ್ ಎಕ್ಸ್‌ಪ್ರೆಸ್‌ನ ನಿಲುಗಡೆಗೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಸದಸ್ಯರಾದ ಡಾ.ಮಂಜುನಾಥ್ ಅವರು ಕಾರಣೀಭೂತರು. ಈ ನಿಲುಗಡೆಯಿಂದಾಗಿ ಜಿಲ್ಲೆಯ ಸಾವಿರಾರು ಜನರಿಗೆ ಅನುಕೂಲವಾಗಲಿದೆ. ಬೆಳೆಯುತ್ತಿರುವ ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಾದ ರಾಮನಗರ, ಕೋಲಾರ, ತುಮಕೂರಿಗೆ ಆಸರೆಯಾಗಲಿದೆ ಎಂದರು.

ಸಾರ್ವಜನಿಕರ ಸುಗಮ ಸಂಚಾರಕ್ಕಾಗಿ ರೈಲ್ವೇ ಹಳಿಗಳ ಬಳಿ ಮೇಲ್ಸೇತುವೆ, ಕೆಳ ಸೇತುವೆ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಅದರಂತೆ ರಾಜ್ಯದ 64 ಮೇಲ್ಸೇತುವೆ, ಕೆಳಸೇತುವೆ ನಿರ್ಮಾಣಕ್ಕೆ 2,900 ಕೋಟಿ ರೂ.ಗಳನ್ನು ವಿನಿಯೋಗಿಸಲಾಗಿದೆ. ರಾಜ್ಯದ ಪ್ರತೀ ವರ್ಷದ ಕೇಂದ್ರದ ಆಯವ್ಯಯದಲ್ಲಿ ಕರ್ನಾಟಕ ರಾಜ್ಯದ ರೈಲ್ವೇ ಅಭಿವೃದ್ಧಿ ಕಾಮಗಾರಿಗಳಿಗೆ 700ಕ್ಕೂ ಹೆಚ್ಚು ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ ಎಂದು ಹೇಳಿದರು.ರೈಲ್ವೇ ಬಜೆಟ್ ಅನ್ನು ಸಾಮಾನ್ಯ ಬಜೆಟ್‌ಗೆ ವಿಲೀನಗೊಳಿಸಿದಾಗಿಂದ ರೈಲ್ವೇ ಇಲಾಖೆಗೆ ಹೆಚ್ಚು ಅನುದಾನ ನಿಗದಿಗೊಳಿಸಲಾಗುತ್ತಿದೆ. ಕಳೆದ 11 ವರ್ಷಗಳಲ್ಲಿ ರೈಲ್ವೇ ಇಲಾಖೆಯಲ್ಲಿ ಸಾವಿರಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ. ಅದರೊಂದಿಗೆ ಕಳೆದ 30-40 ವರ್ಷಗಳಿಂದ ನೆನಗುದಿಗೆ ಬಿದ್ದಿದ್ದ ಹಲವಾರು ರೈಲ್ವೇ ಕಾಮಗಾರಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಿದರು.ಬೆಂಗಳೂರು-ರಾಮನಗರ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ, ರಾಮನಗರ ರೈಲ್ವೇ ನಿಲ್ದಾಣವನ್ನು 11 ಕೋಟಿ ರೂ.ಗಳ ಮೊತ್ತದಲ್ಲಿ, ಚನ್ನಪಟ್ಟಣ 12 ಕೋಟಿ ರೂ.ಗಳ ಮೊತ್ತದಲ್ಲಿ ಮೇಲ್ದರ್ಜೆಗೇರಿಸಲಾಗುತ್ತಿದೆ ಹಾಗೂ ಬಿಡದಿ ರೈಲ್ವೇ ನಿಲ್ದಾಣವನ್ನು ಟಯೋಟ ಕಿರ್ಲೋಸ್ಕರ್ ಅವರ ಸಹಕಾರದೊಂದಿಗೆ ಮೇಲ್ದರ್ಜೆಗೇರಿಸಲಾಗುವುದು ಎಂದರು.ದೇಶ ಅಭಿವೃದ್ಧಿಯಾಗಬೇಕಾದರೆ ರಾಜ್ಯ, ಜಿಲ್ಲೆ, ತಾಲ್ಲೂಕು ಅಭಿವೃದ್ಧಿಯಾಗಬೇಕೆಂಬುದು ಪ್ರಧಾನ ಮಂತ್ರಿಯವರ ದೂರದೃಷ್ಟಿ ಚಿಂತನೆಯಾಗಿದೆ. ರೈಲ್ವೇ ಸುರಕ್ಷತೆಗಾಗಿ ಆಯವ್ಯಯದಲ್ಲಿ 1,13,000 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ ಎಂದು ಹೇಳಿದರು.

ರಾಮನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಚ್.ಎ.ಇಕ್ಬಾಲ್ ಹುಸೇನ್ ಅವರು ಮಾತನಾಡಿ, ಹಲವಾರು ವರ್ಷಗಳ ಹೋರಾಟದ ಫಲವಾಗಿ ಬೆಂಗಳೂರು-ಮೈಸೂರು ಒಡೆಯರ್ ಎಕ್ಸ್‌ಪ್ರೆಸ್ ರೈಲು ನಿಲುಗಡೆಗೆ ಚಾಲನೆ ನೀಡಿರುವುದು ಅಭಿನಂದನಾರ್ಹ, ನಮ್ಮದೇ ಜಿಲ್ಲೆಯವರಾದ ವಿ.ಸೋಮಣ್ಣ ಅವರ ಕಾಳಜಿಯಿಂದಾಗಿ ಈ ಕಾರ್ಯವಾಗಿದೆ ಎಂದರು.

ಸಾರಿಗೆ, ಮುಜರಾಯಿ ಇಲಾಖೆ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗಾರೆಡ್ಡಿ, ರಾಮನಗರ ನಗರಸಭೆ ಅಧ್ಯಕ್ಷರಾದ ಕೆ.ಶೇಷಾದ್ರಿ (ಶಶಿ), ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಎ.ಬಿ.ಚೇತನ್ ಕುಮಾರ್, ಜಿಲ್ಲಾಧಿಕಾರಿ ಯಶವಂತ್ ವಿ.ಗುರುಕರ್, ರೈಲ್ವೇ ವಿಭಾಗೀಯ ಅಧಿಕಾರಿ (ಎಡಿಎಲ್‌ಎಂ) ಪ್ರವೀಣ್ ಕಾತರಕಿ ಇತರರಿದ್ದರು.

> ದಶಕಗಳ ಕನಸಾದ ಒಡೆಯರ್ ರೈಲು ರಾಮನಗರದ ನಿಲುಗಡೆ ಇಂದು ನನಸಾಗಿದೆ. ಇದು ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲಾಗಿದ್ದು, ಅದು ರಾಮನಗರದಲ್ಲಿ ನಿಲ್ಲಲು ಸಾಕಷ್ಟು ಶ್ರಮಿಸಬೇಕಾಯಿತು. ಬೆಂಗಳೂರು-ಮೈಸೂರು ನಡೆವೆ ಪ್ರತೀ ದಿನ 47 ರೈಲುಗಳು ಸಂಚರಿಸಲಿದೆ. ಇಂತಹ ಸಂದರ್ಭದಲ್ಲಿ ಸೂಪರ್‌ಫಾಸ್ಟ್ ರೈಲನ್ನು ರಾಮನಗರದಲ್ಲಿ ನಿಲುಗಡೆ ಮಾಡಲು ಸುರಕ್ಷತಾ ಕ್ರಮಗಳು ಅಗತ್ಯ.
>
> ▪ ಡಾ. ಸಿ.ಎನ್.ಮಂಜುನಾಥ್ | ಸಂಸದರು

ಪಂಚರಾಜ್ಯ ಚುನಾವಣೆಯಲ್ಲಿ ಗೆಲುವು: ಬಿಜೆಪಿಯಿಂದ ಸಂತಸ

ಸಂ.ಕ. ಸಮಾಚಾರ, ದೇವನಹಳ್ಳಿ: ಪಶ್ಚಿಮ ಬಂಗಾಳ, ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿ ಅಧಿಕಾರ ಪಡೆದಿರುವುದಕ್ಕೆ ದೇವನಹಳ್ಳಿ ಬಿಜೆಪಿ ಘಟಕದಿಂದ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮಾಚರಣೆ ಮಾಡಲಾಗಯಿತು.

ದೇವನಹಳ್ಳಿ ಪಟ್ಟಣದ ಭಾರತೀಯ ಜನತಾ ಪಾರ್ಟಿ ಕಚೇರಿಯ ಮುಂಭಾಗದಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಮಹಿಳಾ ಪದಾಧಿಕಾರಿಗಳೊಂದಿಗೆ ಸಂಭ್ರಮಾಚರಣೆಯಲ್ಲಿ ಭಾಗವಹಿಸಿದ ಬೆಂಗಳೂರು ಗ್ರಾಮಾಂತರ ಬಿಜೆಪಿ ಜಿಲ್ಲಾಧ್ಯಕ್ಷ ರಾಮಕೃಷ್ಣಪ್ಪ ಮಾತನಾಡಿ, ಕಾಂಗ್ರೆಸ್ ಪಕ್ಷದ ಆಡಳಿತ ವಿರುವ ರಾಜ್ಯಗಳಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ ಹಾಗಾಗಿ ದೇಶದ್ಯಂತ ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿ ದೇಶದಲ್ಲಿ ಪ್ರಚಂಡ ಬಹುಮತ ನೀಡಿ ಆಶೀರ್ವಾದ ಮಾಡಿರುವುದು ಸಂವಿಧಾನದ ಗೆಲುವೆಂದು ಸ್ಪಷ್ಟ ವಾಗುತ್ತದೆ. ಮುಂದಿನ ದಿನಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಯಲ್ಲೂ ಬಿಜೆಪಿ ಬಾವುಟವನ್ನು ಹಾರಿಸುವುದರಲ್ಲಿ ಸಂದೇಹವಿಲ್ಲ ಎಂದರು.

ಈ ವೇಳೆ ದೇವನಹಳ್ಳಿ ಮಂಡಲದ ಅಧ್ಯಕ್ಷ ಅಂಬರೀಷ್ ಮಾತನಾಡಿದರು. ಮಾಜಿ ಶಾಸಕ ಚಂದ್ರಣ್ಣ, ಬಿಜೆಪಿ ಜಿಲ್ಲಾಧ್ಯಕ್ಷ ರಾಮಕೃಷ್ಣಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗವೇಣಿ, ಮುಖಂಡರಾದ ಬುಳ್ಳಹಳ್ಳಿ ರಾಜಪ್ಪ, ಅಶ್ವಥ್ ನಾರಾಯಣ್, ಬಿ.ಕೆ.ನಾರಾಯಣಸ್ವಾಮಿ, ಅನೀಲ್, ಕದಿರಪ್ಪ, ಅಮರ ನಾರಾಯಣ್, ವೆಂಕಟೇಗೌಡ, ವಿಜಯಪುರ ವೆಂಕಟೇಶ್, ಯಶೋಧ, ತಾಯಮ್ಮ, ಪ್ರೇಮ, ನಯನ, ಪ್ರಭಾಕರ್ ಸೇರಿದಂತೆ ಇತರರು ಹಾಜರಿದ್ದರು.

ಪ.ಬಂ. ಅಸ್ಸಾಂ ಚುನಾವಣಾ ಫಲಿತಾಂಶ ರಾಜ್ಯಕ್ಕೆ ದಿಕ್ಸೂಚಿ

ಸಂ.ಕ. ಸಮಾಚಾರ, ವಿಜಯಪುರ

ಪಂಚರಾಜ್ಯಗಳ ಚುನಾವಣೆಯಲ್ಲಿ, ಮೂರು ರಾಜ್ಯಗಳಲ್ಲಿ ಬಿಜೆಪಿ ಪಕ್ಷಕ್ಕೆ ಮತದಾರರು ಕೊಟ್ಟಿರುವ ಸ್ಪಷ್ಟ ಬಹುಮತವು, ಮುಂಬರುವ ಕರ್ನಾಟಕ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯಾಗಿದೆ ಎಂದು ಬಿಜೆಪಿ ಟೌನ್ ಅಧ್ಯಕ್ಷ ವೆಂಕಟೇಶ್ ಪ್ರಭು ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಶಿವಗಣೇಶ ಸರ್ಕಲ್‌ನಲ್ಲಿ ಆಯೋಜಿಸಿದ್ದ ವಿಜಯಯೋತ್ಸವ ಕಾರ್ಯಕ್ರಮದಲ್ಲಿ, ಅವರು ಮಾತನಾಡಿದರು. ದೇಶದಲ್ಲಿ, ಆಡಳಿತ ನಡೆಸಿದ್ದ ಕಾಂಗ್ರೆಸ್ ಸರಕಾರದ ದುರಾಡಳಿತದ ಪರಿಣಾಮವಾಗಿ ಕೆಲ ರಾಜ್ಯಗಳಲ್ಲಿ ಉಂಟಾಗಿದ್ದ ಅರಾಜಕತೆಯನ್ನು ಜನರು, ಚುನಾವಣೆಯ ಮುಖಾಂತರ ತೊಡೆದು ಹಾಕಿದ್ದಾರೆ ಎಂದರು. ಬಿಜೆಪಿ ಮಾಜಿ ಓಬಿಸಿ ಅಧ್ಯಕ್ಷ ಕನಕರಾಜು, ಬಿಜೆಪಿ ಮುಖಂಡ ರವಿಕುಮಾರ್, ಮುಖಂಡರಾದ ಅಜಿತ್, ರಾಮಕೃಷ್ಣ ಹೆಗಡೆ, ಮಾತನಾಡಿದರು.

ಬಿಜೆಪಿ ಟೌನ್ ಉಪಾಧ್ಯಕ್ಷ ಸಿ.ಮುನಿಕೃಷ್ಣಪ್ಪ, ಪ್ರಧಾನ ಕಾರ್ಯದರ್ಶಿ ಶಾಮಣ್ಣ, ಕಾರ್ಯದರ್ಶಿ ರಾಜಪ್ಪ, ತಾಲೂಕು ಉಪಾಧ್ಯಕ್ಷ ರಾಮುಭಗವಾನ್, ಮಾಜಿ ಪ್ರಧಾನ ಕಾರ್ಯದರ್ಶಿ ಡಿ.ಎಂ.ಮುನೀಂದ್ರ, ಮಂಜುನಾಥ್, ನಾಗಣ್ಣ, ವೀಣಾ, ಪ್ರೇಮಾ, ಭಾಗ್ಯಮ್ಮ, ತಾಯಮ್ಮ, ದಿವ್ಯಶ್ರೀ, ಸೊಣ್ಣೇಗೌಡ, ಸುಬ್ಬಣ್ಣ, ಗೋಪಿ, ಶಿವಕುಮಾರ್, ಪವನ್, ಚಂದ್ರಣ್ಣ, ವರದರಾಜು, ಹರೀಶ್, ರಮೇಶ್, ರಕ್ಷಿತ್, ಜೆ.ಆರ್.ಮಂಜುನಾಥ್, ಚಂದ್ರಶೇಖರ್, ಸುಪ್ರೀತ್, ಸುರೇಶ್, ನಾರಾಯಣಸ್ವಾಮಿ, ಮಂಜುನಾಥ್, ಬುಲೆಟ್ ರಾಮಚಂದ್ರಪ್ಪ, ಸೃಜನ್, ಯಲಿಯೂರು ತ್ಯಾಗರಾಜ್, ಮುಂತಾದವರು ಹಾಜರಿದ್ದರು.

ಜನನ ಮರಣ ನೋಂದಣಿ ಶೇ. 100 ಪ್ರಗತಿಗೆ ಸೂಚನೆ

ಸಂ.ಕ. ಸಮಾಚಾರ, ರಾಮನಗರ

ಜಿಲ್ಲೆಯಲ್ಲಿ ಜನನ ಮರಣ ನೋಂದಣಿಯನ್ನು ಶೇ. 100ರಷ್ಟು ಸಾಧಿಸಲು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕು ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಆರ್.ಚಂದ್ರಯ್ಯ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜನನ ಮರಣ ನೋಂದಣಿ ಕುರಿತು ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾನತಾಡಿ, ಜನನ, ಮರಣ ಘಟನೆಗಳನ್ನು ಘಟಿಸಿದ 21 ದಿನಗಳೊಳಗಾಗಿ ವಿಳಂಬಕ್ಕೆ ಆಸ್ಪದವಿಲ್ಲದಂತೆ ನೋಂದಾಯಿಸಿಕೊಳ್ಳಲು ಪಟ್ಟಣ ಹಾಗೂ ಗ್ರಾಮೀಣ ಪ್ರದೇಶದ ಸಾರ್ವಜನಿಕರಲ್ಲಿ ಈ ಬಗ್ಗೆ ಸೂಕ್ತವಾದ ಅರಿವು ಮೂಡಿಸಬೇಕು ಎಂದವರು ತಾಕೀತು ಮಾಡಿದರು.

ಜಿಲ್ಲೆಯಲ್ಲಿ 2024ರ ಸಾಲಿನಲ್ಲಿ 9,493 ಜನನ ಘಟನೆಗಳು 10,486 ಮರಣ ಘಟನೆಗಳು 2025 ಸಾಲಿನಲ್ಲಿ 10,207 ಜನನ ಘಟನೆಗಳು, 10,514 ಮರಣ ಘಟನೆಗಳು ಹಾಗೂ 2026ರ ಜನವರಿಯಿಂದ ಏಪ್ರಿಲ್ ಮಾಹೆಯವರೆಗೆ 3,153 ಜನನ ಘಟನೆಗಳು, 3,393 ಮರಣ ಘಟನೆಗಳಾಗಿವೆ ಎಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಸುನೀಲ್ ಕುಮಾರ್ ಅವರು ಸಭೆಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮಾಗಡಿ ತಾಲೂಕು ಯೋಜನಾಧಿಕಾರಿ ವೆಂಕಟರಾಮು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯ ಸಹಾಯಕ ನಿರ್ದೇಶಕರಾದ ಮಹೇಶ್, ಕಾವ್ಯ, ಸಂಬಂಧಿಸಿದ ಅಧಿಕಾರಿಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ದೇಶವನ್ನಾಳಿದ ವಹ್ನಿಕುಲ ಕ್ಷತ್ರಿಯ ಸಮಾಜ ಮುಖ್ಯವಾಹಿನಿಗೆ ಬರಲಿ

ದೊಮ್ಮಸಂದ್ರ: ವಹ್ನಿಕುಲ ಕ್ಷತ್ರಿಯ ಸಮಾಜ ಈ ದೇಶವನ್ನು ಆಳಿದ ಇತಿಹಾಸವುಳ್ಳ ಜನಾಂಗ, ಎಲ್ಲಾ ಸಮುದಾಯಗಳಂತೆ ಮುಖ್ಯವಾಹಿನಿಗೆ ಬರಲು ಇಂತಹ ಕ್ರೀಡಾಕೂಟಗಳು ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ನಡೆಯುತ್ತಿರಬೇಕೆಂದು ಆನೇಕಲ್ ತಾಲ್ಲೂಕಿನ ಬಿಜೆಪಿ ಮುಖಂಡರಾದ ಹುಲ್ಲಹಳ್ಳಿ ಶ್ರೀನಿವಾಸ್ ತಿಳಿಸಿದರು.

ದೊಮ್ಮಸಂದ್ರದ ಇನ್ವಿಕ್ಟಾ ಕ್ರಿಕೆಟ್ ಆಟದ ಮೈದಾನದಲ್ಲಿ ಮೇ 1ರಿಂದ 4ರವರೆಗೆ ನಡೆದ ಆನೇಕಲ್ ತಾಲ್ಲೂಕು ವಹ್ನಿಕುಲ ಕ್ಷತ್ರಿಯರ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿ ಸಮಾರೋಪದಲ್ಲಿ ವಿಜೇತ ತಂಡಕ್ಕೆ ಬಹುಮಾನ ವಿತರಣೆ ಮಾಡಿ ಮಾತನಾಡಿದರು. ಕರ್ನಾಟಕ ರಾಜ್ಯ ವಹ್ನಿಕುಲ ಕ್ಷತ್ರಿಯ ಸಂಘದ ಉಪಾಧ್ಯಕ್ಷರಾದ ಮಾಜಿ ಸೈನಿಕ ವೇಣು ಅವರ ಸಾರಥ್ಯದಲ್ಲಿ, ವಹ್ನಿಕುಲ ಕ್ಷತ್ರಿಯ ಗುರುಪೀಠದ ಮಾಠಾಧಿಪತಿ ಶ್ರೀಪ್ರಣವಾನಂದ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಪಂದ್ಯ ಆಯೋಜಿಸಲಾಗಿತ್ತು.ಕುರುಕ್ಷೇತ್ರ ಯುದ್ಧದಲ್ಲಿ ಬರುವ ಪಾತ್ರದಾರಿಗಳ ಹೆಸರಿನಲ್ಲಿ ಗುರುತಿಸಿಕೊಂಡಿರುವ 16 ತಂಡಗಳು ಪಾಲ್ಗೊಂಡಿದ್ದು, ವೀರ ಕ್ಷತ್ರಿಯಾಸ್ ಮಾಯಸಂದ್ರ ತಂಡ ಮೊದಲನೇ ಬಹುಮಾನ, ಪಾಂಡವ ವಾರಿಯರ್ಸ್ ಜಿಗಣಿ ತಂಡ ಎರಡನೇ ಸ್ಥಾನ ಪಡೆದುಕೊಂಡವು.ಸಂಘದ ರಾಜ್ಯಾಧ್ಯಕ್ಷ ವರ್ತೂರ್ ಗಿರೀಶ್, ಜಯರಾಮ್, ರಾಮಚಂದ್ರ, ಜಯಪ್ರಕಾಶ್, ಲಕ್ಷ್ಮೀನಾರಾಯಣ, ಪಿ.ಶ್ರೀನಿವಾಸ್, ಸಿ.ಎಂ.ಸುಬ್ರಮಣಿ, ಎ.ಸಿ.ಮಣಿ, ಸಿ.ರಾಮಚಂದ್ರ, ಶಿವರಾಜ್, ಗಣೇಶ್, ಗೋಪಿ, ಆಯೋಜಕರಾದ ಮುರಳಿ, ಆನಂದ್, ಸುನಿಲ್ ಕುಮಾರ್, ಮಂಜುನಾಥ, ಸಿ.ಎಂ.ಮಂಜುನಾಥ್, ಮುರಳಿ ಹಾಜರಿದ್ದರು.

ಮೇ 8: ಒಂದು ದಿನದ ನ್ಯಾಷನಲ್ ಕಾನ್ಫರೆನ್ಸ್

ಹಾರೋಹಳ್ಳಿ: ತಾಲೂಕಿನ ರಸ್ತೆ ಜಕ್ಕಸಂದ್ರ ಬಳಿಯಿರುವ ಜೈನ್ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿಭಾಗದ ವತಿಯಿಂದ ಮೇ 8ರ ಶುಕ್ರವಾರ ಕಾಲೇಜು ಆವರಣದಲ್ಲಿ ಒಂದು ದಿನದ ನ್ಯಾಷನಲ್ ಕಾನ್ಫರೆನ್ಸ್ ಆಯೋಜಿಸಲಾಗಿದೆ ಎಂದು ಸಿವಿಲ್ ವಿಭಾಗದ ಮುಖ್ಯಸ್ಥ ಡಾ.ಎ.ಕೆ.ದಾಸರಥಿ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿದ ಅವರು ಇಂದಿನ ಆಧುನಿಕ ಯುಗದ ವೇಗಕ್ಕೆ ಹೊಂದಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ರೂಪಿಸಲು ಫ್ಯೂಚರ್ ಆಫ್ ಸಿವಿಲ್ ಎಂಜಿನಿಯರಿಂಗ್ ಫ್ರಮ್ ಡಿಸೈನ್ ಟು ಡಿಜಿಟಲ್ ಎಕ್ಸಿಕ್ಯೂಷನ್ ಎಂಬ ಹೆಸರಿನಲ್ಲಿ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಎ.ಐ. ತಂತ್ರಜ್ಞಾನವು ಎಲ್ಲಾ ರಂಗಗಳಲ್ಲೂ ಆವರಿಸಿಕೊಳ್ಳುತ್ತಿದೆ. ಇದರ ಹೊರತಾಗಿ ಮುಂದಿನ ದಿನಗಳಲ್ಲಿ ಬದುಕು ಕಟ್ಟಿಕೊಳ್ಳುವುದು ಅಸಾಧ್ಯ ಎಂಬ ಪರಿಸರ ಸೃಷ್ಟಿಯಾಗುತ್ತಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ಸಿವಿಲ್ ಎಂಜಿನಿಯರಿಂಗ್‌ನಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡು ಡಿಜಿಟಲ್ ವ್ಯವಸ್ಥೆಯನ್ನು ವಿಕಸನಗೊಳಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಕೆಂದು ಕೋರಿದ್ದಾರೆ.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಹಿಳಾ ಕ್ರೀಡಾಕೂಟಕ್ಕೆ ಕ್ರಮ

ಸಂ.ಕ. ಸಮಾಚಾರ, ಹೊಸಕೋಟೆ

ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಅಗತ್ಯವಾದ ಎಲ್ಲಾ ರೀತಿಯ ಸಹಕಾರವನ್ನು ಪುರುಷರು ನೀಡಬೇಕಿದೆ. ಅದರಂತೆ ತಾಲೂಕಿನಲ್ಲಿ ಪ್ರತಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಮಹಿಳಾ ಕ್ರೀಡಾಕೂಟ ಆಯೋಜಿಸಿ ಮಹಿಳೆಯರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸವನ್ನು ಶಾಸಕ ಶರತ್ ಬಚ್ಚೇಗೌಡರ ಸಹಕಾರದಿಂದ ಮಾಡಲಾಗುವುದು ಎಂದು ಸಮಸ್ತ ಫೌಂಡೇಷನ್ ಸಂಚಾಲಕರು ಹಾಗೂ ಶಾಸಕ ಶರತ್ ಬಚ್ಚೇಗೌಡರ ಪತ್ನಿ ಪ್ರತಿಭಾ ಶರತ್ ತಿಳಿಸಿದರು.

ತಾಲೂಕಿನ ಕಸಬಾ ಹೋಬಳಿಯ ಚೊಕ್ಕಹಳ್ಳಿ ಗ್ರಾ.ಪಂ. ವ್ಯಾಪ್ತಿಯ ಮಲ್ಲಿಮಾಕನಪುರದಲ್ಲಿ ಮಹಿಳಾ ಕ್ರೀಡಾಕೂಟ ಹಾಗೂ ಮಕ್ಕಳ ಆಟೋಟ ಪರಿಕರಗಳನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಹೆಣ್ಣು ಹೆಣ್ಣನ್ನು ದೂಷಿಸುವ ಬದಲು ಪರಸ್ಪರ ಗೌರವಿಸುವಂತಾಗಬೇಕು.

ಈ ರೀತಿ ಗೌರವಿಸುವ ಕೆಲಸ ಆದಾಗ ಮಾತ್ರ ಹೆಣ್ಣು ಮತ್ತಷ್ಟು ಅಭಿವೃದ್ಧಿ ಪಥದತ್ತ ಸಾಗಲು ಸಾಧ್ಯ. ಮಹಿಳೆಯರು ಕುಟುಂಬದ ಅಭಿವೃದ್ಧಿಯಲ್ಲಿ ಸಿಂಹಪಾಲನ್ನು ವಹಿಸುತ್ತಿದ್ದಾರೆ ಎಂದು ಹೇಳಿದರು.

ಗ್ರಾ.ಪಂ. ಮಾಜಿ ಸದಸ್ಯ ತಮ್ಮಯ್ಯಗೌಡ ಮಾತನಾಡಿದರು.

ಪಿಡಿಒ ರವಿಚಂದ್ರ, ಗ್ರಾ.ಪಂ. ಆಡಳಿತಾಧಿಕಾರಿ ಸುಬ್ರಮಣಿ, ಮುಖಂಡರಾದ ವಿಜಯ್ ಕುಮಾರ್, ಬಚ್ಚೇಗೌಡ, ಮಿಥುನ್, ಉದಯ್‌ಕುಮಾರ್, ವರುಣ್, ಹಂಸ, ಗಾಯತ್ರಿ, ಅರುಣ, ವಾಣಿಶ್ರೀ ಇತರರು ಇದ್ದರು.

ಧಾರ್ಮಿಕ ಆಚರಣೆಯಿಂದ ಸಾಮಾಜಿಕ ಸಾಮರಸ್ಯ: ಶಾಸಕ ಶರತ್ ಬಚ್ಚೇಗೌಡ

ಸಂ.ಕ. ಸಮಚಾರ, ಸೂಲಿಬೆಲೆ

ದೇವರೊಬ್ಬ ನಾವು ಹಲವು ಎಂಬಂತೆ ಆಯಾ ಧರ್ಮಗಳಲ್ಲಿ ಅವರದೇ ನಂಬಿಕೆ ಆಡಗಿರುತ್ತದೆ ಅದನ್ನು ನಾವು ಧಾರ್ಮಿಕವಾಗಿ ಆಚರಣೆ ಮಾಡಿಕೊಂಡು ಬರುತ್ತಿದ್ದೇವೆ, ಅಚರಣೆಗಳಿಂದ ಸಾಮಾಜಿಕ ಸಾಮರಸ್ಯ ಹಾಗೂ ಜನತೆ ಸಮೃದ್ಧಿಯಾಗಬೇಕು ಎಂದು ಶಾಸಕ ಶರತ್ ಬಚ್ಚೇಗೌಡ ಹೇಳಿದರು.

ಸೂಲಿಬೆಲೆ ಹೋಬಳಿ ಗಿಡ್ಡಪ್ಪನಹಳ್ಳಿ ಗ್ರಾಮದಲ್ಲಿ ಛೋಟಿ ಬೀಬಿಮಾ ಗಂದಪುಷ್ಪ ಹಾಗೂ ಖವ್ವಾಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ದೇಶದ ಸುಭೀಕ್ಷೆಗಾಗಿ ಎಲ್ಲಾ ಧರ್ಮದವರು ಪ್ರಾರ್ಥನೆ ಮಾಡುವುದು ಅಗತ್ಯವಿದೆ, ಧಾರ್ಮಿಕ ಕಾರ್ಯಕ್ರಮಗಳು ಗ್ರಾಮದಲ್ಲಿ ಒಗ್ಗಟ್ಟು ಹಾಗೂ ಸಾಮರಸ್ಯ ಸಹ ಬಾಳ್ವೆ ನಡೆಸಲು ಪ್ರೇರಣೆಯಾಗಬೇಕು.

ದೇಶದಲ್ಲಿ ಓಟ್ ಮ್ಯಾಪಿಂಗ್ ಕಾರ್ಯಕ್ರಮ, ಎಸ್.ಐ.ಆರ್. ನೆಡೆಯುತ್ತಿದ್ದು ಎಲ್ಲಾ ಮತದಾರರು ತಮ್ಮ ಹೆಸರನ್ನು ನೊಂದಣಿ ಮಾಡಿಸಿಕೊಂಡು ಎಲ್ಲರೂ ಮತದಾರ ಪಟ್ಟಿಯಲ್ಲಿ ಪರಿಶೀಲಿಸಬೇಕು ಎಂದರು.

ಯುವ ಮುಖಂಡ ನಾರಾಯಣಗೌಡ ಮಾತನಾಡಿದರು. ಯುವ ಮುಖಂಡ ನಾರಾಯಣಗೌಡ, ವಕ್ಫ್‌ಬೋರ್ಡ್ ಮಾಜಿ ಆಧ್ಯಕ್ಷ ನಿಸಾರ್ ಅಹಮದ್, ಗ್ರಾಪಂ ಮಾಜಿ ಅಧ್ಯಕ್ಷರಾದ ಅಕ್ಬರ್ ಆಲಿಖಾನ್, ಉಸ್ಮಾನ್ ಖಾನ್, ಛೋಟುಖಾನ್, ಖಜಾಂಚಿ ಬಾಬಾಜಾನ್, ಅಲ್ತಾಫ್, ಫೈಜುಲ್ಲಖಾನ್, ಸನಾವುಲ್ಲಾ, ನೌಷದ್, ಆನಂದಪ್ಪ ಮೊದಲಾದವರಿದ್ದರು.

ಹೂವಿನ ಕರಗ ಮಹೋತ್ಸವ

ಸಂ.ಕ. ಸಮಾಚಾರ, ಕನಕಪುರ

ನಗರದ ಶ್ರೀಧರ್ಮರಾಯಸ್ವಾಮಿ ಮತ್ತು ದ್ರೌಪದಮ್ಮನವರ 29ನೇ ವರ್ಷದ ಹೂವಿನ ಕರಗ ಮಹೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ಧೂರಿಯಾಗಿ ನಡೆಯಿತು.

ಶ್ರೀಧರ್ಮರಾಯ ಹಾಗೂ ಆದಿಶಕ್ತಿ ದ್ರೌಪದಮ್ಮನವರ ಸೇವಾಸಮಿತಿ ಹಾಗೂ ವಹ್ನಿಕುಲ ಕ್ಷತ್ರಿಯ ಕುಲಬಾಂಧವರ ಆಶ್ರಯದಲ್ಲಿ ಇತ್ತೀಚೆಗೆ ಧಾರ್ಮಿಕ ವಿಧಿವಿಧಾನಗಳೊಂದಿಗೆ ದೇವಿಯ ಕರಗ ಮಹೋತ್ಸವವು ವಿಜೃಂಭಣೆಯಿಂದ ಜರುಗಿತು. ನಗರದ ಸಂಗಮ ರಸ್ತೆಯಲ್ಲಿರುವ ಧರ್ಮರಾಯಸ್ವಾಮಿ ದೇವಾಲಯದಿಂದ ಕರಗ ಮಹೋತ್ಸವವು ವಿವಿಧ ಕಲಾ ತಂಡ ಹಾಗೂ ಪಲ್ಲಕ್ಕಿ ಉತ್ಸವದೊಂದಿಗೆ ಪ್ರಾರಂಭಗೊಂಡು ಕೆಂಕೇರಮ್ಮ ದೇವಾಲಯ, ಹಲಸಿನಮರದೊಡ್ಡಿ, ಎಂ.ಜಿ ರಸ್ತೆ, ಮುನ್ಸಿಪ್ಲ ಹೈಸ್ಕೂಲ್ ಮೈದಾನದ ರಸ್ತೆ, ಎಸ್.ಕರಿಯಪ್ಪ ರಸ್ತೆ, ಕೋಟೆ ರಂಗನಾಥಸ್ವಾಮಿ ದೇವಾಲಯದಿಂದ ಕೋಡಿಹಳ್ಳಿ ರಸ್ತೆ ಮೂಲಕ ಕರಗ ಮಹೋತ್ಸವವು ಧರ್ಮರಾಯಸ್ವಾಮಿ ದೇವಾಲಯವನ್ನು ತಲುಪಿತು. ವಕ್ಕಲೇರಿ ರಘು ಮತ್ತು ಶ್ರೀನಿವಾಸ್ ರವರು ಕರಗ ಹೊತ್ತು ವಾದ್ಯ ಹಾಗೂ ತಮಟೆ ಮೇಳಕ್ಕೆ ಸರಿಯಾಗಿ ವಿವಿಧ ರೀತಿಯ ನೃತ್ಯವನ್ನು ಪ್ರದರ್ಶಿಸಿದರು. ಹೂವಿನ ಕರಗಕ್ಕೆ ನಗರದ ಪ್ರತಿ ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ದೇವಸ್ಥಾನದ ಪ್ರಧಾನ ಅರ್ಚಕರಾದ ಗೋಪಾಲ್, ಯೋಗ ನರಸಿಂಹಸ್ವಾಮಿ, ಯಜಮಾನರಾದ ಕೆ.ಬಿ.ಆರ್.ಸ್ವಾಮಿ, ಊರಗೌಡ ವೆಂಕಟರಮಣಸ್ವಾಮಿ, ಶಿವರಾಜು, ಕೃಷ್ಣ, ಪ್ರಕಾಶ್ ಇತರರಿದ್ದರು.

ನಾಳೆಯಿಂದ ಅಂತಾರಾಷ್ಟ್ರೀಯ ಬಹುಶಿಸ್ತೀಯ ಸಮ್ಮೇಳನ

ಸಂ.ಕ. ಸಮಾಚಾರ, ಚನ್ನಪಟ್ಟಣ

ರಾಜ್ಯದ ಪ್ರತಿಷ್ಠಿತ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಒಂದಾಗಿರುವ ಚನ್ನಪಟ್ಟಣ ಸರ್ಕಾರಿ ಪದವಿ ಕಾಲೇಜಿನ ವತಿಯಿಂದ ಇದೇ ಪ್ರಪ್ರಥಮ ಬಾರಿಗೆ ವಿಶೇಷ ವೃತ್ತಿಪರ ವಿವಿಧ ಅಧ್ಯಯನ ಕ್ಷೇತ್ರವನ್ನು ಒಳಗೊಂಡ ಎರಡು ದಿನದ ಅಂತಾರಾಷ್ಟ್ರೀಯ ಬಹುಶಿಸ್ತೀಯ ಸಮ್ಮೇಳನವನ್ನು ಮೇ 7 ಮತ್ತು 8 ರಂದು ನಗರದ ಶತಮಾನೋತ್ಸವ ಭವನದಲ್ಲಿ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ಉಷಾಮಾಲಿನಿ ತಿಳಿಸಿದರು.

ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ, ಈ ಹಿಂದೆ ರಾಜ್ಯ, ರಾಷ್ಟ್ರ ಮಟ್ಟದ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದ್ದು ಈ ಬಾರಿ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿ ಹಾಗೂ ಇಂದಿನ ಕಾಲಘಟಕ್ಕೆ ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರ ಮತ್ತು ಇಲಾಖೆ ಸಹಕಾರದೊಂದಿಗೆ ಕೃತಕ ಬುದ್ಧಿಮತ್ತೆ, ನೈತಿಕತೆ, ಮಾನವೀಯ ಮೌಲ್ಯಗಳು, ಉನ್ನತ ಶಿಕ್ಷಣದ ಭವಿಷ್ಯವನ್ನು ರೂಪಿಸುವ ವಿಷಯವನ್ನು ಒಳಗೊಂಡಂತೆ ಎರಡು ದಿನಗಳ ಕಾಲ ಈ ಸಮ್ಮೇಳನವನ್ನು ತಾಲ್ಲೂಕು ಕೇಂದ್ರದ ನಮ್ಮ ಕಾಲೇಜಿನ ವತಿಯಿಂದ ಆಯೋಜಿಸುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕಾಲೇಜಿನ ಮುಖ್ಯಸ್ಥರು ಹಾಗೂ ಸಮ್ಮೇಳನ ಕಾರ್ಯದರ್ಶಿ ಡಾ.ನಾಗರಾಜು ಜಿ.ಹೆಚ್., ಸಂಘಟನಾ ಕಾರ್ಯದರ್ಶಿ ಡಾ.ದೀಪ್ತಿ. ಎಸ್, ಡಾ.ಲಕ್ಷ್ಮಿದೇವಿ, ಕಾಲೇಜಿನ ವ್ಯವಸ್ಥಾಪಕ ಧನಂಜಯ ಸೇರಿದಂತೆ ಹಲವರಿದ್ದರು.



ಚುಟುಕು ಸುದ್ದಿ

ಮೇ 8: ಬಸವೇಶ್ವರ ಪುತ್ಥಳಿ ಅನಾವರಣಕ್ಕೆ ನಿರ್ಧಾರ

ರಾಮನಗರ: ಸಮ ಸಮಾಜದ ನಿರ್ಮಾಣ, ಪ್ರಜಾಪ್ರಭುತ್ವಕ್ಕೆ ನಾಂದಿ ಹಾಡಿದ ವಿಶ್ವಗುರು ಬಸವೇಶ್ವರರ ಪುತ್ಥಳಿಯನ್ನು ನಗರಸಭೆಯ ಆವರಣದಲ್ಲಿ ಸ್ಥಾಪಿಸಲಾಗುತ್ತಿದ್ದು. ಮೇ 8ರಂದು ಅನಾವರಣಗೊಳ್ಳಲಿದೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸ್ಥಳೀಯ ಸಂಸ್ಥೆಗಳಲ್ಲಿ ಬಸವೇಶ್ವರರ ಪುತ್ಥಳಿ ಸ್ಥಾಪನೆ ರಾಜ್ಯದಲ್ಲಿ ಇದೇ ಮೊದಲು. 2026–27ನೇ ಸಾಲಿನ ಆಯವ್ಯಯದಲ್ಲಿ ವ್ಯಕ್ತಪಡಿಸಿದಂತೆ ಮೇ 8ರ ಸಂಜೆ 4.30ಕ್ಕೆ ನಗರಸಭೆಯ ಮುಂಭಾಗ ಬಸವ ಜಯಂತಿಯನ್ನು ಆಚರಿಸಲಾಗುವುದು ಎಂದರು. ವಿಶ್ವದಲ್ಲಿ ಪ್ರಜಾಪ್ರಭುತ್ವಕ್ಕೆ ಅಡಿಗಲ್ಲು ಹಾಕಿದ ಬಸವಣ್ಣನವರು ಸಮ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡಿದರು. ಪ್ರಜಾಪ್ರಭುತ್ವದ ಆಶಯದ ಬೀಜ ಬಿತ್ತಿದರು. ಬಸವಣ್ಣನವರ ಚಿಂತನೆಗಳನ್ನು ಅವರ ಪುತ್ಥಳಿ ಸ್ಥಾಪಿಸುವುದರ ಮೂಲಕ ಮನುಕುಲಕ್ಕೆ ಸಂದೇಶ ರವಾನಿಸಲು ನಗರಸಭಾ ಸದಸ್ಯರೆಲ್ಲರು ಒಪ್ಪಿ, ಬಸವಣ್ಣನವರ ಪುತ್ಥಳಿಯನ್ನು ಸ್ಥಾಪಿಸಲಾಗುತ್ತಿದೆ ಎಂದರು. ನಗರಸಭೆಯ ಉಪಾಧ್ಯಕ್ಷೆ ಗಿರಿಜಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಮೊಹಮದ್ ಆರಿಫ್, ನಗರಸಭಾ ಸದಸ್ಯರುಗಳಾದ ಸೋಮಶೇಖರ್ (ಮಣಿ), ಪಾರ್ವತಮ್ಮ, ಗ್ಯಾಬ್ರಿಯಲ್, ಮಹಜತ್ ಜಹಾ ಮತ್ತಿತರು ಉಪಸ್ಥಿತರಿದ್ದರು.

ನಿವೃತ್ತ ನೌಕರರಿಗೆ ಆತ್ಮೀಯ ಬೀಳ್ಕೊಡಿಗೆ

ರಾಮನಗರ: ಸುದೀರ್ಘ 38 ವರ್ಷಗಳ ಕಾಲ ನಗರಸಭೆಯ ಹಿರಿಯ ವಾಲ್ ಮ್ಯಾನ್, ಹಾಗೂ ಪೌರ ಕಾರ್ಮಿಕರ ಜಿಲ್ಲಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ವೆಂಕಟೇಶ್ ಅವರ ಸೇವೆ ಅನನ್ಯ ಎಂದು ನಗರಸಭಾಧ್ಯಕ್ಷ ಕೆ. ಶೇಷಾದ್ರಿ (ಶಶಿ) ಅಭಿಪ್ರಾಯಪಟ್ಟರು. ನಗರದ ನಗರಸಭೆ ಸಭಾಂಗಣದಲ್ಲಿ ನಿವೃತ್ತ ನೌಕರ ವೆಂಕಟೇಶ್ ಅವರ ಬೀಳ್ಕೊಡಿಗೆ ಸಮಾರಂಭದಲ್ಲಿ ಮಾತನಾಡಿದ ಅವರು ವೆಂಕಟೇಶ್ ಅವರು ಸಮರ್ಥವಾಗಿ ಕೆಲಸ ನಿಭಾಯಿಸಿದ್ದಾರೆ. ವೆಂಕಟೇಶ್ ನೇರ ನಡೆ ನುಡಿಯ ವ್ಯಕ್ತಿತ್ವದವರಾಗಿದ್ದು, ಪೌರ ನೌಕರರ ಸಮಸ್ಯೆಗಳನ್ನು ಬಗಹರಿಸುವಲ್ಲಿ ನೌಕರರ ಪರವಾಗಿ ನಿಲುವು ಹೊಂದಿದ್ದವರು. ಪೌರ ನೌಕರರು ಸಂಕಷ್ಟ ಕಾಲದಲ್ಲಿ ಅವರ ಪರ ಧ್ವನಿಯಾಗಿ ಕಾರ್ಯ ನಿರ್ವಹಿಸುವ ಮೂಲಕ ನೌಕರರ ಹಿತಾಸಕ್ತಿ ಕಾಯುವಲ್ಲಿ ದೊಡ್ಡ ಪಾತ್ರ ವಹಿಸಿದ್ದಾರೆ ಎಂದರು.

ನಿವೃತ್ತಿಯಾಗಿದ್ದರೂ ವೆಂಕಟೇಶ್ ಮುಂದೆ ನಗರ ಸಭೆಯೊಂದಿಗೆ ಅವಿನಾಭಾವ ಸಂಬಂಧ ಹೊಂದಲಿದ್ದಾರೆ. ಅವರು ಕೇಂದ್ರಸ್ಥಾನದಲ್ಲಿಯೇ ಇರುವುದರಿಂದ ಜಿಲ್ಲಾ ಸಂಘಕ್ಕೆ ಇವರ ಮಾರ್ಗದರ್ಶನ ಮುಂದುವರೆಯಲಿ, ಹೊಸ ಪದಾದಿಕಾರಿಗಳಿಗೆ ತಮ್ಮ ಅನುಭವ ಧಾರೆ ಎರೆಯುವಂತೆ ಸಲಹೆ ನೀಡಿದರು. ಪೌರಾಯುಕ್ತ ಡಾ. ಜಯಣ್ಣ, ನಿವೃತ್ತ ವೆಂಕಟೇಶ್ ಮಾತನಾಡಿದರು.

ಪ್ಲಾಸ್ಟಿಕ್ ನಿಷೇಧ ಚಿತ್ರಕಲಾ ಸ್ಪರ್ಧೆ: ವಿಜೇತರಿಗೆ ಬಹುಮಾನ ವಿತರಣೆ

ರಾಮನಗರ: ಕಸ ವಿಲೇವಾರಿ, ನಗರಸ್ವಚ್ಛತೆ ವಿಚಾರದಲ್ಲಿ ಸ್ವಚ್ಛ ಭಾರತ್ ಮಿಷನ್ 2.00 ಯೋಜನೆಯಡಿಯಲ್ಲಿ ಹಮ್ಮಿಕೊಂಡಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ತಮ್ಮದೇ ಆಲೋಚನೆಗಳನ್ನು ಚಿತ್ರಗಳ ಮೂಲಕ ವ್ಯಕ್ತಪಡಿಸಿದ್ದಾರೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಶ್ಲಾಘಿಸಿದರು.

ನಗರಸಭೆಯ ಆವರಣದಲ್ಲಿ ಸ್ವಚ್ಛ ಭಾರತ್ ಮಿಷನ್ 2.0 ಯೋಜನೆಯಡಿಯಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧ ಹಾಗೂ ಹಸಿಕಸ ಒಣಕಸ ವಿಂಗಡನೆ ಮತ್ತು ನಗರ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವ ವಿಚಾರದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಚಿತ್ರಕಲೆಗಳ ಪ್ರದರ್ಶನವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು. ಸ್ವಚ್ಛತೆಯ ವಿಚಾರದಲ್ಲಿ ಚಿತ್ರಕಲಾ ಸ್ಪರ್ಧೆಯೂ ಒಂದು ಭಾಗವಾಗಿದ್ದು, ವಿದ್ಯಾರ್ಥಿ ಸಮುದಾಯದಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವ ಪ್ರಯತ್ನವಿದು ಎಂದರು. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಿರ್ದೇಶನದ ಮೇರೆಗೆ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿದೆ. ಪ್ಲಾಸ್ಟಿಕ್ ಬಳಕೆಗೆ ಕಡಿವಾಣ ಹಾಕುವುದು, ಹಸಿಕಸ, ಒಣಕಸ ಮನೆಯಲ್ಲೇ ವಿಂಗಡಿಸಿ ಕೊಡುವ ವಿಚಾರದಲ್ಲಿ ಸಾರ್ವಜನಿಕರಿಗೆ ನಿರಂತರ ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ನಗರಸಭೆಯ ಉಪಾಧ್ಯಕ್ಷರಾದ ಗಿರಿಜಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಮೊಹಮದ್ ಆರಿಫ್, ನಗರಸಭಾ ಸದಸ್ಯರು ಮತ್ತು ಅಧಿಕಾರಿಗಳು ಹಾಜರಿದ್ದರು.

ಲೋಕಾ ಬಲೆಗೆ ಎಂಜಿನಿಯರ್

ಚನ್ನರಾಯಪಟ್ಟಣ: ಕೊಳವೆಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಲು ರೈತರಿಂದ ಲಂಚ ಪಡೆಯುತ್ತಿದ್ದ ವೇಳೆ ಸೆಸ್ಕಾಂನ ಕಿರಿಯ ಎಂಜಿನಿಯರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ನುರನಕ್ಕಿ ಸೆಸ್ಕಾಂ ಶಾಖೆಯ ದೇವರಾಜು ಲೋಕಾಯುಕ್ತಗೆ ಸಿಕ್ಕಿಬಿದ್ದ ಎಂಜಿನಿಯರ್. ತಾಲೂಕಿನ ನುರನಕ್ಕಿ ಗ್ರಾಮದ ರೈತ ಶಶಾಂಕ್ ಎಂಬುವರ ಕೊಳವೆಬಾವಿಗೆ ವಿದ್ಯುತ್ ಸಂಪರ್ಕ ನೀಡಲು ಎಇ ದೇವರಾಜು ಅವರು 5000 ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ರೈತ ಲೋಕಾಯುಕ್ತ ಅಧಿಕಾರಿಗಳಿಗೆ ದೂರು ನೀಡಿದ್ದ ಹಿನ್ನೆಲೆ, ಎಂಜಿನಿಯರ್ ಲಂಚದ ಹಣ ಪಡೆಯುವಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದರು.

ಸಾಗುವಳಿ ಚೀಟಿಗಾಗಿ ಅರ್ಜಿ ಸಲ್ಲಿಸಿರುವ ರೈತರ ಸಂಕಷ್ಟಕ್ಕೆ ಸಮರ್ಪಕವಾರಿ ಸ್ಪಂದಿಸುವ ಭರವಸೆ

ಸಾಗುವಳಿ ಹಕ್ಕು ಪತ್ರ ನೀಡಲು ಜಮೀನು ಪರಿಶೀಲನೆ

ಸಂ.ಕ. ಸಮಾಚಾರ, ಕಸಬಾ

ಕಸಬಾ–ಕೈಲಾಂಚ ಹೋಬಳಿಯಲ್ಲಿ ನಮೂನೆ 50, 53 ಹಾಗೂ 57ರ ಅರ್ಜಿಗಳು ಸೇರಿ ಒಟ್ಟು 1800 ಸಾಗುವಳಿ ಅರ್ಜಿಗಳು ಬಾಕಿ ಉಳಿದಿದ್ದು, ರೈತರ ಮಕ್ಕಳೆನಿಸಿಕೊಂಡವರು ಈ ಅರ್ಜಿಗಳನ್ನು ಏಕೆ ವಿಲೇವಾರಿ ಮಾಡಿಲ್ಲ ಎಂದು ಶಾಸಕ ಹೆಚ್.ಎ.ಇಕ್ಬಾಲ್‌ಹುಸೇನ್ ಹರಿಹಾಯ್ದರು.

ಹರೀಸಂದ್ರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಳೇಗೌಡನದೊಡ್ಡಿ, ಪಾದರಹಳ್ಳಿ, ಆಲೆಮರದದೊಡ್ಡಿ ಹಾಗೂ ಮದರ್‌ಸಾಬರದೊಡ್ಡಿ ಗ್ರಾಮಗಳಲ್ಲಿ ಸಾಗುವಳಿ ಭೂಮಿ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿ.ಎಂ.ಲಿಂಗಪ್ಪ ನಂತರ ಸಾಗುವಳಿ ಸಭೆ ನಡೆಸಿ ಅರ್ಹ ರೈತರಿಗೆ ಸಾಗುವಳಿ ಚೀಟಿ ಕೊಡಲು ಹಿಂದೆ ಆಯ್ಕೆಯಾಗಿದ್ದವರು ವಿಫಲರಾಗಿದ್ದಾರೆ. ನಾನು ಶಾಸಕನಾದ ದಿನದಿಂದ ಇದಕ್ಕೆ ಶಾಶ್ವತ ಪರಿಹಾರ ಕೊಡಬೇಕೆಂಬ ಸಂಕಲ್ಪದಲ್ಲಿ ಅರ್ಜಿಗಳಿಗೆ ಜೀವ ನೀಡಿ ಸ್ಥಳ ಪರಿಶೀಲನೆ ನಡೆಸುತ್ತಿದ್ದು, ಹರೀಸಂದ್ರ ಗ್ರಾಮ ಪಂಚಾಯಿತಿಯಲ್ಲಿ ಸಾಕಷ್ಟು ಗೋಮಾಳ ಲಭ್ಯವಿದೆ. ಅರ್ಜಿ ಸಲ್ಲಿಸಿರುವ ರೈತರಿಗೆ ಭೂಮಿ ಮಂಜೂರು ಮಾಡುವ ವಿಪುಲ ಅವಕಾಶಗಳಿವೆ ಎಂದು ಹೇಳಿದರು.

ಹರೀಸಂದ್ರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಳೇಗೌಡನದೊಡ್ಡಿ, ಪಾದರಹಳ್ಳಿ, ಆಲೆಮರದದೊಡ್ಡಿ ಹಾಗೂ ಮದರ್‌ಸಾಬರದೊಡ್ಡಿ ಗ್ರಾಮಗಳಲ್ಲಿ ಸಾಗುವಳಿ ಭೂಮಿಯನ್ನು ಶಾಸಕ ಹೆಚ್.ಎ.ಇಕ್ಬಾಲ್‌ಹುಸೇನ್ ಪರಿಶೀಲಿಸಿದರು. ಈ ಸಂದರ್ಭದಲ್ಲಿ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎ.ಬಿ.ಚೇತನ್‌ಕುಮಾರ್, ಬಗರ್ ಹುಕುಂ ಸಾಗುವಳಿ ಸಮಿತಿ ಸದಸ್ಯರಾದ ಕೆ.ರವಿ, ತಿಮ್ಮಯ್ಯ, ಅಮೃತಾ, ತಹಶೀಲ್ದಾರ್ ತೇಜಸ್ವಿನಿ, ರಾಜಸ್ವ ನಿರೀಕ್ಷಕ ನಾಗರಾಜು, ಕಂದಾಯ ಅಧಿಕಾರಿ ಮುಬಾರಕ್ ಮೊದಲಾದವರಿದ್ದರು.

- ಕಸಬಾ ಹೋಬಳಿಯಲ್ಲಿ 1800 ಸಾಗುವಳಿ ಅರ್ಜಿ ವಿಲೇವಾರಿಯಾಗಿಲ್ಲ
- ಹರೀಸಂದ್ರ ಗ್ರಾಮ ಪಂಚಾಯಿತಿಯಲ್ಲಿ ಸಾಕಷ್ಟು ಗೋಮಾಳವಿದೆ

ರೈತರು ನನ್ನ ಮೇಲೆ ನಂಬಿಕೆ, ವಿಶ್ವಾಸವಿಟ್ಟು ಶಾಸಕರನ್ನಾಗಿ ಮಾಡಿ ಜವಾಬ್ದಾರಿ ಕೊಟ್ಟಿದ್ದಾರೆ. ಆ ಕೆಲಸವನ್ನು ನಿಭಾಯಿಸಿ ರೈತರ ಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದೇನೆ. ರೈತನ ಮಕ್ಕಳಿಗೆ ಮಾತ್ರ ರೈತರ ಕಷ್ಟ ಗೊತ್ತೇ ಹೊರತು ತೋರಿಕೆಗೆ ಮಣ್ಣಿನ ಮಕ್ಕಳು ಎನಿಸಿಕೊಂಡವರಿಗಲ್ಲ. ನಾನು ರೈತನ ಮಗನಾಗಿ ಸಾಗುವಳಿ ಚೀಟಿಗಾಗಿ ಅರ್ಜಿ ಸಲ್ಲಿಸಿರುವ ರೈತರ ಸಂಕಷ್ಟಕ್ಕೆ ಸ್ಪಂದಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇನೆ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಅವರನ್ನು ಪರೋಕ್ಷವಾಗಿ ಶಾಸಕ ಇಕ್ಬಾಲ್ ಹುಸೇನ್ ಟೀಕಿಸಿದರು.

ರೈತರು ಭೂಮಿ ಮೇಲೆ ಎಷ್ಟೊಂದು ಪ್ರೀತಿ ಮಮತೆ ಹೊಂದಿದ್ದಾರೆ ಎಂಬುದು ರೈತನ ಮಗನಾಗಿ ನನಗೆ ಗೊತ್ತು. ಭೂಮಿ ಬೆಲೆ ಗಗನಕ್ಕೇರಿದೆ. 25– 30 ವರ್ಷಗಳ ಹಿಂದೆಯೇ ಆ ರೈತರಿಗೆಲ್ಲ ಸಾಗುವಳಿ ಚೀಟಿ ಕೊಡಬಹುದಾಗಿತ್ತು. ಈಗಿನಂತೆ ಆಗ ಕಾನೂನು ಕಠಿಣವಾಗಿರಲಿಲ್ಲ.

ಈಗ ರೈತರಿಗೆ ಸಾಗುವಳಿ ಭೂಮಿ ನೀಡಬೇಕಾದರೆ ನಗರಸಭೆ ವ್ಯಾಪ್ತಿಯಿಂದ 5 ಕಿ.ಮೀ, ಬಿಬಿಎಂಪಿ ವ್ಯಾಪ್ತಿಯಿಂದ 18 ಕಿ.ಮೀ ಹಾಗೂ ಪುರಸಭೆಯಿಂದ 3 ಕಿ.ಮೀ. ವ್ಯಾಪ್ತಿಯಲ್ಲಿ ಇರಬಾರದೆಂಬ ನಿಯಮಗಳಿವೆ. ಈ ಎಲ್ಲ ಕಾನೂನುಗಳು ಹಿಂದೆ ಇರಲಿಲ್ಲ. ಕಸಬಾ 1 ಮತ್ತು 2ರ ವೃತ್ತಗಳಲ್ಲಿ 200 ಮಂದಿ ರೈತರ ಅರ್ಜಿ ವಿಲೇವಾರಿ ಮಾಡುವ ಅವಕಾಶ ಇದೆ ಎಂದು ತಿಳಿಸಿದರು.

ಈ ವೇಳೆ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎ.ಬಿ.ಚೇತನ್‌ಕುಮಾರ್, ಬಗರ್ ಹುಕುಂ ಸಾಗುವಳಿ ಸಮಿತಿ ಸದಸ್ಯರಾದ ಕೆ.ರವಿ, ತಿಮ್ಮಯ್ಯ, ಅಮೃತಾ, ತಹಶೀಲ್ದಾರ್ ತೇಜಸ್ವಿನಿ, ರಾಜಸ್ವ ನಿರೀಕ್ಷಕ ನಾಗರಾಜು, ಕಂದಾಯ ಅಧಿಕಾರಿ ಮುಬಾರಕ್, ಮುಖಂಡರಾದ ಶೇಖರ್‌ಮಾರೇಗೌಡ, ವೀರಭದ್ರಸ್ವಾಮಿ, ಪುಟ್ಟೇಗೌಡ, ಮಂಚೇಗೌಡ, ಮಹದೇವು, ಸತೀಶ್, ಚಂದ್ರಣ್ಣ, ರಾಮು, ಅರುಣ್, ಶಿವಣ್ಣ, ವಸಂತ ಮತ್ತಿತರರು ಹಾಜರಿದ್ದರು.

ದೈವರಾಧನೆಯಿಂದ ಮಾನಸಿಕ ನೆಮ್ಮದಿ: ಮಹದೇವಸ್ವಾಮಿ

ಸಂ.ಕ. ಸಮಾಚಾರ, ಸೂಲಿಬೆಲೆ

ಇಂದಿನ ಜೀವನ ಜಂಜಾಟದಲ್ಲಿ ನೆಮ್ಮದಿ ಕಾಣಬೇಕಾದರೆ ದೇವಾಲಯಗಳಿಂದ ಮಾತ್ರ ಸಾಧ್ಯ ದೈವರಾಧನೆಯಿಂದ ಮಾನಸಿಕ ನೆಮ್ಮದಿ ಪ್ರಾಪ್ತಿಯಾಗುತ್ತದೆ ಎಂದು ವಿಜಯಪುರ ಬಸವ ಕಲ್ಯಾಣ ಮಠದ ಮಹದೇವಸ್ವಾಮಿಗಳು ಹೇಳಿದರು.

ಸೂಲಿಬೆಲೆ ಚನ್ನಬೈರೇಗೌಡನಗರದ ಪಂಚದೇವಾಲಯಗಳ ಆವರಣದಲ್ಲಿ ನೂತನವಾಗಿ ನಿರ್ಮಾಣವಾಗಿರುವ ವೇಣು ಗೋಪಾಲಸ್ವಾಮಿ, ಲಕ್ಷ್ಮೀ ನರಸಿಂಹಸ್ವಾಮಿ ಹಾಗೂ ನವಗ್ರಹ ದೇವಾಲಯದ ಪ್ರತಿಷ್ಠಾಪನ ಮಹೋತ್ಸವದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿ, ನಮ್ಮ ಸನಾತನ ಹಿಂದು ಪರಂಪರೆ ಧಾರ್ಮಿಕ ನಂಬಿಕೆಯ ಮೇಲೆ ಸಾಗುತ್ತಿದೆ ನಾವು ಇದನ್ನು ಕಾಪಾಡಿಕೊಳ್ಳಬೇಕು ಯುವ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಧರ್ಮದ ಕೆಲಸಗಳಲ್ಲಿ ಪಾಲ್ಗೊಳ್ಳಬೇಕು ಎಂದರು.

ನಾಗಲಪುರ ಸಂಸ್ಥಾನ ಮಠದ ಪಟ್ಟದ ತೇಜುಶಲಿಂಗ ಸ್ವಾಮೀಜಿ, ಮಾತನಾಡಿ, ಮಾನವ ಜನ್ಮ ತುಂಬಾ ಪವಿತ್ರವಾಗಿದ್ದು ಇದನ್ನು ದೇವತಾ ಕಾರ್ಯಗಳಿಗೆ ಅರ್ಪಣೆ ಮಾಡಬೇಕು ನಾವು ಮಾಡುವ ದಾನ ಧರ್ಮದಿಂದ ನಮ್ಮ ಕರ್ಮ ಫಲಗಳು ಪಾಪ ಪುಣ್ಯಗಳು ಲಭಿಸುತ್ತವೆ ಎಂದರು.

ರಾಜ್ಯ ಒಕ್ಕಲಿಗ ಸಂಘದ ಮಾಜಿ ನಿರ್ದೇಶಕ ಬಿ.ಎನ್.ಗೋಪಾಲಗೌಡ ಮಾತನಾಡಿದರು. ರಾಜ್ಯ ಒಕ್ಕಲಿಗ ಸಂಘದ ಮಾಜಿ ನಿರ್ದೇಶಕ ಬಿ.ಎನ್. ಗೋಪಾಲಗೌಡ ದೇವಾಲಯ ಸಮಿತಿ ವ್ಯವಸ್ಥಾಪಕ ಸೂ.ಚಿ.ಬಸವರಾಜಪ್ಪ, ವಿಜಯಕುಮಾರ್, ವಿಶ್ವನಾಥ್, ಬಸವರಾಜು, ಪೋಸ್ಟ್ ಸೀನಪ್ಪ ಇತರರಿದ್ದರು.

ಮುಜರಾಯಿ ಇಲಾಖೆ ವಿರುದ್ಧ ರೇವಣಸಿದ್ದೇಶ್ವರ ಭಕ್ತರ ಆಕ್ರೋಶ

ಸಂ.ಕ. ಸಮಾಚಾರ, ಕೈಲಾಂಚ

ಅವ್ವೇರಹಳ್ಳಿ ರೇವಣಸಿದ್ದೇಶ್ವರ ರಥೋತ್ಸವ ಸಂದರ್ಭದಲ್ಲಿ ಧಾರ್ಮಿಕ ಕಟ್ಟುಪಾಡುಗಳನ್ನು ಮುರಿದು ಹಲವು ಅವಘಡಗಳಿಗೆ ಮುಜರಾಯಿ ಇಲಾಖೆ ಕಾರಣವಾಗಿದೆ ಎಂದು ಅವ್ವೇರಹಳ್ಳಿ ಮತ್ತು ಸುತ್ತಮುತ್ತಲಿನ ಸೇವಾ ಗ್ರಾಮಸ್ಥರು ರೇವಣಸಿದ್ದೇಶ್ವರ ಬೆಟ್ಟದ ಧಾರ್ಮಿಕ ದತ್ತಿ ಇಲಾಖೆ ದೇವಾಲಯದ ಆಡಳಿತ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ವಿಎಸ್‌ಎಸ್‌ಎನ್ ಅಧ್ಯಕ್ಷ ನಂದೀಶ್‌ಗೌಡ ಸ್ವಾಮಿ ಮಾತನಾಡಿ, ಶುಕ್ರವಾರ ನಡೆದ ರೇವಣ್ಣಸಿದ್ದೇಶ್ವರ ಜಾತ್ರಾ ಮಹೋತ್ಸವದಲ್ಲಿ ರಥೋತ್ಸವ ಮಧ್ಯಾಹ್ನ 12.45ಕ್ಕೆ ನಿಗದಿಯಾಗಿತ್ತು. ಆದರೆ ಆ ಸಮಯದಲ್ಲಿ ರಥೋತ್ಸವಕ್ಕೆ ಚಾಲನೆ ನೀಡದೆ ಶಾಸಕ ಇಕ್ಬಾಲ್ ಹುಸೇನ್ ಬರುವವರೆವಿಗೂ ರಥಕ್ಕೆ ಚಾಲನೆ ನೀಡಿಲ್ಲ. ಸುಮಾರು 25 ನಿಮಿಷ ತಡವಾಗಿ ರಥಕ್ಕೆ ಚಾಲನೆ ಸಿಕ್ಕಿದೆ. ತಲತಲಾಂತರಗಳಿಂದ ನಡೆದುಕೊಂಡು ಬಂದಿರುವ ಶ್ರೀಕ್ಷೇತ್ರದ ಧಾರ್ಮಿಕ ಸಂಪ್ರದಾಯದಂತೆ ಕೆಲವೊಂದು ಧಾರ್ಮಿಕ ಕಟ್ಟುಪಾಡುಗಳನ್ನು ಮುರಿಯಲಾಗಿದೆ. ಭಕ್ತರ ಧಾರ್ಮಿಕ ಭಾವನೆಗೆ ಚ್ಯುತಿ ತರುವ ಕೆಲಸ ಮುಜರಾಯಿ ಇಲಾಖೆ ಮಾಡಿದೆ. ಕೂಡಲೇ ಸರ್ಕಾರ ಇಂತಹ ಅವಘಡಗಳಿಗೆ ಕಾರಣರಾದವರ ಮೇಲೆ ಸೂಕ್ತ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು. ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಪ್ಪ, ಮುಖಂಡರಾದ ತಮ್ಮಣ್ಣ, ಶಿವಲಿಂಗಯ್ಯ ಮಾತನಾಡಿದರು. ಮುಖಂಡರುಗಳಾದ ಎ.ಸಿ. ಕೆಂಪಯ್ಯ, ಗೋಪಾಲನಾಯ್ಕ, ಗುನ್ನೂರು ದೇವರಾಜು, ಸಂಜಯ್, ನವೀನ್, ಪ್ರಶಾಂತ್, ಯೋಗೇಶ್, ವಿನೋದ್, ಆನಂದ್, ಸತೀಶ್, ಚಂದ್ರಣ್ಣ, ರಾಜಣ್ಣ, ರಾಜು, ನಾಯ್ಕ ಮುಂತಾದವರಿದ್ದರು.

ಸಮಸ್ಯೆಗಳ ನಿವಾರಣೆಗಾಗಿ ಸಂಘಟನೆಗಳು ಅತ್ಯವಶ್ಯಕ

ಸಂ.ಕ. ಸಮಾಚಾರ, ರಾಮನಗರ

ನೌಕರರ ಹಿತಾಸಕ್ತಿ ಕಾಯುವುದಕ್ಕೆ, ಅವರ ಸಮಸ್ಯೆಗಳನ್ನು ಬಗೆರಿಸುವುದಕ್ಕೆ ಸಂಘಗಳು ಅವಶ್ಯಕವಾಗಿದ್ದು, ನಿಯಮಪಾಲನೆ ಕಾಲಮಿತಿಯಲ್ಲಿ ಪ್ರಾಮಾಣಿಕವಾಗಿ ತಮ್ಮ ಕರ್ತವ್ಯ ನಿರ್ವಹಿಸಬೇಕು ಮತ್ತು ಅದರ ಜೊತೆಗೆ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಸಂಘಟಿತ ಹೋರಾಟ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಪೌರ ನೌಕರರ ಸಂಘ ತಮ್ಮ ಹೆಜ್ಜೆಗಳನ್ನು ಇಡಬೇಕು ಎಂದು ರಾಮನಗರ ನಗರಸಭೆ ಅಧ್ಯಕ್ಷರಾದ ಕೆ.ಶೇಷಾದ್ರಿ(ಶಶಿ) ತಿಳಿಸಿದರು

ನಗರದ ವಾಟರ್ ಟ್ಯಾಂಕ್ ಸರ್ಕಲ್‌ನಲ್ಲಿ ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ಜಿಲ್ಲಾ ಕಚೇರಿ ಉದ್ಘಾಟಿಸಿ ಮಾತನಾಡಿದರು.

ರಾಮನಗರ ನಗರಸಭೆ ಇಂದು ಇತರ ನಗರಸಭೆಗಳಿಗಿಂತ ಬಹಳಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ ಎನ್ನುವ ಮಾತು ಚಾಲ್ತಿಯಲ್ಲಿದೆ. ಈ ಹೆಸರು ಬರಲು ತಾವುಗಳು ಕಾರಣರಾಗಿದ್ದು, ಜನರಿಗೆ ತಲುಪಬೇಕಾದ ಸವಲತ್ತುಗಳನ್ನು ಮತ್ತು ಮೂಲಭೂತ ಸೌಕರ್ಯಗಳ್ನು ಒದಗಿಸುವ ನಿಟ್ಟಿನಲ್ಲಿ ನಗರಸಭೆ ಕೆಲಸ ಮಾಡುತ್ತಿದೆ ಎಂದರು.

ಪೌರಾಯುಕ್ತ ಡಾ. ಜಯಣ್ಣ ಮಾತನಾಡಿದರು. ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಸ್ಥಾಯಿ ಸಮಿತಿ ಸದಸ್ಯ ಆರೀಪ್, ಸದಸ್ಯರಾದ ಅಜ್ಮತ್, ಪಾರ್ವತಮ್ಮ, ವಿಜಯಕುಮಾರಿ, ಪೌರಸೇವಾ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ನಾಗರಾಜ್, ಅಣ್ಣಾದೊರೆ ವೀರಸ್ವಾಮಿ, ನಿರ್ಮಲ, ದೇವೇಂದ್ರ ಸೇರಿದಂತೆ ಹಲವರಿದ್ದರು.

ರಾತ್ರಿ ಪಾಳಿಯಲ್ಲಿ ಕೆಲಸ ಮಾಡುತ್ತಿದ್ದ ಹನ್ನೊಂದು ಬಾಲ ಕಾರ್ಮಿಕರ ರಕ್ಷಣೆ

ಮಾಲೀಕರ ವಿರುದ್ಧ ಕಾನೂನು ಕ್ರಮ: ಹರ್ಷವರ್ಧನ್

ಸಂ.ಕ. ಸಮಾಚಾರ, ದೇವನಹಳ್ಳಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಹೋಬಳಿ ವ್ಯಾಪ್ತಿಯಲ್ಲಿ ಖಾಸಗಿ ಕಂಪನಿಗೆ ಸೇರಿದ ಗೋಡೌನ್ ಒಂದರಲ್ಲಿ ರಾತ್ರಿ ಪಾಳಿಯಲ್ಲಿ ಬಾಲಕರು ದುಡಿಮೆ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಮೇ 04 ರಂದು ಕಾರ್ಮಿಕ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಿ 11 ಮಕ್ಕಳ ರಕ್ಷಣೆ ಮಾಡಲಾಗಿದೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಹರ್ಷವರ್ಧನ್ ತಿಳಿಸಿದ್ದಾರೆ.

ಕಾರ್ಮಿಕ ಇಲಾಖೆ ಮತ್ತು ಜಿಲ್ಲಾ ಬಾಲಕಾರ್ಮಿಕ ಯೋಜನೆ, ಹೊಸಕೋಟೆ ತಾಲ್ಲೂಕಿನ ಕಾರ್ಮಿಕ ನಿರೀಕ್ಷಕರು ಹಾಗೂ ಜಿಲ್ಲಾ ಬಾಲ ಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ರವರು ಜಂಟಿ ತಪಾಸಣೆ ಕೈಗೊಂಡು ರಕ್ಷಿಸಲಾಗಿದೆ.

ರಕ್ಷಿಸಿದ ಬಾಲ ಮತ್ತು ಕಿಶೋರ ಕಾರ್ಮಿಕನನ್ನು ಮಕ್ಕಳ ಪುನರ್ವಸತಿಗಾಗಿ ಮಕ್ಕಳ ಕಲ್ಯಾಣ ಸಮಿತಿಯ ಮೌಖಿಕ ಆದೇಶದ ಮೇರೆಗೆ ದೇವನಹಳ್ಳಿ ತಾಲ್ಲೂಕಿನ ಸರ್ಕಾರಿ ಬಾಲಕರ ಬಾಲಮಂದಿರಕ್ಕೆ ದಾಖಲಿಸಲಾಗಿದೆ,

ಮಾಲೀಕರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಕ್ರಮ ವಹಿಸಲಾಗಿದೆ.

ಕಾರ್ಯಾಚರಣೆಯಲ್ಲಿ ಬಾಲಕಾರ್ಮಿಕ ಯೋಜನೆ ಸೊಸೈಟಿಯ ಯೋಜನಾ ನಿರ್ದೇಶಕರಾದ ಗಣೇಶಮೂರ್ತಿ ಎ.ಎಸ್, ಹೊಸಕೋಟೆ ತಾಲ್ಲೂಕಿನ ಕಾರ್ಮಿಕ ನಿರೀಕ್ಷಕ ಯತೀಶ್ ಕುಮಾರ್, ಇತರೆ ಸಿಬ್ಬಂದಿ ಇದ್ದರು.

ಕಾಡಾನೆ ದಾಳಿ: ಅಪಾರ ಪ್ರಮಾಣದ ಬೆಳ ನಾಶ

ಸಂ.ಕ. ಸಮಾಚಾರ, ಕನಕಪುರ

ಹಾರೋಹಳ್ಳಿ ತಾಲೂಕು ಮರಳವಾಡಿ ಹೋಬಳಿ ತಟ್ಟೆಕೆರೆ ಗ್ರಾಮದ ಜಮೀನೊಂದಕ್ಕೆ ನುಗ್ಗಿರುವ ಕಾಡಾನೆ, ಮಾವಿನ ಪಸಲು ಸೇರಿದಂತೆ ಜಮೀನಿನ ಸುತ್ತಲೂ ಹಾಕಿರುವ ಬೇಲಿಯನ್ನು ನೆಲಸಮ ಮಾಡಿ ಅಪಾರ ಪ್ರಮಾಣದ ನಷ್ಟ ಉಂಟು ಮಾಡಿದೆ ಎಂದು ಜಮೀನಿನ ಮಾಲೀಕ ವೇಣುಗೋಪಾಲ್ ಆರೋಪಿಸಿದ್ದಾರೆ.

ಸರ್ವೆ ನಂಬರ್ 185 ಹಾಗೂ 240ರಲ್ಲಿ ಕಾಡಾನೆ ದಾಳಿ ಮಾಡಿದೆ. ಈ ರೀತಿ ಮಾಡಿರುವುದು ಇದೇ ಮೊದಲೇನಲ್ಲ ಈ ಹಿಂದೆಯೂ ನಾಲ್ಕು ಬಾರಿ ದಾಳಿ ನಡೆಸಿ ನಷ್ಟ ಉಂಟು ಮಾಡಿ ಹೋಗಿದೆ, ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಸೂಕ್ತ ಪರಿಹಾರ ಹೇಳುವಂತೆ ಒತ್ತಾಯಿಸಿದ್ದಾರೆ.

ಕಾಡಾನೆಗಳ ಹಾವಳಿ ತಡೆಗೆ ಆಗ್ರಹ: ರಾಜ್ಯ ರೈತ ಸಂಘದ ಅನುಕುಮಾರ್ ಮಾತನಾಡಿ, ಕನಕಪುರ, ಹಾರೋಹಳ್ಳಿ ತಾಲೂಕಿನಲ್ಲಿ ಕಾಡಾನೆಯ ಹಾವಳಿ ಮಿತಿಮೀರಿದೆ ರೈತರ ಅಪಾರ ಪ್ರಮಾಣದ ಫಸಲು ನಾಶವಾಗುತ್ತಿದೆ ಜೊತೆಗೆ ಸಾವು ನೋವುಗಳೂ ಕೂಡ ಸಂಭವಿಸುತ್ತಿರುವುದರಿಂದ ಸರ್ಕಾರ ಕೂಡಲೇ ಕಾಡಾನೆ ಹಾವಳಿ ತಡೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವುದರ ಮೂಲಕ ರೈತರು ಬೆಳೆದ ಬೆಳೆಗಳನ್ನು ರಕ್ಷಣೆ ಮಾಡಿ ರೈತ ಕುಟುಂಬಗಳ ಅಭಿವೃದ್ಧಿಗೆ ಮುಂದಾಗಬೇಕು ಇಲ್ಲವಾದಲ್ಲಿ ಇಲಾಖೆಯ ವಿರುದ್ಧ ಹೋರಾಟ ಅನಿವಾರ್ಯ ಎಂದು ಅವರು ಎಚ್ಚರಿಸಿದ್ದಾರೆ.

ಕೆಆರ್‌ಎಸ್ ಕಾರ್ಯಕರ್ತರಿಂದ ಪ್ರತಿಭಟನೆ ಬಗ್ಗೆ ಶಾಸಕರ ಚರ್ಚೆ

ಅಧಿಕಾರಿಗಳ ವಿಳಂಬ ಧೋರಣೆಗೆ ವಿರೋಧ

ಸಂ.ಕ. ಸಮಾಚಾರ, ಮಾಗಡಿ

ಕಳೆದ ವಾರ ತಾಲೂಕು ಕಚೇರಿ ಮುಂಭಾಗದಲ್ಲಿ ಕೆಆರ್‌ಎಸ್ ಪಕ್ಷದ ಸದಸ್ಯರು ತಾಲೂಕು ಆಡಳಿತದ ವಿರುದ್ಧ ಪ್ರತಿಭಟನೆ ನಡೆಸಿದ್ದು, ಈ ಬಗ್ಗೆ ಶಾಸಕ ಹೆಚ್.ಸಿ.ಬಾಲಕೃಷ್ಣ ಚರ್ಚೆ ನಡೆಸಿದರು.

ಪಟ್ಟಣದ ತಾಲೂಕು ಕಚೇರಿಯ ಸಭಾಂಗಣದಲ್ಲಿ ತಾಲೂಕು ಆಡಳಿತದ ವಿರುದ್ಧದ ಆರೋಪಕ್ಕೆ ಸ್ಪಷ್ಟೀಕರಣ ಕೋರಿ ಕರೆದಿದ್ದ ಸಭೆಯಲ್ಲಿ ಶಾಸಕ ಹೆಚ್.ಸಿ. ಬಾಲಕೃಷ್ಣ ಮಾತನಾಡಿ, ಕಳೆದ ವಾರ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ಆರೋಪ ಮಾಡಿದ್ದು ಈ ಬಗ್ಗೆ ಚರ್ಚಿಸಲಾಗಿದ್ದು, ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ಆರೋಪಿಸಿರುವ ಬಗ್ಗೆ ಕೆಲ ದಾಖಲೆಗಳನ್ನು ಚರ್ಚೆಯಲ್ಲಿ ಬಹಿರಂಗಪಡಿಸಿದ್ದು, ಈ ಬಗ್ಗೆ ತಹಶೀಲ್ದಾರ್ ಮತ್ತು ರಾಮನಗರ ಉಪ ವಿಭಾಗಾಧಿಕಾರಿಗಳು ಕ್ರಮ ವಹಿಸಲಿದ್ದಾರೆ, ತಾಲೂಕು ಕಚೇರಿ ಮುಂಭಾಗದಲ್ಲಿ ಸುಖಾಸುಮ್ಮನೆ ಆರೋಪ ಮತ್ತು ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ ಎಂದರು.

ಕೆಆರ್‌ಎಸ್ ಪಕ್ಷದ ರಾಜ್ಯ ಮುಖಂಡ ರಘು ಜಾಣಗೆರೆ ಮಾತನಾಡಿದರು. ರಾಮನಗರ ಜಿಲ್ಲಾ ಉಪವಿಭಾಗಾಧಿಕಾರಿ ಬಿನೋಯ್.ಪಿ.ಕೆ. ತಹಶೀಲ್ದಾರ್ ಶರತ್‌ಕುಮಾರ್, ಕೆಆರ್‌ಎಸ್ ಪಕ್ಷದ ರಾಜ್ಯ ಕಾರ್ಯದರ್ಶಿ ರಘುನಂದನ್, ಜಿಲ್ಲಾಧ್ಯಕ್ಷ ಗಂಗಾಧರ್, ಪ್ರ.ಕಾ.ಚಂದ್ರಶೇಖರ್, ಜಿಲ್ಲಾ ಯುವ ಘಟಕದ ಅಧ್ಯಕ್ಷ ಸುರೇಶ್, ತಾಲೂಕು ಅಧ್ಯಕ್ಷ ಚಂದ್ರಶೇಕರ್ ಸೇರಿದಂತೆ ಮಹಿಳಾ ಕಾರ್ಯಕರ್ತರು ಇದ್ದರು.

ಬಿಜೆಪಿಗೆ ದ.ಭಾರತ ಹೆಬ್ಬಾಗಿಲು ತೆರೆದ ಕಟ್ಟಾಳು ಯಡಿಯೂರಪ್ಪ

ಸಂ.ಕ. ಸಮಾಚಾರ, ದೇವನಹಳ್ಳಿ

ಬಿಜೆಪಿಗೆ ದಕ್ಷಿಣ ಭಾರತದ ಹೆಬ್ಬಾಗಿಲು ತೆರೆದವರೇ ಯಡಿಯೂರಪ್ಪ ಅವರು, ಹಾಗಾಗಿ ಮೇ. 9 ರಂದು ಚಿತ್ರದುರ್ಗದ ಬಳಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮ ಏರ್ಪಡಿಸಿದ್ದು, ಸಾವಿರಾರು ಪಕ್ಷದ ಕಾರ್ಯಕರ್ತರು ಪಾಲ್ಗೊಳ್ಳಲು ಸಜ್ಜಾಗಬೇಕೆಂದು ಮಾಜಿ ಶಾಸಕ ಚಂದ್ರಣ್ಣ ಹೇಳಿದರು.

ಬೆಂಗಳೂರು ಗ್ರಾಮಾಂತರ ದೇವನಹಳ್ಳಿ ಪಟ್ಟಣದ ಭಾರತೀಯ ಜನತಾ ಪಾರ್ಟಿ ಕಚೇರಿಯಲ್ಲಿ ಮೇ.9 ರಂದು ಚಿತ್ರದುರ್ಗದ ಬಳಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮ ಅಂಗವಾಗಿ, ಪೂರ್ವಭಾವಿ ಸಭೆ ಅಂಬರೀಷ್ ಗೌಡ ಅವರ ಅಧ್ಯಕ್ಷತೆ ವಹಿಸಿ ಮಾತನಾಡಿ, ದೇವನಹಳ್ಳಿ ತಾಲೂಕಿನಿಂದ 1000 ಸಂಖ್ಯೆಯಲ್ಲಿ ಕಾರ್ಯಕರ್ತರು ತೆರಳಬೇಕು.

ಅಗತ್ಯ ಬಸ್ ಸೌಕರ್ಯವಿದೆ, ಗೃಹಮಂತ್ರಿ ಅಮಿತ್ ಶಾ ಸೇರಿದಂತೆ ಅನೇಕ ಗಣ್ಯರು ಭಾಗವಹಿಸುವರು ಎಂದು ಹೇಳಿದರು.

ಮಾಜಿ ಶಾಸಕ ಚಂದ್ರಣ್ಣ, ಬಿಜೆಪಿ ಜಿಲ್ಲಾಧ್ಯಕ್ಷ ರಾಮಕೃಷ್ಣಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗವೇಣಿ, ಬುಳ್ಳಹಳ್ಳಿ ರಾಜಪ್ಪ, ಅಶ್ವಥ್ ನಾರಾಯಣ್, ಬಿ.ಕೆ. ನಾರಾಯಣಸ್ವಾಮಿ, ಅನೀಲ್, ಕದಿರಪ್ಪ, ಅಮರ ನಾರಾಯಣ್, ವೆಂಕಟೇಗೌಡ, ವಿಜಯಪುರ ವೆಂಕಟೇಶ್, ಯಶೋಧ, ತಾಯಮ್ಮ, ಪ್ರೇಮ, ಪ್ರಭಾಕರ್‌ಇತರರು ಹಾಜರಿದ್ದರು.

1.28 ಲಕ್ಷ ಮಂದಿ ಹಾಲು ಉತ್ಪಾದಕರಿಗೆ ಸಿಗಲಿದೆ ಲಾಭಾಂಶ

ಬಮೂಲ್ ಗಳಿಸಿದ ಲಾಭದ 60.43 ಕೋಟಿ ರೂ. ಹೈನುಗಾರಿಕೆ ಮಾಡುವ ರೈತರಿಗೆ ಹಂಚಲು ನಿರ್ಧಾರ

▪ ಪಿ.ವೈ.ರವಿಂದ್ರ ಹೇರ್ಳೆ

ಸಂ.ಕ. ಸಮಾಚಾರ, ರಾಮನಗರ

ಬೆಂಗಳೂರು ಹಾಲು ಒಕ್ಕೂಟ(ಬಮೂಲ್) ತಾನು ಗಳಿಸಿದ ಲಾಭದ ಹಣವನ್ನು ಹೈನುಗಾರಿಕೆ ಮಾಡುವ ರೈತರಿಗೆ ಹಂಚಿಕೆ ಮಾಡಲು ಕೈಗೊಂಡಿರುವ ತೀರ್ಮಾನದಿಂದ, ಒಕ್ಕೂಟದ ವ್ಯಾಪ್ತಿಯ 1.28 ಲಕ್ಷ ಹಾಲು ಉತ್ಪಾದಕರಿಗೆ 60.43 ಕೋಟಿ ರೂ. ಹಣ ಇದೀಗ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆಯಾಗುತ್ತಿದೆ.

ರಾಜ್ಯದಲ್ಲೇ ಅತಿಹೆಚ್ಚು ಹಾಲು ಉತ್ಪಾದನೆ ಮಾಡುವ ಒಕ್ಕೂಟ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಬೆಂಗಳೂರು ಹಾಲು ಒಕ್ಕೂಟ, ಕೆಲ ತಿಂಗಳಿಂದೀಚೆಗೆ ನಷ್ಟದ ಹಾದಿಯಿಂದ ಲಾಭದ ಹಾದಿಯತ್ತ ಸಾಗಿದೆ. 2025–26ನೇ ಸಾಲಿನಲ್ಲಿ ಒಕ್ಕೂಟ ಪಡೆದ ಲಾಭದ ಹಣವನ್ನು ರೈತರಿಗೆ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳ ಸಿಬ್ಬಂದಿಗೆ ಹಂಚಿಕೆ ಮಾಡಲು ಒಕ್ಕೂಟದ ಆಡಳಿತ ಮಂಡಳಿ ನಿರ್ಧಾರ ಕೈಗೊಂಡಿದೆ. ಒಕ್ಕೂಟದ ಈ ನಿರ್ಧಾರ ರೈತರಿಗೆ ಹೆಚ್ಚಿನ ಹಣತಂದುಕೊಡಲಿದೆ.

ರೈತರಿಗೆ 60.43 ಕೋಟಿ ರೂ:

ಬೆಂಗಳೂರು ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ 2295 ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು, ಈ ಎಲ್ಲಾ ಸಂಘಗಳಿಂದ ಪ್ರತಿದಿನ ಸರಾಸರಿ 17 ಲಕ್ಷ ಲೀಟರ್‌ನಷ್ಟು ಹಾಲು ಉತ್ಪಾದನೆಯಾಗುತ್ತಿದೆ. 2025ರ ಏ.1ರಿಂದ 2026ರ ಮಾ.31ರ ವರೆಗೆ ಸಂಘಕ್ಕೆ ಹಾಲು ಪೂರೈಕೆ ಮಾಡಿದ ರೈತರಿಗೆ ವರ್ಷದಲ್ಲಿ ಎಷ್ಟು ಹಾಲು ಪೂರೈಕೆ ಮಾಡಿದ್ದಾರೆ ಎಂಬುದರ ಆಧಾರದ ಮೇಲೆ ಪ್ರತಿಲೀಟರ್‌ಗೆ 1 ರೂ. ನಂತೆ ಬಮೂಲ್ ಪ್ರೋತ್ಸಾಹಧನವನ್ನು ನೀಡಲು ಮುಂದಾಗಿದೆ.

2025–26ನೇ ಸಾಲಿನಲ್ಲಿ ಒಕ್ಕೂಟಕ್ಕೆ 60.43 ಕೋಟಿ ಲೀಟರ್ ಹಾಲನ್ನು ರೈತರು ಸರಬರಾಜುಮಾಡಿದ್ದಾರೆ. ಇದನ್ನು ಆದರಿಸಿ ರೈತರಿಗೆ ಇಡೀ ವರ್ಷದಲ್ಲಿ ಪೂರೈಕೆಮಾಡಿರುವ ಹಾಲಿನ ಪ್ರಮಾಣವನ್ನು ಆಧರಿಸಿ ಪ್ರತಿಲೀಟರ್‌ಗೆ 1 ರೂ.ನಂತೆ ಪ್ರೋತ್ಸಾಹಧನವನ್ನು ರೈತರ ಖಾತೆಗೆ ಜಮೆ ಮಾಡಲು ಒಕ್ಕೂಟ ಮುಂದಾಗಿದೆ. ಒಕ್ಕೂಟದ ವತಿಯಿಂದ ಪಾವತಿಮಾಡುತ್ತಿರುವ 60.43 ಕೋಟಿ ರೂ. ಹಣವು 1,28,844 ಮಂದಿ ರೈತರಿಗೆ ಪಾವತಿಯಾಗಲಿದ್ದು, ಪ್ರತಿ ರೈತರಿಗೆ ಕನಿಷ್ಠ 2 ಸಾವಿರ ರೂ. ನಿಂದ 2.73 ಲಕ್ಷ ರೂ. ವರೆಗೆ ಪ್ರೋತ್ಸಾಹಧನ ಸಿಗಲಿದೆ.

ರಾಜ್ಯದಲ್ಲಿ ಮೊದಲು: ಒಂದು ವರ್ಷ ಪೂರೈಕೆಮಾಡಿದ ಹಾಲಿಗೆ ಒಂದು ರೂನಂತೆ ಪ್ರೋತ್ಸಾಹಧನವನ್ನು ರೈತರಿಗೆ ನೀಡುತ್ತಿರುವ ಒಕ್ಕೂಟದ ಕ್ರಮ ರಾಜ್ಯದಲ್ಲೇ ಇದೇ ಮೊದಲನೆಯದ್ದಾಗಿದೆ. ಈ ಹಿಂದೆ ಒಕ್ಕೂಟ ಮಾರ್ಚ್ ತಿಂಗಳಲ್ಲಿ ಲಾಭಗಳಿಸಿದಾಗ ರೈತರಿಗೆ ಏಪ್ರಿಲ್ ತಿಂಗಳಿನಿಂದ ಜೂನ್ ತಿಂಗಳ ವರೆಗೆ ಪ್ರತಿ ಲೀಟರ್‌ಗೆ 1 ರಿಂದ 2 ರೂ. ದರ ನೀಡಿ ಮತ್ತೆ ಕಡಿಮೆಮಾಡಿರುವ ಉದಾಹರಣೆಗಳಿದ್ದವು. ಆದರೆ, ಇಡೀ ವರ್ಷ ಹಾಲು ಪೂರೈಕೆಮಾಡಿದ ರೈತರಿಗೆ ಲಾಭದ ಹಣವನ್ನು ಪ್ರೋತ್ಸಾಹಧನದ ರೂಪದಲ್ಲಿ ಹಂಚಿಕೆ ಮಾಡುತ್ತಿರುವುದು ರಾಜ್ಯದಲ್ಲಿ ಇದೇ ಮೊದಲಾಗಿದೆ.

2025–26ನೇ ಸಾಲಿನಲ್ಲಿ ಬಮೂಲ್ ಒಕ್ಕೂಟಕ್ಕೆ 60 ಕೋಟಿಗೂ ಹೆಚ್ಚು ಉಳಿತಾಯವಾಗಿದೆ. ಇದನ್ನು ಲಾಭ ಎಂದು ತೋರಿಸಿದರೆ ಕೇಂದ್ರ ಸರ್ಕಾರಕ್ಕೆ ನಾವು ತೆರಿಗೆ ಕಟ್ಟಬೇಕು, ಹೀಗಾಗಿ ತೆರಿಗೆ ಬದಲು ರೈತರ ಬೆವರಿನ ದುಡ್ಡನ್ನು ಪ್ರೋತ್ಸಾಹಧನ ರೂಪದಲ್ಲಿ ಮರಳಿ ರೈತರಿಗೆ ಕೊಡುತ್ತಿದ್ದೇವೆ.

▪ ಡಿ.ಕೆ.ಸುರೇಶ್, ಬಮೂಲ್ ಅಧ್ಯಕ್ಷರು

ಬೆಂಗಳೂರು ಹಾಲು ಒಕ್ಕೂಟದ ಪ್ರೋತ್ಸಾಹಧನ ಹೆಚ್ಚಿನ ಪ್ರಮಾಣದಲ್ಲಿ ಚನ್ನಪಟ್ಟಣ ತಾಲ್ಲೂಕಿನ ರೈತರಿಗೆ ಸಂದಾಯವಾಗುತ್ತಿದೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಪ್ರಸ್ತುತ ಪ್ರತಿದಿನ 3.20 ಲಕ್ಷಲೀಟರ್ ಹಾಲು ಉತ್ಪಾದನೆ ಮಾಡಲಾಗುತ್ತಿದೆ.

ಪಾತಾಳ ಕಂಡ ತುಂಗಭದ್ರಾ ಜಲಾಶಯ: ಆತಂಕ

ಮುಂಗಾರು ಪೂರ್ವ ಕೈಕೊಟ್ಟರೆ ಕುಡಿಯುವ ನೀರಿಗೂ ಸಂಕಷ್ಟ | 10 ಟಿಎಂಸಿಗೆ ಇಳಿದ ನೀರಿನ ಮಟ್ಟ

(ವಿಶೇಷ ವರದಿ)
ಸಂ.ಕ.ಸಮಾಚಾರ ಬಳ್ಳಾರಿ

ಎರಡನೇ ಬೆಳೆಗೆ ನೀರು ಹರಿಸದೇ ಇದ್ದರೂ ತುಂಗಭದ್ರಾ ಜಲಾಶಯದ ನೀರಿನ ಮಟ್ಟ ಪಾತಾಳ ಕಂಡಿದೆ. ಸದ್ಯ ಡ್ಯಾಂನಲ್ಲಿ ಬರೀ 10 ಟಿಎಂಸಿ ನೀರು ಉಳಿಕೆಯಾಗಿದ್ದು, ಕುಡಿಯುವ ನೀರಿಗಾಗಿ ಡೆಡ್ ಸ್ಟೋರೇಜ್‌ಗೂ ಕೈ ಹಾಕುವ ಅನಿವಾರ್ಯತೆ ಇದೆ. ಮುಂಗಾರುಪೂರ್ವ ಮಳೆ ಸುರಿಯದೇ ಹೋದರೆ, ವಿಜಯನಗರ, ಬಳ್ಳಾರಿ, ಕೊಪ್ಪಳ, ರಾಯಚೂರು ಸೇರಿ ನೆರೆಯ ಆಂಧ್ರ, ತೆಲಂಗಾಣದ ಕೆಲ ಜಿಲ್ಲೆಗಳಲ್ಲಿ ಕುಡಿವ ನೀರಿನ ಕ್ಷಾಮ ಉಂಟಾಗಲಿದೆ.

ತುಂಗಭದ್ರಾ ಜಲಾಶಯ ಈ ಭಾಗದ ಸಂಜೀವಿನಿ. ಕುಡಿವ ಮತ್ತು ಕೃಷಿಗೆ ಆಧಾರವಾಗಿರುವ ಡ್ಯಾಂನ ಎಲ್ಲ 33 ಕ್ರಸ್ಟ್‌ಗೇಟುಗಳ ಬದಲಾವಣೆ ಹಿನ್ನೆಲೆಯಲ್ಲಿ ಸಂಗ್ರಹಿತ ನೀರನ್ನು ನದಿ ಮೂಲಕ ಹೊರ ಹರಿಸಲಾಗಿದೆ. ಮೇ.5ರ ಅಂಕಿ-ಸಂಖ್ಯೆಗಳ ಪ್ರಕಾರ 10 ಟಿಎಂಸಿ ನೀರು ಉಳಿಕೆಯಾಗಿದ್ದು ಇದರಲ್ಲಿ 2 ಟಿಎಂಸಿ ಡೆಡ್ ಸ್ಟೋರೇಜ್ ಹಾಗೂ ಎವಪರೇಷನ್(ಬಿಸಿಲಿಗೆ ನೀರು ಆವಿಯಾಗಿ ಹೋಗುವ ಪ್ರಮಾಣ) ಲಾಸ್ ಆಗಿದ್ದು, ಉಳಿದ 8 ಟಿಎಂಸಿ ನೀರು ಮಾತ್ರ ಆಂಧ್ರ-ಕರ್ನಾಟಕಕ್ಕೆ ಕುಡಿವ ಉದ್ದೇಶಕ್ಕೆ ಬಳಕೆಯಾಗಬೇಕಿದೆ.

7.50 ಟಿಎಂಸಿ ಕರ್ನಾಟಕಕ್ಕೆ

8 ಟಿಎಂಸಿಯಲ್ಲಿ 1.25 ಟಿಎಂಸಿ ಆಂಧ್ರ ಕೋಟಾ ಉಳಿದಿದ್ದು, ಕರ್ನಾಟಕದ ಪಾಲು 7.5 ಟಿಎಂಸಿ ಆಗಿದೆ. ಇದರಲ್ಲಿ ಬಚಾವತ್ ಆಯೋಗದ ಪ್ರಕಾರ ರಾಯ ಮತ್ತು ಬಸವ ಕಾಲುವೆಗೆ 365 ದಿನವೂ ನೀರು ಹರಿಸಬೇಕಾದ ಹಿನ್ನೆಲೆಯಲ್ಲಿ 1.5 ಟಿಎಂಸಿ ನೀರನ್ನು ಈ ಕಾಲುವೆಗಳಿಗೆ ಮೀಸಲಿರಿಸಲಾಗಿದೆ. 5 ಟಿಎಂಸಿಯಲ್ಲಿ ವಿಜಯನಗರ, ಕೊಪ್ಪಳ, ರಾಯಚೂರು, ಬಳ್ಳಾರಿ ಜಿಲ್ಲೆಗಳಿಗೆ ಕುಡಿವ ನೀರಿನ ದಾಹ ತೀರಿಸುವ ಶ್ರಮ ಟಿಬಿ ಬೋರ್ಡ್, ನೀರಾವರಿ ಇಲಾಖೆ ಸೇರಿ ನಾಲ್ಕೂ ಜಿಲ್ಲಾಡಳಿತಗಳ ಹೆಗಲೇರಿದೆ.

ಈಗಾಗಲೇ ಎರಡು ಬಾರಿ ಕಾಲುವೆಗಳಿಗೆ ನೀರು ಹರಿಸಿ ಕೆರೆಗಳನ್ನು ತುಂಬಿಸಿ ಕುಡಿವ ನೀರು ಸರಬರಾಜು ಮಾಡಲಾಗಿದೆ. ಬಹುತೇಕ ಕೆರೆಗಳು ಖಾಲಿಯಾಗಿದ್ದು, ಕಾಲುವೆ ಅವಲಂಬಿತ ಹಳ್ಳಿಗಳಲ್ಲಿ ಈಗಲೇ ನೀರಿನ ಸಮಸ್ಯೆ ಬಿಗಡಾಯಿಸಿದೆ. ಮೇ 10ರೊಳಗೆ ನೀರು ಹರಿಸುವಂತೆ ಗ್ರಾ.ಪಂ.ಗಳಿಂದ ಆಯಾ ಜಿಲ್ಲೆಗಳ ಜಿಲ್ಲಾಡಳಿತಕ್ಕೆ ಒತ್ತಡ ಹೇರಲಾಗುತ್ತಿದೆ. ಅಷ್ಟರೊಳಗೆ ನೀರು ಹರಿಸಿದರೆ ಕುಡಿವ ನೀರಿಗಾಗಿ ಜಲಾಶಯದಲ್ಲಿ ಕಾಯ್ದಿಟ್ಟ 5 ಟಿಎಂಸಿ ನೀರು ಖಾಲಿಯಾಗಲಿದ್ದು, ಮುಂಗಾರು ಪೂರ್ವ ಮಳೆ ಆಗದೇ ಇದ್ದರೆ ಡ್ಯಾಂನಲ್ಲಿನ ಡೆಡ್ ಸ್ಟೋರೇಜ್ ನೀರನ್ನು ಬಳಸಬೇಕಾದ ಅನಿವಾರ್ಯತೆ ಎದುರಾಗಲಿದೆ ಎನ್ನುವ ಆತಂಕ ನೀರಾವರಿ ಇಲಾಖೆ ಅಧಿಕಾರಿಗಳಲ್ಲಿ ಮನೆ ಮಾಡಿದೆ.

ಡೆಡ್ ಸ್ಟೋರೇಜ್‌ಗೂ ಕೈ

ಬರೀ 5 ಟಿಎಂಸಿ ನೀರಿನಲ್ಲಿ ನಾಲ್ಕು ಜಿಲ್ಲೆಗಳ ಕುಡಿವ ನೀರಿನ ಸಮಸ್ಯೆ ಬಗೆಹರಿಯದು ಎನ್ನುವ ಅಂಶ ಈಗ ಟಿಬಿ ಬೋರ್ಡ್ ಹಾಗೂ ನೀರಾವರಿ ಇಲಾಖೆ ಎಂಜಿನಿಯರ್‌ಗಳಲ್ಲಿ ಭೀತಿ ಸೃಷ್ಟಿಸಿದೆ. ಎಷ್ಟೇ ಲೆಕ್ಕಾಚಾರ ಹಾಕಿ ನೀರು ಹರಿಸಿದರೂ ಡೆಡ್ ಸ್ಟೋರೇಜ್‌ನ ನೀರಿಗೆ ಕೈ ಹಾಕಲೇಬೇಕಾದ ಅನಿವಾರ್ಯತೆ ಎದುರಾಗಿದೆ. ಆದರೆ ಡೆಡ್ ಸ್ಟೋರೇಜ್ ನೀರನ್ನು ಬಳಸಬಾರದು ಎನ್ನುವುದು ತಜ್ಞರ ವಾದವಾಗಿದೆ. ಡೆಡ್ ಸ್ಟೋರೇಜ್ ಜಲಾಶಯದಲ್ಲಿನ ನೀರು ಬಳಸಿದರೆ ಜಲಚರಗಳು, ಡ್ಯಾಂನ ಸುರಕ್ಷತೆ, ಅಂತರ್ಜಲ ಕುಸಿತಕ್ಕೆ ದಾರಿಯಾಗಲಿದೆ ಎನ್ನುವ ಆತಂಕಗಳಿವೆ.

ಪ್ಯಾಲಿಯೇಟಿವ್ ಕೇರ್ ಕೇಂದ್ರ ರಾಜ್ಯಾದ್ಯಂತ ವಿಸ್ತರಣೆ: ದಿನೇಶ್

ಸಂ.ಕ.ಸಮಾಚಾರ, ಬೆಂಗಳೂರು

ರೋಗಿಗಳು ಚಿಕಿತ್ಸೆಗೆ ಸ್ಪಂದಿಸದೇ ಇರುವ ಹಂತದಲ್ಲಿ, ಅಸಾಧಾರಣ ನೋವು, ಮಾನಸಿಕ ಒತ್ತಡದಿಂದ ಬಳಲುವ ರೋಗಿಗಳ ಮತ್ತು ಅಂತಹ ರೋಗಿಗಳ ಆರೈಕೆ ಮಾಡುತ್ತಿರುವ ಕುಟುಂಬ ವರ್ಗದವರಿಗೆ ಪ್ಯಾಲಿಯೇಟಿವ್ ಕೇರ್ ಕೇಂದ್ರ ವರದಾನವಾಗಲಿದೆ. ಇಂಥಹ ಆರೈಕೆ ಕೇಂದ್ರವನ್ನು ರಾಜ್ಯಾದ್ಯಂತ ಆರಂಭಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ನಗರದ ಮಲ್ಲೇಶ್ವರಂ ಕೆ.ಸಿ ಜನರಲ್ ಆಸ್ಪತ್ರೆಯಲ್ಲಿ ಮಂಗಳವಾರ ಸರನಂ ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ಸ್ಥಾಪಿಸಲಾದ "ಪ್ಯಾಲಿಯೇಟಿವ್ ಕೇರ್ ಯುನಿಟ್" ಉದ್ಘಾಟಿಸಿ ಅವರು ಮಾತನಾಡಿದ ಅವರು, ರಾಜ್ಯಾದ್ಯಂತ ಪ್ಯಾಲಿಯೇಟಿವ್ ಕೇರ್ ಕೇಂದ್ರ ವಿಸ್ತರಣೆಗೆ ಚಿಂತನೆ ಇದೆ ಎಂದರು.

ಪ್ಯಾಲಿಯೇಟಿವ್ ಕೇರ್ ಕೇಂದ್ರದಲ್ಲಿ ಚಿಕಿತ್ಸೆ ನೀಡುವುದಿಲ್ಲ. ರೋಗಿಗಳ ಆರೈಕೆ ಮಾಡುತ್ತಿರುವ ಕುಟುಂಬ ವರ್ಗದವರಿಗೆ ನೆರವಾಗುತ್ತದೆ.

ಉದ್ಘಾಟನೆಗೊಂಡ ಕೆ.ಸಿ ಜನರಲ್ ಆಸ್ಪತ್ರೆಯಲ್ಲಿ ಪ್ರಾಥಮಿಕವಾಗಿ ಐದು ಬೆಡ್‌ಗಳ ಒಂದು ವಾರ್ಡ್ ನಿರ್ಮಾಣ ಮಾಡಿದ್ದೇವೆ. ಮಾರಣಾಂತಿಕ ಅಥವಾ ತೀವ್ರವಾದ ಕಾಯಿಲೆಗಳಿಂದ ಬಳಲುತ್ತ, ಅಂತಿಮ ಹಂತದಲ್ಲಿರುವ ರೋಗಿಗಳಿಗೆ ಇದು ವಿಶೇಷ ಯೂನಿಟ್ ಆಗಿದೆ. ಕ್ಯಾನ್ಸರ್, ಕಿಡ್ನಿ ವೈಫಲ್ಯ ಸೇರಿದಂತೆ ಇತರ ರೋಗಿಗಳ ಆರೈಕೆಗೆ ಈ ವಾರ್ಡ್ ಸಹಕಾರಿಯಾಗುತ್ತದೆ ಎಂದರು.

ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಸರನಂ ಸಂಸ್ಥೆಯ ಸಹಕಾರದೊಂದಿಗೆ ಉದ್ಘಾಟನೆಯಾದ ಈ ಯುನಿಟ್‌ನಲ್ಲಿ ತಜ್ಞರ ತಂಡದಿಂದ ಹೊರರೋಗಿ ವಿಭಾಗ, ಡೇ ಕೇರ್ ವಿಭಾಗ, ಸುಸಜ್ಜಿತ ಒಳರೋಗಿ ವಿಭಾಗ ಮತ್ತು ಕೆ.ಸಿ ಜನರಲ್ ಆಸ್ಪತ್ರೆಯಿಂದ 5-8 ಕಿಲೋ ವ್ಯಾಪ್ತಿಯಲ್ಲಿ ಮನೆಗೆ ತೆರಳಿ ಆರೈಕೆ ಮಾಡುವ ಮತ್ತು ಆರೈಕೆಗೆ ಪೂರಕ ತರಬೇತಿ ನೀಡುವ ಮೊಬೈಲ್ ಯುನಿಟ್ ಸಹ ಇರಲಿದೆ. ಮಾನವೀಯತೆ ದೃಷ್ಟಿಯಿಂದ ಈ ಸೇವೆ ನೀಡಲಾಗುತ್ತಿದ್ದು ಸಾರ್ವಜನಿಕರು ಇದರ ಉಪಯೋಗ ಪಡೆಯಬೇಕೆಂದು ತಿಳಿಸಿದರು.

ಕಾರ್ಮಿಕರ ಮಕ್ಕಳಿಗೆ ₹8,736 ಮೌಲ್ಯದ ಶಾಲಾಕಿಟ್

ಸುಮಾರು 1.3 ಲಕ್ಷ ಫಲಾನುಭವಿಗಳು | ಈ ಯೋಜನೆಗೆ 115.8 ಕೋಟಿ ರೂ. ವೆಚ್ಚ

ಸಂ.ಕ.ಸಮಾಚಾರ, ಬೆಂಗಳೂರು

ರಾಜ್ಯದ ನೋಂದಾಯಿತ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ತಲಾ 8,736 ರೂ. ಮೌಲ್ಯದ ಶಾಲಾ ಕಿಟ್‌ಗಳನ್ನು ನೀಡಲು ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮೂಲಕ ಕಾರ್ಮಿಕ ಇಲಾಖೆ ನಿರ್ಧರಿಸಿದೆ.

ಈ ಯೋಜನೆಗಾಗಿ ಸುಮಾರು 1.3 ಲಕ್ಷ ಫಲಾನುಭವಿಗಳನ್ನು ಗುರುತಿಸಲಾಗಿದೆ. ಕಿಟ್‌ಗಳ ಖರೀದಿ ಮತ್ತು ವಿತರಣೆಗಾಗಿ 115.8 ಕೋಟಿ ರೂ. ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಈ ಪ್ರಸ್ತಾವನೆಗೆ ಕಳೆದ ವಾರ ಸಚಿವ ಸಂಪುಟ ಅನುಮೋದನೆ ನೀಡಿದೆ. 2021ರಲ್ಲಿ ಶಾಲಾ ಕಿಟ್ ಖರೀದಿ ವೆಚ್ಚವನ್ನು ಖರೀದಿ ಬೆಲೆಗಿಂತ ಹೆಚ್ಚಾಗಿ ತೋರಿಸುವ ಮೂಲಕ ಭ್ರಷ್ಟಾಚಾರ ನಡೆಸಿದ್ದಾರೆ ಎಂಬ ಆರೋಪ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ ಈಗ ಈ ಯೋಜನೆಯನ್ನು ಮತ್ತೆ ಮರು ಪ್ರಾರಂಭ ಮಾಡಲಾಗಿದೆ. ಪ್ರತಿ ಕಿಟ್‌ನಲ್ಲಿ ಸುಮಾರು 23 ವಸ್ತುಗಳು ಇರುತ್ತವೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಕಾಮಿಕ್ ಪುಸ್ತಕಗಳಿಂದ ಹಿಡಿದು ವ್ಯಾಕರಣ ಪಾಠಪುಸ್ತಕಗಳು, ಥರ್ಮೋ ಫ್ಲಾಸ್ಕ್‌ಗಳು ಹಾಗೂ ಚಿಕ್ಕ ಮಕ್ಕಳಿಗಾಗಿ ಆಟದ ಮಣ್ಣಿನ ವಸ್ತುಗಳವರೆಗೆ ಒಳಗೊಂಡಿರುತ್ತದೆ. ಕಿಟ್‌ಗಳು ತರಗತಿ 1ರಿಂದ 12ರವರೆಗಿನ ವಿದ್ಯಾರ್ಥಿಗಳಿಗೆ ವಯೋಮಾನದ ಪ್ರಕಾರ ವಿನ್ಯಾಸಗೊಳಿಸಲಾಗುತ್ತದೆ.

ವಿದ್ಯಾರ್ಥಿಗಳಿಗೆ ನೀಡುವ ವಸ್ತುಗಳು

1 ರಿಂದ 5ನೇ ತರಗತಿವರೆಗಿನ ಮಕ್ಕಳಿಗೆ ರೆಕ್ಸಿನ್ ಬ್ಯಾಗ್, ಪೆನ್ಸಿಲ್, ಇರೇಸರ್, ಬರವಣಿಗೆ ಪುಸ್ತಕಗಳು, ಗಣಿತ ವರ್ಕ್‌ಬುಕ್‌ಗಳು, ಕ್ರೇಯಾನ್‌ಗಳು, ಮಣ್ಣಿನ ಆಟದ ಸಾಮಗ್ರಿಗಳು, ಪೇಂಟಿಂಗ್ ಸಾಮಗ್ರಿಗಳು, ನೀರಿನ ಬಣ್ಣಗಳು, ಕಾಮಿಕ್‌ಗಳು, ರೇನ್‌ಕೋಟ್, ಸ್ಟೀಲ್ ಲಂಚ್ ಬಾಕ್ಸ್, ನೀರಿನ ಬಾಟಲ್ ಇತ್ಯಾದಿ.

6 ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಬ್ಯಾಗ್, ಬಾಲ್ ಪೆನ್‌ಗಳು, ಪೆನ್ಸಿಲ್, ಇರೇಸರ್, ಗ್ರಾಫ್ ಪುಸ್ತಕ, ಕ್ರೇಯಾನ್‌ಗಳು, ಪೇಂಟ್ ಬ್ರಷ್, ಸ್ಕೇಲ್, ಡ್ರಾಯಿಂಗ್ ಪುಸ್ತಕಗಳು, ಹೈಲೈಟರ್‌ಗಳು, ನಕ್ಷೆಗಳು, ಡಿಕ್ಷನರಿ, ರೇನ್‌ಕೋಟ್, ಲಂಚ್ ಬಾಕ್ಸ್, ನೀರಿನ ಬಾಟಲ್ ಇತ್ಯಾದಿ.

9 ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಬ್ಯಾಗ್, ಬಾಲ್ ಪೆನ್‌ಗಳು, ಗ್ರಾಫ್ ಪುಸ್ತಕ, ಕಾಂಪಾಸ್ ಬಾಕ್ಸ್, ಸ್ಟೇಪ್ಲರ್, ಕಥೆ ಪುಸ್ತಕಗಳು, ಕಾರ್ಡ್‌ಬೋರ್ಡ್ ಪ್ಯಾಡ್, ಛತ್ರಿ, ಥರ್ಮೋ ಸ್ಟೀಲ್ ಬಾಟಲ್, ಲಂಚ್ ಬಾಕ್ಸ್ ಇತ್ಯಾದಿ. ಗುಣಮಟ್ಟವನ್ನು ಖಚಿತಪಡಿಸಲು, ಇಲಾಖೆಯು ಟೆಂಡರ್ ಪ್ರಕ್ರಿಯೆಯನ್ನು ಬಿಟ್ಟು ವಿನಾಯಿತಿ ಪಡೆಯಲು ಯೋಜಿಸಿದೆ. ಇದರಿಂದ "ಲೇಖಕ್"ಬ್ರಾಂಡ್ ಪುಸ್ತಕಗಳನ್ನು ಮಾತ್ರ ಪೂರೈಕೆ ಮಾಡಲಾಗುತ್ತದೆ.

ಅಧಿಕಾರಿಗಳ ಪ್ರಕಾರ, ಕೆಲವು ವಸ್ತುಗಳ ಬೆಲೆ ಹೆಚ್ಚು ಕಾಣಬಹುದು, ಆದರೆ ಅವುಗಳನ್ನು ವರ್ಷಪೂರ್ತಿ ಬಳಸುವಂತೆ ಉತ್ತಮ ಗುಣಮಟ್ಟದಲ್ಲಿ ನೀಡಲಾಗುತ್ತದೆ. ಉದಾಹರಣೆಗೆ, 1 ರಿಂದ 5ನೇ ತರಗತಿ ವಿದ್ಯಾರ್ಥಿಗಳಿಗೆ 10 ಕಾಮಿಕ್ ಪುಸ್ತಕಗಳ ಸೆಟ್ ರೂ.895ಕ್ಕೆ ನೀಡಲಾಗುತ್ತದೆ. ಅದೇ ರೀತಿ, 10 ಪೆನ್‌ಗಳ ಬಾಕ್ಸ್ ರೂ.90 ಆಗಿದ್ದು, ಇದರಿಂದ ಪ್ರತಿ ವಿದ್ಯಾರ್ಥಿಯ ವೆಚ್ಚ ಮಧ್ಯಮ ಶಾಲೆಗೆ ರೂ.179 ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳಿಗೆ ರೂ.268 ಆಗುತ್ತದೆ.

> ರಾಜ್ಯದ ಕಾರ್ಮಿಕರ ಮಕ್ಕಳಿಗೆ ಶಾಲಾ ಕಿಟ್‌ಗಳನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಮೂಲಕ ಪೂರೈಕೆ ಮಾಡಲಾಗುತ್ತದೆ. ಎಂಎಸ್‌ಐಎಲ್ ಟೆಂಡರ್ ಪ್ರಕ್ರಿಯೆಯನ್ನು ನೋಡಿಕೊಳ್ಳುತ್ತದೆ. ಇದರ ಖರೀದಿ ವೆಚ್ಚವನ್ನು ಕಲ್ಯಾಣ ಮಂಡಳಿ ಭರಿಸುತ್ತದೆ.
> ▪ ಸಂತೋಷ್ ಲಾಡ್, ಕಾರ್ಮಿಕ ಸಚಿವ

ವಿದ್ಯಾರ್ಥಿಗಳ ಸಂಖ್ಯೆ		ಪ್ರತಿ ಕಿಟ್ ವೆಚ್ಚ
ತರಗತಿ 1 ರಿಂದ5:	45,000	8,706 ರೂ.
ತರಗತಿ 6 ರಿಂದ 8:	35,000	8,281 ರೂ
ತರಗತಿ 9 ರಿಂದ 12:	50,000	9,536 ರೂ
ಒಟ್ಟು	1.3 ಲಕ್ಷ	115.8 ಕೋ.ರೂ.

ಇಂಜಿನಿಯರಿಂಗ್ ಕಾಲೇಜು ಆರಂಭಕ್ಕೆ 10 ಅರ್ಜಿ ಸಲ್ಲಿಕೆ

ಸಂ.ಕ.ಸಮಾಚಾರ, ಬೆಂಗಳೂರು

ರಾಜ್ಯದಲ್ಲಿ ಇಂಜಿನಿಯರಿಂಗ್ ಪ್ರವೇಶಕ್ಕೆ ಬೇಡಿಕೆ ಕುಸಿಯುತ್ತಿದ್ದರೂ, ಖಾಲಿ ಸೀಟುಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವ ಪರಿಸ್ಥಿತಿಯಲ್ಲಿಯೂ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು 2026-27ರ ಶೈಕ್ಷಣಿಕ ವರ್ಷಕ್ಕಾಗಿ ಹೊಸ ಕಾಲೇಜುಗಳನ್ನು ಆರಂಭಿಸಲು ಖಾಸಗಿ ಆಡಳಿತ ಮಂಡಳಿಗಳಿಂದ 10 ಅರ್ಜಿಗಳನ್ನು ಸ್ವೀಕರಿಸಿದೆ.ಈ ಅರ್ಜಿಗಳ ಪೈಕಿ ಆರು ಬೆಂಗಳೂರು ನಗರದಿಂದ, ತಲಾ ಒಂದೊಂದು ಅರ್ಜಿಗಳು ದೊಡ್ಡಬಳ್ಳಾಪುರ, ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಹುಬ್ಬಳ್ಳಿ ಮತ್ತು ವಿಜಯಪುರದಿಂದ ಬಂದಿವೆ. ಪ್ರತಿಯೊಂದು ಕಾಲೇಜು 120 ಆಸನಗಳ ಅನುಮತಿಯನ್ನು ಕೇಳಿದೆ.

ಸಚಿವರ ಆಶ್ಚರ್ಯ: ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಅವರು ಈ ಅರ್ಜಿಗಳನ್ನು ನೋಡಿ ಆಶ್ಚರ್ಯ ವ್ಯಕ್ತಪಡಿಸಿದ್ದು, ಜನರು ಏಕೆ ಹೊಸ ಇಂಜಿನಿಯರಿಂಗ್ ಕಾಲೇಜುಗಳನ್ನು ಆರಂಭಿಸುತ್ತಿದ್ದಾರೆ ಎಂಬುದು ನನಗೆ ತಿಳಿದಿಲ್ಲ. ವಿಟಿಯು ಮುಂದೆ ಈ ವರ್ಷವೂ ಕೆಲವು ಅರ್ಜಿಗಳು ಬಂದಿರುವುದು ನನಗೆ ಆಶ್ಚರ್ಯವಾಗಿದೆ ಎಂದರು.ಪ್ರತಿ ವರ್ಷ ಹಲವಾರು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು ತಮ್ಮಿಂದಲೇ ಆಸನಗಳನ್ನು ತುಂಬಲು ಸಾಧ್ಯವಾಗದೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸೀಟುಗಳನ್ನು ಒಪ್ಪಿಸುತ್ತಿವೆ. ಪ್ರವೇಶಗಳು ಕುಸಿದಿದ್ದರೂ ಮತ್ತು ಸೀಟುಗಳು ಖಾಲಿಯಾಗಿದ್ದರೂ, ಕಳೆದ ಐದು ವರ್ಷಗಳಲ್ಲಿ ಕರ್ನಾಟಕದಲ್ಲಿ 25 ಹೊಸ ಇಂಜಿನಿಯರಿಂಗ್ ಕಾಲೇಜುಗಳು ಆರಂಭಗೊಂಡಿದ್ದು, ಅವುಗಳಲ್ಲಿ ಕೇವಲ ಒಂದು ಮಾತ್ರ ಮುಚ್ಚಲಾಗಿದೆ ಎಂದರು. ಕೃತಕ ಬುದ್ಧಿಮತ್ತೆಯಿಂದ ಉದ್ಯೋಗಗಳಿಗೆ ಅಪಾಯ ಇದೆ ಎಂದು ಕೈಗಾರಿಕೆ ಹೇಳುತ್ತಿರುವ ಸಂದರ್ಭದಲ್ಲಿ, ಹೊಸ ಕಾಲೇಜುಗಳ ಸಂಖ್ಯೆ ಹೆಚ್ಚುತ್ತಿರುವುದು ಒಳ್ಳೆಯ ಸಂಕೇತ ಎಂದು ವಿಟಿಯು ಉಪಕುಲಪತಿ ವಿದ್ಯಾಶಂಕರ್ ಎಂದು ಹೇಳಿದರು. ಕಳೆದ ನಾಲ್ಕು ವರ್ಷಗಳಲ್ಲಿ ನಾವು ನಾಲ್ಕರಿಂದ ಐದು ಅರ್ಜಿಗಳನ್ನು ಮಾತ್ರ ಪಡೆಯುತ್ತಿದ್ದೇವೆ. ಆದರೆ ಈ ವರ್ಷ ಸಂಖ್ಯೆ ದ್ವಿಗುಣವಾಗಿದೆ. ಇದರಿಂದ ಇಂದಿನ ಕೈಗಾರಿಕಾ ಬೇಡಿಕೆಗಳಿಗೆ ತಕ್ಕಂತೆ ನವೀಕೃತ ಕೌಶಲ್ಯ ಮತ್ತು ಜ್ಞಾನ ಹೊಂದಿರುವ ಇಂಜಿನಿಯರ್‌ಗಳ ಅಗತ್ಯವಿದೆ ಎಂಬುದು ಸ್ಪಷ್ಟವಾಗುತ್ತದೆ ಎಂದರು.2025ರಲ್ಲಿ 15,000ಕ್ಕೂ ಹೆಚ್ಚು ಇಂಜಿನಿಯರಿಂಗ್ ಸೀಟುಗಳು ಖಾಲಿಯಾಗಿದ್ದು, ಅದರಲ್ಲಿ 9,000 ಕಂಪ್ಯೂಟರ್ ಸೈನ್ಸ್ ಮತ್ತು ಸಂಬಂಧಿತ ವಿಷಯಗಳಿಗೆ ಸೇರಿದ್ದವು ಎಂದು ಮಾಹಿತಿ ನೀಡಿದರು.

ಕೇಂದ್ರ ಚುನಾವಣಾ ಆಯುಕ್ತರಿಂದಲೇ ಬಿಜೆಪಿಗೆ ಗೆಲುವು: ಸಚಿವ ಲಾಡ್ ಕಿಡಿ

ಸಂ.ಕ. ಸಮಾಚಾರ ಬೆಂಗಳೂರು

ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಕೇಂದ್ರ ಚುನಾವಣೆ ಆಯುಕ್ತ ಜ್ಞಾನೇಶ್ ಕುಮಾರ್‌ರಿಂದ ಬಿಜೆಪಿಗೆ ಗೆಲುವಾಗಿದೆ ಎಂದು ಸಚಿವ ಸಂತೋಷ್ ಲಾಡ್ ಚುನಾವಣಾ ಆಯೋಗದ ವಿರುದ್ಧ ಕಿಡಿಕಾರಿದ್ದಾರೆ. ಪಂಚರಾಜ್ಯ ಚುನಾವಣೆ ಮತ್ತು ಉಪ ಚುನಾವಣೆ ಫಲಿತಾಂಶದ ಬಗ್ಗೆ ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಉಪ ಚುನಾವಣೆಯಲ್ಲಿ ನಿರೀಕ್ಷೆಯಂತೆ 2 ಕ್ಷೇತ್ರದಲ್ಲಿ ನಾವು ಗೆದ್ದಿದ್ದೇವೆ. ಸರ್ಕಾರದ ಕಾರ್ಯಕ್ರಮ ಅದರ ಜೊತೆ ಕಾರ್ಯಕರ್ತರು, ಮುಖಂಡರ ಕೆಲಸದಿಂದ ಜನ ಮತ ಹಾಕಿ ಗೆಲ್ಲಿಸಿದ್ದಾರೆ ಎಂದು ತಿಳಿಸಿದರು. ಅಸ್ಸಾಂನಲ್ಲಿ ಮ್ಯಾನ್ ಆಫ್ ದಿ ಮ್ಯಾಚ್, ಮ್ಯಾನ್ ಆಫ್ ದಿ ಸಿರಿಸ್ ಜ್ಞಾನೇಶ್ ಕುಮಾರ್ ಇದ್ದಾರೆ. ಅದರ ಬಗ್ಗೆ ಮಾಹಿತಿ ಕೊಡುತ್ತೇವೆ. ಪಶ್ಚಿಮ ಬಂಗಾಳ 90 ಲಕ್ಷ ವೋಟ್ ಡಿಲೀಟ್ ಮಾಡಿ, ಬೇಕಾದ ಕಡೆ ವೋಟ್ ಡಿಲೀಟ್ ಮಾಡಿದ್ದಾರೆ. ಟಿಎಂಸಿ ಸೋಲಿಸುವ ವ್ಯವಸ್ಥೆ ಮಾಡಿದ್ದಾರೆ. ಆಡಳಿತ ವಿರೋಧಿ ಅಲೆ ಕೂಡಾ ಇತ್ತು. ಕೆಲಸದ ಮೇಲೆ ಮತ ಕೇಳದೇ ಜ್ಞಾನೇಶ್ ಕುಮಾರ್ ಮೂಲಕ ವಂಚನೆ ಮಾಡಿ ಗೆದ್ದಿದ್ದಾರೆ ಎಂದಿದ್ದಾರೆ.

ಕಬ್ಬು ರೈತರ ನೆರವಿಗೆ ಕೇಂದ್ರ: ₹ 365 ಎಫ್‌ಆರ್‌ಪಿಗೆ ಅಸ್ತು

ಕರ್ನಾಟಕದ 8-10 ಲಕ್ಷ ರೈತರಿಗೆ ಪ್ರಯೋಜನ: ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ

ಸಂ.ಕ.ಸಮಾಚಾರ, ನವದೆಹಲಿ

ಕರ್ನಾಟಕದ ಸೂರ್ಯಕಾಂತಿ ಬೆಳೆಗಾರರ ಬೆಂಬಲಕ್ಕೆ ನಿಂತ ಬೆನ್ನಲ್ಲೇ ಕೇಂದ್ರ ಸರ್ಕಾರ ಇದೀಗ ಕಬ್ಬು ಬೆಳೆಗಾರರಿಗೂ ಬೆಂಬಲ ಬೆಲೆ ಹೆಚ್ಚಿಸಿ ನೆರವಿಗೆ ಬಂದಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸಚಿವ ಸಂಪುಟ 2026-27ನೇ ಹಂಗಾಮಿಗೆ ಕಬ್ಬಿಗೆ ಶೇ.10.25 ಮೂಲ ರಿಕವರಿ ದರದ ಮೇಲೆ ಪ್ರತಿ ಕ್ವಿಂಟಲ್‌ಗೆ 365 ರೂ. ನ್ಯಾಯೋಚಿತ ಮತ್ತು ಲಾಭದಾಯಕ ಬೆಲೆಯನ್ನು (ಎಫ್‌ಆರ್‌ಪಿ) ಅನುಮೋದಿಸಿದೆ.

ಇದರಿಂದ ಕರ್ನಾಟಕದ ಸರಿ ಸುಮಾರು 8 ರಿಂದ 10 ಲಕ್ಷ ರೈತರಿಗೆ ಪ್ರಯೋಜನವಾಗಲಿದೆ ಎಂದಿದ್ದಾರೆ.

ರಿಕವರಿ ಕಡಿಮೆ ಇದ್ದರೂ ಬೆಂಬಲ ಬೆಲೆ: ಕಬ್ಬಿನ ರಿಕವರಿಯಲ್ಲಿ ಶೇ.0.1 ಏರಿಕೆಗೆ 3.56 ರೂ. ಪ್ರತಿ ಕ್ವಿಂಟಲ್ ಹೆಚ್ಚುವರಿ ಪ್ರೋತ್ಸಾಹಧನ ನೀಡುವುದರ ಜತೆಗೆ ರಿಕವರಿ ಶೇ.9.5 ಅಥವಾ ಅದಕ್ಕಿಂತ ಕಡಿಮೆ ಇದ್ದರೂ ಯಾವುದೇ ಕಡಿತವಿಲ್ಲದೆ ಪ್ರತಿ ಕ್ವಿಂಟಲ್ ಗೆ 338.3 ರೂ. ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಕೇಂದ್ರ ಸರ್ಕಾರದ ಈ ಮಹತ್ವದ ನಿರ್ಧಾರದಿಂದ ದೇಶದ ಸುಮಾರು 5 ಕೋಟಿ ಕಬ್ಬು ಬೆಳೆಗಾರರು ಮತ್ತವರ ಕುಟುಂಬಗಳಿಗೆ ನೆರವಾಗಲಿದೆ. ಅದರಂತೆ ಕರ್ನಾಟಕದಲ್ಲೂ ಸುಮಾರು 8-10 ಲಕ್ಷ ರೈತರು ಈ ಎಫ್‌ಆರ್‌ಪಿ ದರದ ಲಾಭ ಪಡೆಯಲಿದ್ದಾರೆ ಎಂದಿದ್ದಾರೆ.

ಕೇಂದ್ರದ ಈ ನಿರ್ಣಯ ಕಬ್ಬು ಬೆಳೆಗಾರರು ಮಾತ್ರವಲ್ಲದೆ, ಸಕ್ಕರೆ ಕಾರ್ಖಾನೆಗಳು ಹಾಗೂ ಸಕ್ಕರೆ ಉದ್ಯಮದ 5 ಲಕ್ಷಕ್ಕೂ ಅಧಿಕ ಕಾರ್ಮಿಕರಿಗೂ ನೆರವಾಗಲಿದೆ. ಕಬ್ಬಿನ ಎಫ್‌ಆರ್‌ಪಿ ಹೆಚ್ಚಳ ಮೂಲಕ ಸಮಸ್ತ ಸಕ್ಕರೆ ಉದ್ಯಮ ಮತ್ತು ಕೃಷಿ ಕ್ಷೇತ್ರವನ್ನು ಮತ್ತಷ್ಟು ಸಶಕ್ತಗೊಳಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ಬದ್ಧತೆ ತೋರಿದ್ದಾರೆ ಎಂದು ಸಚಿವ ಜೋಶಿ ಪ್ರತಿಪಾದಿಸಿದ್ದಾರೆ.

ರಾಜ್ಯದ ಬೆಳಗಾವಿ, ಬಾಗಲಕೋಟೆ, ಮಂಡ್ಯ, ಮೈಸೂರು, ವಿಜಯಪುರ ಮತ್ತು ಬಳ್ಳಾರಿ, ದಾವಣಗೆರೆ, ಬೀದರ್ ಹೀಗೆ ವಿವಿಧ ಜಿಲ್ಲೆಗಳು ಕಬ್ಬು ಬೆಳೆಯುವಲ್ಲಿ ಮುಂಚೂಣಿಯಲ್ಲಿದ್ದು, ದೇಶದ ಒಟ್ಟು ಸಕ್ಕರೆ ಉತ್ಪಾದನೆಯ ಶೇ.16 ರಷ್ಟು ಕರ್ನಾಟಕದ ಪಾಲಿದೆ. ಹೀಗಾಗಿ ಈ ಎಫ್‌ಆರ್‌ಪಿ ಹೆಚ್ಚಳವು ರಾಜ್ಯದ ಪಾಲಿಗೂ ಅನನ್ಯ ಕೊಡುಗೆಯಾಗಿದೆ ಎಂದು ಹೇಳಿದ್ದಾರೆ.

ಗ್ರಾಮೀಣರ ನೀರಿನ ಸಮಸ್ಯೆಗೆ ₹208.67 ಕೋ. ಬಿಡುಗಡೆ

ಸಂ.ಕ. ಸಮಾಚಾರ ಬೆಂಗಳೂರು

ರಾಜ್ಯದ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿ ಎದುರಾಗಿರುವ ಕುಡಿಯುವ ನೀರಿನ ಅಭಾವವನ್ನು ತಗ್ಗಿಸಲು ಸರ್ಕಾರವು ಸಮರೋಪಾದಿಯಲ್ಲಿ ಕ್ರಮ ಕೈಗೊಂಡಿದ್ದು, ಮಾರ್ಚ್ 2026 ರಿಂದ ಇಂದಿನವರೆಗೆ 208.67 ಕೋಟಿ ರೂ. ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಅವರು, ತುರ್ತು ಕಾಮಗಾರಿಗಳಿಗಾಗಿ ಮತ್ತೆ 72 ಕೋಟಿಗಳ ರೂ.ಗಳ ಹೆಚ್ಚುವರಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಈ ಅನುದಾನವನ್ನು ಪ್ರಸಕ್ತ ಸಾಲಿನ ಹೊಸ ಕಾಮಗಾರಿಗಳ ಜೊತೆಗೆ, ಈ ಹಿಂದೆ ಟಾಸ್ಕ್ ಫೋರ್ಸ್ ಸಮಿತಿಯಿಂದ ಅನುಮೋದನೆ ಪಡೆದು ಪೂರ್ಣಗೊಂಡಿದ್ದ ಕಾಮಗಾರಿಗಳ ಬಾಕಿ ಪಾವತಿಗಾಗಿ ವಿನಿಯೋಗಿಸಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ತುರ್ತು ಕ್ರಮಗಳಿಗೆ ಸೂಚನೆ

ಬೇಸಿಗೆಯ ತೀವ್ರತೆಯಿಂದ ಅಂತರ್ಜಲ ಮಟ್ಟ ಕುಸಿದು ಕೊಳವೆಬಾವಿಗಳಲ್ಲಿ ನೀರು ಕಡಿಮೆಯಾಗಿರುವ ಹಿನ್ನೆಲೆಯಲ್ಲಿ, ಜಿಲ್ಲಾಡಳಿತಗಳು ಲಭ್ಯವಿರುವ ಕೊಳವೆಬಾವಿಗಳನ್ನು ಫ್ಲಶಿಂಗ್ ಮಾಡಲು ಮತ್ತು ಆಳಗೊಳಿಸಲು ನಿರ್ದೇಶನ ನೀಡಲಾಗಿದೆ. ನೀರಿನ ಮೂಲಗಳಿಲ್ಲದ ಕಡೆಗಳಲ್ಲಿ ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆಗೆ ಪಡೆಯಲು ಅಥವಾ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಅನುಮತಿ ನೀಡಲಾಗಿದೆ. ಅನಿವಾರ್ಯ ಸಂದರ್ಭಗಳಲ್ಲಿ ಭೂವಿಜ್ಞಾನಿಗಳ ವರದಿ ಆಧರಿಸಿ ಹೊಸ ಕೊಳವೆಬಾವಿ ಕೊರೆಯಲು ಮತ್ತು ಪಂಪಿಂಗ್ ಯಂತ್ರಗಳನ್ನು ಅಳವಡಿಸಲು ಸೂಚಿಸಲಾಗಿದೆ ಎಂದಿದ್ದಾರೆ.

ಪರಿಸ್ಥಿತಿ ಅವಲೋಕನ

ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಕೊರತೆಯುಂಟಾಗದಂತೆ ಸಮರ್ಪಕವಾಗಿ ನೀರು ಸರಬರಾಜು ಮಾಡಲು ನಿರಂತರವಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳು ಟಾಸ್ಕ್ ಫೋರ್ಸ್ ಸಭೆಗಳನ್ನು ನಡೆಸುತ್ತಿದ್ದಾರೆ, ಸರ್ಕಾರದ ಮಟ್ಟದಲ್ಲಿ ನಿಯಮಿತವಾಗಿ ಪರಿಸ್ಥಿತಿಯನ್ನು ಅವಲೋಕಿಸಲಾಗುತ್ತಿದೆ ಎಂದೂ ಸಚಿವರು ಹೇಳಿದ್ದಾರೆ. ಬೃಹತ್ ಮೊತ್ತದ ಬಿಡುಗಡೆಯಿಂದಾಗಿ ರಾಜ್ಯದ 31 ಜಿಲ್ಲೆಗಳ ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ತಕ್ಷಣದ ಪರಿಹಾರ ದೊರೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಚುನಾವಣಾ ಆಯೋಗದ ಗೆಲುವು: ಖರ್ಗೆ ಟೀಕೆ

ಸಂ.ಕ. ಸಮಾಚಾರ ಬೆಂಗಳೂರು

ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಆಯೋಗವನ್ನು ದುರುಪಯೋಗ ಪಡಿಸಿಕೊಂಡು ಗೆದ್ದಿರುವಂತೆ ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲೂ ಬಿಜೆಪಿ ಹುನ್ನಾರ ನಡೆಸಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ ಖರ್ಗೆ ಎಚ್ಚರಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ಚುನಾವಣಾ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ನಾಶ ಮಾಡಿದ್ದಾರೆ. ಆಯೋಗವನ್ನು ತನ್ನ ಜೇಬಿನಲ್ಲಿ ಇಟ್ಟುಕೊಂಡು ದುರುಪಯೋಗ ಪಡಿಸಿಕೊಂಡಿದ್ದಾರೆ. ಅಸ್ಸಾಂ ಮತ್ತು ಪಶ್ಚಿಮ ಬಂಗಾಲದಲ್ಲಿ ಬಿಜೆಪಿಯ ಗೆಲುವಲ್ಲ, ಚುನಾವಣಾ ಆಯೋಗದ ಗೆಲುವು ಎಂದು ಟೀಕಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ನಂ. ಸಿಎ-15:17, 1ನೇ ಮಹಡಿ, ಅಂಜನಾದ್ರಿ ಮುಖ್ಯರಸ್ತೆ, 2ನೇ ಫೇಸ್, 4ನೇ ಹಂತ, ವಿಜಯನಗರ ಮೈಸೂರು-570010. Phone: 0821-2543003, e-mail: dcpumysore@gmail.com
ಸಂ.ಈಮರಫಮ್ಯೆ/ಪತ್ರಿಕಾ ಪ್ರಕಟಣೆ/2026-27 ದಿನಾಂಕ: 23.04.2026
ಬಾಲಕಿ ಸೌಮ್ಯ (09 ವರ್ಷ) ಈಕೆಯ ಜೈವಿಕ ಪೋಷಕರ ಪತ್ತೆಗಾಗಿ ಪ್ರಕಟಣೆ
ಮಗುವಿನ ಮಾಹಿತಿ
ಮಗುವಿನ ಭಾವಚಿತ್ರ

1) ಬಾಲಕಿಯ ಹೆಸರು: ಸೌಮ್ಯ 2) ಮಗು ಸಿಕ್ಕಿದ ಸ್ಥಳ: ನಂಜನಗೂಡು ಪಟ್ಟಣದ ಹಳೇ ಬಸ್ ನಿಲ್ದಾಣ, ಮೈಸೂರು ಜಿಲ್ಲೆ. 3) ಪ್ರಸ್ತುತ ವಿಳಾಸ: ಶ್ರೀ ಒಪನ್ ಆರ್ಮ್ಸ್ ಕ್ರೈಸಿಸ್ ಸೆಂಟ್, 2ನೇ ಕ್ರಾಸ್, ಗ್ರೇಸ್ ಸ್ಕೂಲ್ ಕ್ಯಾಂಪಸ್, ಮಹದೇಶ್ವರ ಬಡಾವಣೆ, ಮೈಸೂರು. 4) ವಯಸ್ಸು: ಸುಮಾರು 09 ವರ್ಷ. 5) ತೂಕ: 22.2 ಕೆ.ಜಿ.. 6) ಎತ್ತರ: 123 ಸೆಂ.ಮೀ. 7) ಬಣ್ಣ: ಗೋಧಿ ಬಣ್ಣ. 8) ಮಗುವಿನ ಬುದ್ಧಿ ಮಾಂದ್ಯತೆ: ಬಾಲಕಿಯ ಮಾತುಗಳು ಹಾಗೂ ಬುದ್ಧಿಯಲ್ಲಿ ವಯಸ್ಸಿಗನುಗುಣವಾದ ಪ್ರೌಢಿಮೆ ಇರುವುದಿಲ್ಲ ಹಾಗೂ ಮಾತು/ ಪದಗಳು ವಯಸ್ಸಿನುಗುಣವಾಗಿ ಸ್ಪಷ್ಟವಾಗಿಲ್ಲ. 9) ಸಂಪರ್ಕಿಸುವ ವಿಳಾಸ : ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿ, ನಂ:15-17, 1ನೇ ಮಹಡಿ, ಅಂಜನಾದ್ರಿ ರಸ್ತೆ, 02ನೇ ಘಟ್ಟ, 04ನೇ ಹಂತ, ವಿಜಯನಗರ, ಮೈಸೂರು-570032, ದೂರವಾಣಿ ಸಂಖ್ಯೆ: 0821-2543003.
ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮೈಸೂರು.
DIPR/MYS/135/SA/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕೊಪ್ಪಳ. ದೂ:08539-220054.
ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2026-27/329
ದಿ: 05/05/2026
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಯ ಟೆಂಡರ ಕಾಮಗಾರಿಗಾಗಿ 4702 ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 04 ಕಾಮಗಾರಿಗಳ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಅಂದಾಜು ಮೊತ್ತ ರೂ.**200.00** ಲಕ್ಷಗಳರಿಂದ **980.00** ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: **06.05.2026** ರಿಂದ ದಿನಾಂಕ: **16-05-2026** ಸಂಜೆ. 16.00 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ: **12.05.2026** ರಂದು ಬೆಳಿಗ್ಗೆ 11.00 ಗಂಟೆಗೆ ತೆಗೆದುಕೊಳ್ಳಲಾಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: **19-05-2026** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: **21-05-2026** ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಳನ್ನು "ಕೆ.ಪಿ.ಪಿ" ವೆಬ್‌ಸೈಟ್ Karnataka Public Procurement Portal ನಲ್ಲಿ ಪಡೆಯಬಹುದು.
ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.
ಡಿಐಪಿಆರ್/ಕೊಪ್ಪಳ/66/ಕೆಎಸ್‌ಎಂಸಿಎ/2026-27

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಜಂಟಿ ನಿರ್ದೇಶಕರ ಕಛೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ,
ಬೆಂಗಳೂರು ನಗರ ಜಿಲ್ಲೆ, 1ನೇ ಮಹಡಿ, ಜಿ.ಟಿ.ಟಿ.ಸಿ.ಹತ್ತಿರ, ಕೈಗಾರಿಕಾ ವಸಾಹತು,
ರಾಜಾಜಿನಗರ, ಬೆಂಗಳೂರು-560010, ಫೋನ್ ನಂ.23501478,
E-mail id: jd-bang-u@karnatakaindustry.gov.in / dicbangurban@gmail.com
ಸಂಖ್ಯೆ:ಜಿಕೈಕೇ/ಬೆಂ(ನ)/ಇ-ಟೆಂಡರ್/2026-27 ದಿನಾಂಕ: 05.05.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
2026-27ನೇ ಸಾಲಿನಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ನಗರ ಜಿಲ್ಲೆಯಲ್ಲಿ ಅವಶ್ಯವಿರುವ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ನೊಂದಾಯಿತ ಅರ್ಹ ಮತ್ತು ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ನುರಿತ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ಮುಖಾಂತರ (ಟೆಂಡರ್ ಸಂಖ್ಯೆ: **IC/2026-27/SE0194**) ಡೌನ್‌ಲೋಡ್ ಮಾಡಿಕೊಳ್ಳಬಹುದು ಆನ್‌ಲೈನ್ ಮೂಲಕ ಭರ್ತಿ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **18.05.2026 ರಂದು ಸಂಜೆ 5.00 ಗಂಟೆಯ ವರೆಗೆ.** ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಡೆಯಬಹುದಾಗಿದೆ.
ಸಹಿ/- ಜಂಟಿ ನಿರ್ದೇಶಕರು, ಜಿ.ಕೈ.ಕೇ, ಬೆಂಗಳೂರು ನಗರ ಜಿಲ್ಲೆ

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಸಹಾಯಕ ನಿರ್ದೇಶಕರ ಕಛೇರಿ, 4ನೇ ಮಹಡಿ, ಅನೆಕ್ಸ್-3,
ನರಸಿಂಹರಾಜ ಚೌಕ, ಬೆಂಗಳೂರು - 02.
ಇ-ಮೇಲ್:adahbccc@gmail.com
ಸಂ. ಸನಿ(ಪಸಂ)/(ಬೆಕೇನಪಾ)/ಪಿಆರ್-22/2025-26 ದಿನಾಂಕ : 05-05-2026
ಪ್ರಸ್ತಾವನೆಗಾಗಿ ಕೋರಿಕೆ ಪ್ರಕಟಣೆ
ಬೆಂಗಳೂರು ಕೇಂದ್ರ ನಗರ ಪಾಲಿಕೆ ಇವರು ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಪಶು ದೊಡ್ಡಿ ಮತ್ತು ನಗರ ಕಸಾಯಿಖಾನೆಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವುದಕ್ಕಾಗಿ ಅಲ್ಪಾವಧಿ ಪ್ರಸ್ತಾವನೆಗಾಗಿ ಕೋರಿಕೆಗಳಿಗೆ ಅರ್ಹ ಬಿಡ್ಡುದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.
ಟೆಂಡರ್ ಪ್ರಕ್ರಿಯೆಯು ಕೆಳಕಂಡಂತಿದೆ : (1) ಪ್ರಸ್ತಾವನೆಗಾಗಿ ಕೋರಿಕೆ ಸಂ. : ಬಿಸಿಸಿಸಿ/2026-27/ಎಸ್‌ಇ0168 (2) ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ (**https://kppp.karnataka.gov.in**) ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದಾದ ಪ್ರಾರಂಭಿಕ ದಿನಾಂಕ : **05-05-2026** ರಿಂದ (3) ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ : ಮುಖ್ಯ ಪಶುವೈದ್ಯಾಧಿಕಾರಿ, (ಪಶುಸಂಗೋಪನೆ), ಬೆಕೇನಪಾ (4) ಟೆಂಡರ್ ಅನುಮೋದಿಸುವ ಪ್ರಾಧಿಕಾರಿ : ಆಯುಕ್ತರು, ಬೆಕೇನಪಾ (5) ಕೆಪಿಪಿ ಪೋರ್ಟಲ್‌ನಲ್ಲಿ ವಿಚಾರಣೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **07-05-2026 ರಂದು ಸಂಜೆ 5:00 ಗಂಟೆಯವರೆಗೆ** (6) ಬಿಡ್-ಪೂರ್ವ ಸಭೆಯ ದಿನಾಂಕ : **07-05-2026 ರಂದು ಮಧ್ಯಾಹ್ನ 12:30 ಗಂಟೆಗೆ.** ಸ್ಥಳ : ಸಹಾಯಕ ನಿರ್ದೇಶಕರ ಕಛೇರಿ (ಪಶುಸಂಗೋಪನೆ), ಬೆಕೇನಪಾ, ಅನೆಕ್ಸ್-3, 4ನೇ ಮಹಡಿ, ಎನ್.ಆರ್.ಚೌಕ, ಬೆಂಗಳೂರು - 560002 (7) ಕೆಪಿಪಿ ಪೋರ್ಟಲ್‌ನಲ್ಲಿ ಪ್ರಸ್ತಾವನೆಗಾಗಿ ಕೋರಿಕೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **12-05-2026 ರಂದು ಸಂಜೆ 5:00 ಗಂಟೆಯವರೆಗೆ** (8) ಕೆಪಿಪಿ ಪೋರ್ಟಲ್‌ನಲ್ಲಿ ಪ್ರಸ್ತಾವನೆಗಾಗಿ ಕೋರಿಕೆಯನ್ನು ಆನ್‌ಲೈನ್‌ನಲ್ಲಿ ತೆರಯುವ ದಿನಾಂಕ ಮತ್ತು ಸಮಯ : **13-05-2026 ರಂದು ಸಂಜೆ 5:10 ಗಂಟೆಗೆ** (9) ಪ್ರಸ್ತಾವನೆಗಾಗಿ ಕೋರಿಕೆಯನ್ನು ತೆರೆಯುವ ಸ್ಥಳ : ಆನ್‌ಲೈನ್‌ನಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ (10) ಸಂಪರ್ಕಿಸುವ ವಿಳಾಸ : ಸಹಾಯಕ ನಿರ್ದೇಶಕರು (ಪಶುಸಂಗೋಪನೆ), ಬೆಕೇನಪಾ, ಅನೆಕ್ಸ್-3, 4ನೇ ಮಹಡಿ, ಎನ್.ಆರ್.ಚೌಕ, ಬೆಂಗಳೂರು - 560002. ದೂ: 9900229973. ಇಮೇಲ್: adahbccc@gmail.com
ಸಹಿ/- ಸಹಾಯಕ ನಿರ್ದೇಶಕರು (ಪಶುಸಂಗೋಪನೆ),
ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.
ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/ಅಪೆಂಡಿಕ್ಸ್-ಇ/2026-27/258 ದಿನಾಂಕ:02.05.2026
ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)
ಐಟಂವಾರು ಗುತ್ತಿಗೆಗಳನ್ನು ಇ-ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲೂ- 4 ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು 01 ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಅದರಲ್ಲಿ ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ. 600.00 ಲಕ್ಷಗಳು ಮತ್ತು ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ 9,00,000/- ರೂಗಳು. ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. 1) ಪೂರ್ವ ಭಾವಿ ಸಭೆ ದಿನಾಂಕ: 08.05.2026 ರ ಮುಂಜಾನೆ 11.00 ಗಂಟೆಗೆ, 2) ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:- 18.05.2026 ರ ಅಪರಾಹ್ನ 1.30 ಗಂಟೆಯವರೆಗೆ, 3) ಟೆಂಡರಗಳ ತಾಂತ್ರಿಕ ಬೀಡ್‌ಗಳನ್ನು ತೆರೆಯುವ ದಿನಾಂಕ: 19.05.2026 ರ ಅಪರಾಹ್ನ 1:31 ಘಂಟೆಯ ನಂತರ ಮತ್ತು. 4) ಟೆಂಡರಗಳ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 20.05.2026 ರ ಮುಂಜಾನೆ 11.00 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ವಾಸಾಸಂಇ/ವಿಜಯಪುರ/76/ಕೆಎಸ್‌ಎಂಸಿಎ/2026-27 ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ

Government of Karnataka
Rural Drinking Water & Sanitation Department
Office of the Executive Engineer,
Rural Drinking Water & Sanitation Department,
Bangalore Rural Division, Email-id: eerdwsd.bngr1@gmail.com
NO.EE/RWS&D/BNGR/Yettinahole-DPR/2026-27 DATE: 02.05.2026
SHORT-TERM TENDER NOTIFICATION
No.03/2026-27, Dt: 02.05.2026 (Through KPP Portal only)
On Behalf of Governor of Karnataka, Executive Engineer, Rural Drinking Water Supply & Sanitation Bangalore Rural Division invites short e-Tender in Two Cover system for Providing Consultancy Services for preparation of Preliminary Scheme Report (PSR), Concept Note with Technical Specifications and Cost estimates for Multi village Drinking Water Supply Schemes under DBOT model to rural habitation of Bengaluru Rural District from Yettinahole source through KPP Portal **(https://kppp.karnataka.gov.in).**
Tenders are invited through KPP Portal for the Below Mentioned Work.
Description: Providing Consultancy Services for preparation of Preliminary Scheme Report (PSR), Concept Note with Technical Specifications and Cost estimates for Multi-village Drinking Water Supply Schemes under DBOT model to Rural Habitation of Bengaluru Rural District from Yettinahole source. Amount put to Tender (Rupees in Lakhs): **202.29.** Earnest Money Deposit (in Rupees): **5,00,000/-.** Registered Agencies: **Registered Engineering Consulting Firm.**
Calender of Events:
1. Downloading of document through portal: **02.05.2026 to 18.05.2026 Time: 17.00 hrs.**
2. Prebid meeting: **06.05.2026 Time: 11.00 hrs.**
3. Date of Opening Technical Bid: **19.05.2026 Time: 17.05 hrs.**
4. Date of Opening Financial Bid: **22-05-2026 Time: 11.00 hrs.**
For more details this office may please be contacted during Office Hours and also through by clicking **https://kppp.karnataka.gov.in** List of Tenders which will link to all Dept. works list.
Sd/- Executive Engineer
RDW&S Division, Bangalore Rural District
DIPR/CP/RO510/AAPL/2026-27

ಕೇಂದ್ರಕ್ಕೆ ಬಂದ ರೈಲ್ವೆ ಭಾಗ್ಯ ನೈಋತ್ಯಕ್ಕೆ ಎಂದು?

ವಿಶೇಷ ರೈಲುಗಳ ಕಾಯಮಾತಿಗೆ ರೈಲ್ವೆ ಮಂಡಳಿ ಅಸ್ತು । 'ವಿಶೇಷ' ಹಣೆಪಟ್ಟಿ ತೆಗೆದಲ್ಲಿ ದರ ಶೇ. 30 ಅಗ್ಗ

■ ಹರ್ಷ ಕುಲಕರ್ಣಿ

ಸಂ.ಕ.ಸಮಾಚಾರ ಹುಬ್ಬಳ್ಳಿ
ಭಾರತೀಯ ರೈಲ್ವೆ ಮಂಡಳಿಯು ರಾಜ್ಯದ, ಅದರಲ್ಲೂ ಮುಖ್ಯವಾಗಿ ಕಲ್ಯಾಣ ಕರ್ನಾಟಕದ ಕೇಂದ್ರ ರೈಲ್ವೆ ಭಾಗದ ಪ್ರಯಾಣಿಕರಿಗೆ ಭರ್ಜರಿ ಸಿಹಿಸುದ್ದಿ ನೀಡಿದೆ.

ಈವರೆಗೆ ತಾತ್ಕಾಲಿಕವಾಗಿ 'ವಿಶೇಷ ರೈಲು' ಎಂದು ಸಂಚರಿಸುತ್ತಿದ್ದ 4 ಪ್ರಮುಖ ರೈಲುಗಳನ್ನು ರೈಲ್ವೆ ಇಲಾಖೆಯು ಅಧಿಕೃತವಾಗಿ 'ಕಾಯಂ' ಮಾಡಿ ಆದೇಶ ಹೊರಡಿಸಿದೆ. ಆದರೆ, ನೈಋತ್ಯ ರೈಲ್ವೆ ವಲಯ ವ್ಯಾಪ್ತಿಯ ಪ್ರಯಾಣಿಕರಿಗೆ ಮಾತ್ರ 'ವಿಶೇಷ' ರೈಲಿನಿಂದ ಇನ್ನೂ ಮುಕ್ತಿ ದೊರೆತಿಲ್ಲ!

ಕೇಂದ್ರ ರೈಲ್ವೆ ಭಾಗ ವ್ಯಾಪ್ತಿಯ ಕಲಬುರಗಿ, ಬೀದರ್, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳ ಜನರಿಗೆ ನೆರೆಯ ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶಕ್ಕೆ ತೆರಳಲು ಕಾಯಂ ಮತ್ತು ವಿಶ್ವಾಸಾರ್ಹ ಸಾರಿಗೆ ವ್ಯವಸ್ಥೆ ಲಭ್ಯವಾದಂತಾಗಿದೆ. ಪ್ರತಿದಿನ ಸಂಚರಿಸುತ್ತಿದ್ದ ಸೊಲ್ಲಾಪುರ–ಕಲಬುರಗಿ ಡೆಮು ರೈಲು, ದೌಂಡ್–ಕಲಬುರಗಿ ಫಾಸ್ಟ್ ಪ್ಯಾಸೆಂಜರ್, ಸೊಲ್ಲಾಪುರ–ಲೋಕಮಾನ್ಯ ತಿಲಕ್ ಎಕ್ಸ್‌ಪ್ರೆಸ್ ಹಾಗೂ ಸೊಲ್ಲಾಪುರ–ಅನಕಾಪಲ್ಲಿ ಎಕ್ಸ್‌ಪ್ರೆಸ್ ವಿಶೇಷ ರೈಲುಗಳನ್ನು ಕಾಯಂಗೊಳಿಸಿರುವುದರಿಂದ ಕೇಂದ್ರ ರೈಲ್ವೆ ಭಾಗದಿಂದ ಸಂಚರಿಸುವ ಪ್ರಯಾಣಿಕರು ಅತ್ಯಂತ ಕಡಿಮೆ ದರದಲ್ಲಿ

ದೇಶದ ವಿವಿಧ ಭಾಗಗಳನ್ನು ಕಾಯಂ ಸಂಪರ್ಕಿಸಲು ಸಹಕಾರಿಯಾಗಲಿದೆ.

ಈ ರೈಲುಗಳು 'ಸ್ಪೆಷಲ್' ಟ್ಯಾಗ್ ಹೊಂದಿದ್ದ ಕಾರಣ, ಟಿಕೆಟ್ ದರದಲ್ಲಿ ಏರಿಕೆ ಇರುತ್ತಿತ್ತು ಮತ್ತು ಸಂಚಾರದ ಅವಧಿ ಮುಕ್ತಾಯವಾದಾಗ ರದ್ದಾಗುವ ಭೀತಿ ಇರುತ್ತಿತ್ತು. ಇದೀಗ ರೈಲ್ವೆ ಮಂಡಳಿಯು ಈ ರೈಲುಗಳಿಗೆ ಹೊಸ ಕಾಯಂ ಸಂಖ್ಯೆಗಳನ್ನು ನೀಡಿ ನಿಯಮಿತಗೊಳಿಸಿರುವುದರಿಂದ, ಪ್ರಯಾಣಿಕರು ಸಾಮಾನ್ಯ ದರದಲ್ಲಿಯೇ ಟಿಕೆಟ್ ಪಡೆಯಬಹುದು.

ನೈಋತ್ಯ ರೈಲ್ವೆ ವಲಯ ಪ್ರಯಾಣಿಕರೂ ಕೂಡ ಇಲ್ಲಿನ ವಿಶೇಷ ರೈಲುಗಳನ್ನು ಕಾಯಂಗೊಳಿಸುವಂತೆ ಆಗ್ರಹಿಸುತ್ತಿದ್ದರೂ ಮಂಡಳಿ ಕ್ಯಾರೇ ಎನ್ನುತ್ತಿಲ್ಲ. ಹಲವು ವಿಶೇಷ ರೈಲುಗಳನ್ನು ಕಾಯಂ ಆಗಿ ಪರಿವರ್ತಿಸಲು ರೈಲ್ವೆ ಮಂಡಳಿಯು ತಾತ್ವಿಕ ಒಪ್ಪಿಗೆ ನೀಡಿದ್ದರೂ ನೈಋತ್ಯ ರೈಲ್ವೆಯು ಜಾರಿಗೊಳಿಸದೇ ಇರುವುದರಿಂದ ಪ್ರಯಾಣಿಕರು ಹೆಚ್ಚುವರಿ ದರ ತೆತ್ತೇ ಪ್ರಯಾಣಿಸಬೇಕಾಗಿದೆ! ಕಾಯಂ ಆದಲ್ಲಿ ರೈಲುಗಳ ಟಿಕೆಟ್ ದರ ಶೇ. 30ರಷ್ಟು ಕಡಿಮೆಯಾಗಿ ಪ್ರಯಾಣಿಕರಿಗೆ ಅನುಕೂಲವಾಗಲಿದೆ ಎಂಬುದು ಗಮನಾರ್ಹ. ಮಾರ್ಚ್ ಮೊದಲ ವಾರವೇ ಮಂಡಳಿಯು ರಾಜ್ಯದ 19 ರೈಲುಗಳನ್ನು ಪರಿವರ್ತಿಸಲು ಸುತ್ತೋಲೆ ಹೊರಡಿಸಿದೆ. ಈ ಪೈಕಿ ಯಶವಂತಪುರ–ಹೊಸೂರು ಹೊರತುಪಡಿಸಿ ಉಳಿದ ರೈಲುಗಳನ್ನು ಕಾಯಂ ಮಾಡಲಾಗಿಲ್ಲ. ಹಬ್ಬ, ಬೇಸಿಗೆ ಪ್ರಯಾಣಿಕರ ದಟ್ಟಣೆ ನಿವಾರಿಸಲು ವಿಶೇಷ ರೈಲುಗಳನ್ನು ಓಡಿಸಲಾಗುತ್ತದೆ. ಬೇಡಿಕೆ ಗಮನಿಸಿ 3, 6 ತಿಂಗಳ ಕಾಲ ತಾತ್ಕಾಲಿಕವಾಗಿ ಹೊಸ ರೈಲು ಬಿಡಲಾಗುತ್ತದೆ. ನಂತರ ಸಂಚಾರ ಅವಧಿ ವಿಸ್ತರಿಸಲಾಗುತ್ತದೆ. ಆದರೆ, ಇವುಗಳ ದರ ಹೆಚ್ಚು. ನಂತರ ಪ್ರಯಾಣಿಕರ ಅಗತ್ಯತೆ, ಸಂಖ್ಯೆ ಗಮನಿಸಿ ಕಾಯಂ ಮಾಡಲಾಗುತ್ತದೆ. ಆದರೆ, ಸಾಮಾನ್ಯ ರೈಲುಗಳಿಗಿಂತ ವಿಶೇಷ ರೈಲುಗಳಿಗೇ ಬೇಡಿಕೆ ಹೆಚ್ಚಾಗಿದೆ. ನಿಗದಿತ ಸಮಯಕ್ಕೆ ಮುಂಗಡವನ್ನೂ ಕಾಯ್ದಿರಿಸಲು ಸಾಧ್ಯವಾಗುತ್ತಿಲ್ಲ. ಹೀಗಿರುವಾಗ ವಿಶೇಷ ರೈಲು ಎಂಬ ಹಣೆಪಟ್ಟಿ ಏಕೆ ಎಂಬುದು ಪ್ರಯಾಣಿಕರ ಪ್ರಶ್ನೆಯಾಗಿದೆ.

> ಭಾರತೀಯ ರೈಲ್ವೆ ಮಂಡಳಿಯ ಆದೇಶದ ಪ್ರಕಾರ ಈವರೆಗೆ ತಾತ್ಕಾಲಿಕ ಎಂದು ಓಡಿಸಲಾಗುತ್ತಿದ್ದ ಕೆಲ 'ವಿಶೇಷ ರೈಲು'ಗಳನ್ನು ಕಾಯಂಗೊಳಿಸುವಂತೆ ಕೇಂದ್ರ ಕಚೇರಿಗೆ ಪತ್ರ ಬರೆಯಲಾಗಿದೆ. ಅಲ್ಲಿಂದ ಆದೇಶ ಬರಬೇಕು. ಅಧಿಕಾರಿಗಳ ಸೂಚನೆಯ ಮೇರೆಗೆ ಹಂತಹಂತವಾಗಿ ವಿಶೇಷ ರೈಲುಗಳನ್ನು ಕಾಯಂಗೊಳಿಸಲಾಗುವುದು.
>
> ■ ನೈಋತ್ಯ ರೈಲ್ವೆ ವಲಯ

ಕಾಯಂ ಅನುಕೂಲವೇನು?

ನೈಋತ್ಯ ರೈಲ್ವೆ ವಲಯದಲ್ಲಿ ವಿಶೇಷ ರೈಲು ಎಂದು ಹಣೆಪಟ್ಟಿ ಹೊತ್ತುಕೊಂಡು ಕಳೆದ 4–5 ವರ್ಷಗಳಿಂದ ಸಂಚರಿಸುತ್ತಿರುವ ವಿಶೇಷ ರೈಲುಗಳು ಕಾಯಂ ಆಗುವುದರಿಂದ ಯಶವಂತಪುರ–ಹಿಂದೂಪುರ, ಹುಬ್ಬಳ್ಳಿ–ಯೋಗಾನಗರಿ, ಮೈಸೂರು–ಅಜ್ಮೇರ್, ಯಶವಂತಪುರ–ತಾಳಗುಪ್ಪ ಹಾಗೂ ಬೆಂಗಳೂರಿನ ಎಸ್‌ಎಂವಿಟಿ ಮತ್ತು ಕಂಟೋನ್ಮೆಂಟ್‌ನಿಂದ ಸಂಚರಿಸುವ ಬೀದರ್, ಕಲಬುರಗಿ ರೈಲುಗಳ ಟಿಕೆಟ್ ದರ ಶೇ. 30ರಷ್ಟು ಕಡಿಮೆಯಾಗುತ್ತದೆ. ಸ್ಲೀಪರ್‌ಗಿಂತ ಹೆಚ್ಚಾಗಿ ಟೈರ್–1, 2 ಪ್ರಯಾಣಿಕರಿಗೆ ಹೆಚ್ಚು ಉಳಿತಾಯ ಆಗುತ್ತದೆ. ಕಾರವಾರ–ಮಡಗಾಂವ್ ರೈಲನ್ನು ಕೊಂಕಣ ರೈಲ್ವೆ ಹಾಗೂ ನೈಋತ್ಯ ರೈಲ್ವೆ ಎರಡೂ ವಲಯಗಳು ಸೇರಿ ಕಾಯಂ ಮಾಡಬೇಕಿದೆ.

ಕಾಂಗ್ರೆಸ್‌ನದ್ದು 'ಗೃಹಲಕ್ಷ್ಮಿ'ಯಲ್ಲ 'ಚುನಾವಣಾ ಲಕ್ಷ್ಮಿ': ಬಿವೈವಿ

ಸಂ.ಕ.ಸಮಾಚಾರ, ದಾವಣಗೆರೆ
ರಾಜ್ಯ ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ 'ಗೃಹಲಕ್ಷ್ಮಿ' ಯೋಜನೆಯು ಕೇವಲ ಚುನಾವಣೆಗಾಗಿ ಮಾಡಿಕೊಂಡಿರುವ ತಂತ್ರವಾಗಿದೆ. ಇದು ಗೃಹಲಕ್ಷ್ಮಿಯಲ್ಲ, ಬದಲಾಗಿ 'ಚುನಾವಣಾ ಲಕ್ಷ್ಮಿ' ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವ್ಯಂಗ್ಯವಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಹೆಸರಿನಲ್ಲಿ ಜನರನ್ನು ನಂಬಿಸಿ ಅಧಿಕಾರಕ್ಕೆ ಬಂದಿರುವ ಮುಖ್ಯಮಂತ್ರಿಗಳ ಸಹಿತ ಇಡೀ ಸಚಿವ ಸಂಪುಟ ದಾವಣಗೆರೆ ಮತ್ತು ಬಾಗಲಕೋಟೆಯಲ್ಲಿ ಬೀಡುಬಿಟ್ಟು ಆಡಳಿತಯಂತ್ರ ದುರುಪಯೋಗಪಡಿಸಿಕೊಂಡು ಚುನಾವಣೆ ನಡೆಸಿದೆ. ನಾಲ್ಕೈದು ತಿಂಗಳಿನಿಂದ ಹಣ ನೀಡದೆ ಬಾಕಿ ಉಳಿಸಿಕೊಂಡು, ಚುನಾವಣೆ ಹತ್ತಿರ ಬಂದಾಗ ಮೂರು ತಿಂಗಳ ಹಣವನ್ನು ಒಟ್ಟಿಗೆ ಬಿಡುಗಡೆ ಮಾಡುವುದು ಇವರ ರಾಜಕೀಯ ಗಿಮಿಕ್ ಎಂದು ಆರೋಪಿಸಿದರು.

"ಮುಂದಿನ ಜಿ.ಪಂ. ಮತ್ತು ತಾ.ಪಂ. ಚುನಾವಣೆಗಳು ಬಂದಾಗಲೂ ಕಾಂಗ್ರೆಸ್ ಇದೇ ರೀತಿ ಮಾಡುತ್ತದೆ. ಹಣವನ್ನು ಬಾಕಿ ಇರಿಸಿಕೊಂಡು ಮತದಾನದ ಮುನ್ನಾ ದಿನಗಳಲ್ಲಿ ಬಿಡುಗಡೆ ಮಾಡುವ ಮೂಲಕ ಮತದಾರರನ್ನು ಸೆಳೆಯಲು ಪ್ರಯತ್ನಿಸುತ್ತಿದೆ" ಎಂದರು. ತಮಿಳುನಾಡಿನಲ್ಲಿ ಸ್ಟಾಲಿನ್ ನೇತೃತ್ವದ ಸರ್ಕಾರವೂ ಇಂತಹದ್ದೇ 'ಉಚಿತ' ಯೋಜನೆಗಳನ್ನು ಘೋಷಿಸಿ ಇಂದು ಸಂಕಷ್ಟಕ್ಕೆ ಸಿಲುಕಿದೆ. ಕರ್ನಾಟಕದಲ್ಲೂ ಕಾಂಗ್ರೆಸ್ ಪರಿಸ್ಥಿತಿ ಅದೇ ಹಾದಿಯಲ್ಲಿದೆ ಎಂದರು.

ವೋಟ್ ಚೋರಿ ಎಂಬ ಸಿದ್ದು ಆರೋಪ ಸುಳ್ಳು: ಕಾರಜೋಳ

ಸಂ.ಕ.ಸಮಾಚಾರ, ಚಿತ್ರದುರ್ಗ
ವೋಟ್ ಚೋರಿ ಎಂದು ಸಿಎಂ ಸಿದ್ದರಾಮಯ್ಯ ಆರೋಪ ಮಾಡಿರುವುದು ಸರಿಯಲ್ಲ. ಅವರದ್ದೇ ಸರ್ಕಾರ ರಾಜ್ಯದಲ್ಲಿ ಇದೆ. ಆದರೂ ನಮ್ಮ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ಚುನಾವಣಾ ಆಯೋಗ ಸ್ವಾಯತ್ತ ಸಂಸ್ಥೆ ಆಗಿದೆ. ಅವರ ಮೇಲೆ ವಿಶ್ವಾಸವಿಲ್ಲ ಎಂದರೆ ಸಂವಿಧಾನದ ಮೇಲೆ ವಿಶ್ವಾಸವಿಲ್ಲ ಎಂದರ್ಥ ಎಂದು ತಿರುಗೇಟು ನೀಡಿದರು. ಬ್ಯಾಲೆಟ್ ಬೇಕು, ಇವಿಎಂ ಬೇಡ ಎಂದು ಹೇಳುತ್ತಾರೆ. 1999ರಲ್ಲಿ ಬಾಗಲಕೋಟೆಯಲ್ಲಿ ನಾನು ಸೇರಿ ನಾಲ್ವರು ಗೆದ್ದಿದ್ದೆವು. ಬ್ಯಾಲೆಟ್ ಪೇಪರ್ ಬದಲಿಸಿ ನನ್ನ 334 ಮತಗಳಿಂದ ಸೋಲಿಸಿದ್ದೇವೆಂದು ಘೋಷಿಸಿದರು. ಬಾಗಲಕೋಟೆ, ಬದಾಮಿ, ಹುನಗುಂದದಲ್ಲೂ ಅದೇ ರೀತಿ ಸೋಲಿಸಿದರು.

ಮರು ಮತ ಎಣಿಕೆಗೆ ಸಹ ಅವಕಾಶ ಕಲ್ಪಿಸಲಿಲ್ಲ. ಆಗ ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರ ಬಹುಮತ ಬಂದಿತ್ತು. ಕಾಂಗ್ರೆಸ್ಸಿನವರು ಚೋರಿ ಮಾಡಲು ಬ್ಯಾಲೆಟ್ ಬೇಕು ಎನ್ನುತ್ತಾರೆ ಎಂದು ಆರೋಪಿಸಿದರು. ಉಪಚುನಾವಣೆ ಫಲಿತಾಂಶ ನಾವು ಗೌರವಿಸುತ್ತೇವೆ. ಪಂಚರಾಜ್ಯಗಳಲ್ಲಿ ಮೂರು ರಾಜ್ಯದಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಕಳಂಕರಹಿತ ಪ್ರಧಾನಿ ಮೋದಿ ಆಡಳಿತದಿಂದ ಗೆಲುವು ಲಭಿಸಿದೆ. ಪಶ್ಚಿಮ ಬಂಗಾಳದ ಜನರಿಂದ ಸಮಗ್ರತೆ ಉಳಿಸುವ ಕೆಲಸ ಆಗಿದೆ. ಬಂಗಾಳದಿಂದ ಪಾಕ್, ಬಾಂಗ್ಲಾದ ನುಸುಳುಕೋರರು ಬರುತ್ತಿದ್ದರು ಎಂದರು.

ಬತ್ತಿದ ಭೀಮಾ ನದಿ, ಬಿಕ್ಕಿದ ಅನ್ನದಾತ!

ಬರ್ಬಾದ್ ಹಂತಕ್ಕೆ ರೈತನ ಬದುಕು। ಜನ ಜಾನುವಾರುಗಳ ಸ್ಥಿತಿ ಗಂಭೀರ

■ ರಾಘವೇಂದ್ರ ಕುಲಕರ್ಣಿ

ಸಂ.ಕ.ಸಮಾಚಾರ, ಇಂಡಿ(ವಿಜಯಪುರ)
ಬ್ರಿಟಿಷ್ ಆಳ್ವಿಕೆಯಿಂದಲೂ ಬರಗಾಲಕ್ಕೆ ಹೆಸರಾಗಿರುವ ವಿಜಯಪುರ ಜಿಲ್ಲೆ, ಅದರಲ್ಲಿಯೂ ವಿಶೇಷವಾಗಿ ಮಹಾರಾಷ್ಟ್ರ ಕರ್ನಾಟಕ ಗಡಿ ಭಾಗದಲ್ಲಿರುವ ಇಂಡಿ ತಾಲೂಕಿನ ಜೀವನದಿಯಾಗಿರುವ ಭೀಮೆಯ ಒಡಲು ಬರಿದಾಗಿ ರೈತನ ಸ್ಥಿತಿ ಕಂಗಾಲಾಗಿದೆ. ಜನ ಜಾನುವಾರುಗಳ ಸ್ಥಿತಿ ಗಂಭೀರವಾಗಿದೆ.

ಭೀಮಾ ನದಿ ದಡದಲ್ಲಿರುವ ಶಿರಗೂರ, ಗುಬ್ಬೆವಾಡ, ಅಗರಖೇಡ, ಚಿಕ್ಕಮಣ್ಣೂರ, ಬುಯ್ಯಾರ ಹೀಗೆ ಅನೇಕ ಗ್ರಾಮಗಳ ರೈತರ ಸ್ಥಿತಿ ಪ್ರತಿವರ್ಷ ಒಂದಿಲ್ಲೊಂದು ಆಘಾತಗಳಿಗೆ ತುತ್ತಾಗುತ್ತಲೇ ಇರುತ್ತದೆ. ಏಕೆಂದರೆ ಬೇಸಿಗೆಯಲ್ಲಿ ಹನಿ ನೀರಿಗಾಗಿ ಬಿಕ್ಕುವ ರೈತ ಮಳೆಗಾಲದಲ್ಲಿ ಅವೈಜ್ಞಾನಿಕವಾಗಿ ಒಮ್ಮೆಲೆ ನದಿಗೆ ನೀರನ್ನು ಅತಿಯಾಗಿ ಬಿಡುವದರಿಂದ ಪ್ರವಾಹ ಪರಿಸ್ಥಿತಿ ಎದುರಿಸುತ್ತಾನೆ. ಮಳೆಗಾಲದಲ್ಲಿ ಮಳೆ ಬಂದು ಅಲ್ಪ ಸ್ವಲ್ಪ ಬೆಳೆದ ಬೆಳೆ ಭೀಮಾ ಪ್ರವಾಹಕ್ಕೆ ಭೀಮಾರ್ಪಣಮಸ್ತು ಎನ್ನುವಂತಾಗುತ್ತದೆ. ಇನ್ನು ಹಾಗೂ ಹೀಗೂ

ಮಾಡಿ ಬೆಳೆದ ಬೆಳೆ ಬೇಸಿಗೆಯಲ್ಲಿ ನದಿಗೆ ನೀರಿಲ್ಲದೆ ಒಣಗುವುದನ್ನು ಕಂಡು ರೈತ ಸೊರಗಿ ಹೋಗಿದ್ದಾನೆ. ಊರಿನ ಸೊಸೈಟಿಗಳಲ್ಲಿ, ಬ್ಯಾಂಕ್‌ಗಳಲ್ಲಿ ಸಾಲ ಮಾಡಿ ಬೀಜ, ಗೊಬ್ಬರ, ಲಾಗೋಡಿ ಮಾಡಿ ಬಿತ್ತಿದ ಬೆಳೆ ಬಂದೀತು, ಸಾಲ ತೀರೀತು ಮಕ್ಕಳ ಮದುವೆ, ಶಿಕ್ಷಣ, ಉದ್ಯೋಗಕ್ಕೆ ಒಂದಿಷ್ಟು ಅನುಕೂಲವಾದೀತು ಎಂದು ಕನಸು ಕಾಣುತ್ತಿರುವ ರೈತನಿಗೆ ಈ ಬಾರಿಯ ಭೀಮಾ ನದಿ ಬತ್ತಿ ಹೋಗಿದ್ದರ ಪರಿಣಾಮ ಬದುಕು ಬರ್ಬಾದ್ ಆಗುವ ಹಂತಕ್ಕೆ ಬಂದು ತಲುಪಿದೆ.

ಸರ್ಕಾರ, ಜನಪ್ರತಿನಿಧಿಗಳು, ಅಧಿಕಾರಿಗಳು ಇನ್ನಾದರೂ ಈ ಕಡೆ ಗಮನ ನೀಡಿ ಆಗಲಿರುವ ತೊಂದರೆಗೊಂದು ಪರಿಹಾರವನ್ನು ಕಾಣಲು ಪ್ರಯತ್ನಿಸಬೇಕು. ಭೀಮಾ ನದಿಗೆ ಅಡ್ಡಲಾಗಿ ಮಹಾರಾಷ್ಟ್ರದಲ್ಲಿ ಕಟ್ಟಲಾಗಿರುವ ಅಣೆಕಟ್ಟಿನಿಂದ ಪ್ರತಿವರ್ಷ ಸರಿಯಾದ ಸಮಯಕ್ಕೆ ನೀರು ಬಿಡಿಸಬೇಕೆಂದು ರೈತ ಸಮೂಹ ಆಗ್ರಹಿಸಿದೆ.

> ನಾವು ಬೆಳೆದ ಕಬ್ಬಿನ ಬೆಳೆಗೆ ಭೀಮಾ ನದಿಯಲ್ಲಿ ನೀರಿಲ್ಲದೆ ಒಣಗುತ್ತಿವೆ. ಮಹಾರಾಷ್ಟ್ರದ ಅಣೆಕಟ್ಟೆಯಿಂದ ಸರಿಯಾದ ಸಮಯಕ್ಕೆ ನೀರು ಬಿಡಿಸಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಪ್ರತಿವರ್ಷದ ಈ ಸಮಸ್ಯೆಗೆ ಪರಿಹಾರ ಹುಡುಕುತ್ತಿಲ್ಲ. ರೈತನ ಹಿಡಿಶಾಪ ಜನಪ್ರತಿನಿಧಿಗಳಿಗೆ ಅಧಿಕಾರಿಗಳಿಗೆ ತಟ್ಟದೆ ಬಿಡುವುದಿಲ್ಲ.
>
> ■ ವಿಠ್ಠಲಗೌಡ ಮೈಲಗೊಂಡ, ರೈತ

3–4 ತಿಂಗಳಿಂದ ನರೇಗಾ ನೌಕರರಿಗೆ ವೇತನವಿಲ್ಲ

ಯೋಜನೆ ಹೆಸರು ಬದಲಾದರೂ ಸಂಬಳವಿಲ್ಲ । ಕುಟುಂಬಗಳು ಬೀದಿಗೆ ಬೀಳುವ ಸ್ಥಿತಿ

■ ಶ್ರೀಕಾಂತ ಸರಗಣಾಚಾರಿ

ಸಂ.ಕ.ಸಮಾಚಾರ ಕುಷ್ಟಗಿ (ಕೊಪ್ಪಳ)
ಮೂರ್‍ನಾಲ್ಕು ತಿಂಗಳಿಂದ ವೇತನ ಬಾರದೆ ರಾಜ್ಯದ ಆರು ಸಾವಿರಕ್ಕೂ ಅಧಿಕ ನರೇಗಾ ನೌಕರರು ಸಂಕಷ್ಟ ಅನುಭವಿಸುವಂತಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿ ರಾಜ್ಯದ ಎಲ್ಲ ಗ್ರಾಪಂ ವ್ಯಾಪ್ತಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಐಇಸಿ ಸಂಯೋಜಕ, ಜಿಲ್ಲಾ ಲೆಕ್ಕ ವ್ಯವಸ್ಥಾಪಕರು, ತಾಲೂಕು ಆಡಳಿತ ಸಹಾಯಕರು, ತಾಲೂಕು ಐಇಸಿ ಸಂಯೋಜಕ, ಸಹಾಯಕ ಕಾರ್ಯಕ್ರಮ ಸಂಯೋಜಕರು, ಗ್ರಾಮ ಕಾಯಕ ಮಿತ್ರರು, ತಾಂಡಾ ರೋಜಗಾರ್ ಮಿತ್ರ, ತಾಂತ್ರಿಕ ಸಂಯೋಜಕರು ಹೀಗೆ ವಿವಿಧ ಹುದ್ದೆ ನಿರ್ವಹಿಸುತ್ತಿರುವವರು ವೇತನ ಬಾರದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಸಾಲ ಮಾಡುವ ಪರಿಸ್ಥಿತಿ : ಮಕ್ಕಳ ಶಾಲಾ ಶುಲ್ಕ ಕಟ್ಟಲು ದುಡ್ಡಿಲ್ಲ, ಹಾಲಿನ ಹಣ ಕೊಡುವುದಕ್ಕೆ, ಮನೆ ಬಾಡಿಗೆ ಕಟ್ಟಲು ಹಣವಿಲ್ಲದೆ ಮನೆ ಬದಲಾಯಿಸುತ್ತಿದ್ದೇನೆ. ವೇತನ ಇಲ್ಲದೆ ಎಲ್ಲಿಯೂ ಒಂದು ರೂ. ಸಾಲ ದೊರೆಯುತ್ತಿಲ್ಲ. ಶೀಘ್ರ ನಮಗೆ ವೇತನ ನೀಡಿ ನಮ್ಮ ಕುಟುಂಬ ರಕ್ಷಿಸಿ ಎಂದು ನರೇಗಾ ಯೋಜನೆ ಅಡಿ ಕಾರ್ಯನಿರ್ವಹಿಸುತ್ತಿರುವ ಬಿಎಫ್‌ಟಿ ಮಹಿಳಾ ಸಿಬ್ಬಂದಿ ರೇಣುಕಾ 'ಸಂಯುಕ್ತ ಕರ್ನಾಟಕ'ಕ್ಕೆ ಅಳಲು ತೋಡಿಕೊಂಡಿದ್ದಾರೆ.

ವಿಬಿ ಜಿ ರಾಮ್ ಜಿ ಯೋಜನೆ: ನರೇಗಾ ಯೋಜನೆ ಬದಲಿಗೆ ಕೇಂದ್ರ ಸರ್ಕಾರದ ವಿಬಿ ಜಿ ರಾಮ್ ಜಿ ಯೋಜನೆ ಅನುಷ್ಠಾನಕ್ಕೆಗೊಂಡಿದೆ. ಆದರೆ, ಮೂರು ತಿಂಗಳನಿಂದ ಸರ್ಕಾರ ವೇತನ ಬಿಡುಗಡೆ ಮಾಡಿಲ್ಲ. ಒಟ್ಟಿನಲ್ಲಿ ಹೊರಗುತ್ತಿಗೆ ನೌಕರರ ಪರದಾಟ ಯಾರಿಗೂ ಕಾಣುತ್ತಿಲ್ಲ. ಮೇಲಧಿಕಾರಿಗಳನ್ನು ಕೇಳಿದರೆ ಸರ್ಕಾರಕ್ಕೆ ತಿಳಿಸಿದ್ದೇವೆ, ನಮ್ಮ ಕೈಯಲ್ಲಿ ಏನೂ ಇಲ್ಲ ಎಂದು ಹಾರಿಕೆ ಉತ್ತರ ನೀಡುತ್ತಿದ್ದಾರೆ. ವೇತನವಿಲ್ಲದೆ ಹಲವು ಸಮಸ್ಯೆ ಎದುರಿಸುತ್ತಿದ್ದೇವೆ ಎನ್ನುತ್ತಿದ್ದಾರೆ ನೌಕರರು.

ಸಿಬ್ಬಂದಿ ಕೆಲಸಕ್ಕೆ ಕುತ್ತು!: ಯೋಜನೆ ಸ್ಥಗಿತವಾದರೆ ಕೆಲಸ ಕಳೆದುಕೊಳುವ ಭೀತಿ. ನರೇಗಾ ನಂಬಿಕೊಂಡು ಕೆಲಸ ಮಾಡುತ್ತಿದ್ದೇವೆ. ಹಲವಾರು ತಿಂಗಳಿಂದ ವೇತನವೂ ಪಾವತಿಯಾಗಿಲ್ಲ. ಸೇವೆ ಮುಂದುವರಿಸುವ ಕುರಿತು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಯಾವುದೇ ಭರವಸೆ ಸಿಕ್ಕಿಲ್ಲ. ಕುಟುಂಬಗಳು ಬೀದಿಗೆ ಬೀಳುವ ಸ್ಥಿತಿ ಎದುರಾಗಿದೆ ಎನ್ನುತ್ತಾರೆ ಸಿಬ್ಬಂದಿ ಬಸವರಾಜ ಯಲಬುರ್ಗಾ.

ಆದಾಯದ ಮೂಲವಿಲ್ಲ: ನಮಗೆ ಬೇರೆ ಆದಾಯದ ಮೂಲವಿಲ್ಲ. ಗ್ರಾಮೀಣ ಕಾರ್ಮಿಕರು ಮತ್ತು ಕಾಮಗಾರಿ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳಲು ಸ್ವತಃ ಸಂಬಳವಿಲ್ಲದೆ ಕೆಲಸ ಮಾಡುತ್ತಿದ್ದೇನೆ ಎಂದು ಹೆಸರು ಹೇಳಲಿಚ್ಛಿಸದ ಎಂಜಿನಿಯರ್‌ಯೊಬ್ಬರು ತಿಳಿಸಿದರು.

> ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಅನುದಾನ ಬರುತ್ತದೆ. ಆದರೆ, ಇನ್ನೂವರೆಗೆ ಅನುದಾನ ಬಂದಿಲ್ಲ. ರಾಜ್ಯ ಸರ್ಕಾರದಿಂದ ಅನುದಾನ ಬಂದ ತಕ್ಷಣ ವಿಬಿ ಜಿ ರಾಮ್ ಜಿ ಯೋಜನೆ ಅಡಿ ಕೆಲಸ ಮಾಡುತ್ತಿರುವ ಸಿಬ್ಬಂದಿಗೆ ವೇತನ ಮಂಜೂರು ಮಾಡಲಾಗುವುದು.
>
> ■ ವರ್ಣಿತ್ ನೇಗಿ, ಸಿಇಒ, ಕೊಪ್ಪಳ ಜಿಪಂ

ಸುದ್ದಿ ಸಮಾಚಾರ

ಬಿಎಸ್‌ವೈ 'ಅಭಿಮಾನೋತ್ಸವ'ಕ್ಕೆ ಭಾರಿ ಸಿದ್ಧತೆ: ಪ್ರಭಾಕರ ಕೋರೆ

ಸಂ.ಕ.ಸಮಾಚಾರ ಬೆಳಗಾವಿ
ಮೇ 9ರಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಗೌರವಾರ್ಥವಾಗಿ ಚಿತ್ರದುರ್ಗದಲ್ಲಿ ಹಮ್ಮಿಕೊಳ್ಳಲಾಗಿರುವ 'ಅಭಿಮಾನೋತ್ಸವ'ಕ್ಕೆ ಭರ್ಜರಿ ಸಿದ್ಧತೆ ನಡೆದಿದೆ ಎಂದು ಮಾಜಿ ರಾಜ್ಯಸಭಾ ಸದಸ್ಯರೂ, ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವ ಸಮಿತಿಯ ಅಧ್ಯಕ್ಷರಾದ ಪದ್ಮಶ್ರೀ ಡಾ. ಪ್ರಭಾಕರ್ ಕೋರೆ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ಸರ್ಕಾರ ತರುವಲ್ಲಿ ಯಡಿಯೂರಪ್ಪ ಅವರ ಶ್ರಮ ಅಪಾರ. ಈ ಸಮಾವೇಶದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ಸಚಿವರಾದ ಪ್ರಹ್ಲಾದ ಜೋಶಿ ಹಾಗೂ ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

ವಿಶೇಷವಾಗಿ ರಾಜಕೀಯೇತರವಾಗಿ ಎಚ್.ಡಿ ಕುಮಾರಸ್ವಾಮಿಯವರು ಸೇರಿದಂತೆ ಎಲ್ಲಾ ಜಾತಿ ಮತ್ತು ಸಮುದಾಯಗಳ ಮಠಾಧೀಶರು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರೆ ಎಂದರು. ಈ ಬೃಹತ್ ಸಮಾವೇಶಕ್ಕೆ ರಾಜ್ಯಾದ್ಯಂತ ಸುಮಾರು 5 ಲಕ್ಷ ಜನ ಸೇರುವ ನಿರೀಕ್ಷೆಯಿದ್ದು, ಬೆಳಗಾವಿ ಜಿಲ್ಲೆಯಿಂದಲೇ 20 ಸಾವಿರಕ್ಕೂ ಹೆಚ್ಚು ಅಭಿಮಾನಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ನಾಗರ ಹಾವಿನ 16 ಮೊಟ್ಟೆಗಳಿಗೆ ಕೃತಕ ಕಾವು ನೀಡಿ ರಕ್ಷಿಸಿ ಕಾಡಿಗೆ

ಸಂ.ಕ.ಸಮಾಚಾರ, ಮಂಗಳೂರು
ಬೆಳ್ತಂಗಡಿ ನೆರಿಯ ಗ್ರಾಮದ ಗುಂಡಿಕಂಡ ಬೊಮ್ಮಣ್ಣ ಗೌಡ ಎಂಬವರ ಮನೆಯ ಗೋಡೆಯೊಳಗೆ ಕಳೆದ ಕೆಲದಿನಗಳ ಹಿಂದೆ ಸಿಕ್ಕಿದ ನಾಗರ

ಹಾವಿನ ಮೊಟ್ಟೆಗಳಿಗೆ ಕೃತಕ ಕಾವು ನೀಡಿ ರಕ್ಷಿಸಿ 16 ಮರಿಗಳನ್ನು ಉರಗ ಮಿತ್ರ ಕಕ್ಕಿಂಜೆಯ ಸ್ನೇಕ್ ಅನಿಲ್ ಸುರಕ್ಷಿತವಾಗಿ ಅರಣ್ಯಕ್ಕೆ ಬಿಟ್ಟಿದ್ದಾರೆ. ಮೊಟ್ಟೆಗಳಿಗೆ ಇರುವೆಗಳು ಮುತ್ತಿಕೊಂಡು ಅವುಗಳ ಸ್ಥಿತಿ ಅಪಾಯಕಾರಿಯಾಗಿತ್ತು. ಅವುಗಳನ್ನು ಗೋಡೆಯಿಂದ ಹೊರತೆಗೆದು ಅಗತ್ಯ ಆರೈಕೆ ನೀಡಿ ಕೃತಕ ಕಾವು ನೀಡುವ ಕೆಲಸವನ್ನು ಮಾಡಿದರು. ಇದೀಗ 16 ಮರಿಗಳು ಮೊಟ್ಟೆಯಿಂದ ಹೊರಬಂದಿದ್ದು,. ಆರೋಗ್ಯವಾಗಿವೆ. ಈ ನಾಗರಹಾವಿನ ಮರಿಗಳನ್ನು ಅರಣ್ಯ ಇಲಾಖೆಯ ಸಹಕಾರದಲ್ಲಿ ಚಾರ್ಮಾಡಿ ಘಾಟಿ ವಿಭಾಗದ ಸುರಕ್ಷಿತ ಅರಣ್ಯ ಪ್ರದೇಶಕ್ಕೆ ಬಿಟ್ಟಿದ್ದಾರೆ.

ಪಂಚಮಸಾಲಿ ಪೀಠದ ಸುತ್ತ ಮೇ 31ರವರೆಗೆ ನಿಷೇಧಾಜ್ಞೆ ಜಾರಿ

ದಾವಣಗೆರೆ: ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಟ್ರಸ್ಟಿಗಳು ಹಾಗೂ ವಚನಾನಂದ ಸ್ವಾಮೀಜಿ ಬೆಂಬಲಿಗರ ನಡುವೆ ಸಂಘರ್ಷದ ಕಾರಣ ಕಾನೂನು ಸುವ್ಯವಸ್ಥೆ ಕಾಪಾಡಲು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

■ ಕಾನೂನು ಸುವ್ಯವಸ್ಥೆ ಕಾಪಾಡಲು ಆದೇಶ

ಶಾಂತಿ ಕಾಪಾಡುವ ಉದ್ದೇಶದಿಂದ ಮೇ 4ರಿಂದ 31ರವರೆಗೆ ಗುರುಪೀಠದ ಆವರಣದಲ್ಲಿ ಯಾವುದೇ ಸಭೆ ಸಮಾರಂಭ ಹಾಗೂ ಸುದ್ದಿಗೋಷ್ಠಿಗಳನ್ನು ನಡೆಸದಂತೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಕಲಂ–163ರ ಅಡಿ ಸೋಮವಾರ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ. ಮಾ. 10ರಿಂದ ಏ.27ರವರೆಗೆ ಮಠದಲ್ಲಿ ಟ್ರಸ್ಟಿಗಳು ಮತ್ತು ವಚನಾನಂದ ಸ್ವಾಮೀಜಿ ಬೆಂಬಲಿಗರು ಸರಣಿ ಸಭೆ ಹಾಗೂ ಸುದ್ದಿಗೋಷ್ಠಿಗಳನ್ನು ನಡೆಸಿದ್ದಾರೆ. ಉದ್ರಿಕ್ತ ಭಾಷಣ ಮಾಡಿ, ಹೇಳಿಕೆ ನೀಡಿ, ಅವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಿಸಿದ್ದಾರೆ. ಇದರಿಂದ ಸಾರ್ವಜನಿಕ ಶಾಂತಿಗೆ ಧಕ್ಕೆಯಾಗಿದೆ. ಪ್ರಾಣ ಹಾನಿಯಾಗುವ, ಮಠದ ಆಸ್ತಿಗೆ ಧಕ್ಕೆಯಾಗುವ ಸಾಧ್ಯತೆಗಳು ಇರುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವರದಿ ನೀಡಿದ್ದಾರೆ.

ಕಾಶ್ಮೀರದಲ್ಲಿ ಗುಂಡಿಕ್ಕಿಕೊಂಡು ಕೊಡಗಿನ ಯೋಧನ ಸಾವು

ಮಡಿಕೇರಿ: ಕರ್ತವ್ಯದಲ್ಲಿದ್ದಾಗಲೇ ಬಂದೂಕಿನಿಂದ ಗುಂಡಿಕ್ಕಿಕೊಂಡು ಕೊಡಗಿನ ಸಿಆರ್‌ಪಿಎಫ್ ಯೋಧರೊಬ್ಬರು ಸಾವನ್ನಪ್ಪಿರುವ ಘಟನೆ ಮೇ 4ರಂದು ದಕ್ಷಿಣ ಕಾಶ್ಮೀರದ ಪುಲ್ವಾಮ ಟ್ರಾಲ್ ಏರಿಯಾದಲ್ಲಿ ನಡೆದಿದೆ.

ಈ ಕುರಿತು ಸಿಆರ್‌ಪಿಎಫ್ ಅಧಿಕಾರಿಗಳು ಮೃತರ ಕುಟುಂಬಕ್ಕೆ ಮಾಹಿತಿ ನೀಡಿದ್ದಾರೆ.

ಸೋಮವಾರಪೇಟೆ ತಾಲ್ಲೂಕಿನ ಯಡವಾರೆ ಗ್ರಾಮದ ನಿವಾಸಿ ಕೇಜನ ಜೋಯಪ್ಪ, ವಿಶಾಲಾಕ್ಷಿ ದಂಪತಿ ಪುತ್ರ ಕೆ.ಜಿ. ನವೀನ್(40) ಎಂಬವರೆ ಮೃತ ಯೋಧರಾಗಿದ್ದಾರೆ. ಮೃತರು ತಂದೆ, ತಾಯಿ, ಪತ್ನಿ, ಪುತ್ರಿ ಹಾಗೂ ಪುತ್ರನನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮೇ 6ರಂದು ಸ್ವಗ್ರಾಮದಲ್ಲಿ ನಡೆಯಲಿದೆ.

ಪಲ್ಲಕ್ಕಿಗೆ ಬೆಂಕಿ: ಪ್ರಯಾಣಿಕರು ಪಾರು

ಸಂ.ಕ.ಸಮಾಚಾರ ರಾಣೇಬೆನ್ನೂರು
ಬೆಂಗಳೂರಿನಿಂದ ಗದಗ ಕಡೆಗೆ ತೆರಳುತ್ತಿದ್ದ ರಾಜ್ಯ ಸಾರಿಗೆ ಸಂಸ್ಥೆಗೆ ಸೇರಿದ ಪಲ್ಲಕ್ಕಿ ಬಸ್‌ಗೆ ಬೆಂಕಿ ತಗುಲಿ ಸಂಪೂರ್ಣ ಸುಟ್ಟು ಭಸ್ಮವಾದ ಘಟನೆ ಮಂಗಳವಾರ ಬೆಳಗ್ಗೆ ಸಂಭವಿಸಿದೆ.

ರಾಣೆಬೆನ್ನೂರು ತಾಲೂಕಿನ ದೇವರಗುಡ್ಡ ಬಳಿಯ ಹೊನ್ನಾಳಿ ಗದಗ ರಸ್ತೆಯಲ್ಲಿ ದುರಂತ ಸಂಭವಿಸಿದೆ. ಸುದೈವಶಾತ್ ಚಾಲಕನ ಸಮಯ ಪ್ರಜ್ಞೆಯಿಂದ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಎಲ್ಲ 13 ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಟೈರ್ ಭಾಗದಲ್ಲಿ ದೋಷ ಉಂಟಾಗಿ ಬೆಂಕಿ ಹತ್ತಿಕೊಂಡಿತು ಎನ್ನಲಾಗಿದೆ. ತಕ್ಷಣವೇ ಚಾಲಕ ಪ್ರಯಾಣಿಕರನ್ನು ಕೆಳಗಿಳಿಸಿ ಪಾರು ಮಾಡಿದ್ದಾನೆ.

ಬಸ್ಸಿಗೆ ಬೆಂಕಿ ತಗುಲಿರುವ ವಿಷಯ ತಿಳಿಯುತ್ತಿದ್ದಂತೆ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಬಸ್‌ನ ಟೈರ್‌ಗಳು ಜಾಮ್ ಆಗಿದ್ದರಿಂದ ಬಸ್ಸಿಗೆ ಬೆಂಕಿ ತಗುಲಿದೆ ಎಂದು ವಾಯವ್ಯ ಸಾರಿಗೆ ಡಿಪೋ ಅಧಿಕಾರಿ ತಿಳಿಸಿದ್ದಾರೆ. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೇರಳದಲ್ಲಿ ಕಾಂಗ್ರೆಸ್ ಗೆದ್ದ ಬಳಿಕ ಇವಿಎಂ ಸರಿ ಆಯ್ತೆ?: ಸೋಮಣ್ಣ

ಸಂ.ಕ.ಸಮಾಚಾರ, ಬೆಂಗಳೂರು
ಇವಿಎಂ ಸರಿಯಿಲ್ಲ ಎಂದು ಹೇಳುತ್ತಿದ್ದ ಕಾಂಗ್ರೆಸ್ ನಾಯಕರು ಈಗ ಕೇರಳದಲ್ಲಿ ಕಾಂಗ್ರೆಸ್ ಗೆದ್ದ ಬಳಿಕ ಏಕೆ ಯಾಕೆ ಮಾತನಾಡುತ್ತಿಲ್ಲ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಪ್ರಶ್ನಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪಂಚ ರಾಜ್ಯಗಳ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಮಮತಾ ಬ್ಯಾನರ್ಜಿ ಬಾಯಿ ತೆಗೆದರೆ ಲೂಟಿ ಲೂಟಿ ಅಂತಿದ್ದರು. ಯಾರು ಲೂಟಿ ಮಾಡಿದರು ಎಂಬುದನ್ನು ಜನರೇ ಹೇಳಿದ್ದಾರೆ. ಪಶ್ಚಿಮ ಬಂಗಾಳದ ಅನೇಕರು ದೇಶಕ್ಕೆ ಕೊಡುಗೆ ಕೊಟ್ಟಿದ್ದಾರೆ. ಟಿಎಂಸಿ ಪಾಪದ ಕೊಡ ತುಂಬಿದ್ದರಿಂದ ಜನರು ಕೆಳಗೆ ಇಳಿಸಿದ್ದಾರೆ. ಕೇಂದ್ರದ ಒಂದು ಯೋಜನೆಯನ್ನೂ ಮಮತಾ ಜಾರಿ ಮಾಡಿರಲಿಲ್ಲ. ಭವಿಷ್ಯದಲ್ಲಿ ಪಶ್ಚಿಮ ಬಂಗಾಳದಲ್ಲಿ ಅಭಿವೃದ್ಧಿ ಕೆಲಸಗಳು ನಡೆಯಲಿವೆ ಎಂದರು.

ಯಾರನ್ನೂ ಹರಕೆಯ ಕುರಿ ಮಾಡಲ್ಲ: ರಾಜ್ಯದ ಎರಡು ಉಪಚುನಾವಣೆಗಳಲ್ಲಿ ಬಿಜೆಪಿ ಸೋಲುಂಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಎಲ್ಲರೂ ಒಂದು ತಂಡವಾಗಿ ಕೆಲಸ ಮಾಡಬೇಕಿತ್ತು. ಅದು ಆಗಲಿಲ್ಲ. ಸೋಲಿಗೆ ಯಾರನ್ನೂ ಹರಕೆಯ ಕುರಿ ಮಾಡುವುದಿಲ್ಲ ಎಂದು ಹೇಳಿದರು.

ತಾಯಿ ಹೃದಯದಿಂದ ದುಡಿದ ಬಿಎಸ್‌ವೈ

ದಶಕಗಳ ಕಾಲ ನಿಕಟ ಸಂಪರ್ಕ ಹೊಂದಿರುವ ಶ್ರೀರಾಮುಲು ಮನದಾಳದ ಮಾತು

■ ಮಲ್ಲಿಕಾರ್ಜುನ ಚಿಲ್ಕರಾಗಿ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಮಾಜಿ ಮಂತ್ರಿ ಬಿ.ಶ್ರೀರಾಮುಲು ಬಿಜೆಪಿಯ ಪ್ರಮುಖ ನಾಯಕರು. ದಶಕದಿಂದ ರಾಜಕೀಯವಾಗಿ ನಿಕಟ ಸಂಪರ್ಕ ಹೊಂದಿದ್ದು, ರಾಜಕೀಯೇತರವಾಗಿಯೂ ಆಪ್ತರು. ಯಡಿಯೂರಪ್ಪ ಅವರನ್ನು ತಂದೆ ಸ್ಥಾನದಲ್ಲಿಯೇ ನೋಡುವ ಬಿ.ಶ್ರೀರಾಮುಲು ರಾಜ್ಯ, ಅದರಲ್ಲೂ ಕಲ್ಯಾಣ ಕರ್ನಾಟಕದಲ್ಲಿ ತಮ್ಮದೇ ಆದ ನಾಯಕತ್ವದ ಮೂಲಕ ಹೆಸರು ಮಾಡಿದವರು. ತಮ್ಮ ಹಾಗೂ ಯಡಿಯೂರಪ್ಪ ನಡುವಿನ ಆತ್ಮೀಯತೆ, ರಾಜಕೀಯ ಹೋರಾಟ, ಪಕ್ಷದ ಸಂಘಟನೆ, ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಶ್ರಮಿಸಿದ ಕುರಿತು ಅವರು 'ಸಂಯುಕ್ತ ಕರ್ನಾಟಕ' ಜತೆ ಮಾತನಾಡಿದ್ದಾರೆ.

ಸಂ.ಕ.ಸಮಾಚಾರ ಬಳ್ಳಾರಿ
ಸದಾ ಹೋರಾಟದ ಬದುಕನ್ನೇ ನಡೆಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಅಧಿಕಾರ ಇದ್ದಾಗಲೂ, ಇರದೇ ಇದ್ದಾಗಲೂ ತಾಯಿ ಹೃದಯದಿಂದಲೇ ರಾಜ್ಯದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಅವರೊಬ್ಬ ನೈಜ ಜನಪರ, ರೈತಪರ ಆಡಳಿತಗಾರ ಎಂದು ಮಾಜಿ ಸಚಿವ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ಶ್ರೀರಾಮುಲು ಬಣ್ಣಿಸಿದ್ದಾರೆ.

ಯಡಿಯೂರಪ್ಪ ಅವರಲ್ಲಿನ ಹೃದಯ ವೈಶಾಲ್ಯತೆ, ತಾಯಿ ಗುಣ, ಯಾರೇ ತಪ್ಪು ಮಾಡಿದರೂ ಕ್ಷಮಿಸುವ ಸ್ವಭಾವ ಮತ್ತೊಬ್ಬರಲ್ಲಿ ನಾನು ಕಂಡಿಲ್ಲ ಎನ್ನುವ ಶ್ರೀರಾಮುಲು, ಯಡಿಯೂರಪ್ಪ ಹಿಡಿದ ಹಟ ಸಾಧಿಸದೇ ಬಿಡದ ಹೋರಾಟಗಾರ. ಎಂತಹ ಕಠಿಣ ಕಾರ್ಯವೇ ಆಗಲಿ ಅದನ್ನು ಸಿದ್ಧಿಸಿಕೊಳ್ಳುವಲ್ಲಿ ಅವರು ನಿಸ್ಸೀಮರು. ಅದರ ಪರಿಣಾಮವೇ ಅವರ ಅಧಿಕಾರದ ಅವಧಿಯಲ್ಲಿ ಕರ್ನಾಟಕ ರಾಜ್ಯ ಅದರಲ್ಲೂ ಕಲ್ಯಾಣ ಕರ್ನಾಟಕ ಅಭಿವೃದ್ಧಿ ನಾಗಲೋಟದಲ್ಲಿ ಸಾಗಿತ್ತು ಎಂದು ಶ್ರೀರಾಮುಲು ಹೇಳಿದ್ದಾರೆ. ಸಂದರ್ಶನದ ವಿವರ ಇಲ್ಲಿದೆ.

■ ಯಡಿಯೂರಪ್ಪ ಅವರ ಮತ್ತು ನಿಮ್ಮ ಸಂಬಂಧದ ಬಗೆಗೆ ಏನು ಹೇಳುತ್ತೀರಿ?
ಯಡಿಯೂರಪ್ಪ ಅವರನ್ನು ನಾನು ಪೂಜ್ಯ ಸ್ಥಾನದಲ್ಲಿಯೇ ನೋಡುತ್ತೇನೆ. ಅವರ ಜನಪರ ಕಾಳಜಿಯನ್ನು ನಾನು ಹತ್ತಿರದಿಂದ ಕಂಡಿದ್ದೇನೆ. ಇನ್ನೊಬ್ಬರಿಗೆ ಕೇಡು ಬಗೆಯುವ ಮನುಷ್ಯ ಯಡಿಯೂರಪ್ಪ ಅಲ್ಲ. ಪಕ್ಷದಲ್ಲಿ ಅವರು ಎಲ್ಲರನ್ನೂ ಮಕ್ಕಳ, ಕುಟುಂಬದ ಸ್ವರೂಪದಲ್ಲಿಯೇ ಕಂಡಿದ್ದಾರೆ. ಆದರೆ ಕೆಲವು ರಾಜಕೀಯ ಪರಿಸ್ಥಿತಿಗಳು ಅವರನ್ನು ಕೆಲವು ಬಾರಿ ಕಠೋರವಾಗಿಸಿದೆ. ಈಗ ಸದ್ಯ ಅವರು ಪಕ್ಷದಲ್ಲಿನ ಒಬ್ಬ ಹಿರಿಯ ನಾಯಕರು. ಅನುಭವಿಗಳ ಮಾರ್ಗದರ್ಶನವಿಲ್ಲದೇ ಪಕ್ಷ ನಡೆಯು ವುದಿಲ್ಲ. ಅವರ ಆಶೀರ್ವಾದದ ಮೂಲಕವೇ ನಾವು ಮುಂದಿನ ಚುನಾವಣೆಗೆ ಹೋಗುತ್ತೇವೆ.

■ 2008ರಲ್ಲಿ ಅಧಿಕಾರಕ್ಕೆ ಬರುವ ಮುನ್ನ ನಿಮ್ಮನ್ನು ಡಿಸಿಎಂ ಆಗಿ ಮಾಡುವುದಾಗಿ ಹೇಳಿದ್ದರೇ? ಯಾಕೆ ಸಾಧ್ಯವಾಗಲಿಲ್ಲ?
ಹೌದು. 2008ರ ಪೂರ್ವ ವಿಧಾನಸಭೆ ಚುನಾವಣೆಯಲ್ಲಿ ಯಡಿಯೂರಪ್ಪ ಅವರೇ ಸ್ವತಃ ನನಗಾಗಿ ಪ್ರತ್ಯೇಕ ಹೆಲಿಕಾಪ್ಟರ್ ಕೊಡಿಸಿದ್ದರು. ಯಡಿ ಯೂರಪ್ಪ ಮತ್ತು ನಾನು ಇಬ್ಬರೇ ಪಾರ್ಟಿಯಿಂದ ಹೆಲಿಕಾಪ್ಟರ್ ಬಳಸಿಕೊಂಡಿದ್ದೆವು. ರಾಜ್ಯಾದ್ಯಂತ ಸುತ್ತಾಡಿ ಪಕ್ಷಕ್ಕೆ ಮೆಜಾರಿಟಿ ಕೊಡಿಸಲು ಪ್ರಯತ್ನ ಮಾಡಿದ್ದೆವು. ಆದರೆ ಸರಕಾರ ರಚನೆಗೆ ಕೆಲವೇ ಶಾಸಕರ ಬಲ ಕಡಿಮೆಯಾಗಿತ್ತು. ಪಕ್ಷೇತರರನ್ನು ನಮ್ಮತ್ತ ಸೆಳೆದುಕೊಂಡು ಸರಕಾರ ರಚನೆ ಮಾಡಿದ್ದೆವು. ಆಗ ನನ್ನನ್ನು ಡಿಸಿಎಂ ಮಾಡುತ್ತಾರೆ ಎನ್ನುವ ಭಾವನೆ ಇತ್ತು. ಪಕ್ಷದಲ್ಲಿಯೂ ಇಂತಹ ನಿರ್ಧಾರ ಆಗಿತ್ತು. ಆದರೆ ಅನಿವಾರ್ಯ ಕಾರಣದಿಂದ ಅದು ಫಲ ಸಿಗಲಿಲ್ಲ. ಆದರೆ ಯಡಿಯೂರಪ್ಪ ಅವರು ನನಗೆ ಕ್ಯಾಬಿನೆಟ್‌ನಲ್ಲಿ ಉತ್ತಮ ಸ್ಥಾನ ನೀಡಿದ್ದರು. ನಾವೆಲ್ಲ ಒಟ್ಟುಗೂಡಿ ಕೆಲಸ ಮಾಡಿದ್ದೆವು. ಕೋವಿಡ್‌ನಂತಹ ಸಂಕಷ್ಟ ಕಾಲದಲ್ಲಿಯೂ ಸಿಎಂ ಯಡಿಯೂರಪ್ಪ ಜತೆಯಾಗಿ ನಾನು ಆರೋಗ್ಯ ಸಚಿವನಾಗಿ ಸಮರ್ಥವಾಗಿ ಆಡಳಿತ ನಿರ್ವಹಿಸಿದ್ದೇನೆ. ರಾಜ್ಯವನ್ನು ದಶ ದಿಕ್ಕುಗಳಲ್ಲಿ ಅಭಿವೃದ್ಧಿ ಮಾಡಿದ್ದೇವೆ.

■ 2008ರ ಸರಕಾರದ ಅವಧಿಯಲ್ಲಿ ನಿಮ್ಮ ಮತ್ತು ಯಡಿಯೂರಪ್ಪ ಅವರ ಕೊಡುಗೆ ಏನು?
ಮೊದಲ ಬಾರಿಗೆ ರಾಜ್ಯದಲ್ಲಿ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದು 2008ರಲ್ಲಿಯೇ. ಮೊದಲ ಸಲವೇ ರಾಜ್ಯಕ್ಕೆ ವಿಶೇಷ ಕೊಡುಗೆಯನ್ನು ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ನೀಡಿದ್ದರು. ವಿಶೇಷವಾಗಿ ರೈತರಿಗಾಗಿಯೇ ಪ್ರತ್ಯೇಕ ಬಜೆಟ್ ಮಂಡಿಸಿದರು. ಹಿಂದುಳಿದ ಏಳು ಜಿಲ್ಲೆಗಳಿಗೆ 'ಕಲ್ಯಾಣ ಕರ್ನಾಟಕ' ಎಂದು ನಾಮಕರಣ ಮಾಡಿ ಸಾವಿರಾರು ಕೋಟಿ ರೂ. ನೀಡಿದ್ದರು. ಕಲಬುರಗಿಯಲ್ಲಿಯೇ ಕ್ಯಾಬಿನೆಟ್ ನಡೆಸಿ ಹಲವು ಮೈಲುಗಲ್ಲುಗಳನ್ನು ಸಾಧಿಸಿದರು. ಕಲ್ಯಾಣ ಕರ್ನಾಟಕದ ಅಭಿವೃದ್ಧಿಯ ಬಾಗಿಲು ಯಡಿಯೂರಪ್ಪ ಸಿಎಂ ಆದಾಗಿನಿಂದಲೇ ತೆರೆಯಿತು. ಈ ಭಾಗದಲ್ಲಿ ಏರ್‌ಪೋರ್ಟ್‌ಗಳ ನಿರ್ಮಾಣ ಆರಂಭವಾಗಿದ್ದು ಅದೇ ಸಂದರ್ಭದಲ್ಲಿ.

ಕಲಬುರಗಿಯಲ್ಲಿಯೇ ಕ್ಯಾಬಿನೆಟ್

> ಹಿಂದುಳಿದ ಏಳು ಜಿಲ್ಲೆಗಳಿಗೆ 'ಕಲ್ಯಾಣ ಕರ್ನಾಟಕ' ಎಂದು ನಾಮಕರಣ ಮಾಡಿ ಸಾವಿರಾರು ಕೋಟಿ ರೂ. ನೀಡಿದವರು ಯಡಿಯೂರಪ್ಪ. ಕಲಬುರಗಿಯಲ್ಲಿಯೇ ಕ್ಯಾಬಿನೆಟ್ ನಡೆಸಿ ಹಲವು ಮೈಲುಗಲ್ಲುಗಳನ್ನು ಸಾಧಿಸಿದರು. ಕಲ್ಯಾಣ ಕರ್ನಾಟಕದ ಅಭಿವೃದ್ಧಿಯ ಬಾಗಿಲು ಅವರು ಸಿಎಂ ಆದಾಗಿನಿಂದಲೇ ತೆರೆಯಿತು.
>
> ■ ಬಿ.ಶ್ರೀರಾಮುಲು, ಮಾಜಿ ಸಚಿವ

■ ಅಭಿಮಾನೋತ್ಸವದ ಸಿದ್ಧತೆ ಹೇಗಿದೆ? ದೂರವಾದವರನ್ನು ಸೇರಿಸ್ತೀರಾ?
ರಾಜ್ಯದಲ್ಲಿ ಯಡಿಯೂರಪ್ಪ ಅವರು ತಮ್ಮದೇ ಶಕ್ತಿ ಹೊಂದಿದ ನಾಯಕ. ಪಾರ್ಟಿಗಾಗಿ ಅವರು ದುಡಿದಿದ್ದಾರೆ. ಅವರ ಹುಟ್ಟುಹಬ್ಬವನ್ನು ಈ ಬಾರಿ ವಿಶೇಷವಾಗಿ ಆಚರಿಸುವ ಮತ್ತು ಪಕ್ಷವನ್ನು ಸಂಘಟಿಸುವ ಉದ್ದೇಶದೊಂದಿಗೆ ಅಭಿಮಾನೋತ್ಸವ ನಡೆಯುತ್ತಿದೆ. ನಾನು ಕೂಡ ಇದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೇನೆ. ನಾವೆಲ್ಲ ಸೇರಿ ಈ ಕಾರ್ಯಕ್ರಮ ಯಶಸ್ವಿ ಮಾಡುತ್ತೇವೆ. ರಾಜ್ಯದಲ್ಲಿ ಶಾಪವಾಗಿರುವ ಕಾಂಗ್ರೆಸ್ ಸರಕಾರವನ್ನು ಕಿತ್ತೊಗೆಯುವ ಸಂಕಲ್ಪವನ್ನು ಮಾಡುತ್ತೇವೆ. ನಾನು ಕೂಡ ಪಕ್ಷ ನನಗೆ ನೀಡಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದೇನೆ. ಕೆಲವು ವೈಯಕ್ತಿಕ ಭಿನ್ನಾಭಿಪ್ರಾಯದ ಮೂಲಕ ಕೆಲವರು ದೂರವಾಗಿದ್ದಾರೆ. ಆದರೆ ಅವರಿಗೆ ಪಾರ್ಟಿ ಜತೆಗೆ ಭಿನ್ನಾಭಿಪ್ರಾಯಗಳಿಲ್ಲ, ಶೀಘ್ರವೇ ಎಲ್ಲರೂ ಒಟ್ಟುಗೂಡುತ್ತೇವೆ.

ಕಾಂಗ್ರೆಸ್‌ಗೆ ಮಗ್ಗಲು ಮುಳ್ಳು ಆಗುತ್ತಾ ಎಸ್‌ಡಿಪಿಐ?

ರಾಜ್ಯದಲ್ಲಿ ನೆಲೆ ಕಾಣುತ್ತಿರುವ ಪಕ್ಷಕ್ಕೆ 'ಬಂಡಾಯ'ವೇ ಆಧಾರ। ಕಾಂಗ್ರೆಸ್ ಅತೃಪ್ತರೆಲ್ಲ ಎಸ್‌ಡಿಪಿಐ ಟಿಕೆಟ್‌ಗೆ ಮೊರೆ

■ ಶಿವಕುಮಾರ್ ಮೆಣಸಿನಕಾಯಿ

ಸಂ.ಕ.ಸಮಾಚಾರ, ಬೆಂಗಳೂರು

ಪಂಚರಾಜ್ಯಗಳ ವಿಧಾನಸಭಾ ಚುನಾವಣೆ ಜತೆಯಲ್ಲೇ ನಡೆದ ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಬಹುಚರ್ಚಿತ ವಿಷಯವಾಗಿದ್ದ ಎಸ್‌ಡಿಪಿಐ (ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ) ಅಭ್ಯರ್ಥಿಯ ಸ್ಪರ್ಧೆ ಕೊನೆಗೂ ಆಡಳಿತರೂಢ ಕಾಂಗ್ರೆಸ್ ಪಕ್ಷಕ್ಕೆ ಬೆವರಿಳಿಸಿದೆ. ಪ್ರಬಲ ಶಾಮನೂರು ಮನೆತನದ ಎದುರು ಸೆಡ್ಡು ಹೊಡೆದು ಅಲ್ಪಸಂಖ್ಯಾತ ಸಮುದಾಯದ ದೊಡ್ಡ ಸಂಖ್ಯೆಯ ಮತಗಳನ್ನು ಆಕರ್ಷಿಸುವಲ್ಲಿ ಎಸ್‌ಡಿಪಿಐ ಯಶಸ್ವಿಯಾಗಿದೆ. ಈ ಮೂಲಕ ಭವಿಷ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮಗ್ಗಲು ಮುಳ್ಳು ಆಗುವ ಎಲ್ಲ ಎಚ್ಚರಿಕೆಯನ್ನೂ ರವಾನಿಸಿದೆ.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಎಸ್‌ಡಿಪಿಐ ಅಭ್ಯರ್ಥಿ ಅಫ್ಸರ್ ಕೊಡ್ಲಿಪೇಟೆ 18,975 ಮತಗಳನ್ನು ಗಳಿಸಿ ಕಾಂಗ್ರೆಸ್‌ಗೆ ಪ್ರಯಾಸದ ಗೆಲುವು ದಕ್ಕುವಂತೆ ಮಾಡಿದ್ದಾರೆ. ಸಾಂಪ್ರದಾಯಿಕವಾಗಿ ಮುಸ್ಲಿಂ ಮತಗಳು ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಜತೆಯಾಗಿದ್ದವು. ಆದರೆ ಈ ಬಾರಿ ಮುಸ್ಲಿಂ ಸಮುದಾಯ ಮತಸಂಖ್ಯೆಯ ಆಧಾರದ ಮೇಲೆ ತನಗೆ ಟಿಕೆಟ್ ಕೇಳಿದರೂ ಕಾಂಗ್ರೆಸ್ ವರಿಷ್ಠರು ಶಾಮನೂರು ಶಿವಶಂಕರಪ್ಪ ಕುಟುಂಬಕ್ಕೆ ಜೋತುಬಿದ್ದ ಪರಿಣಾಮ ಮುಸ್ಲಿಂ ಮತಗಳು ದೊಡ್ಡಸಂಖ್ಯೆಯಲ್ಲಿ ಚದುರಿ ಹೋದವು. ಅದೃಷ್ಟವಶಾತ್ ಸಮರ್ಥ್ ಶಾಮನೂರು ಗೆಲುವಿನ ನಗೆ ಬೀರಿದ್ದಾರೆ. ಆದರೆ ಇದೊಂದು ಕೃತಕ ನಗೆ ಎಂದು ಬೇರೆ ಹೇಳಬೇಕಿಲ್ಲ, ಗೆಲುವಿನ ಅಂತರ ಅದಕ್ಕೆ ಕಾರಣ.

- ಕಳೆದ ಚುನಾವಣೆಯಲ್ಲಿ 16 ಕ್ಷೇತ್ರಗಳಲ್ಲಿ ಸ್ಪರ್ಧೆ
- 7 ಕ್ಷೇತ್ರಗಳಲ್ಲಿ 3ನೇ ಸ್ಥಾನ
- ಶೇ.1ರಷ್ಟು ಮತಗಳಿಸುವತ್ತ ಎಸ್‌ಡಿಪಿಐನ ದಾಪುಗಾಲು

ಹೆಚ್ಚುತ್ತಿದೆ ಮತಗಳಿಕೆ ಪ್ರಮಾಣ!

ಎಸ್‌ಡಿಪಿಐ ಒಂದು ರಾಜಕೀಯ ಪಕ್ಷದಂತೆ ರಾಜ್ಯ ರಾಜಕಾರಣದ ಮುಖ್ಯವಾಹಿನಿಯ ನಾಯಕರು ಗಮನಿಸಿದಂತಿಲ್ಲ. ಆದರೆ ಕಳೆದ ವಿಧಾನಸಭಾ ಚುನಾವಣೆಯ ನಂತರ ರಾಜ್ಯದಲ್ಲಿ ಎಸ್‌ಡಿಪಿಐ ಅಸ್ತಿತ್ವ ಬಲಗೊಳ್ಳುತ್ತ ಹೊರಟಿದೆ. ಸಹಜವಾಗಿಯೇ ಇದು ಕಾಂಗ್ರೆಸ್ ಪಕ್ಷದ ಶಕ್ತಿಯನ್ನು ಸದ್ದಿಲ್ಲದೇ ಕಸಿಯುತ್ತಿದೆ. ಇದಕ್ಕೆ ಸಾಕ್ಷಿ ಎಂಬಂತೆ 2023ರ ವಿಧಾನಸಭಾ ಚುನಾವಣೆಯ ವೇಳೆ 16 ಕ್ಷೇತ್ರಗಳಲ್ಲಿ ಎಸ್‌ಡಿಪಿಐ ಸ್ಪರ್ಧಿಸಿತ್ತು. ಸ್ಪರ್ಧಿಸಿದ 16 ಕ್ಷೇತ್ರಗಳ ಪೈಕಿ 7 ಕ್ಷೇತ್ರಗಳಲ್ಲಿ 3ನೇ ಸ್ಥಾನ ಪಡೆದಿದೆ. ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಎಸ್‌ಡಿಪಿಐ ಅಭ್ಯರ್ಥಿ ಅಬ್ದುಲ್ ಮುಜೀಬ್ 41,037 ಮತಗಳನ್ನು ಪಡೆದಿದ್ದರು. ಇದು ಕಾಂಗ್ರೆಸ್‌ನ ವಿಜೇತ ಅಭ್ಯರ್ಥಿ ತನ್ವೀರ್ ಸೇಠ್ ಅವರು ಗಳಿಸಿದ ಒಟ್ಟು ಮತಗಳ ಶೇ.50ರಷ್ಟು ಪಾಲು. ಅಂದರೆ ಸ್ವಲ್ಪ ಹೆಚ್ಚೂ ಕಡಿಮೆ ಆಗಿದ್ದರೂ ಕಾಂಗ್ರೆಸ್ ಸೋಲುವ ಅಪಾಯವಿತ್ತು. ಮಂಗಳೂರು, ಬಂಟ್ವಾಳ, ಪುಲಿಕೇಶಿನಗರ, ಮೂಡಬಿದ್ರಿ, ತೇರದಾಳ, ಸರ್ವಜ್ಞನಗರ, ಪುತ್ತೂರು, ಚಿತ್ರದುರ್ಗ, ಬೆಳ್ತಂಗಡಿ ಮತ್ತು ಕಾಪುನಲ್ಲೂ ಕೂಡ ಗಮನಾರ್ಹ ಪ್ರಮಾಣದ ಮತಗಳನ್ನು ಗಳಿಸಿದ್ದು, ಬಹುತೇಕ ಕಡೆ ಕಾಂಗ್ರೆಸ್ ಮತಗಳನ್ನೇ ಕಸಿದಿದೆ.

ದೇಶದ 16 ರಾಜ್ಯಗಳಲ್ಲಿ ಎಸ್‌ಡಿಪಿಐ ತನ್ನ ಅಸ್ತಿತ್ವ ಹೊಂದಿದ್ದು, ಪಶ್ಚಿಮ ಬಂಗಾಳದ ನಂತರ ದಕ್ಷಿಣದ ರಾಜ್ಯಗಳಲ್ಲಿ ಹೆಚ್ಚು ಬೇರೂರುತ್ತಿದೆ. ವಿಶೇಷವಾಗಿ ಕೇರಳ, ಕರ್ನಾಟಕ, ಗೋವಾ, ಆಂಧ್ರಪ್ರದೇಶದಲ್ಲಿ ಎಸ್‌ಡಿಪಿಐ ತನ್ನ ವ್ಯಾಪ್ತಿ ವಿಸ್ತರಿಸಿಕೊಳ್ಳುತ್ತಿದೆ. ಕಳೆದ ಲೋಕಸಭೆ ಚುನಾವಣೆಯಲ್ಲಿ 30 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಕೇರಳದ ನಗರಸಭೆ ಚುನಾವಣೆಯಲ್ಲಿ 32 ಸ್ಥಾನಗಳಲ್ಲಿ ವಿಜಯಿಶಾಲಿ ಆಗಿತ್ತು. ಕರ್ನಾಟಕದ ಅಂಜುಮನ್ ಸಂಸ್ಥೆಗಳಂತಹ ಮುಸ್ಲಿಂ ಸಮುದಾಯದ ಸಾಂಸ್ಥಿಕ ಚುನಾವಣೆಗಳಲ್ಲೂ ಎಸ್‌ಡಿಪಿಐ ಇತ್ತೀಚೆಗೆ ಸ್ಪರ್ಧಿಸಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳನ್ನು ಪರಾಭವಗೊಳಿಸಿರುವುದನ್ನು ಕಾಂಗ್ರೆಸ್ ಈವರೆಗೆ ಗಂಭೀರವಾಗಿ ಪರಿಗಣಿಸಿದಂತಿಲ್ಲ.

ವಿಧಾನಸಭೆ ಮತ್ತು ಲೋಕಸಭೆಗೆ ಈವರೆಗೆ ಪ್ರವೇಶ ಮಾಡಿಲ್ಲವಾದರೂ ಸ್ಪರ್ಧಿಸಿದ ಕಡೆಗೆಲ್ಲ ಕಾಂಗ್ರೆಸ್ ಮತಗಳನ್ನೇ ಸೆಳೆಯುತ್ತಿದೆ. ಅದರಲ್ಲೂ ಕಾಂಗ್ರೆಸ್ ಟಿಕೆಟ್ ವಂಚಿತರಾದ ಅನೇಕ ಮುಖಂಡರು ಎಸ್‌ಡಿಪಿಐನತ್ತ ಮುಖ ಮಾಡುತ್ತಿದ್ದು, ಕಾಂಗ್ರೆಸ್‌ನ ಬಂಡಾಯವೇ ಎಸ್‌ಡಿಪಿಐನ ಶಕ್ತಿಯಾಗುತ್ತಿರುವುದು ವಿಪರ್ಯಾಸ.

ಕಾಂಗ್ರೆಸ್‌ಗೆ ಅಪಾಯ ತಪ್ಪಿದ್ದಲ್ಲ!

ಮುಂಬರುವ ಗ್ರೇಟರ್ ಬೆಂಗಳೂರು ನಗರಪಾಲಿಕೆ, ಜಿಪಂ ಹಾಗೂ ತಾಪಂ, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟ ರಚಿಸಿಕೊಂಡರೆ ಕಾಂಗ್ರೆಸ್ ಸೋಲಿಗೆ ಎಸ್‌ಡಿಪಿಐ ಕಾರಣವಾಗುವ ಎಲ್ಲ ಸಾಧ್ಯತೆಗಳಿವೆ. ಏಕೆಂದರೆ ಬಿಜೆಪಿ–ಜೆಡಿಎಸ್ ಮತಗಳು ಧ್ರುವೀಕರಣಗೊಂಡರೆ ಕಾಂಗ್ರೆಸ್ ಏಕಾಂಗಿಯಾಗಿ ಮತ ಸೆಳೆಯಬೇಕು. ಆಗ ಕಾಂಗ್ರೆಸ್‌ನಿಂದ ಟಿಕೆಟ್ ತಪ್ಪಿದ ಬಹಳಷ್ಟು ಆಕಾಂಕ್ಷಿಗಳು ಎಸ್‌ಡಿಪಿಐ ಕಡೆಗೆ ನೋಡುತ್ತಾರೆ. ದಾವಣಗೆರೆ ದಕ್ಷಿಣದಲ್ಲಿ ಆದಂತೆ ಬೇರೆ ಬೇರೆ ಕಡೆ ಕಾಂಗ್ರೆಸ್ ಅತೃಪ್ತರು, ಅದರಲ್ಲೂ ಅಲ್ಪಸಂಖ್ಯಾತ ಮತ್ತು ಪರಿಶಿಷ್ಟ ಸಮುದಾಯದ ಆಕಾಂಕ್ಷಿಗಳು ಎಸ್‌ಡಿಪಿಐನಿಂದ ಸ್ಪರ್ಧಿಸಿದರೆ ಕಾಂಗ್ರೆಸ್‌ಗೆ ಬಹುದೊಡ್ಡ ಪೆಟ್ಟು ಕೊಡುವುದರಲ್ಲಿ ಸಂದೇಹವೇ ಇಲ್ಲ.

ಕಾಂಗ್ರೆಸ್ ವಿಶ್ವಾಸ ಕಳೆದುಕೊಂಡಿದೆ

ದಾವಣಗೆರೆ ಜಿಲ್ಲೆಯಲ್ಲಿ 10 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ನನಗೆ ನಿರೀಕ್ಷೆ ಮೀರಿ ಜನ ಮತ ಹಾಕಿದ್ದಾರೆ. ಇದೊಂದು ಟರ್ನಿಂಗ್ ಪಾಯಿಂಟ್ ಆಗುವುದು ಖಚಿತ. ಮುಂದಿನ ದಿನಗಳಲ್ಲಿ ಸಮಸಮಾಜದ ಗುರಿ ಹೊಂದಿರುವ ಎಸ್‌ಡಿಪಿಐಗೆ ಅಹಿಂದ ಮತಗಳು ದೊಡ್ಡ ಪ್ರಮಾಣದಲ್ಲಿ ಶಿಫ್ಟ್ ಆಗಲಿವೆ. ಕಾಂಗ್ರೆಸ್ ಶೋಷಿತ ಸಮುದಾಯಗಳ ವಿಶ್ವಾಸ ಕಳೆದುಕೊಂಡಿದೆ.

■ **ಅಫ್ಸರ್ ಕೊಡ್ಲಿಪೇಟೆ,** ಎಸ್‌ಡಿಪಿಐ ರಾಜ್ಯ ಕಾರ್ಯದರ್ಶಿ

ಶಾಸಕ ಜೀವರಾಜ್ ವಿರುದ್ಧ ಎಫ್‌ಐಆರ್‌ಗೆ 2 ದಿನ ತಡೆ

ದೂರು ನೀಡಿದ ಮುರೊಳ್ಳಿಗೆ ನೋಟಿಸ್ ಜಾರಿ

ಸಂ.ಕ.ಸಮಾಚಾರ, ಬೆಂಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಅಂಚೆ ಮತಗಳ ಮರು ಎಣಿಕೆಗೆ ಸಂಬಂಧಿಸಿದಂತೆ ಬ್ಯಾಲೆಟ್ ಪೇಪರ್‌ಗಳನ್ನು ತಿದ್ದಿದ ಆರೋಪದಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಕೋರಿ ವಿಜೇತ ಅಭ್ಯರ್ಥಿ ಡಿ.ಎನ್.ಜೀವರಾಜ್ ಸಲ್ಲಿಸಿರುವ ಅರ್ಜಿಯ ಸಂಬಂಧ ಮೇ 7 ರ ವರೆಗೂ ಹೈಕೋರ್ಟ್ ತಡೆ ನೀಡಿ ಆದೇಶಿಸಿದೆ. ಅಲ್ಲದೆ ಪ್ರಕರಣ ಸಂಬಂಧ ದೂರು ನೀಡಿರುವ ಸುಧೀರ್ ಕುಮಾರ್ ಮುರೊಳ್ಳಿ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿತು. ಇದಕ್ಕೂ ಮುನ್ನ ನಡೆದ ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ಪ್ರಕರಣ ಸಂಬಂಧ ದಾಖಲೆಗಳನ್ನು ತರಿಸಿಕೊಳ್ಳಲಾಗುವುದು. ಆದ್ದರಿಂದ ವಿಚಾರಣೆಯನ್ನು ಗುರುವಾರಕ್ಕೆ ನಿಗದಿಪಡಿಸಬಹುದು ಎಂದು ಪೀಠಕ್ಕೆ ಮನವಿ ಮಾಡಿದರು.

ಜೀವರಾಜ್ ಸಲ್ಲಿಸಿರುವ ಅರ್ಜಿಯ ಸಂಬಂಧ ಮೇ 7 ರ ವರೆಗೂ ಹೈಕೋರ್ಟ್ ತಡೆ

ಈ ವೇಳೆ ಪೀಠ, ಮತ ಎಣಿಕೆ ಸಂಬಂಧ ದೋಷಗಳಿದ್ದರೆ ಚುನಾವಣಾಧಿಕಾರಿ ದೂರು ನೀಡಬಹುದು. ಆದರೆ, ಚುನಾವಣಾ ಏಜೆಂಟ್ ದೂರು ದಾಖಲಿಸಿದ್ದಾರೆ. ಚುನಾವಣಾಧಿಕಾರಿ ವಿರುದ್ಧ ದೂರು ನೀಡಿದರೆ ಪರಿಗಣಿಸಬಹುದು ಎಂದು ತಿಳಿಸಿತು. ಅಲ್ಲದೆ, ದೂರು ದುರುದ್ದೇಶಪೂರಿತವಾಗಿದೆ ಎಂದು ತಿಳಿಸಿ ಪ್ರಕರಣಕ್ಕೆ ತಡೆ ನೀಡಿತು. ಜೊತೆಗೆ ತಡೆ ತೆರವಿಗೆ ಸರ್ಕಾರ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿ ವಿಚಾರಣೆ ಮುಂದೂಡಿದೆ.

ಶಾಸಕ ಜೀವರಾಜ್‌ಗೆ ಪ್ರಮಾಣವಚನ ಬೋಧಿಸಲು ರಾಜ್ಯಪಾಲರಿಗೆ ಮನವಿ

ಪ್ರಮಾಣವಚನ ತಡ ಮಾಡಿದರೆ ಸ್ಪೀಕರ್ ವಿರುದ್ಧ ಹೋರಾಟ: ಅಶೋಕ

ಸಂ.ಕ.ಸಮಾಚಾರ, ಬೆಂಗಳೂರು

ಶೃಂಗೇರಿ ಶಾಸಕ ಡಿ.ಎನ್.ಜೀವರಾಜ್ ಅವರಿಗೆ ಸ್ಪೀಕರ್ ಯು.ಟಿ.ಖಾದರ್ ಪ್ರಮಾಣವಚನ ಬೋಧಿಸಲು ತಡ ಮಾಡುತ್ತಿದ್ದಾರೆ. ಆದ್ದರಿಂದ ರಾಜ್ಯಪಾಲರೇ ನೇರವಾಗಿ ಪ್ರಮಾಣವಚನ ಬೋಧಿಸಲು ಕೋರಿದ್ದೇವೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಲೋಕಭವನದಲ್ಲಿ ಮಂಗಳವಾರ ಡಿ.ಎನ್. ಜೀವರಾಜ್ ಹಾಗೂ ಮಾಜಿ ಸಚಿವ ಆರಗ ಜ್ಞಾನೇಂದ್ರ ಜತೆಗೂಡಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ದೂರು ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಶೃಂಗೇರಿ ವಿಧಾನಸಭಾ ಕ್ಷೇತ್ರದ ಮತ ಮರು ಎಣಿಕೆಯಲ್ಲಿ ಬಿಜೆಪಿಯ ಡಿ.ಎನ್.ಜೀವರಾಜ್ ಶಾಸಕರು ಎಂಬ ಫಲಿತಾಂಶ ಬಂದಿದೆ. ಚುನಾವಣಾ ಆಯೋಗದಿಂದ ಎಲ್ಲ ಶಾಸಕರಿಗೆ ಪ್ರಮಾಣ ಪತ್ರ ನೀಡುವಂತೆ ಇವರಿಗೂ ಪ್ರಮಾಣಪತ್ರ ಸಿಕ್ಕಿದೆ. ರಾಜ್ಯ ಸರ್ಕಾರದ ರಾಜ್ಯಪತ್ರದ ಆದೇಶವೂ ಬಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಎಲ್ಲ ಶಾಸಕರು

ಇದೇ ರೀತಿ ಶಾಸಕರು ಎನಿಸಿಕೊಳ್ಳುತ್ತಾರೆ. ಈ ಕುರಿತು ಸಭಾಧ್ಯಕ್ಷ ಯು.ಟಿ.ಖಾದರ್ ಅವರಿಗೆ ಫೋನ್ ಕರೆ ಮಾಡಿ ಮಾತಾಡಲು ಯತ್ನಿಸಿದರೆ ಬೇಕೆಂದೇ ಕರೆ ಸ್ವೀಕರಿಸಲಿಲ್ಲ. ಈಗ ಭೇಟಿ ಮಾಡಿದರೆ ನನಗೆ ಕಾನೂನಿನ ಬೋಧನೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಯಾವುದೇ ಶಾಸಕರ ವಿರುದ್ಧ ಕೋರ್ಟ್‌ಗೆ ಹೋಗಲು 45 ದಿನಗಳ ಕಾಲಾವಕಾಶವಿದ್ದರೂ ಪ್ರಮಾಣವಚನಕ್ಕೆ ಅದು ಅಡ್ಡಿಯಾಗುವುದಿಲ್ಲ. ಆದರೆ ಸ್ಪೀಕರ್ ಯು.ಟಿ.ಖಾದರ್ ಮಾತ್ರ ಪ್ರಮಾಣವಚನಕ್ಕೆ ಅವಕಾಶ ಮಾಡಿಕೊಡದೆ ಹೊಸ ಸಂಪ್ರದಾಯ ಆರಂಭಿಸಿದ್ದಾರೆ ಎಂದು ದೂರಿದರು.ಸಂವಿಧಾನದ ವಿಧಿ 188 ಪ್ರಕಾರ, ಪ್ರಮಾಣವಚನವನ್ನು ರಾಜ್ಯಪಾಲರು ಬೋಧಿಸುತ್ತಾರೆ. ಸ್ಪೀಕರ್ ಇಲ್ಲವಾದರೆ ಬೇರೆಯವರ ಹೆಸರು ಸೂಚಿಸುವ ಅಧಿಕಾರ ರಾಜ್ಯಪಾಲರಿಗಿದೆ. ಆದ್ದರಿಂದ ಸ್ಪೀಕರ್ ಬದಲು ನೀವೇ ಪ್ರಮಾಣವಚನ ಬೋಧಿಸಿ ಎಂದು ರಾಜ್ಯಪಾಲರಿಗೆ ಮನವಿ ಮಾಡಿದ್ದೇವೆ. ಅಲ್ಲದೆ ಈ ಪ್ರಕ್ರಿಯೆ ನಡೆಯದೇ ಇದ್ದಲ್ಲಿ ಸ್ಪೀಕರ್ ವಿರುದ್ಧ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜೀವರಾಜ್ ವಿರುದ್ಧದ ದೂರಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಛೀಮಾರಿ ಹಾಕಿದೆ. ಕಾಂಗ್ರೆಸ್‌ನವರೇ ದೊಡ್ಡ ಡಕಾಯಿತಿ ಮಾಡುತ್ತಾರೆ. ಮತ ಎಣಿಕೆ ವೇಳೆ ಚುನಾವಣಾಧಿಕಾರಿಗೆ ಸಿದ್ದರಾಮಯ್ಯ ಅಥವಾ ಡಿ.ಕೆ.ಶಿವಕುಮಾರ್ ಕರೆ ಮಾಡಿ ಒತ್ತಡ ಹೇರಿದ್ದಾರೆಯೇ ಎಂಬುದರ ಕುರಿತಂತೆ ಸಿಬಿಐ ತನಿಖೆ ಆಗಬೇಕಿದೆ ಎಂದರು.

ಜಮೀರ್ ಮನೇಲಿ ಸಂಬಂಧಿಕರಿಂದಲೇ 1.13 ಕೋಟಿ ರೂ. ಮೌಲ್ಯದ ಚಿನ್ನ ಕಳವು

ಸಂ.ಕ.ಸಮಾಚಾರ, ಬೆಂಗಳೂರು

ಕಳೆದ ತಿಂಗಳು ವಸತಿ ಸಚಿವ ಬಿ. ಝಡ್ ಜಮೀರ್ ಅಹ್ಮದ್ ಖಾನ್ ಮನೆಯಲ್ಲಿ 1.13 ಕೋಟಿ ರೂ. ಮೌಲ್ಯದ ಚಿನ್ನಾಭರಣಗಳನ್ನು ಕದ್ದ ಆರೋಪದ ಮೇಲೆ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಏಪ್ರಿಲ್ 15 ರಂದು ಸಚಿವರ ಪುಲಕೇಶಿನಗರದ ನಿವಾಸದಲ್ಲಿ ಕಳ್ಳತನ ನಡೆದಿತ್ತು. ಅಚ್ಚರಿಯ ವಿಚಾರವೆಂದರೆ, ಹೊರಗಿನವರಾರೂ ಈ ಕೃತ್ಯ ಎಸಗಿಲ್ಲ. ಬದಲಾಗಿ ಸಚಿವರ ತಾಯಿಯ ಸ್ವಂತ ರಕ್ತಸಂಬಂಧಿಯೇ ಈ ಕಳ್ಳತನದ ಮಾಸ್ಟರ್ ಮೈಂಡ್ ಆಗಿದ್ದಾನೆ ಪೊಲೀಸರು ತಿಳಿಸಿದ್ದಾರೆ.

ಪೊಲೀಸರ ಪ್ರಕಾರ, ಮದುವೆ ಉಡುಗೊರೆಯಾಗಿ ಸ್ವೀಕರಿಸಿದ ಮತ್ತು ಉಳಿತಾಯದ ಮೂಲಕ ಖರೀದಿಸಿದ ಚಿನ್ನಾಭರಣಗಳನ್ನು ಕೋಣೆಯ ಕಪಾಟಿನಲ್ಲಿ ಇಡಲಾಗಿತ್ತು ಎಂದು ಸಚಿವರ ತಾಯಿ ದೂರಿನಲ್ಲಿ ತಿಳಿಸಿದ್ದಾರೆ. ಪರಿಶೀಲಿಸಿದಾಗ, ಸುಮಾರು 1 ಕೆಜಿ 300 ಗ್ರಾಂ ಚಿನ್ನಾಭರಣಗಳು ಕಾಣೆಯಾಗಿರುವುದು ಕಂಡುಬಂದಿದೆ. ಸಂಬಂಧಿಕರು ತಮ್ಮ ಮನೆಗೆ ಆಗಾಗ್ಗೆ ಭೇಟಿ ನೀಡುತ್ತಿದ್ದರು ಮತ್ತು ಸಂಬಂಧಿಕರಲ್ಲಿ ಒಬ್ಬರು ಕಳ್ಳತನ ಮಾಡಿದ್ದಾರೆ ಎಂದು ಶಂಕಿಸಲಾಗಿತ್ತು ಎಂದು ಸಚಿವರ ತಾಯಿ ದೂರಿನಲ್ಲಿ ತಿಳಿಸಿದ್ದರು. ಇದರ ಆಧಾರದ ಮೇಲೆ, ಮನೆ ಕಳ್ಳತನ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆಯ ಸಮಯದಲ್ಲಿ ಪೊಲೀಸರು ಹಲವು ಕೋನಗಳಲ್ಲಿ ಪರಿಶೀಲಿಸಿದರು.

ಪ್ರಕರಣವನ್ನು ಭೇದಿಸಿರುವ ಶಿವಾಜಿನಗರ ಠಾಣೆ ಪೊಲೀಸರು, ಇಬ್ಬರು ಖದೀಮರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸೈಯದ್ ಅಮೀರ್ ಹಾಗೂ ಅಮಿರ್ ಅಹ್ಮದ್ ಬಂಧಿತ ಆರೋಪಿಗಳು. ಇವರಲ್ಲಿ ಸೈಯದ್ ಅಮೀರ್, ಸಚಿವ ಜಮೀರ್ ಅವರ ತಾಯಿಗೆ ಅತ್ಯಂತ ಹತ್ತಿರದ ಸಂಬಂಧಿ. ಮತ್ತೊಬ್ಬ ಆರೋಪಿ ಅಮಿರ್ ಅಹ್ಮದ್, ಸೈಯದ್ ಜೊತೆ ಟ್ರಾವೆಲ್ಸ್ ಉದ್ಯಮದಲ್ಲಿ ಪಾಲುದಾರನಾಗಿದ್ದ.

ಇಬ್ಬರೂ ಸೇರಿ ಈ ಖತರ್ನಾಕ್ ಪ್ಲಾನ್ ಮಾಡಿದ್ದಾರೆ. ಎಂದು ಪೊಲೀಸರು ತಿಳಿಸಿದ್ದಾರೆ.

ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ: ಸಿಎಂ ವಿಶ್ವಾಸ

ಉಪಚುನಾವಣೆ ಫಲಿತಾಂಶ ಮುಂದಿನ ಚುನಾವಣೆಗೆ ದಿಕ್ಸೂಚಿ

ಸಂ.ಕ. ಸಮಾಚಾರ ಬೆಂಗಳೂರು

ಬಾಗಲಕೋಟೆ ಹಾಗೂ ದಾವಣಗೆರೆ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಇಬ್ಬರು ಅಭ್ಯರ್ಥಿಗಳು ಗೆದ್ದಿದ್ದಾರೆ. ನಮ್ಮ ಪಂಚ ಗ್ಯಾರಂಟಿಗೆ ಜನ ಬೆಂಬಲಿಸಿದ್ದಾರೆ. ಇದರಿಂದ 2028ರಲ್ಲೂ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಉಪ ಚುನಾವಣೆ ಮುಂದಿನ 2028ರ ಚುನಾವಣೆಗೆ ದಿಕ್ಸೂಚಿ ಎಂದು ಬಿಜೆಪಿಯವರು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹೇಳುತ್ತಿದ್ದರು. ಅವರ ಪ್ರಕಾರ 2028ರಲ್ಲೂ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದಾಯಿತು ಎಂದು ಹೇಳಿದರು.

ಈ ಹಿಂದೆ ನಡೆದ ಮೂರು ಉಪ ಚುನಾವಣೆಗಳಲ್ಲೂ ಕಾಂಗ್ರೆಸ್ ಜಯ ಗಳಿಸಿದೆ. ಇದರರ್ಥ ನಮ್ಮ ಕಾರ್ಯಕ್ರಮಗಳನ್ನು ಜನರು ಮೆಚ್ಚಿಕೊಂಡಿದ್ದಾರೆ. ಅವು ಮತದಾರರನ್ನು ತಲುಪಿವೆ. ಜನರು ನಮ್ಮ ಮೇಲೆ ವಿಶ್ವಾಸ, ಅಭಿಮಾನ ಇರಿಸಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷ ನುಡಿದಂತೆ ನಡೆಯುವ ಪಕ್ಷ. ಕೊಟ್ಟ ಮಾತಿನಂತೆ ನಡೆಯುವ ಪಕ್ಷ. ಗ್ಯಾರಂಟಿ ಯೋಜನೆಗಳು ನಮ್ಮ ಕೈ ಹಿಡಿದಿದ್ದಾವೆ ಎಂದು ತಿಳಿಸಿದರು.

ಕೆಪಿಸಿಸಿ ಕ್ರಮ ಸರಿ ಇದೆ

ದಾವಣಗೆರೆಯಲ್ಲಿ ಎಸ್‌ಡಿಪಿಐಗೆ ಮತ ಬಿದ್ದಿದೆ. ನಾವು ಎಲ್ಲಿ ಎಡವಿದ್ದೇವೆ ಎಂಬುದನ್ನು ಪರಿಶೀಲನೆ ಮಾಡಲಿದ್ದೇವೆ. ಮುಸ್ಲಿಂಮರು ದಾವಣಗೆರೆಯಲ್ಲಿ ಕಾಂಗ್ರೆಸ್‌ಗೆ 35,000 ಮತ ಹಾಕಿದ್ದಾರೆ. ಒಟ್ಟು 56,000 ಮುಸ್ಲಿಮರು ಮತ ಚಲಾಯಿಸಿದ್ದಾರೆ. ಎಸ್‌ಡಿಪಿಐಗೆ ಈ ಬಾರಿ ಹೆಚ್ಚು ಮತ ಹಾಕಿದ್ದಾರೆ. ನಮಗೆ ಏಕೆ ಕಡಿಮೆ ಮತ ಬಿದ್ದಿವೆ ಎಂಬುದನ್ನು ಪರಿಶೀಲನೆ ಮಾಡುತ್ತೇವೆ. ಪಕ್ಷದ ಪರವಾಗಿ ಕೆಲಸ ಮಾಡದ ವಿಷಯದಲ್ಲಿ ಕೆಪಿಸಿಸಿಯವರು ಮುಸ್ಲಿಂ ನಾಯಕರ ವಿರುದ್ಧ ತೆಗೆದುಕೊಂಡಿರುವ ಕ್ರಮ ಸರಿ ಇದೆ ಎಂದು ಸಮರ್ಥಿಸಿಕೊಂಡರು.

ಬದಲಾವಣೆ ಬಯಸಿ ವಿಜಯ್‌ಗೆ ಮತ

ತಮಿಳುನಾಡು ಚುನಾವಣೆಯಲ್ಲಿ ನಟ ವಿಜಯ್ ಗೆಲುವು ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಜನರಿಗೆ ಬದಲಾವಣೆ ಬೇಕಿತ್ತು. ತಮಿಳುನಾಡು ಜನರು ಬದಲಾವಣೆ ಬಯಸಿ ಮತ ಹಾಕಿದ್ದಾರೆ. ಯುವಜನರ ನಟ ವಿಜಯ್‌ಗೆ ಮತ ಹಾಕಿದ್ದಾರೆ. ಇದು ಬೇರೆ ರಾಜ್ಯಗಳ ಮೇಲೆ ಪ್ರಭಾವ ಆಗವುದಿಲ್ಲ. ಇದು ಅಚ್ಚರಿಯ ಫಲಿತಾಂಶ ಆಗಿದೆ. ಕೇರಳದಲ್ಲಿ ನಿರೀಕ್ಷೆ ಮಾಡಿದ್ದೆವು ಎಂದು ಹೇಳಿದರು.

ಸುದ್ದಿ ಸಮಾಚಾರ

ಕೆಪಿಎಸ್ಸಿ: 1158 ಅಭ್ಯರ್ಥಿಗಳಿಗೆ ಇಂದಿನಿಂದ ವ್ಯಕ್ತಿತ್ವ ಪರೀಕ್ಷೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ 2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್–ಎ ಮತ್ತು ಬಿ ವೃಂದದ 384 ಕೆಎಎಸ್ ಹುದ್ದೆಗಳ ವ್ಯಕ್ತಿತ್ವ ಪರೀಕ್ಷೆಗೆ ಅರ್ಹತೆ ಪಡೆದ 1158 ಅಭ್ಯರ್ಥಿಗಳಿಗೆ ಮೇ. 6ರಿಂದ 10ರವರೆಗೆ ಮೂಲ ದಾಖಲೆಗಳ ಪರಿಶೀಲನೆ ಸಂದರ್ಶನ ನಡೆಸಲಾಗುವುದು ಎಂದು ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯದರ್ಶಿ ಜ್ಯೋತಿ ಕೆ. ತಿಳಿಸಿದ್ದಾರೆ.

ಅರ್ಹ ಅಭ್ಯರ್ಥಿಗಳ ನೋಂದಣಿ ಸಂಖ್ಯೆ ಅವರಿಗೆ ನಿಗದಿಪಡಿಸಿದ ವ್ಯಕ್ತಿತ್ವ ಪರೀಕ್ಷೆಯ ನಿಖರ ದಿನಾಂಕ ಮತ್ತು ಸಮಯದ ವಿವರಗಳನ್ನು ಶೀಘ್ರದಲ್ಲೇ ಕೆಪಿಎಸ್‌ಸಿಯ ಅಧಿಕೃತ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅರ್ಹ ಅಭ್ಯರ್ಥಿಗಳಿಗೆ ಸೂಚನಾ ಪತ್ರಗಳನ್ನು ರವಾನಿಸಲಾಗುವುದು ಎಂದು ತಿಳಿಸಿದ್ದಾರೆ.

ಆಸ್ಪತ್ರೆ ಗೋಡೆ ಕುಸಿದು 7 ಸಾವು: ತನಿಖೆಗೆ ಲೋಕಾ ತಂಡ ರಚನೆ

ಬೆಂಗಳೂರು: ಭಾರಿ ಮಳೆಯಿಂದಾಗಿ ಬೌರಿಂಗ್ ಆಸ್ಪತ್ರೆ ಗೋಡೆ ಕುಸಿದು 7 ಮಂದಿ ಸಾವನ್ನಪ್ಪಿದ ಪ್ರಕರಣದ ತನಿಖೆಗೆ ಲೋಕಾಯುಕ್ತದಿಂದ ವಿಶೇಷ ತಂಡ ರಚನೆ ಮಾಡಲಾಗಿದೆ.

ಘಟನೆ ನಂತರ ಸ್ಥಳಕ್ಕೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್ ಪಾಟೀಲ್ ಭೇಟಿಕೊಟ್ಟು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದರು. ನಂತರ ಲೋಕಾಯುಕ್ತದಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಾಗಿತ್ತು. ಇದೀಗ ಪ್ರಕರಣದ ತನಿಖೆಗೆ ವಿಶೇಷ ತಂಡವನ್ನು ರಚನೆ ಮಾಡಲಾಗಿದೆ.

ತಂಡದಲ್ಲಿ ಪೊಲೀಸ್ ಅಧೀಕ್ಷಕ ದರ್ಜೆಯ ಅಧಿಕಾರಿಯನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಲಾಗಿದೆ. ಇನ್ನುಳಿದಂತೆ ಓರ್ವ ಜಿಲ್ಲಾ ನ್ಯಾಯಾಧೀಶರು, ಲೋಕಾಯುಕ್ತ ಸಂಸ್ಥೆಯ ತಾಂತ್ರಿಕ ವಿಭಾಗದ ಮುಖ್ಯ ಇಂಜಿನಿಯರ್ ಇರಲಿದ್ದಾರೆ. ಇದೇ ತಿಂಗಳ 16ರ ಒಳಗೆ ವರದಿ ನೀಡಲು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್ ಪಾಟೀಲ್ ಆದೇಶಿಸಿದ್ದಾರೆ.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ತನಿಖಾ ತಂಡ ಮಂಗಳವಾರ ಸಭೆ ನಡೆಸಿದ್ದು, ಸಭೆಯಲ್ಲಿ ಯಾರಿಗೆಲ್ಲ ನೋಟಿಸ್ ಕೊಟ್ಟು ವಿಚಾರಣೆ ಮಾಡಲು ಚರ್ಚಿಸಲಾಗಿದೆ. ಸಭೆಯಲ್ಲಿ ಬೌರಿಂಗ್ ಆಸ್ಪತ್ರೆಯ ಡೀನ್ ಭಾಗಿಯಾಗಿದ್ದು ಅವರಿಂದ ಅಧಿಕಾರಿಗಳು ಮಾಹಿತಿ ಕಲೆ ಹಾಕಿದ್ದಾರೆ.

ಶೃಂಗೇರಿ ಮರುಎಣಿಕೆ: ಕಾನೂನು ಹೋರಾಟ– ಡಿಸಿಎಂ ಡಿಕೆಶಿ

ಬೆಂಗಳೂರು: ಶೃಂಗೇರಿ ಕ್ಷೇತ್ರದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಬಿದ್ದಿರುವ ಅಂಚೆ ಮತಗಳನ್ನು ತಿದ್ದುವ ಮೂಲಕ ಮರುಎಣಿಕೆಯಲ್ಲಿ ಅಸಿಂಧುಗೊಳಿಸಲಾಗಿದೆ. ಇಡೀ ದೇಶದಲ್ಲಿ ಇಂತಹ ಅಪರಾಧ ನಡೆದಿಲ್ಲ. ಇದರ ವಿರುದ್ಧ ಕಾನೂನು ಹೋರಾಟ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸಿಎಂ ಗೃಹಕಚೇರಿ ಕೃಷ್ಣಾದಲ್ಲಿ ಪ್ರತಿಕ್ರಿಯೆ ನೀಡಿ, ಮತ ಎಣಿಕೆ ಸಮಯದಲ್ಲಿ ಪ್ರತಿ ಅಂಚೆ ಮತವನ್ನು ತೆರೆದು ಎರಡೂ ಪಕ್ಷಗಳ ಏಜೆಂಟರು ಹಾಗೂ ಅಧಿಕಾರಿಗಳಿಗೆ ತೋರಿಸಿ ಅದನ್ನು ಮಾನ್ಯ ಮಾಡಿ ಎಣಿಕೆ ಮಾಡಲಾಗಿರುತ್ತದೆ. ಈ ರೀತಿ ಮತ ಎಣಿಕೆ ಮಾಡಿದ ಬಳಿಕ ಬಿಜೆಪಿ ಅಭ್ಯರ್ಥಿ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡು ಅಂಚೆ ಮತಗಳನ್ನು ತಿದ್ದಲಾಗಿದೆ. ಹೀಗಾಗಿಯೇ ಅವರು ನಿರ್ದಿಷ್ಟ ಮತಗಳ ಬಂಡಲ್ ಅನ್ನೇ ಮರು ಎಣಿಕೆ ಮಾಡಿ ಎಂದು ಪಟ್ಟು ಹಿಡಿದಿದ್ದರು. ಅಧಿಕಾರಿಗಳು ಹಾಗೂ ಬಿಜೆಪಿ ಅಭ್ಯರ್ಥಿ ಈ ಅಕ್ರಮದಲ್ಲಿ ಭಾಗಿಯಾಗಿದ್ದು, ಗಂಭೀರವಾದ ತನಿಖೆ ನಡೆಯಬೇಕಿದೆ ಎಂದಿದ್ದಾರೆ.

ದೆಹಲಿಗೆ ಸಿಎಂ, ಡಿಸಿಎಂ ಕರೆಸಿ ಗೊಂದಲ ಪರಿಹರಿಸಿ: ಸತೀಶ

ಬೆಂಗಳೂರು: ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಆಗಿರುವ ಗೊಂದಲಕ್ಕೆ ತೆರೆ ಎಳೆಯಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ದೆಹಲಿಗೆ ಕರೆಸಿ ಗೊಂದಲ ಬಗೆಹರಿಸಬೇಕು ಎಂದು ಸಚಿವ ಸತೀಶ್ ಜಾರಕಿಹೊಳಿ ಒತ್ತಾಯಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೂಡಾ ಗೊಂದಲ ಬಗೆಹರಿಸುವ ಕುರಿತಂತೆ ಹೇಳಿದ್ದಾರೆ. ಆದರೆ, ಬೇಗ ಇಂತಹ ವಿಷಯಗಳನ್ನು ಬಗೆಹರಿಸಬೇಕು ಎಂದರು.

ದಾವಣಗೆರೆಯಲ್ಲಿ ಅಲ್ಪಸಂಖ್ಯಾತ ಮತಗಳು ಕಡಿಮೆ ಆಗಿರುವ ವಿಷಯವಾಗಿ ಪ್ರತಿಕ್ರಿಯಿಸಿ, ಇದು ಏಕೆ ಆಗಿದೆ ಎಂಬ ಬಗ್ಗೆ ಹೇಳುವುದಕ್ಕೆ ಆಗುವುದಿಲ್ಲ. ಮುಂದಿನ ಚುನಾವಣೆಗೆ ಇನ್ನು ಎರಡು ವರ್ಷ ಬಾಕಿ ಇದೆ. ಅಷ್ಟರೊಳಗೆ ಎಲ್ಲವನ್ನೂ ಸರಿಪಡಿಸಬೇಕು. ಇದು ಕೇವಲ ದಾವಣಗೆರೆಗೆ ಸೀಮಿತವಾಗಬಾರದು. ಇಡೀ ರಾಜ್ಯವನ್ನು ಗಮನಿಸಬೇಕಾಗಿದೆ ಎಂದರು.

ನಸೀರ್ ಅಹಮದ್ ಹಾಗೂ ಅಬ್ದುಲ್ ಜಬ್ಬಾರ್ ವಿರುದ್ಧ ಕೆಪಿಸಿಸಿ ಕ್ರಮ ಸರಿಯಿದೆ ಎಂಬ ಸಿಎಂ ಹೇಳಿಕೆ ವಿಚಾರವಾಗಿ ಮಾತನಾಡಿ, ಅವರು ರಾಜೀನಾಮೆ ಕೊಟ್ಟಿದ್ದಾರೆ. ಮತ್ತೆ ಪಕ್ಷದಲ್ಲಿ ಅವರಿಗೆ ಅವಕಾಶ ಕೊಡಬೇಕು. ಆ ಸಮುದಾಯ ಕಾಂಗ್ರೆಸ್ ಬಿಟ್ಟು ಎಲ್ಲಿಗೆ ಹೋಗುತ್ತದೆ ಎಂದರು.

ಜೀವರಾಜ್ ಗೆಲುವು: ಸಿಎಂ ಕಿಡಿ

ಮೊದಲ ಪುಟದಿಂದ..

ಜೀವರಾಜ್‌ಗೆ 58,970 ಇವಿಎಂ ಮತ, 692 ಅಂಚೆ ಮತ ಬಂದಿತ್ತು. ಒಟ್ಟಾರೆ 201 ಮತದಿಂದ ರಾಜೇಗೌಡ ಗೆದ್ದಿದ್ದರು. ಇವೆಲ್ಲವೂ ಮೌಲ್ಯಯುತ ಮತ ಎಂದು ಚುನಾವಣಾ ಅಧಿಕಾರಿಗಳು, ಚುನಾವಣೆ ಏಜೆಂಟ್, ರಿಟರ್ನಿಂಗ್ ಅಧಿಕಾರಿಗಳು ಘೋಷಣೆ ಮಾಡಿದ್ದರು. ಆದರೆ, ಘೋಷಣೆ ಆದ ಮೇಲೆ ಬಿಜೆಪಿ ಅಭ್ಯರ್ಥಿ ಜೀವರಾಜ್ ಚುನಾವಣಾ ಅಕ್ರಮ ಆಗಿದೆ ಎಂದು ಹೈಕೋರ್ಟ್ ಮೊರೆ ಹೋಗಿದ್ದರು. ಅವರ ಅರ್ಜಿ ಪುರಸ್ಕಾರ ಮಾಡಿ ಹೈಕೋರ್ಟ್ 2026ರ ಮಾರ್ಚ್ 6ರಂದು ಅಂಚೆ ಮತ ಎಣಿಕೆಗೆ ಆದೇಶ ಮಾಡಿತ್ತು. ಕೋರ್ಟ್ ಆದೇಶದಂತೆ ಮೇ 2 ರಂದು ಮತ ಮರುಎಣಿಕೆ ನಡೆಯಿತು. ಮರು ಎಣಿಕೆಯಲ್ಲಿ 314 ಮತಗಳು ಮಾತ್ರ ಸಿಂಧು ಆಯಿತು. ಅದರಲ್ಲಿ 255 ಮತ ಅನರ್ಹ ಏಕೆ ಆಯಿತು. 2023ರಲ್ಲಿ ಜೀವರಾಜ್‌ಗೆ 692 ಮತ ಬಿದ್ದಿತ್ತು. ಮರು ಎಣಿಕೆಯಲ್ಲಿ 690 ಮತ ಲಭಿಸಿದೆ. ಎರಡು ಮತ ಮಾತ್ರ ಕಡಿಮೆ ಆಗಿದೆ. ಇದನ್ನು ನೋಡಿದಾಗ ಬಿಜೆಪಿಯವರು ಕ್ರಿಮಿನಲ್ ಪಿತೂರಿ ಮಾಡಿ ವೋಟ್ ಚೋರಿ ಮಾಡಿದ್ದಾರೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ ಎಂದು ಆರೋಪಿಸಿದರು. ಮತಪತ್ರಗಳನ್ನ ತಿದ್ದಿದ್ದಾರೆ: ರಾಜೇಗೌಡರಿಗೆ ಬಿದ್ದ 255 ಮತ ಅರ್ಹವಾಗಿರುವುದರಲ್ಲಿ 250 ಮತಗಳನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ. ಜೀವರಾಜ್ ಸೋತಿದ್ದರೂ ಮರು ಎಣಿಕೆ ಆದ ಮೇಲೆ 52 ಮತ ಜಾಸ್ತಿ ಬಂದಿದೆ. ನಾನು ಅಧಿಕಾರಿಗಳ ಜೊತೆ ಮಾತಾಡಿದೆ. ಚುನಾವಣೆ ತಜ್ಞರ ಜೊತೆ ಮಾತನಾಡಿದ್ದೇನೆ. ಎಣಿಕೆ ಆದ ನಂತರ ಎಲ್ಲವನ್ನೂ ಟ್ರಂಕ್‌ನಲ್ಲಿ ಇಟ್ಟು ಕಳಿಸಲಾಗುತ್ತದೆ. ಚುನಾವಣೆ ಸಂದರ್ಭದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ತನ್ನ ಅಧಿಕಾರ ಬಳಸಿಕೊಂಡು ಟ್ರಂಕ್‌ನಲ್ಲಿದ್ದ ಪತ್ರಗಳನ್ನು ತಿದ್ದಿರುವುದು ಖಚಿತವಾಗಿದೆ. ಇದು ಕ್ರಿಮಿನಲ್ ಅಪರಾಧ ಎಂದು ದೂರಿದರು..

ರಾಜೇಗೌಡ ಮತ ಮಾತ್ರ ಅನರ್ಹವಾಗಿದೆ. ಬೇರೆಯವರದ್ದು ಆಗಿಲ್ಲ. ಚಿಲುಮೆ ಸಂಸ್ಥೆ ಮೂಲಕ ಬಿಜೆಪಿ ಮತದಾರ ಪಟ್ಟಿ ತಿದ್ದುಪಡಿ ಮಾಡುವುದಕ್ಕೆ ಹೋಗಿದ್ದರು. ಆಳಂದದಲ್ಲಿ ನೈಜ ಮತದಾರನ್ನು ಕೈ ಬಿಟ್ಟಿದ್ದರು. ಬಿಜೆಪಿಯವರಿಗೆ ಪ್ರಜಾಪ್ರಭುತ್ವದಲ್ಲಿ, ಸಂವಿಧಾನದಲ್ಲಿ ನಂಬಿಕೆ ಇಲ್ಲ. ನಿಷ್ಪಕ್ಷಪಾತ ಚುನಾವಣೆಯಲ್ಲಿ ಅವರಿಗೆ ನಂಬಿಕೆ ಇಲ್ಲ. ಹಾಗಾಗಿ ಬಿಜೆಪಿ ಅವರು ಇಂತಹ ಅಪರಾಧ ಮಾಡೋಕೆ ಹಿಂದೆ ಮುಂದೆ ನೋಡಲ್ಲ. ಕೇಂದ್ರದ ಇಬ್ಬರು ಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರು ಸಮರ್ಥನೆ ಮಾಡುವುದರಲ್ಲಿ ಯಾವುದೇ ಅರ್ಥವಿಲ್ಲ. ಮುಂದಿನ ದಿನಗಳಲ್ಲಿ ಜನರು ಅವರಿಗೆ ಪಾಠ ಕಲಿಸಲಿದ್ದಾರೆ ಎಂದರು.

ಕೋರ್ಟ್‌ಗೆ ಹೇಳದೆ ಫಲಿತಾಂಶ ಪ್ರಕಟ

ಕೋರ್ಟ್ ಸೂಚನೆಯಂತೆ ಅಂಚೆ ಮತ ಮರು ಎಣಿಕೆ ಆದ ನಂತರ ಅದರ ಮಾಹಿತಿಯನ್ನು ಕೋರ್ಟ್‌ಗೆ ನೀಡಬೇಕಾಗಿತ್ತು. ಆದರೆ, ಕೋರ್ಟ್‌ಗೆ ಮಾಹಿತಿ ನೀಡದೆ ಚುನಾವಣಾ ಅಧಿಕಾರಿಗಳು ಫಲಿತಾಂಶ ಘೋಷಣೆ ಮಾಡಿದ್ದಾರೆ. ಇಂಕ್‌ನಲ್ಲೂ ವ್ಯತ್ಯಾಸವಾಗಿದೆ.

■ **ಸಿದ್ದರಾಮಯ್ಯ,** ಮುಖ್ಯಮಂತ್ರಿ

8ನೇ ಕ್ಲಾಸ್‌ವರೆಗೆ ಪ್ರಾಥಮಿಕ, 12ನೇ ಕ್ಲಾಸ್‌ವರೆಗೆ ಹೈಸ್ಕೂಲ್

ಥೋರಟ್ ಆಯೋಗದ ಶಿಫಾರಸುಗಳೇನು?

- ಉನ್ನತ ಶಿಕ್ಷಣದಲ್ಲಿ ಈ ಹಿಂದೆ ಇದ್ದ 3+2 ವರ್ಷಗಳ ಪದ್ಧತಿ ಅಂದರೆ, 3 ವರ್ಷಗಳ ಪದವಿ ಹಾಗೂ 2 ವರ್ಷಗಳ ಸ್ನಾತಕೋತ್ತರ ಕೋರ್ಸ್ ಅವಳಡಿಸಿಕೊಳ್ಳುವುದು. 4 ವರ್ಷಗಳ ಪದವಿ ಕೋರ್ಸ್ ಕೈಬಿಡುವುದು. ಪಿಎಚ್‌ಡಿ ಅವಧಿಯನ್ನು ಯುಜಿಸಿ ಮಾರ್ಗಸೂಚಿ ನವಯ ಜಾರಿಗೊಳಿಸುವುದು.
- ಕಲ್ಯಾಣ ಕರ್ನಾಟಕದಂತಹ ಹಿಂದುಳಿದ ಪ್ರದೇಶಗಳಲ್ಲಿ ಉನ್ನತ ಶಿಕ್ಷಣದ ಪ್ರವೇಶದ ಪ್ರಮಾಣವನ್ನು ಹೆಚ್ಚಿಸುವುದು ಮತ್ತು ಅದಕ್ಕಾಗಿ ದುರ್ಬಲ ವರ್ಗದವರಿಗೆ ಪ್ರೇರೇಪಣೆ ನೀಡುವುದು.
- ವಿಶ್ವವಿದ್ಯಾಲಯಗಳು ಸೇರಿದಂತೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡುವುದು. ಡಿಜಿಟಲ್ ಮತ್ತು ಭೌತಿಕ ಶಿಕ್ಷಣದ ಮೂಲಸೌಕರ್ಯ ವೃದ್ಧಿಸುವುದು.

ಮಾತೃಭಾಷೆಗೆ ಒತ್ತು, ದ್ವಿಭಾಷಾ ನೀತಿ

ಬರುವ ಶೈಕ್ಷಣಿಕ ವರ್ಷದಿಂದ 5ನೇ ತರಗತಿವರೆಗೆ ಕಡ್ಡಾಯವಾಗಿ ಮಾತೃಭಾಷೆ ಶಿಕ್ಷಣ, 12ನೇ ತರಗತಿವರೆಗೆ ಕನ್ನಡ ಅಥವಾ ಮಾತೃಭಾಷೆ ಶಿಕ್ಷಣದ ಮಾಧ್ಯಮವನ್ನಾಗಿ ಘೋಷಿಸುವ ಸಾಧ್ಯತೆ ಇದೆ. ಆಯೋಗವು ಇದನ್ನೇ ಶಿಫಾರಸು ಮಾಡಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ವೇಳೆ ಹಿಂದಿ ಪರೀಕ್ಷೆ ರದ್ದುಪಡಿಸಿದ್ದ ನಿರ್ಧಾರವನ್ನು ಬರುವ ಶೈಕ್ಷಣಿಕ ವರ್ಷದ ಆರಂಭದಲ್ಲೇ ಘೋಷಿಸಿ, ಕಾನೂನು ತೊಡಕು ನಿವಾರಿಸುವ ಸಾಧ್ಯತೆ ಇದೆ. ಅಲ್ಲದೇ ರಾಜ್ಯದ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ನಿಯಂತ್ರಣಕ್ಕೆ ಮಹತ್ವದ ಮಾರ್ಪಾಟುಗಳನ್ನು ಮಾಡುವ ಸಾಧ್ಯತೆ ಇದೆ.

ಬಯೋಕಾನ್ ಕ್ಲೇರ್‌ಉತ್ತರಾಧಿಕಾರಿ

ಮೊದಲ ಪುಟದಿಂದ...

ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಯಾರೇ ಉತ್ತರಾಧಿಕಾರಿ ಇಲ್ಲದೇ ಬಯೋಕಾನ್ ಸಂಸ್ಥೆಯನ್ನು ಮುನ್ನಡೆಸಿದ ಕಿರಣ್ ಮಜುಂದಾರ್ ಈಗ ಫರ್ಚೂನ್ ಇಂಡಿಯಾಗೆ ನೀಡಿದ ಸಂದರ್ಶನದಲ್ಲಿ ತಮ್ಮ ಉತ್ತರಾಧಿಕಾರಿ ಯಾರೆಂಬುದನ್ನು ಬಹಿರಂಗಪಡಿಸಿದ್ದಾರೆ.

ಆದರೆ ಈ ಪರಿವರ್ತನೆ ಕ್ರಮೇಣವಾಗಿ ನಡೆಯುವ ಸಾಧ್ಯತೆ ಇದೆ. ಕ್ಲೇರ್ ಹಂತಹಂತವಾಗಿ ಹೆಚ್ಚಿನ ಜವಾಬ್ದಾರಿ ವಹಿಸಿಕೊಳ್ಳುವವರೆಗೆ ಕಿರಣ್ ತಮ್ಮ ಪಾತ್ರ ಮುಂದುವರಿಸುತ್ತಾರೆ. 37 ವರ್ಷದ ಕ್ಲೇರ್ ಪ್ರಸ್ತುತ ಬಯೋಕಾನ್ ಪೋಷಿಸುತ್ತಿರುವ ಬಿಕಾರಾ ಥೆರಪ್ಯೂಟಿಕ್ ಸ್ಥಾಪಕ ಸಿಇಒ ಆಗಿದ್ದಾರೆ. ನಾಸ್ಡಾಕ್ ಪ್ರವೇಶಿಸಿರುವ ಬಿಕಾರಾ ಕಂಪನಿಯ ಮೌಲ್ಯ 1.6 ಶತಕೋಟಿ ಡಾಲರ್ (ಸುಮಾರು 15,220 ಕೋಟಿ ರೂ.) ಆಗಿದೆ.

ಪುಲಿಟ್ಜರ್ ಪ್ರಶಸ್ತಿ

ಮೊದಲ ಪುಟದಿಂದ..

'ವಿಶದ ವರದಿ ಹಾಗೂ ವೀಕ್ಷಕ ವಿವರಣೆ' ವಿಭಾಗದಲ್ಲಿ ಈ ಮೂವರಿಗೂ ಪ್ರಶಸ್ತಿ ನೀಡಲಾಗಿದೆ. ಅಮೆರಿಕದ ನ್ಯೂಯಾರ್ಕಿನ ಕೊಲಂಬಿಯಾ ವಿಶ್ವ ವಿದ್ಯಾಲಯವು ಈ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿಯನ್ನು 1917 ರಿಂದಲೂ ನೀಡುತ್ತಿದ್ದು, ಪತ್ರಿಕೋದ್ಯಮ, ಸಾಹಿತ್ಯ ಮತ್ತು ಸಂಗೀತ ಕ್ಷೇತ್ರದ ಸಾಧಕರನ್ನು ಗುರುತಿಸಿ ಗೌರವಿಸುತ್ತಿದೆ.

ನಾನ್ ಕುರ್ಚಿ ಬಿಡಲ್ಲ: ದೀದಿ

ಮೊದಲ ಪುಟದಿಂದ...

ಜೋ ಬೈಡನ್ ವಿರುದ್ಧ ಸೋತಿದ್ದ ಟ್ರಂಪ್ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿದ್ದರು. ಆ ಬಳಿಕ 2021ರ ಜನವರಿಯಲ್ಲಿ ನಡೆದ ಅಧಿಕಾರ ಹಸ್ತಾಂತರದವರೆಗೂ ಟ್ರಂಪ್ ವೈಟ್‌ಹೌಸ್ ಬಿಟ್ಟು ಬರಲು ಹಿಂದೇಟು ಹಾಕಿದ್ದರು. ಅದೇ ರೀತಿಯಲ್ಲಿ ಈಗ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅವರು ಚುನಾವಣೆಯಲ್ಲಿ ಅಕ್ರಮ ನಡೆದಿದೆ. ಬಿಜೆಪಿ 100 ಸೀಟುಗಳನ್ನು ಲೂಟಿ ಮಾಡಿದೆ ಎಂದು ಆರೋಪಿಸಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರಾಕರಿಸಿದ್ದಾರೆ.

ಸಾಮಾನ್ಯವಾಗಿ ಚುನಾವಣೆಯಲ್ಲಿ ಸೋತ ಮುಖ್ಯಮಂತ್ರಿ ರಾಜ್ಯಪಾಲರನ್ನು ಭೇಟಿ ಮಾಡಿ ರಾಜೀನಾಮೆ ನೀಡುವುದು ಸಂಪ್ರದಾಯ. ಆದರೆ ಮಮತಾ ಅವರು, ನಾನು ಲೋಕಭವನಕ್ಕೆ ಹೋಗುವುದಿಲ್ಲ. ಅವರು ಏನು ಬೇಕಾದರೂ ಮಾಡಿಕೊಳ್ಳಲಿ ಎನ್ನುವ ಮೂಲಕ ಹಠಮಾರಿ ಧೋರಣೆ ತೋರಿದ್ದಾರೆ. ಅಲ್ಲದೇ ಕೇಂದ್ರ ಸಶಸ್ತ್ರ ಪಡೆಗಳು ಮತ್ತು ಚುನಾವಣಾ ಆಯೋಗ ಸೇರಿ ಮತದಾರರನ್ನು ಬೆದರಿಸಿವೆ. ಸುಮಾರು 90 ಲಕ್ಷ ಮತದಾರರ ಹೆಸರನ್ನು ಮತಪಟ್ಟಿಯಿಂದ ಕೈಬಿಟ್ಟಿರುವುದೇ ಸೋಲಿಗೆ ಪ್ರಮುಖ ಕಾರಣ ಎಂದು ಹೇಳಿದ್ದಾರೆ.

ಬಿಜೆಪಿ ಆಕ್ರೋಶ: ಮಮತಾ ಬ್ಯಾನರ್ಜಿ ಅವರ ನಡೆಯನ್ನು ಬಿಜೆಪಿ ಕಟುವಾಗಿ ಟೀಕಿಸಿದೆ. ಸೋಲನ್ನು ಒಪ್ಪಿಕೊಳ್ಳಲಾಗದೆ ದೀದಿ ಈಗ ಭಾರತದ ಡೊನಾಲ್ಡ್ ಟ್ರಂಪ್ ಆಗಲು ಹೊರಟಿದ್ದಾರೆ. ಸಂವಿಧಾನದ ಪ್ರಕಾರ ಮೇ8ಕ್ಕೆ ಹಾಲಿ ವಿಧಾನಸಭೆಯ ಅವಧಿ ಮುಗಿಯುತ್ತದೆ. ಆನಂತರ ಅವರು ಕುರ್ಚಿಯಲ್ಲಿ ಕೂರಲು ಸಾಧ್ಯವಿಲ್ಲ. ಅವರ ಹಠಮಾರಿ ಧೋರಣೆ ಪ್ರಜಾಪ್ರಭುತ್ವಕ್ಕೆ ಮಾಡಿದ ಅಪಮಾನ ಎಂದು ಬಿಜೆಪಿ ನಾಯಕರು ಕಿಡಿಕಾರಿದ್ದಾರೆ. ಒಂದು ವೇಳೆ ಮಮತಾ ರಾಜೀನಾಮೆ ನೀಡದಿದ್ದರೆ, ಅವರನ್ನು ಸಂವಿಧಾನದ ಕಲಂ ಅನ್ವಯ ವಜಾಗೊಳಿಸಬೇಕು ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಸರ್ಮಾ ಆಗ್ರಹಿಸಿದ್ದಾರೆ.

ಕೇರಳ ಸಿಎಂ ಗಾದಿಗೆ ಪೈಪೋಟಿ

ಮೊದಲ ಪುಟದಿಂದ..

ಕೇರಳದ ಉಸ್ತುವಾರಿ ದೀಪಕ್ ದಾಶ್ ಮುನ್ಷಿ ಮತ್ತಿತರ ಎಐಸಿಸಿ ನಾಯಕರು ಈಗಾಗಲೇ ಶಾಸಕರ ಅಭಿಪ್ರಾಯ ಸಂಗ್ರಹಣೆಗಾಗಿ ಸಭೆ ನಡೆಸುತ್ತಿದ್ದಾರೆ. ಯುಡಿಎಫ್‌ನಲ್ಲಿ ಕಾಂಗ್ರೆಸ್ ಅತ್ಯಧಿಕ 63 ಸ್ಥಾನಗಳನ್ನು ಗಳಿಸಿರುವ ಏಕೈಕ ಪಕ್ಷವಾಗಿರುವುದರಿಂದ ಸಹಜವಾಗಿ ಆ ಪಕ್ಷದಲ್ಲಿ ಸಿಎಂ ರೇಸ್‌ನಲ್ಲಿ ವಿಪಕ್ಷ ನಾಯಕರಾಗಿದ್ದ ವಿ.ಡಿ. ಸತೀಶನ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹಾಗೂ ಪ್ರತಿಷ್ಠಿತ ಹರಿಪಾದ ಕ್ಷೇತ್ರದಿಂದ ಗೆದ್ದಿರುವ ರಮೇಶ್ ಚೆನ್ನಿತಾಲ ಹೆಸರುಗಳು ಚಾಲ್ತಿಯಲ್ಲಿವೆ. ಕೆ.ಸಿ. ವೇಣುಗೋಪಾಲ್ ಈಗಾಗಲೇ ದೆಹಲಿಗೆ ದೌಡಾಯಿಸಿದ್ದು, ಇತ್ತ ಪಕ್ಷದ ಕಚೇರಿಗಳು ಹಾಗೂ ಆಸುಪಾಸು ಈಗಾಗಲೇ ಕೆ.ಸಿ.ವಿ. ಪೋಸ್ಟರ್‌ಗಳು ರಾರಾಜಿಸುತ್ತಿವೆ; ಇದು ಹಲವು ಊಹಾಪೋಹಗಳಿಗೆ ಕಾರಣವಾಗಿದೆ!

ಪಿಣರಾಯಿ ರಾಜೀನಾಮೆ: ಈ ಮಧ್ಯೆ, 2 ಅವಧಿಗಳ ಅಧಿಕಾರದ ನಂತರ 'ಆಡಳಿತ ವಿರೋಧಿ ಅಲೆ'ಗೆ ಕೊಚ್ಚಿಹೋಗಿರುವ ಸಿಪಿಐ (ಎಂ) ನೇತೃತ್ವದ 'ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್)' ಹೀನಾಯ ಸೋಲು ಕಂಡಿರುವುದರಿಂದ ಮುಖ್ಯಮಂತ್ರಿ ಸ್ಥಾನಕ್ಕೆ ಪಿಣರಾಯಿ ವಿಜಯನ್ ರಾಜೀನಾಮೆ ನೀಡಿದ್ದಾರೆ. ಆದರೆ ವೈಯಕ್ತಿಕವಾಗಿ ವಿಜಯನ್ ಅವರು ತಮ್ಮ ಸ್ವಕ್ಷೇತ್ರ ಧರ್ಮಾಧರ್ಮ್‌ನಲ್ಲಿ ಗೆದ್ದು ಶಾಸಕರಾಗಿದ್ದಾರೆ.

ಚಿಗುರುತ್ತಿರುವ ಬಿಜೆಪಿ: ಕೆಲವು ವರ್ಷಗಳಿಂದೀಚೆಗೆ ನಿಧಾನವಾಗಿ ಬಿಜೆಪಿ ಸಹ ಕೇರಳಂನಲ್ಲಿ ನೆಲೆಯೂರಲು ಯತ್ನಿಸುತ್ತಿದ್ದು, ಈ ಬಾರಿ ಅತ್ಯಧಿಕ 3 ಸ್ಥಾನಗಳನ್ನು ತನ್ನದಾಗಿಸಿಕೊಂಡಿದೆ. ಅಲ್ಲದೆ, 6 ಕ್ಷೇತ್ರಗಳಲ್ಲಿ ಬಿಜೆಪಿ 2ನೇ ಸ್ಥಾನ ಗಿಟ್ಟಿಸಿದೆ!

CMYK

ಸಂಯುಕ್ತ ಕರ್ನಾಟಕ ಸಂಪಾದಕೀಯ

ಯುವಕರ ಆಕರ್ಷಿಸಲು ಕಮ್ಯೂನಿಸ್ಟ್ ಪಕ್ಷ ವಿಫಲ

ಸ್ವಾತಂತ್ರ್ಯ ಪೂರ್ವದಿಂದಲೂ ದೇಶದ ಆರ್ಥಿಕ ಮತ್ತು ಸಾಮಾಜಿಕ ಆಡಳಿತ ಯುಗ ಕೇರಳದ ಪಿಣರಾಯಿ ವಿಜಯನ್ ನಿರ್ಗಮನದ ಮೂಲಕ ಅಂತ್ಯಗೊಂಡಿದೆ. ವ್ಯಕ್ತಿಪೂಜೆಯೇ ಪ್ರಧಾನವಾಗುತ್ತಿರುವ ಇಂದಿನ ರಾಜಕೀಯ ರಂಗದಲ್ಲಿ ಕಮ್ಯೂನಿಸ್ಟ್ ಪಕ್ಷ ಅಸ್ತಿತ್ವ ಉಳಿಸಿಕೊಳ್ಳುವುದು ಕಷ್ಟವಾಯಿತು. ವ್ಯಕ್ತಿಗಿಂತ ವ್ಯವಸ್ಥೆ ಬದಲಾವಣೆ ಮುಖ್ಯ ಎಂದು ಹೇಳಿದ ಕಮ್ಯೂನಿಸ್ಟ್ ಪಕ್ಷ ಸಮಾನತೆಯ ಸಿದ್ಧಾಂತಕ್ಕೆ ಬದ್ಧವಾಗಿತ್ತು. ಇದು ಯುವ ಪೀಳಿಗೆಯನ್ನು ಆಕರ್ಷಿಸುವುದರಲ್ಲಿ ಸಫಲತೆ ಕಾಣಲಿಲ್ಲ. ಸಿಪಿಐ ಮತ್ತು ಸಿಪಿಐಎಂ ಎರಡೂ ಪಕ್ಷಗಳೂ ಜನಪರವಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಇದರ ಮತ್ತೊಂದು ರೂಪವೇ ನಕ್ಸಲ್ ತತ್ವ. ಅದೂ ಈಗ ಅವಸಾನ ಕಂಡಿದೆ. ನಕ್ಸಲೀಯರು ಸಾಮೂಹಿಕವಾಗಿ ಶರಣಾಗಿದ್ದಾರೆ.

1925 ರಲ್ಲಿ ಭಾರತೀಯ ಕಮ್ಯೂನಿಸ್ಟ್ ಪಕ್ಷ ಅಸ್ತಿತ್ವಕ್ಕೆ ಬಂದಿತು. 1964 ರಲ್ಲಿ ಅದು ವಿಭಜನೆಗೊಂಡಿತು. ಕೇರಳದಲ್ಲಿ 1957ರಲ್ಲಿ ಇಎಂಎಸ್ ನಂಬೂದರಿ ಪಾಡ್ ಮೊದಲ ಮುಖ್ಯಮಂತ್ರಿಯಾಗಿ ಕೇರಳದಲ್ಲಿ ಸರ್ಕಾರ ರಚಿಸಿದರು. ಪಶ್ಚಿಮ ಬಂಗಾಳದಲ್ಲಿ 1977 ಮತ್ತು 1978ರಲ್ಲಿ ತ್ರಿಪುರದಲ್ಲಿ ಕಮ್ಯೂನಿಸ್ಟ್ ಪಕ್ಷ ಸರ್ಕಾರ ರಚನೆಯಾಯಿತು. 2011ರಲ್ಲಿ ಮಮತಾ ಬ್ಯಾನರ್ಜಿ ಬಂಗಾಳದಲ್ಲಿ ಕಮ್ಯೂನಿಸ್ಟ್ ಸರ್ಕಾರವನ್ನು ಕಿತ್ತೊಗೆದರು. ಮೊದಲಿನಿಂದಲೂ ಕಮ್ಯೂನಿಸ್ಟ್ ಪಕ್ಷ ರಾಷ್ಟ್ರಮಟ್ಟದಲ್ಲಿ ಪ್ರತಿಪಕ್ಷವಾಗಿ ಪ್ರಮುಖ ಪಾತ್ರವಹಿಸಿದೆ. 1996, 2004ರಲ್ಲಿ ಕೇಂದ್ರ ಸರ್ಕಾರಕ್ಕೆ ಬೆಂಬಲ ಸೂಚಿಸಿತ್ತು. 1975ರಲ್ಲಿ ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಹೇರಿದಾಗ ಸಿಪಿಐ ಬೆಂಬಲ ವ್ಯಕ್ತಪಡಿಸಿತು. ಸಿಪಿಐ(ಎಂ) ವಿರೋಧಿಸಿತು. ನಂತರ ಕಮ್ಯೂನಿಸ್ಟ್ ಪಕ್ಷ ತುರ್ತು ಪರಿಸ್ಥಿತಿಗೆ ಬೆಂಬಲ ವ್ಯಕ್ತಪಡಿಸಿದ್ದು ಐತಿಹಾಸಿಕ ಅಪರಾಧ ಎಂದು ಒಪ್ಪಿಕೊಂಡಿತು.

> **ಕಮ್ಯೂನಿಸ್ಟ್ ಪಕ್ಷ ಸಮಾನತೆಯ ಸಿದ್ಧಾಂತಕ್ಕೆ ಬದ್ಧವಾಗಿತ್ತು. ಇದು ಯುವ ಪೀಳಿಗೆಯನ್ನು ಆಕರ್ಷಿಸುವುದರಲ್ಲಿ ಸಫಲತೆ ಕಾಣಲಿಲ್ಲ.**

ಕಮ್ಯೂನಿಸ್ಟ್ ಪಕ್ಷ ಉತ್ತಮ ನಾಯಕರನ್ನು ದೇಶಕ್ಕೆ ನೀಡಿತು ಎಂಬುದರಲ್ಲಿ ಎರಡು ಮಾತಿಲ್ಲ. ಇಎಂಎಸ್ ನಂಬೂದರಿ ಪಾಡ್ ಈ ದೇಶ ಕಂಡ ಅತ್ಯುನ್ನತ ನಾಯಕ. 1920ರಲ್ಲೇ ಎಂ.ಎನ್. ರಾಯ್ ತಮ್ಮದೇ ಆದ ಸಿದ್ಧಾಂತ ರೂಪಿಸಿದವರು. ಎಸ್.ಆರ್. ಬೊಮ್ಮಾಯಿ ಅವರ ಅನುಯಾಯಿ. ಜ್ಯೋತಿ ಬಸು ಬಂಗಾಳದ ಅತಿ ದೀರ್ಘಕಾಲದ ಮುಖ್ಯಮಂತ್ರಿ. ಅವರಿಗೆ ಪ್ರಧಾನಿಯಾಗುವ ಯೋಗ ಬಂದಿತ್ತು. ಆದರೆ ಪಕ್ಷ ಒಪ್ಪಲಿಲ್ಲ ಎಂದು ಪ್ರಧಾನಿ ಹುದ್ದೆ ಒಪ್ಪಿಕೊಳ್ಳಲಿಲ್ಲ. ಅವರಿಗೆ ಪಕ್ಷದ ಶಿಸ್ತು ಬಹಳ ಮುಖ್ಯವಾಗಿತ್ತು. ಶಾಸಕರಾದವರು ತಮ್ಮ ಸಂಬಳವನ್ನು ಪಕ್ಷಕ್ಕೆ ನೀಡುತ್ತಿದ್ದರು. ಎಸ್.ಎ. ಡಾಂಗೆ, ಸುಂದರಯ್ಯ, ಎ.ಕೆ. ಗೋಪಾಲನ್, ಅಚ್ಯುತಾನಂದನ್, ಇ.ಕೆ. ನಾಯನಾರ್, ಅಚ್ಯುತಮೆನನ್, ಪ್ರಮೋದದಾಸ್ ಗುಪ್ತ, ಹರಿಕಿಶನ್ ಸಿಂಗ್ ಸುರ್ಜಿತ್ ಸೇರಿದಂತೆ ಹಲವು ನಾಯಕರು ತಮ್ಮ ಜೀವನವನ್ನೇ ಪಕ್ಷಕ್ಕಾಗಿ ತ್ಯಾಗ ಮಾಡಿದರು. ಇಂದಿನ ರಾಜಕೀಯ ಮೇಲಾಟಗಳನ್ನು ನೋಡಿದರೆ ಕಮ್ಯೂನಿಸ್ಟ್ ಪಕ್ಷದ ನಾಯಕರಿಗೆ ನಿಷ್ಠೆಯಿಂದ ಇರುವುದು ಕಷ್ಟವಾಗುತ್ತಿತ್ತು. ತುಂಬ ಕೇಡರ್ ಆಧರಿತ ಪಕ್ಷ ಕಾಲಕ್ರಮೇಣ ಇತರ ಪಕ್ಷಗಳ ರೀತಿ ವ್ಯಕ್ತಿಗಳನ್ನು ಅವಲಂಬಿಸುವುದು ಅನಿವಾರ್ಯವಾಯಿತು. ಜನ ಸಾಮಾನ್ಯರು ಕೂಡ ಪಕ್ಷದ ಸಿದ್ಧಾಂತಕ್ಕೆ ಹೊಂದಿಕೊಳ್ಳುವುದು ಕಷ್ಟವಾಯಿತು. ಕೇರಳದಲ್ಲಿ ಈಗ ಕಾಂಗ್ರೆಸ್, ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಕಮ್ಯೂನಿಸ್ಟ್ ಪಕ್ಷ ನೇಪಥ್ಯಕ್ಕೆ ಸರಿದಿದೆ. ಮುಂದೆ ಈ ಪಕ್ಷಕ್ಕೆ ಕಾಲ ಬರಬಹುದು. ಸಮಾನತೆಯ ಹಾದಿ ಸುಲಭವಲ್ಲ. ಅಲ್ಲದೆ ಪ್ರಜಾಪ್ರಭುತ್ವದಲ್ಲಿ ವ್ಯವಸ್ಥೆ ಸಬಲಗೊಳಿಸುವ ಕೆಲಸ ಶಿಥಿಲಗೊಳ್ಳುತ್ತಿದೆ. ಹೀಗಾಗಿ ಸಾಂವಿಧಾನಿಕ ಸಂಸ್ಥೆಗಳು ತನ್ನ ಮಹತ್ವ ಮತ್ತು ಸ್ವಾಯತ್ತೆ ಕಳೆದುಕೊಳ್ಳುತ್ತಿರುವುದರಿಂದ ಕಮ್ಯೂನಿಸ್ಟ್ ತೆರೆಯ ಮರೆಗೆ ಸರಿಯುತ್ತಿರುವುದು ದುಃಖದ ಸಂಗತಿ. ಆದರೂ ಕಮ್ಯೂನಿಸ್ಟ್ ಪಕ್ಷದ ಕಾಲ ಮುಗಿದು ಹೋಯಿತು ಎಂದು ತಿಳಿಯುವ ಅಗತ್ಯವಿಲ್ಲ. ಕಾರ್ಮಿಕರ ಸಂಘಟನೆಯಲ್ಲಿ ಕಮ್ಯೂನಿಸ್ಟ್ ತನ್ನ ಅಸ್ತಿತ್ವಕ್ಕೆ ಉಳಿಸಿಕೊಂಡಿದೆ. ಆದರೆ ಆಡಳಿತದಲ್ಲಿರುವ ಪಕ್ಷಗಳು ಟ್ರೇಡ್ ಯೂನಿಯನ್ ಸಂಘಟನೆಗಳನ್ನು ಉತ್ತೇಜಿಸಲು ಬಯಸುವುದಿಲ್ಲ. ಹೀಗಾಗಿ ಕಾರ್ಮಿಕ ಸಂಘಟನೆಗಳು ಉಳಿಯುವುದು ಕಷ್ಟ. ಅಲ್ಲದೆ ಈಗ ಎಲ್ಲ ಕಡೆ ಗುತ್ತಿಗೆ ಆಧಾರದ ಮೇಲೆ ಕಾರ್ಮಿಕರ ನೇಮಕ ನಡೆಯುತ್ತಿರುವುದರಿಂದ ಅಲ್ಲದೆ ಹೊರಗುತ್ತಿಗೆಯ ಮೇಲೆ ಕಾರ್ಮಿಕರ ನೇಮಕಾತಿ ನಡೆಯುತ್ತಿರುವುದರಿಂದ ಕಮ್ಯೂನಿಸ್ಟ್ ತತ್ವಗಳಿಗೆ ಮಹತ್ವ ಕಡಿಮೆಯಾಗುತ್ತಿದೆ. ಈಗ ಬಹುತೇಕ ರಾಜಕೀಯ ಪಕ್ಷಗಳು ಕಾರ್ಮಿಕ ವಿಭಾಗವನ್ನು ಹೊಂದಿಲ್ಲ. ಕಾರ್ಮಿಕರು ಸಂಘಟಿತರಾಗಲು ಅವಕಾಶವನ್ನೂ ನೀಡುತ್ತಿಲ್ಲ. ಹೀಗಾಗಿ ಕಮ್ಯೂನಿಸ್ಟ್ ಸಿದ್ಧಾಂತಗಳು ಜನ ಮಾನಸದಿಂದ ಮರೆಯಾಗುತ್ತಿರುವುದು ಕಹಿ ಸತ್ಯ. ಇದರ ಪರಿಣಾಮ ಚುನಾವಣೆಗಳಲ್ಲೂ ಕಂಡು ಬರುತ್ತಿದೆ. ಕಾರ್ಮಿಕ ಮುಖಂಡರು ಸಾರ್ವತ್ರಿಕ ಚುನಾವಣೆ ಎದುರಿಸುವುದು ಕಷ್ಟ. ಯುವ ಪೀಳಿಗೆಯಲ್ಲೂ ಕಮ್ಯೂನಿಸ್ಟ್ ಚಳವಳಿಯ ಸೆಳವು ಕಡಿಮೆಯಾಗುತ್ತಿದೆ. ಹಿಂದೆ ಕಾಮ್ರೆಡ್ ಎಂದು ಹೇಳಿಕೊಳ್ಳುವುದು ಹೆಮ್ಮೆಯ ಸಂಗತಿಯಾಗಿತ್ತು. ಈಗ ಯಾರೂ ಅದನ್ನು ಹೇಳಿಕೊಳ್ಳುವುದಕ್ಕೆ ಬಯಸುವುದಿಲ್ಲ. ಅಲ್ಲಲ್ಲಿ ಒಬ್ಬರು ಇಬ್ಬರು ಲಾಲ್ ಸಲಾಂ ಹೇಳುತ್ತಾರೆ. ನಿಜವಾದ ಪ್ರಜಾಪ್ರಭುತ್ವ ತತ್ವಗಳು ಕಮ್ಯೂನಿಸ್ಟ್ ಪಕ್ಷದಲ್ಲಿದೆ ಎಂಬುದಂತೂ ನಿಜ. ಹೀಗಾಗಿ ಚೀನಾ ನಮಗಿಂತ ಹೆಚ್ಚು ಪ್ರಜಪ್ರಭುತ್ವವಾದಿ ಎಂಬುದರಲ್ಲಿ ಎರಡು ಮಾತಿಲ್ಲ. ■

ಜನಿವಾರ ಕಿತ್ತವರು ಉಡದಾರ ಬಿಟ್ಟಿದ್ದೇಕೆ?

ವಿಶ್ವ-ವಿಶಾಲು
ಎಂ.ಎಸ್.ನರಸಿಂಹಮೂರ್ತಿ

ವಿಶಾಲು ದುಃಖದಲ್ಲಿ ಕುಳಿತಿದ್ದಳು. ಅವಳ ತಮ್ಮ ಗೋಪಿ ಸಿ.ಇ.ಟಿ. ಪರೀಕ್ಷೆ ಮುಗಿಸಿ ಬಂದಿದ್ದ. ಕಾಲೇಜಿನವರು ಗೋಪಿಯ ಜನಿವಾರ ಕಿತ್ತೆಸೆದಿದ್ದರು. ವಿಶಾಲೂ ಬಿಕ್ಕಿದಳು. ವಿಶ್ವ ಮಡದಿಗೆ ಸಮಾಧಾನ ಮಾಡಿದ.

"ಸರ್ಕಾರದ ಕೆಲ್ಸಾನೇ ಕೀಳೋದು! ಅದು ಏನ್ಬೇಕಾದ್ರೂ ಕೀಳುತ್ತೆ. ಟ್ಯಾಕ್ಸ್ ಕೀಳುತ್ತೆ, ನೆಮ್ಮದಿ ಕೀಳುತ್ತೆ, ಸಂತೋಷ ಕೀಳುತ್ತೆ. ಮೂರು ವರ್ಷಗಳಿಂದ ಜನಿವಾರಾನೂ ತಪ್ಪದೆ ಕೀಳ್ತಿದೆ. ಕಿತ್ತ ಮೇಲೆ ಕೀಳೋದು ತಪ್ಪು ಅಂತ ಹೇಳಿಕೇನೂ ಕೊಡ್ತಿದೆ"

"ನಮ್ಮ ಗೋಪಿ ಸಿ.ಇ.ಟಿ. ಪರೀಕ್ಷೆಗೆ ಎಷ್ಟೆಲ್ಲ ತಯಾರಾಗಿದ್ದ ಗೊತ್ತಾ? ಒಂದು ವಾರದ ಹಿಂದೆಯಷ್ಟೇ ಅವನಿಗೆ ಮುಂಜಿ ಆಗಿತ್ತು. ಪ್ರತಿನಿತ್ಯ ಸಂಧ್ಯಾವಂದನೆ ಮಾಡ್ತಾ ಇದ್ದ. ಅಂಥವನು ಪರೀಕ್ಷೆಗೆ ಹೋದ್ರೆ ಬಾಗಿಲಲ್ಲಿ ತಡೆದು ಜನಿವಾರಾನ ಕಿತ್ತೆಳೆದು ನಿರ್ದಯವಾಗಿ ಕತ್ತರಿಸಿ ಕಸದ ಬುಟ್ಟಿಗೆ ಎಸೆದಿದ್ದಾರೆ. ಮನುಷ್ಯರಾ ಅವರು?" ಎಂದು ಕೂಗಾಡಿದಳು.

"ಕೆಲವು ಸ್ಯಾಡಿಸ್ಟ್‌ಗಳಿಗೆ ಹಿಂಸೆ ಮಾಡೋದರಲ್ಲೇ ಮಜಾ ಸಿಗುತ್ತೆ" ಎಂದ ವಿಶ್ವ.

"ಜನಿವಾರ ಅಂದ್ರೆ ಬರೀ ದಾರಾನಾ?" ವಿಶಾಲು ಚಾಲೆಂಜ್ ಎಸೆದಳು.

"ಬರೀ ದಾರ ಖಂಡಿತ ಅಲ್ಲ. ಅದರ ಹಿಂದೆ ಒಂದು ಪವಿತ್ರವಾದ ಅರ್ಥ ಇದೆ. ಅದರಲ್ಲಿ ಇರೋ ಮೂರು ಎಳೆ ಚಾಮುಂಡಿ, ಸರಸ್ವತಿ, ಲಕ್ಷ್ಮೀ ಸಂಕೇತ ಅಂತಾರೆ. ಧರಿಸೋದರಿಂದ ಧೈರ್ಯ, ಜ್ಞಾನ, ಸಂಪತ್ತು ಸಿಗುತ್ತೆ" ಎಂದ ವಿಶ್ವ. ನಾನು ಮುಂದುವರೆಸಿದೆ.

"ಧೈರ್ಯ ಅಂದರೆ ಎಷ್ಟು ಗೊತ್ತಾ? ನಮ್ಮ ತಾತ ಹೇಳ್ತಿದ್ರು. ರಾತ್ರಿ ವೇಳೆ ಹಳ್ಳಿಗಳು ದಾಟೋವಾಗ ಸ್ಮಶಾನದಲ್ಲಿ ನಡ್ಕೊಂಡು ಹೋಗಬೇಕಾಗುತ್ತೆ. ಸ್ಮಶಾನದಲ್ಲಿ ದೆವ್ವ ಇರುತ್ತೆ. ದೆವ್ವದ ಕೂಗು ಭಯಂಕರ. ಮನುಷ್ಯರ ರಕ್ತ ಅಂದ್ರೆ ಅದಕ್ಕೆ ಪಾನಕ! ಸ್ಮಶಾನದ ಬೌಂಡರಿ ದಾಟೋವರೆಗೂ ಜನಿವಾರದ ಬ್ರಹ್ಮಗಂಟು ಹಿಡ್ಕೊಂಡು ಗಾಯತ್ರಿ ಜಪ ಮಾಡ್ತಿದ್ರೆ ಹತ್ತಿರಕ್ಕೆ ದೆವ್ವಾನೂ ಬರೊಲ್ಲ, ಪಿಶಾಚೀನೂ ಬರೊಲ್ಲ ಅಂತ ಹೇಳ್ತಾ ಇದ್ರು"

"ಜನಿವಾರಕ್ಕೆ ಅಷ್ಟು ತಾಖತ್ ಇದೆ ನಿಜ. ಮಾನಸಿಕವಾಗಿ ಒಬ್ಬ ವಿದ್ಯಾರ್ಥೀನ ಸೆದೆ ಬಡಿಯೋದು ಅಂದ್ರೆ ಜುಟ್ಟು, ಜನಿವಾರ ಕತ್ತರಿಸೋದು. ಜನಿವಾರ ಕತ್ತರಿಸಿದವರು ಉಡಿದಾರ ಯಾಕೆ ಕತ್ತರಿಸ್ಲಿಲ್ಲ?" ಕೇಳಿದಳು ವಿಶಾಲು.

"ಇಲ್ಲಮ್ಮ ವಿಶಾಲೂ, ಅಲ್ಲೆಲ್ಲ ಕೈ ಹಾಕೊಲ್ಲ. ಅವು ಅಪಾಯದ ಜಾಗಗಳು" ಎಂದ ವಿಶ್ವ. "ರೀ, ದಾರ ಅಂದ್ಮೇಲೆ ಎಲ್ಲ ಕಡೆ ಇರೋದು ಒಂದೇ ದಾರ ಅಲ್ವೇನ್ರೀ? ಕೈಗೆ ಕಟ್ಕೊಂಡಿರೋ ಕಾಶಿ ದಾರ ಕಟ್ ಮಾಡ್ತಾರೆ. ಕಳೆದ ವರ್ಷ ಸಿ.ಇ.ಟಿ. ಪರೀಕ್ಷೇಲಿ ಏನಾಗಿತ್ತು? ಹೆಣ್ಣು ಮಕ್ಕಳ ಕಿವಿ ಓಲೆ ತೆಗೆಸಿದ್ರು, ಮದುವೆಯಾದವರ ಮಾಂಗಲ್ಯ ತೆಗೆಸಿದ್ರು" ವಿಶಾಲೂಗೆ ದುಃಖದ ಕಟ್ಟೆ ಒಡೆದಿತ್ತು.

"ಹೌದೌದು, ನೆನಪಿದೆ. ನಾನು ಪೇಪರ್‌ನಲ್ಲಿ ಓದಿದ್ದೀನಿ"

"ಒಬ್ಬಾಕೆಯ ಮೂಗುನತ್ತು ತೆಗೆಯೋಕೆ ಆಗ್ಲೇ ಇಲ್ವಂತೆ. ಬ್ಯಾಂಡೇಡ್ ಪೀಸ್‌ನ ಕಟ್ ಮಾಡಿ ಮೂಗುನತ್ತು ಕಾಣದೇ ಇರೋ ಹಾಗೆ ಪ್ಯಾಚ್ ಹಾಕಿದ್ದಾರೆ. ಒಂದ್ವೇಳೆ ಮೂಗುನತ್ತು ಪರೀಕ್ಷೆ ಕೊಠಡಿಗೆ ಬಿಟ್ಟಿದ್ರೆ ಯಾರಿಗೆ ಏನು ತೊಂದ್ರೆ ಆಗ್ತಾ ಇತ್ತು?" ಎಂದು ಕೇಳಿದಳು.

"ಹಾಗಲ್ಲಮ್ಮ, ಪರೀಕ್ಷಾ ಕೊಠಡಿಗೆ ಯಾವ್ದೇ ಮೆಟಲ್ಲು ತಗೊಂಡು ಹೋಗೋ ಹಾಗಿಲ್ಲ" ಎಂದ ವಿಶ್ವ.

"ಸುಮ್ನಿರೀ, ಸರ್ಕಾರದ ಏಜೆಂಟ್ ಥರ ಮಾತಾಡಬೇಡಿ. ಅಮೆರಿಕಕ್ಕೆ ಹೋಗೋ ಮಹಿಳೆಯರಿಗೆ ವಿಮಾನ ನಿಲ್ದಾಣಗಳಲ್ಲಿ ಸೆಕ್ಯೂರಿಟಿ ಚೆಕ್ ಮಾಡೋವಾಗ ಮಾಂಗಲ್ಯ, ಓಲೆ, ಕಾಲುಂಗುರ ಎಲ್ಲ ಬಿಡ್ತಾರೆ. ಪಿ.ಯು.ಸಿ. ಫೈಲ್ ಆಗಿರೋ ಸೆಕ್ಯೂರಿಟಿ ಮಂದಿಗೆ ಇರೋ ಕಾಮನ್ ಸೆನ್ಸ್ ಸಿ.ಇ.ಟಿ. ನಡೆಸೋವರಿಗೆ ಇಲ್ಲ ಅಂದ್ರೆ ನಾಚಿಕೆಗೇಡು" ಎಂದು ಕೂಗಾಡಿದಳು.



"ಉನ್ನತ ಶಿಕ್ಷಣ ಸಚಿವರ ಜಿಲ್ಲೆಯಲ್ಲೇ ಜನಿವಾರ ಕಟ್ ಮಾಡಿದ್ದಾರೆ. ಪರೀಕ್ಷೆ ಬರೆದ್ಮೇಲೆ ಆ ಹುಡುಗ ಕಸದ ಬುಟ್ಟಿಯಲ್ಲಿ ಬಿದ್ದಿದ್ದ ಜನಿವಾರ ತಗೊಂಡು ಮನೆಗೆ ಬಂದು, 'ಅಮ್ಮಾ, ಇದಕ್ಕೆ ಗಂಟು ಹಾಕ್ಕೊಡು' ಅಂತ ಕೇಳಿದಾಗ ತಾಯಿಯ ಕರುಳು ಕಿತ್ಕೊಂಡು ಬಂತು" ಎಂದು ದಿನಪತ್ರಿಕೆ ಮುಂದಿಟ್ಟೆ.

"ಐದು ಲಕ್ಷ ರೂಪಾಯಿ ಖರ್ಚು ಮಾಡಿ ಮಗನಿಗೆ ಉಪನಯನ ಮಾಡಿದ್ರು. ಈಗ ಮತ್ತೆ ಉಪನಯನ ಮಾಡ್ಬೇಕಾಗುತ್ತಾ?" ಎಂದು ವಿಶಾಲು ರೇಗಿದಳು.

"ಉಪನಯನ ಆಗ್ಲಿ, ವಿವಾಹ ಆಗ್ಲಿ ಒಂದೇ ಸಲ ಮಾಡೋದು. ಎಡವಟ್ಟಾದಾಗ ಸರಿಪಡಿಸೋಕೆ ಶಾರ್ಟ್‌ಕಟ್ಸ್ ಇವೆ. ಮುಂಜಿ ಮಾಡಿಸಿದ ಪುರೋಹಿತರ ಕೈಲಿ ರಿನ್ಯೂ ಮಂತ್ರ ಹೇಳಿಸಿ ಮತ್ತೊಂದು ಜನಿವಾರ ಹಾಕಿಸಿದ್ರೆ ಆಯ್ತು" ಎಂದ ವಿಶ್ವ.

ಹಿಂದಿನ ವರ್ಷದ ಘಟನೆಗಳು ನೆನಪಾದವು. ಷರ್ಟಿನ ತೋಳು ಉದ್ದ ಇದ್ದವನು ಸಿ.ಇ.ಟಿ. ಪರೀಕ್ಷೆಗೆ ಬಂದಾಗ ತೋಳು ಕತ್ತರಿಸಿ ಗಿಡ್ಡ ತೋಳು ಮಾಡಿದ್ದಾರೆ. ಹೆಣ್ಣು ಮಕ್ಕಳ ಬಳೆಗಳು ತೆಗೆಸಿದ್ದಾರೆ, ಅದೂ ಶುಕ್ರವಾರ! ಬಳೆ, ಓಲೆ ಶುಕ್ರವಾರ ತೆಗೆಯೋದು ಅಪಶಕುನ ಅಲ್ವಾ? ರಾಜಕಾರಣಿಗಳು ತಮ್ಮ ಮಗಳು, ಸೊಸೆಗೆ ಹಾಗೆ ಮಾಡ್ತಾರಾ? ಇದರ ಹಿಂದೆ ಕಾಣದ ಕೈ ಇದೆ. ಯಾರು ಇದನ್ನೆಲ್ಲ ಮಾಡಿಸ್ತಾ ಇದ್ದಾರೆ ಅನ್ನೋದೇ ಬಹಿರಂಗ ಆಗ್ತಿಲ್ಲ ಎನ್ನಿಸಿತು.

"ವಿಶಾಲು ಮೇಡಂ, ಸರ್ಕಾರ ಕಟ್ಟುನಿಟ್ಟಾದ ನಿಯಮ ತರ್ಬೇಕು. ಹುಡುಗನ ಜನಿವಾರ ಆಗ್ಲಿ, ಹೆಣ್ಣಿನ ಮಾಂಗಲ್ಯ ಆಗ್ಲಿ ಮುಟ್ಟೋದು ಅಂದ್ರೆ ಅದು ಅಪರಾಧ. ಅಂಥ ಪ್ರಕರಣ ನಡೆದಾಗ ಜನ ತಿರುಗಿ ಬೀಳ್ಬೇಕು" ಎಂದೆ.

"ಕಳೆದ ವರ್ಷಾನೂ ಇದೇ ತಪ್ಪು ಮಾಡಿದ್ರು. ಪ್ರತಿ ವರ್ಷಾನೂ ಜನಿವಾರಕ್ಕೇ ಕುತ್ತು ಬರ್‍ತಿದೆ. ಶಿಕ್ಷಣ ಇಲಾಖೆಗೆ ಜ್ಞಾನ ಬೇಡ್ವಾ? ಜನಿವಾರ ಕತ್ತರಿಸಿದವರಿಗೆ ಏನ್ಮಾಡ್ತಾರಂತೆ?"

"ಏನ್ಮಾಡ್ತಾರೆ? ಶಾಲೆಯ ಮಾನ್ಯತೆ ತೆಗೀತಾರೆ. ಮೂರು ತಿಂಗಳಾದ್ಮೇಲೆ ಮತ್ತೆ ಕೊಡ್ತಾರೆ. ಜನಿವಾರ ಕಟ್ ಮಾಡಿದವರ್‍ನ ಜನಗಳ ಕಣ್ಣೊರೆಸೋಕೆ ಅಂತ ಅಮಾನತ್ ಮಾಡ್ತಾರೆ. ಮೂರು ತಿಂಗಳು ಬಿಟ್ಟು ಮತ್ತೆ ಕೆಲಸಕ್ಕೆ ತಗೋತಾರೆ"

ಭದ್ರತಾ ಲೋಪದೋಷದಿಂದಾಗಿ ವಿಧಾನಸೌಧ ಒಳಗೆ ಏನೇನೋ ತರ್ತಾರೆ, ಸೀರಿಯಲ್ ಲೈಟುಗಳು ತರ್ತಾರೆ, ನಾಯಿಮರಿ ತರ್ತಾರೆ, ಟೈಂಪಾಸ್‌ಗೆ ಲೈಂಗಿಕ ಚಿತ್ರಗಳು ತರ್ತಾರೆ! ಅವರೆಲ್ಲ ನಮ್ಮ ನಾಯಕರು. ಅವರು ಏನೇ ತಂದ್ರೂ ಓಕೆ. ಪರೀಕ್ಷಾ ಕೇಂದ್ರಗಳಿಗೆ ಜನಿವಾರ ತರೋದು ಮಾತ್ರ ಅಪರಾಧ ಎಂದುಕೊಂಡೆ.

"ಮುಂದೆ ಇನ್ನೆಂಥ ಗತಿ ಬರುತ್ತೋ?" ಎಂದಳು ವಿಶಾಲು. ವಿಶ್ವ ಯೋಚಿಸಿ ಹೇಳಿದ.

"ಮುಂದೆ ಸಿ.ಇ.ಟಿ. ಬರೆಯೋವರು ಷರಟು, ಪ್ಯಾಂಟು ಹಾಕ್ಕೊಳ್ಳೋ ಹಾಗಿಲ್ಲ. ಬರೀ ಚೆಡ್ಡಿ, ನೆಟ್ ಬನಿಯನ್‌ನಲ್ಲೇ ಬರೀಬೇಕು. ಅಂಥ ನಿಯಮ ಬಂದ್ರೂ ಬರಬಹುದು. ಪರೀಕ್ಷಾ ಕೊಠಡಿಗೆ ಹೋಗೋ ಮೊದಲು ಬಟ್ಟೆ ಬಿಚ್ಚಿ ಡಾಕ್ಟರ್ ಚೆಕ್‌ಅಪ್‌ಗೆ ಹೋದಾಗ ಮಾಡ್ತಾರಲ್ಲ ಆ ಥರ ಚೆಡ್ಡಿ ಧರಿಸಿ ಪರೀಕ್ಷೆ ಬರೀಬೇಕು. ಆ ದಿನ ದೂರ ಇಲ್ಲ" ಎಂದ ವಿಶ್ವ.

"ನಿನ್ನ ಪ್ರಕಾರ ಚೆಡ್ಡಿಯಾದ್ರೂ ಬಿಡ್ತಾರಲ್ಲ, ಅದು ಸಂತೋಷ" ಎಂದು ನಾನು ಹೇಳಿದಾಗ ವಿಶಾಲೂ ಸಿಟ್ಟು ಮರೆತು ನಗುತ್ತಾ, "ಅದರಿಂದ ಹೆಣ್ಣು ಮಕ್ಕಳಿಗೆ ಇನ್ನೂ ಕಷ್ಟ" ಎಂದಳು. ■

ಖರ್ಗೆ, ದೇವೇಗೌಡರು ಫಿಕ್ಸ್, ಇನ್ನಿಬ್ಬರು ಯಾರು..?

ಮೂರನೇ ಮಹಡಿ
ಸುಭಾಷ್ ಹೂಗಾರ
ಹಿರಿಯ ಪತ್ರಕರ್ತರು
subhash16may@gmail.com

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಜೂನ್ ತಿಂಗಳಲ್ಲಿ ನಡೆಯಲಿರುವ ಚುನಾವಣೆಗೆ ಈ ತಿಂಗಳು ಎರಡನೇ ವಾರದಲ್ಲಿ ಅಧಿಸೂಚನೆ ಹೊರಡಲಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಬಿಜೆಪಿಯ ಈರಣ್ಣ ಕಡಾಡಿ ಮತ್ತು ಕೆ.ನಾರಾಯಣ್ ಅವರು ತಮ್ಮ ಆರು ವರ್ಷಗಳ ಅವಧಿ ಪೂರೈಸುತ್ತಿರುವುದರಿಂದ ಈ ಸ್ಥಾನಗಳು ಖಾಲಿಯಾಗಲಿವೆ. ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆ ಮತ್ತು ಕೆಪಿಸಿಸಿ ಗದ್ದುಗೆಗೆ ಪರೋಕ್ಷವಾಗಿ ನಡೆದಿರುವ ಗುದ್ದಾಟದ ಮಧ್ಯೆ ರಾಜ್ಯಸಭೆ ಚುನಾವಣೆ ಕುರಿತಂತೆ ಕಾಂಗ್ರೆಸ್ ಪಕ್ಷದಲ್ಲಿ ಇನ್ನೂ ಚಟುವಟಿಕೆಗಳು ಆರಂಭವಾಗೇ ಇಲ್ಲ ಎಂದು ಮೇಲ್ನೋಟಕ್ಕೆ ಭಾಸವಾಗುತ್ತಿದೆ. ಪಂಚರಾಜ್ಯಗಳ ಚುನಾವಣೆಯ ಫಲಿತಾಂಶಕ್ಕಾಗಿ ಕಾದಿದ್ದ ಪಕ್ಷದ ವರಿಷ್ಠರೂ ಈ ಬಗ್ಗೆ ಗಮನಹರಿಸಿರಲಿಲ್ಲ. ಆದರೆ, ರಾಜ್ಯಸಭೆಯ ಮೇಲೆ ಕಣ್ಣಿಟ್ಟಿರುವ ಆಕಾಂಕ್ಷಿಗಳು ಮಾತ್ರ ಒಳಗೊಳಗೇ ಸಿದ್ಧತೆಗಳನ್ನು ನಡೆಸಿದ್ದು, ಮೇ ಎರಡನೇ ವಾರದ ನಂತರ ಚಟುವಟಿಕೆಗಳು ಗರಿಗೆದರಲಿವೆ. ಸದ್ಯಕ್ಕೆ ವಿಧಾನಸಭೆಯಲ್ಲಿ 135 ಶಾಸಕರ ಬಲ ಹೊಂದಿರುವ ಕಾಂಗ್ರೆಸ್ ಪಕ್ಷ ನಾಲ್ಕರ ಪೈಕಿ ಮೂರು ಸ್ಥಾನಗಳನ್ನು ಗೆಲ್ಲಲು ಅಗತ್ಯವಿರುವಷ್ಟು ಸಂಖ್ಯಾಬಲ ಹೊಂದಿದೆ. ನಾಲ್ಕನೇಯ ಸ್ಥಾನ ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ಪಾಲಾಗಲಿದೆ. ಕಾಂಗ್ರೆಸ್ ಪಾಲಿನ ಮೂರು ಸ್ಥಾನಗಳ ಪೈಕಿ ಒಂದಂತೂ ಮಲ್ಲಿಕಾರ್ಜುನ್ ಖರ್ಗೆ ಅವರಿಗೆ ಫಿಕ್ಸ್ ಎನ್ನಲಾಗಿದೆ. ಉಳಿದೆರಡು ಸ್ಥಾನಗಳಿಗೆ ಅಭ್ಯರ್ಥಿಗಳು ಯಾರಾಗಲಿದ್ದಾರೆ ಎಂಬ ಚರ್ಚೆ ಕಾಂಗ್ರೆಸ್ ವಲಯದಲ್ಲಿ ನಡೆದಿದೆ. 'ನಮ್ಮಲ್ಲಿ ಯಾವುದೇ ಗೊಂದಲವಿಲ್ಲ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಪಕ್ಷದ ವರಿಷ್ಠರು ಸೇರಿ ಸಾಮಾಜಿಕ ನ್ಯಾಯದ ಲೆಕ್ಕಾಚಾರ ಮಾಡಿಯೇ ಒಮ್ಮತದ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಾರೆ' ಎಂದು ಮುಖಂಡರು ಹೇಳುತ್ತಿದ್ದಾರೆ. ಆದರೆ, ಉಳಿದ ಎರಡು ಸ್ಥಾನಗಳಿಗಾಗಿ ನಾಲ್ಕಾರು ಜನ ಪೈಪೋಟಿ ನಡೆಸಿರುವುದರಿಂದ ಅಂತಿಮವಾಗಿ ಯಾರಿಗೆ ಅದೃಷ್ಟ ಒಲಿಯಲಿದೆ ಎಂಬ ಕುತೂಹಲವಂತೂ ಇದ್ದೇ ಇದೆ.

ಶ್ರೀನಿವಾಸ್, ಕಾತರಕಿ, ಡಾ.ಅಂಜಲಿ:

ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಉತ್ತಮ ಸಂಘಟಕ, ಹೋರಾಟಗಾರನೆಂದು ಹೆಸರು ಮಾಡಿದ್ದ, ಕೋವಿಡ್ ಕಾಲದಲ್ಲಿ ದೇಶದೆಲ್ಲೆಡೆ ಭಾರೀ ಸುದ್ದಿ ಮಾಡಿದ್ದ ಬಿ.ವಿ.ಶ್ರೀನಿವಾಸ್, ಕೃಷ್ಣಾ, ಕಾವೇರಿ, ಮಹದಾಯಿ ಸೇರಿದಂತೆ ಅಂತಾರಾಜ್ಯ ಜಲ ವಿವಾದಗಳಲ್ಲಿ ಕರ್ನಾಟಕದ ಪರವಾಗಿ ವಾದ ಮಾಡುತ್ತಿರುವ ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯವಾದಿ ಮೋಹನ್ ಕಾತರಕಿ, ಮಾಜಿ ಶಾಸಕಿ, ಎಐಸಿಸಿ ವಕ್ತಾರರಾಗಿರುವ ಡಾ.ಅಂಜಲಿ ನಿಂಬಾಳ್ಕರ್, ಕಳೆದ ಲೋಕಸಭೆ ಚುನಾವಣೆಯಲ್ಲಿ ಬೆಂಗಳೂರು ಸೆಂಟ್ರಲ್ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಪರಾಭವಗೊಂಡಿದ್ದ ಮನ್ಸೂರ್ ಅಲಿ ಖಾನ್ ಹೆಸರುಗಳು ಸದ್ಯಕ್ಕೆ ಉಳಿದೆರಡು ಸ್ಥಾನಗಳಿಗಾಗಿ ಪ್ರಮುಖವಾಗಿ ಕೇಳಿಬರುತ್ತಿವೆ. ಮಾರ್ಗರೇಟ್ ಆಳ್ವಾ, ಮಾಜಿ ಸಂಸದ ರಾಜೀವಗೌಡ, ಎಲ್ ಹನುಮಂತಯ್ಯ ಅವರೂ ಆಕಾಂಕ್ಷಿಗಳಾಗಿದ್ದಾರೆ. ಆದರೆ, ಜಾತಿ ಲೆಕ್ಕಾಚಾರ, ಕಾಂಗ್ರೆಸ್ ಪಕ್ಷದ ಕೆಲ ಅಲಿಖಿತ ಮಾರ್ಗದರ್ಶಿ ಸೂತ್ರಗಳಿಂದಾಗಿ ಈ ಹೆಸರುಗಳು ಮುಂಚೂಣಿಗೆ ಬರುವ ಸಾಧ್ಯತೆಗಳು ಕಡಿಮೆ. ಈ ಎಲ್ಲ ಹೆಸರುಗಳ ಜೊತೆಗೆ ಕಾಂಗ್ರೆಸ್ ಹೈಕಮಾಂಡ್ ಮನಸಿನಲ್ಲಿ ಬೇರೆ ಹೆಸರುಗಳೂ ಇರಬಹುದು. ಆ ಡಾರ್ಕ್ ಹಾರ್ಸ್ ಯಾರು ಎಂಬುದು ಇಷ್ಟು ಬೇಗ ಗೊತ್ತಾಗುವುದಿಲ್ಲ ಎನ್ನುತ್ತವೆ ಕಾಂಗ್ರೆಸ್ ಮೂಲಗಳು. ಕಾಂಗ್ರೆಸ್ ವರಿಷ್ಠರೊಂದಿಗೆ ನೇರ ಸಂಪರ್ಕ ಹೊಂದಿರುವ ಶ್ರೀನಿವಾಸ್ ಪರವಾಗಿ ದೆಹಲಿ ಮಟ್ಟದಲ್ಲೇ ಲಾಬಿ ನಡೆದಿದ್ದರೆ, ಮೋಹನ್ ಕಾತರಕಿ ಪರವಾಗಿ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಮುಖಂಡರು ಒಲವು ತೋರಿದ್ದಾರೆ ಎನ್ನಲಾಗಿದೆ. ಜಲತಜ್ಞರಾಗಿರುವ ಕನ್ನಡಿಗ ಕಾತರಕಿ ಅವರಿಗೆ ಅವಕಾಶ ಕೊಟ್ಟರೆ ಜಲವಿವಾದಗಳ ವಿಷಯದಲ್ಲಿ ಸುಪ್ರೀಂ ಕೋರ್ಟ್ ಜೊತೆಗೆ ಸಂಸತ್ತಿನಲ್ಲೂ ಕರ್ನಾಟಕದ ವಾದಕ್ಕೆ ಹೆಚ್ಚು ತೂಕ ಬರುತ್ತದೆ ಎಂಬ ವಾದ ಮಂಡಿಸಲಾಗುತ್ತಿದೆ. ಶಾಸನ ಸಭೆಗಳಲ್ಲಿ ಮಹಿಳೆಯ ಪ್ರಾತಿನಿಧ್ಯ ಹೆಚ್ಚಾಗಬೇಕು ಎಂಬ ಚರ್ಚೆ ವ್ಯಾಪಕವಾಗಿರುವ ಈ ದಿನಗಳಲ್ಲಿ ಮೂರು ಅಭ್ಯರ್ಥಿಗಳ ಪೈಕಿ ಮಹಿಳೆಯೊಬ್ಬರಿಗೆ ಅವಕಾಶ ಕೊಡಬೇಕು ಎಂದು ಪಕ್ಷ ತೀರ್ಮಾನಿಸಿದರೆ ಡಾ.ಅಂಜಲಿ ನಿಂಬಾಳ್ಕರ್ ಅವರ ಅದೃಷ್ಟ ಖುಲಾಯಿಸುವ ಸಾಧ್ಯತೆಗಳಿವೆ.

ರಿಸ್ಕ್ ತೆಗೆದುಕೊಂಡೀತೆ ಬಿಜೆಪಿ?:

ಒಬ್ಬ ಅಭರ್ಥಿಯನ್ನು ಗೆಲ್ಲಿಸಿಕೊಂಡ ನಂತರವೂ ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ಬಳಿ ಸುಮಾರು 39 ಹೆಚ್ಚುವರಿ ಮತಗಳು ಉಳಿಯಲಿವೆ. ಆದರೆ, ಇಷ್ಟು ಮತಗಳು ಎರಡನೇ ಅಭ್ಯರ್ಥಿಯನ್ನು ಗೆಲ್ಲಿಸಲು ಸಾಕಾಗುವುದಿಲ್ಲ. ಕಾಂಗ್ರೆಸ್ ಪಕ್ಷದ ಕನಿಷ್ಠ ಆರು ಶಾಸಕರು ಕ್ರಾಸ್ ವೋಟಿಂಗ್ ಮಾಡಿದರೆ ಮಾತ್ರ ಬಿಜೆಪಿ ಎರಡನೇ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವುದು ಸಾಧ್ಯ. ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸಾಹಸವನ್ನು ಬಿಜೆಪಿ ಮಾಡುವುದೇ ಎಂಬುದು ಕುತೂಹಲದ ಪ್ರಶ್ನೆ. ಹಾಗೊಂದು ವೇಳೆ ಬಿಜೆಪಿ ನಿರ್ಧರಿಸಿದರೆ ಚುನಾವಣೆ ಬಹಳ ರೋಚಕವಾಗಲಿದೆ. ಕರ್ನಾಟಕದ ಮಟ್ಟಿಗೆ ಕಾಂಗ್ರೆಸ್ ಶಾಸಕರಿಂದ ಕ್ರಾಸ್ ವೋಟಿಂಗ್ ಮಾಡಿಸುವುದು ಸುಲಭವಂತೂ ಅಲ್ಲ. ಅಷ್ಟೇ ಏಕೆ, ಮೈತ್ರಿಕೂಟದ ಎರಡೂ ಪಕ್ಷಗಳಿಗೆ ತಮ್ಮ ಶಾಸಕರು ಕ್ರಾಸ್ ವೋಟಿಂಗ್ ಮಾಡದಂತೆ ನೋಡಿಕೊಳ್ಳುವುದೂ ಸವಾಲಿನ ಕೆಲಸವಾಗಬಹುದು. ಪರಿಸ್ಥಿತಿ ಹೀಗಿರುವಾಗ ರಿಸ್ಕ್ ಬೇಡ ಎಂದು ನಿರ್ಧರಿಸಿ ಒಬ್ಬರೇ ಅಭ್ಯರ್ಥಿಯನ್ನು ಮೈತ್ರಿಕೂಟ ಕಣಕ್ಕಿಳಿಸಿದರೆ ನಾಲ್ಕೂ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ. ಅಂಥ ಸಂದರ್ಭದಲ್ಲಿ ಮಲ್ಲಿಕಾರ್ಜುನ್ ಖರ್ಗೆ ಮತ್ತು ದೇವೇಗೌಡರಂತೂ ಮತ್ತೊಮ್ಮೆ ರಾಜ್ಯಸಭೆ ಪ್ರವೇಶಿಸುವುದು ನಿಶ್ಚಿತ. ಉಳಿದ ಇಬ್ಬರು ಅದೃಷ್ಟವಂತರು ಯಾರು ಎಂಬುದನ್ನು ತಿಳಿಯಲು ಕನಿಷ್ಠ ಎರಡು ವಾರ ಕಾಯಲೇಬೇಕು. ■

ದೇವೇಗೌಡರಿಗೆ ಚಾನ್ಸ್

ಬಿಜೆಪಿ-ಜೆಡಿಎಸ್ ಮೈತ್ರಿಕೂಟದಿಂದ ಬಿಜೆಪಿ ಅಭ್ಯರ್ಥಿಯನ್ನೇ ಕಣಕ್ಕಿಳಿಸಬೇಕೆಂಬುದು ರಾಜ್ಯ ಬಿಜೆಪಿ ನಾಯಕರ ಸ್ಪಷ್ಟ ಅಭಿಪ್ರಾಯ. 65 ಶಾಸಕರನ್ನು ಹೊಂದಿರುವ ಬಿಜೆಪಿ ಕೇವಲ 19 ಶಾಸಕರನ್ನು ಹೊಂದಿರುವ ಜೆಡಿಎಸ್‌ಗೆ ಅವಕಾಶ ಕೊಟ್ಟರೆ ಪಕ್ಷದ ಮುಖಂಡರ ಮನೋಬಲ ಕುಸಿಯುತ್ತದೆ, ಕಾರ್ಯಕರ್ತರಿಗೆ ತಪ್ಪು ಸಂದೇಶ ರವಾನೆಯಾಗುತ್ತದೆ ಎಂಬುದನ್ನು ಪಕ್ಷದ ವರಿಷ್ಠರಿಗೆ ಮನವರಿಕೆ ಮಾಡಿಕೊಡಬೇಕು ಎಂದೂ ಅವರು ನಿರ್ಧರಿಸಿದ್ದಾರೆ. ಮಾಜಿ ಸಿಎಂ ಡಿ.ವಿ.ಸದಾನಂದಗೌಡರನ್ನು ರಾಜ್ಯಸಭೆಗೆ ಕಳಿಸುವುದಕ್ಕೆ ರಾಜ್ಯದ ಮುಖಂಡರನೇಕರು ಆಸಕ್ತಿ ತೋರಿದ್ದಾರೆ, ಪಕ್ಷದ ಕೋರ್ ಕಮಿಟಿ ಸಭೆಯಲ್ಲೂ ಈ ವಿಚಾರದಲ್ಲಿ ಸುದೀರ್ಘ ಚರ್ಚೆ ನಡೆದಿದೆ. ಆದರೆ, ಸ್ವತಃ ಪ್ರಧಾನಿ ನರೇಂದ್ರ ಮೋದಿ ಅವರೇ ದೇವೇಗೌಡರನ್ನು ಮತ್ತೊಂದು ಅವಧಿಗೆ ಬಿಜೆಪಿ ಬೆಂಬಲದಿಂದ ರಾಜ್ಯಸಭೆಗೆ ಕಳಿಸಲು ಒಲವು ತೋರಿರುವುದರಿಂದ ರಾಜ್ಯ ಬಿಜೆಪಿ ನಾಯಕರ ಪ್ರಯತ್ನವೆಲ್ಲವೂ ನೀರಿನಲ್ಲಿ ಹೋಮ ಮಾಡಿದಂತಾಗಲಿದೆ ಎಂದೂ ಕೆಲ ನಾಯಕರು ಬೇಸರ ವ್ಯಕ್ತಪಡಿಸುತ್ತಾರೆ. ಈ ವಿಚಾರದಲ್ಲಿ ಬಿಜೆಪಿ-ಜೆಡಿಎಸ್ ನಡುವೆ ಕೊನೆಯ ಕ್ಷಣದವರೆಗೆ ಹಗ್ಗಜಗ್ಗಾಟ ನಡೆಯಬಹುದು. ಅಂತಿಮವಾಗಿ ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಕೈಗೊಳ್ಳುವ ನಿರ್ಧಾರವೇ ಫೈನಲ್ ಆಗಲಿದೆ. ಸದ್ಯಕ್ಕೆ ದೆಹಲಿಯಿಂದ ಬರುತ್ತಿರುವ ಮಾಹಿತಿ ನಂಬುವುದಾದರೆ ಬಿಜೆಪಿ- ಜೆಡಿಎಸ್ ಮೈತ್ರಿಕೂಟದಿಂದ ದೇವೇಗೌಡರ ಸ್ಪರ್ಧೆ ಗ್ಯಾರಂಟಿ.

ಆತ ಟ್ರಂಪೇಸಿ-ಈಕೆ ಟ್ರಂಪಮ್ಮ...

ತಾರಾತಿಗಡಿ
ನರಸಿಂಹ ಹುಲಿಹೈದರ್
ಮುಖ್ಯ ವರದಿಗಾರ

ಈಗ ಆ ಮೂಲತೃಣದ ಅಕ್ಕಮ್ಮ ಸೋತು ಸುಣ್ಣವಾಗಿದ್ದೀಯ ರಾಜಿನಾಮೆ ಕೊಡು ಅಂದರೆ ನಾ ಕೊಡಲ್ಲ..ನಾ ಕೊಡಲ್ಲ ನಾ ಕೊಡಲ್ಲ ಎಂದು ಕೋರ್ಟಿನಲ್ಲಿ ಹೇಳುವಂತೆ ಮೂರು ಮೂರು ಬಾರಿ ಹೇಳಿದ್ದಳು. ಆಕೆ ಕೊಟ್ಟರೆ ಇಸಿದುಕೊಳ್ಳಬೇಕು...ಇಲ್ಲದಿದ್ದರೆ ಹಾಗೆ ಬಿಡಬೇಕು ಎಂದು ಅಲ್ಲಲ್ಲಿ ಪೋಸ್ಟರ್ ಅಂಟಿಸಿದ್ದರು. ಇದ್ಯಾಕಾದೀತು ಬಿಡಬೇಡಿ ರಾಜಿನಾಮೆ ಇಸಿದುಕೊಳ್ಳಿ ಎಂದು ಸೋದಿ ಮಾಮಾರು...ಲಮಿತ್ ಸಾ ಕಾಕಾರು ಎಲ್ಲರೂ ಒಂದೇ ಸಮನೆ ಫೋನ್ ಮಾಡಿ ಹೇಳುತ್ತಿದ್ದರೂ ಅವರ ಮಾತನ್ನು ಯಾರೂ ಕಿವಿಗೆ ಹಾಕಿಕೊಳ್ಳಲಿಲ್ಲ. ಕೊನೆಗೆ ಈ ಬುದ್ದಿ ಆಕೆ ಕಲಿತಿದ್ದಾರೂ ಎಲ್ಲಿಂದ ಎಂದು ಪತ್ತೆ ಮಾಡಿ ವರದಿ ನೀಡಲು ರಷಿಯಾ ಮಟ್ಯಾನ ನೇತೃತ್ವದಲ್ಲಿ ಸಮಿತಿ ಮಾಡಿದರು. ರಷಿಯಾ ಮಟ್ಯಾ ಪತ್ತೆ ಹಚ್ಚಿ ವರದಿ ನೀಡಲು ಮುಂದಾದ. ನಂತರ ಆಕೆಯ ಊರಿಗೆ ಹೋಗಿ ಎಲ್ಲೆಡೆ ತಿರುಗಾಡಿ ಮಾಹಿತಿ ಸಂಗ್ರಹಿಸಿದ. ಅಕ್ಕಮ್ಮ ಅಲಿಯಾಸ್ ಟ್ರಂಪಮ್ಮಳು ಮೊದಲಿನಿಂದಲೂ ಟ್ರಂಪೇಸಿ ಫ್ಯಾನು. ಒಂದು ಬಾರಿ ಆತನಿಗೆ ನೀನು ಕೂದಲಿಗೆ ಮೆಹಂದಿ ಹಚ್ಚುತ್ತೀಯಾ? ಅಥವಾ ಕೆಂಪು ಬಣ್ಣ ಹಚ್ಚುತ್ತೀಯಾ? ಎಂದು ಕೇಳಿದ್ದಳು. ಆತ ಏನು ಹೇಳುತ್ತಾನೋ ಅಕ್ಕಮ್ಮನೂ ಅದನ್ನೇ ಮಾಡಿದಳು. ಆಡಳಿತ ನಡೆಸುವಾಗ ಹೇಗೆ ಮಾಡುತ್ತೀರಿ ಎಂದು ಆತನ ಸಜೇಷನ್ ತೆಗೆದುಕೊಂಡು ತಾನೂ ಹಾಗೆ ಮಾಡಿದಳು. ನೀವು ಗುಂಡು ಹೊಡೆಸಿಕೊಂಡ ನಾಟಕ ಹೇಗೆ ಮಾಡಿದಿರಿ? ಆ ಸಂದರ್ಭದಲ್ಲಿ ಮುಖವನ್ನು ಯಾವ ರೀತಿ ಮಾಡಬೇಕು? ಹಾವ-ಭಾವ ಹೇಗಿರಬೇಕು ಎಂದು ಕೇಳಿಕೊಂಡು ಗಾಲಿಕುರ್ಚಿ ಮೇಲೆಯೂ ಬಂದಿದ್ದಳು. ಸಿಕ್ಕವರ ಮುಂದೆ ನಾನು ನಿಜವಾಗಿಯೂ ಟ್ರಂಪೇಸಿ ಫ್ಯಾನು ಎಂದು ಹೇಳುತ್ತಿದ್ದಳು. ಸಣ್ಣೆಂಕಣ್ಣನ ಮುಂದೆ ಹೇಳಿದಾಗ...ನಿನ್ನ ನೋಡಿದರೇನೇ ಗೊತ್ತಾಗುತ್ತದೆ ಎಂದು ಹೇಳಿದಾಗ ಆತನ ಕುಡ ಜಗಳ ತೆಗೆದಳು..ನಾನು ಚಾಷ್ಟಿ ಮಾಡುವುದಕ್ಕೆ ಅಂದೆ ಅಂದರೂ ಆಕೆ ಕೇಳಲಾರದೆ ಜಗಳವಾಡಿದಳು. ಹಿಂದೆ ಟ್ರಂಪೇಸಿ ಸೋತಾಗ ಆತ ನಾ ಕೊಡಲ್ಲ.. ರಾಜಿನಾಮೆ ಕೊಡಲ್ಲ ಅಂತ ಹೇಳಿದ್ದನಲ್ಲ ಈಗ ಈಕೆ ಅದನ್ನು ಹೇಳುತ್ತಿದ್ದಾಳೆ ಎಂದು ಮಟ್ಯಾ ಸಲ್ಲಿಸಿದ ಸಮಗ್ರ ವರದಿಯಲ್ಲಿ ತಿಳಿಸಿದ್ದಾನೆ. ■



75 ವರ್ಷಗಳ ಹಿಂದೆ.. ಅಮೃತ ಸಮಾಚಾರ

06-05-1951 ರವಿವಾರ

ಕಾಶ್ಮೀರ ಸಮಸ್ಯೆ ಸೌಹಾರ್ದದಿಂದ ಬಗೆಹರಿಯಲಿ

ಹೊಸದಿಲ್ಲಿ 5- ಕಾಶ್ಮೀರ ಸಮಸ್ಯೆಯ ಬಗ್ಗೆ ಭದ್ರತಾ ಮಂಡಳವು ಇತ್ತೀಚೆಗೆ ಅಂಗೀಕರಿಸಿರುವ ಗೊತ್ತುವಳಿಯನ್ನು ಭಾರತ ಸರಕಾರವು ನಿರಾಕರಿಸಿ ಕೈಕೊಂಡಿರುವ ಕ್ರಮವನ್ನು ಅಖಿಲ ಭಾರತ ಕಾಂಗ್ರೆಸ ಸಮಿತಿಯು ಸಂಪೂರ್ಣವಾಗಿ ಅನುಮೋದಿಸುತ್ತದೆ ಎಂಬ ಗೊತ್ತುವಳಿಯನ್ನು ಇಂದು ಇಲ್ಲಿ ಘಟನಾ ಸಮಿತಿ ಭವನದಲ್ಲಿ ಶ್ರೀ ಪುರುಷೋತ್ತಮದಾಸ ತಂಡನ್ನರ ಅಧ್ಯಕ್ಷತೆಯಲ್ಲಿ ಸೇರಿದ್ದ ಅ.ಭಾ. ಕಾಂಗ್ರೆಸ ಸಮಿತಿಯ ಅಧಿವೇಶನವು ಒಮ್ಮತದಿಂದ ಅಂಗೀಕರಿಸಿತು. ಈ ಅಧಿವೇಶನಕ್ಕೆ ಪಂ. ಜವಾಹರಲಾಲರನ್ನು ಮೊದಲು ಮಾಡಿಕೊಂಡು ಎಲ್ಲ ಮಂತ್ರಿಗಳು ಆಗಮಿಸಿದ್ದರು.

ಭಾರತದ ರಾಷ್ಟ್ರೀಯ ಆದಾಯ 8710 ಕೋಟಿ ರೂ.ಗಳು

ಹೊಸದಿಲ್ಲಿ 5- 1948-49ರಲ್ಲಿ ಭಾರತದ ರಾಷ್ಟ್ರೀಯ ಆದಾಯವು 8700 ಕೋಟಿ ರೂ.ಗಳಿತ್ತೆಂದು ರಾಷ್ಟ್ರೀಯ ಆದಾಯ ಸಮಿತಿಯು ತನ್ನ ಮೊದಲನೆ ವರದಿಯಲ್ಲಿ ಹೇಳಿದೆ. ಭಾರತದ ಜನಸಂಖ್ಯೆ 341040000 ಇದ್ದು ಪ್ರತಿಯೊಬ್ಬನ ಆದಾಯ 255 ರೂ.ಗಳಿವೆ.

ಸಂಯುಕ್ತ ಬಂಧ 5949



ಉತ್ತರ: 5948

ಎಡದಿಂದ ಬಲಕ್ಕೆ: 1. ಪ್ರಭಾವಿ, 3. ಅಂಜೂರ, 6. ಪರದೇಶ, 8. ಮರಕತ, 12. ರಕ್ಕಸಲೇಕ, 15. ಕರಡಿಗೆ, 18. ನಳಪಾಕ, 20. ಲವಂಗ, 21. ತೆರವು, 22. ದುಸ್ತರ

ಮೇಲಿನಿಂದ ಕೆಳಕ್ಕೆ: 1. ಪ್ರಚಾರ, 2. ವಿವಶ, 3. ಅಂತಿಮ, 4. ರಸಿಕ, 6. ಪಟ್ಟು, 7. ದೇವರಗುಡಿ, 9. ರಸಕವಳ, 10. ತತ್ತಿ, 11. ವಸತಿ, 13. ಮಂಕ, 14. ಲಂಕ, 16. ರಮ್ಯತೆ, 17. ಗೆಲವು, 18. ನಗದು, 19. ಪಾಮರ

ಎಡದಿಂದ ಬಲಕ್ಕೆ

1 ಮರದಲ್ಲಿ ಜೇನಿದೆ ಎಂದಮೇಲೆ ಸಿಹಿಯೂ ಇದೆ 3
3 ಕಾರ್ಯಕ್ರಮದ ಸಂಚಾಲಕ ವಾಹನವನ್ನೂ ಓಡಿಸಿದ 3
5 ಮುಂದೆ ಹೋಗಿ ಪೂರಿ ಜೊತೆಯ ಖಾದ್ಯ ತಾ 2
6 ಹರಕೆಗೆ ಬಲಿಯಾದ ಮುಗ್ಧ ಪ್ರಾಣಿ 2
7 ಸಮರ ಹೂಡಲು ಸರಿಯಾದ ವೇಳೆ 3
8 ಮೂರು ವಿವಿಧ ಬಗೆಯ ರೀತಿ 3
9 ಹೊಚ್ಚಹೊಸದಾದ ಪ್ರಪಂಚ 5
12 ಪಯಣ ಅಂತ್ಯವೇ ಇಲ್ಲದಷ್ಟು ಅಂತರದಲ್ಲಿದೆ 5
15 ಸಮಯ ನೋಡಿ ಹೂಡಿದ ಯುದ್ಧ 3
16 ಮನಸ್ಸಿಗೆ ಹಿತ ನೀಡುವ ಸಾರಸ್ವತಲೋಕ 3
17 ಸಿಂಧು ದೇಶದ ಪರ್ವತ 2
18 ಪಶು ಭಾರವಾದರೂ ಎಲ್ಲವೂ ಮಂಗಳಮಯ 2
19 ನೋಟದ ವಿಧದಲ್ಲೇ ಮಾಡಿದ ತಮಾಷೆ 3
20 ಶಕ್ತಿಯುತವಾದದ್ದು ಈ ಸಲ ನೋಡಬಹುದು 3

ಮೇಲಿನಿಂದ ಕೆಳಕ್ಕೆ

1 ಮಂದಹಾಸ ಬೀರಿ ಮಾಸ್ತಿಕಲ್ಲಾದ ಮಹಿಳೆ 4
2 ಹಣ್ಣುಹಂಪಲು ಸೇರಿಸಿ ತಯಾರಿಸಿದ ಮಿಶ್ರಣ 4
3 ಒಳ್ಳೆಯ ಶೀಲವನ್ನು ಹೊಂದಿದ್ದು ಚರಿತ್ರೆಯಲ್ಲಿದೆ 4
4 ಕಲೆಗಳನ್ನು ತಿಳಿದವನಾದ ಚಂದ್ರ 4
10 ನಯವಾದ ಹೆಸರನ್ನು ಇರಿಸಿಕೊಂಡಾಕೆ 3
11 ಸರಸಮಯ ಕವಿತೆ ರಚಿಸಿ ಆನಂದ ನೀಡಿದಾತ 4
12 ರವಿಯನ್ನು ನೋಡಿ ಅರಳಿದ ತಾವರೆ 4
13 ಆನಂದಾನುಭವಕ್ಕೆ ಭಾಸ ತಂದ ಅಡ್ಡಿ 4
14 ನ್ಯಾಯ-ಧರ್ಮದ ಚಾರಿತ್ರ್ಯ ಇರುವಾತ 4

ದಿನ ವಿಶೇಷ

ಬುಧವಾರ: 06.05.2026

- ಶ್ರೀ ಶಾಲಿವಾಹನ ಶಕೆ 1948
- ಸೌರಮಾಸ: ಮೇಷ, ದಿನ: 22
- ಮು. ಮಾಸ: ದುಲ್ ಖದಾ, ದಿನ: 19

ಪರಾಭವ ಸಂವತ್ಸರ, ಉತ್ತರಾಯಣ, **ಋತು:** ವಸಂತ, **ಮಾಸ:** ವೈಶಾಖ, **ಪಕ್ಷ:** ಕೃಷ್ಣ, **ತಿಥಿ:** ಚತುರ್ಥೀ (07.52), **ನಿತ್ಯನಕ್ಷತ್ರ:** ಮೂಲಾ (15.51), **ಯೋಗ:** ಸಿದ್ಧ (25.11), **ಕರಣ:** ಕೌಲವ (21.04)
ಮಾಸ ನಿಯಾಮಕ: ಕಮಲಾಲಯ ಮಧುಸೂದನ
ಸೂರ್ಯೋದಯ: 06.00 (**ನಾಳೆ:** 06.00)
ಸೂರ್ಯಾಸ್ತ: 06.48 (**ನಾಳೆ:** 06.48)
ಮಳೆನಕ್ಷತ್ರ: ಭರಣೀ ಮೂರನೆಯ ಪಾದ.

ತ್ರಿದಿನಸ್ಪೃಕ್. ಶ್ರೀ ಶ್ರೀನಿವಾಸ ತೀರ್ಥರ ಆರಾಧನೆ (ನವವೃಂದಾವನ). ಕೊಕ್ಕಡ ವೈದ್ಯೇಶ್ವರ ರಥ. ಪತಗುಂದಿ ಗೋಕಾಕ ಶ್ರೀ ಜಡಿ ಸಿದ್ಧೇಶ್ವರ ಜಾತ್ರೆ. ಸಂತೇಸರಗೂರು ಚೌಡೇಶ್ವರಿ ಉತ್ಸವ. ಮೈಸೂರು ಎನ್.ಆರ್.ಮೊಹಲ್ಲಾ ವೇಂಕಟರಮಣ ಉತ್ಸವ. ಕೋಳಿವಾಡ ಕಲ್ಮೇಶ್ವರ ರಥ. ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ ರಜತಕುಮಾರ್ ಸೇನ್ ಪುಣ್ಯದಿನ. ಅಮೆರಿಕನ್ ಪ್ರಬಂಧಕಾರ, ಕವಿ, ತತ್ವಜ್ಞಾನಿ ಹೆನ್ರಿ ಡೇವಿಡ್ ಥೋರೋ ಸ್ಮೃತಿದಿನ. ಇಟಾಲಿಯನ್ ವೈದ್ಯೆ, ಶಿಕ್ಷಕಿ ಮಾರಿಯಾ ಟೆಕ್ಲಾ ಆರ್ಟೆಮಿಸಿಯಾ ಮಾಂಟೆಸ್ಸರಿ ಸ್ಮೃತಿದಿನ. ಪ್ರಸಿದ್ಧ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ ಜನ್ಮದಿನ. ಅಂತಾರಾಷ್ಟ್ರೀಯ ಡಯಟ್ ರಹಿತ ದಿನ.

ಭಕ್ತಿಯ ಹಾದಿಯಲ್ಲಿ ಅಂಬರೀಷನ ಆದರ್ಶ


ಗುರುಬೋಧೆ
ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರು
ಉತ್ತರಾದಿ ಮಠ

ಅಂಬರೀಷ ಚಕ್ರವರ್ತಿಯ ದೇವರಮನೆ ಎಷ್ಟು ಸುಂದರ ಹಾಗೂ ಸ್ವಚ್ಛವಾಗಿತ್ತೆಂದರೆ, ಅವನು ಗುಡಿಸಿ ಒರೆಸಿದ ದೇವರ ಮನೆಯಲ್ಲಿ, ಕನ್ನಡಿಯಲ್ಲಿ ಮುಖವನ್ನು ನೋಡಿದರೆ ಮುಖ ಹೇಗೆ ಕಾಣುತ್ತದೆಯೋ ಅದೇ ರೀತಿಯಲ್ಲಿ ಮುಖ ಕಾಣುವಷ್ಟು ಸ್ವಚ್ಛವಾಗಿರುತ್ತಿತ್ತು. ಅಂತಹ ಸ್ಫಟಿಕದ, ಮುತ್ತು ರತ್ನದ ಸ್ತಂಭಗಳು. ವೈಭವೋಪೇತವಾಗಿದ್ದ ಅರಮನೆ. ಸಾಕಷ್ಟು ದಾಸ-ದಾಸಿಯರು, ಸೇವಕರಿಂದ ತುಂಬಿದ್ದ ಅರಮನೆಯ ಚಕ್ರವರ್ತಿಯಾಗಿದ್ದರೂ ದೇವರ ಮನೆಯ ಕೆಲಸಗಳನ್ನು ಸ್ವತಃ ತಾನೇ ಮುಂಜಾನೆ ಮಾಡಿಕೊಳ್ಳುತ್ತಿದ್ದ. ಶ್ರೀಹರಿಯ ಮಂದಿರದ ಸ್ವಚ್ಛತೆಯನ್ನು ಸ್ವತಃ ತಾನೇ ಮಾಡಬೇಕು ಎಂಬ ಭಕ್ತಿ ಅವನಲ್ಲಿತ್ತು.

ದೇವರ ಮನೆಯ ಕೆಲಸ ಮಹಾ ಪುಣ್ಯಕರ ಕೆಲಸ. ಆ ಕೆಲಸವನ್ನು ಇನ್ನೊಬ್ಬರಿಗೆ ಹೇಳದೆ ಸ್ವತಃ ಮಾಡಬೇಕು ಎಂಬುದನ್ನು ಸ್ವತಃ ಚಕ್ರವರ್ತಿ ಮಹಾರಾಜ ಅಂಬರೀಷ ನಮಗೆ ತೋರಿಸುತ್ತಾನೆ. ಏಕೆಂದರೆ ಯಾರು ದೇವರ ಕೆಲಸವನ್ನು ಮಾಡುತ್ತಾರೋ ಅವರಿಗೆ ಆ ಪುಣ್ಯ ಹೋಗುತ್ತದೆ. ಕಸವನ್ನು ಗುಡಿಸುವಾಗ ಕೂಡ ಮೃದುವಾದ ಬಾರಿಗೆಯಿಂದ ಕಸವನ್ನು ಗುಡಿಸಬೇಕು ಎಂಬ ನಿಯಮವಿದೆ. ಏಕೆಂದರೆ ಆ ಸ್ಥಳದಲ್ಲಿರುವ ಕ್ರಿಮಿಕೀಟಗಳು ಸಾಯಬಾರದು. ಹಿಂಸೆ ಮಾಡದೆ ಕಸವನ್ನು ಗುಡಿಸಿ ಸ್ವಚ್ಛ ಮಾಡಿದ ನಂತರ ಪೂಜೆಯನ್ನು ಮಾಡಬೇಕು.

ಅಂಬರೀಷ ಚಕ್ರವರ್ತಿಯು ದೇವರಮನೆಯನ್ನು ಸ್ವಚ್ಛಗೊಳಿಸಿದ ನಂತರ ತಾನೇ ಸ್ವತಃ ಹೂವು, ತುಳಸಿಗಳನ್ನು ತಂದು, ಗಂಧ ತೇಯ್ದು ದೇವರ ಪೂಜೆಯನ್ನು ಮಾಡಿ ಭಕ್ತಿಯಿಂದ ಎಲ್ಲ ಕೆಲಸಗಳನ್ನು ಮುಗಿಸುವವರೆಗೂ ರಾಜ್ಯದ, ರಾಜ್ಯಭಾರದ ಕೆಲಸಗಳ ಬಗೆಗೆ ಗಮನ ಹರಿಸುತ್ತಿರಲಿಲ್ಲ.

ಅಂಬರೀಷ ಮಹಾರಾಜನ ಈ ಗುಣದಿಂದ ನಾವು ಬಹಳಷ್ಟು ಕಲಿಯುವುದಿದೆ. ನಮಗೆ ಎಷ್ಟೇ ಕಷ್ಟ ಇರಲಿ, ಕೆಲಸಗಳು ಇರಲಿ, ಮೊದಲಿಗೆ ದೇವರ ನಾಮಸ್ಮರಣೆ, ಚಿಂತನೆ ಮತ್ತು ಪೂಜೆಗಳನ್ನು ತಪ್ಪದೆ ಮಾಡಬೇಕು. ಕನಿಷ್ಠಪಕ್ಷ ಐದು ಹತ್ತು ನಿಮಿಷಗಳನ್ನಾದರೂ ದೇವರ ಪೂಜೆಗೆ ಮೀಸಲು ಇಡಬೇಕು. ನಿವೃತ್ತಿಯಾದವರಿಗೆ ಉದ್ಯೋಗದ ಯಾವುದೇ ಚಿಂತೆ ಇರದೆ ಹೋದ ಕಾರಣ ತಪ್ಪದೆ ನಿಧಾನವಾಗಿ ವಿಸ್ತಾರವಾಗಿ ಪೂಜೆಯನ್ನು ಮಾಡಬೇಕು.

ಮನಸ್ಸು ಬಹಳ ವೇಗವಾಗಿ ಓಡುತ್ತದೆ. ಆದರೆ ಕೆಲಸವನ್ನು ಮನಸಿಟ್ಟು ಮಾಡುವಂತೆ, ಪೂಜೆಯನ್ನು ಸಹ ಅತ್ಯಂತ ಶ್ರದ್ಧೆಯಿಂದ ಏಕಾಗ್ರ ಮನದಿಂದ ಮಾಡಬೇಕು. ಅವಸರದಲ್ಲಿ ಪೂಜೆ ಮಾಡುವವರಾದರೂ ಕೂಡ ಒಂದು ವಿಷ್ಣುಪಾದ, ಡೊಗ್ಗಾಲು ಕೃಷ್ಣ, ಸುದರ್ಶನ ಇವುಗಳನ್ನು ಸಣ್ಣ ತಟ್ಟೆಯಲ್ಲಿಟ್ಟುಕೊಂಡು ತುಳಸಿ ದಳವನ್ನು ಏರಿಸಬೇಕು. ಸಾಧ್ಯವಿರುವಲ್ಲಿ ಗಂಧವನ್ನು ತೇಯ್ದು ಇಲ್ಲದೆ ಹೋದಲ್ಲಿ ಹೂವು ತುಳಸಿಗಳೊಂದಿಗೆ ಪೂಜೆಯನ್ನು ಮಾಡಬೇಕು. ದೇವರಿಗೆ ಯಥಾಶಕ್ತಿ ನೈವೇದ್ಯ ಮಾಡಿ ಮಂಗಳಾರತಿ ಮಾಡಬೇಕು. ■

ಇಂದಿನ ಭವಿಷ್ಯ

ಡಾ. ವೈ.ಎಸ್.ಕೆ. ಆಚಾರ್ಯ
ಜ್ಯೋತಿಷಿಗಳು, ಶ್ರೀ ಕಾಮಾಕ್ಯ ಪ್ರತ್ಯಂಗಿರಾದೇವಿ ಉಪಾಸಕರು
76767 78568

ರಾಹು ಕಾಲ ಮ. 12ರಿಂದ 01.30
ಗುಳಿಕ ಕಾಲ ಬೆ. 10.30ರಿಂದ 12.
ಯಮಗಂಡ ಕಾಲ ಬೆ. 07.30ರಿಂದ 09
ಶುಭ ಸಂಖ್ಯೆ 1-3-7-5

ಮೇಷ: ಸಾಲ ಪ್ರಾಪ್ತಿ. ವೃತ್ತಿಯಲ್ಲಿ ಹೊಸದಾದ ಅವಕಾಶ. ಕ್ರೀಡಾಸಕ್ತರಿಗೆ ಅನುಕೂಲ. ಸ್ವಂತ ಆಸ್ತಿಯಿಂದ ಲಾಭ.

ವೃಷಭ: ಕಾರ್ಯದಲ್ಲಿ ಹಿನ್ನಡೆ. ದಾಯಾದಿ ಕಿರುಕುಳ. ಕೆತ್ತನೆ ಕಾರ್ಮಿಕರಿಗೆ ಲಾಭ. ನರದೌರ್ಬಲ್ಯ ಸಂಭವ.

ಮಿಥುನ: ಕೃಷಿಕರಿಗೆ ಲಾಭ. ಸ್ತ್ರೀಯರ ಜತೆ ಮುನಿಸು. ದುಡುಕು ನಿರ್ಧಾರದಿಂದ ನಷ್ಟ. ಸಿನಿಮಾದವರಿಗೆ ಶುಭ.

ಕರ್ಕ: ಕಾರ್ಮಿಕರಿಗೆ ಒತ್ತಡ. ದೂರದ ಪ್ರಯಾಣ. ಧಾರ್ಮಿಕ ಗುರುಗಳ ಭೇಟಿ. ಮಾಂತ್ರಿಕರಿಂದ ತೊಂದರೆ.

ಸಿಂಹ: ನಿವೇಶನ ಖರೀದಿಸುವ ಕನಸು ವಿಳಂಬ. ಚರ್ಮ ವ್ಯಾಪಾರದಲ್ಲಿ ಲಾಭ. ನೆರವು ನೀಡುವುದರಿಂದ ಸಂಕಷ್ಟ.

ಕನ್ಯಾ: ವೈದ್ಯಾಧಿಕಾರಿಗಳಿಗೆ ಒತ್ತಡ. ಹಿರಿಯ ನಾಗರಿಕರಿಗೆ ಸನ್ಮಾನ. ಕಬ್ಬಿಣ, ಸಿಮೆಂಟ್ ವ್ಯಾಪಾರದಲ್ಲಿ ಲಾಭ.

ತುಲಾ: ಪ್ರಯಾಣದಲ್ಲಿ ಲಾಭ. ಅಜೀರ್ಣದ ಸಮಸ್ಯೆ. ಪುಣ್ಯಕ್ಷೇತ್ರಗಳ ದರ್ಶನ. ಆಸ್ತಿ ವಿಚಾರಗಳಲ್ಲಿ ಒಪ್ಪಂದ.

ವೃಶ್ಚಿಕ: ಉದ್ಯೋಗಾಕಾಂಕ್ಷಿಗಳಿಗೆ ಶುಭ ವಾರ್ತೆ. ವೃತ್ತಿಯಲ್ಲಿ ಹೊಸ ಹೊಣೆ. ನೀತಿರಹಿತ ನಡೆಯಿಂದ ನಷ್ಟ ಸಂಭವ.

ಧನು: ಬರಹಗಾರರಿಗೆ ಶುಭ. ವಕೀಲರಿಗೆ ಒತ್ತಡ. ಸಹೋದ್ಯೋಗಿಗಳೊಟ್ಟಿಗೆ ಕಲಹ. ಪುಣ್ಯಕ್ಷೇತ್ರ ದರ್ಶನ.

ಮಕರ: ಮಾನಸಿಕವಾಗಿ ಒತ್ತಡ. ಪ್ರಯಾಣದಲ್ಲಿ ಲಾಭ. ಗೆಳೆಯರ ಭೇಟಿ. ಕರಕುಶಲ ವಸ್ತು ವ್ಯಾಪಾರದಲ್ಲಿ ಲಾಭ.

ಕುಂಭ: ಹೈನುಗಾರಿಕೆಯಲ್ಲಿ ಲಾಭ. ದೂರದ ಮಿತ್ರರ ಭೇಟಿ. ಲೇಖಕರಿಗೆ ಶುಭ. ವೈರಿಗಳ ಮೇಲೆ ವಿಜಯ.

ಮೀನ: ಅಧಿಕವಾದ ತಿರುಗಾಟ. ನಿಂತ ಕಾರ್ಯಗಳಿಗೆ ಮರುಚಾಲನೆ. ಸ್ವಯಂಕೃತ ಅಪರಾಧಗಳಿಂದ ಅವಮಾನ.

Editor : Mahabaleshwar V.Bhat, Printed and Published by Ashok Shanbhag on behalf of Loka Shikshana Trust, Printed & Published at Samyukta Karnataka Press, No.2, Residency Road, Bengaluru-560 025.
Phone No.080-22105384/ Advt.9902008429, Cir.7338636544, e-mail.skeditorblr@gmail.com, RNI Regn.No.3864/1959 Executive Editor : Mohan Hegde

ಅಸ್ಸಾಂ: ಬಿಜೆಪಿ ಮತ ಶೇ.4.6 ಕಾಂಗ್ರೆಸ್‌ಗೆ ಶೇ.0.17 ಹೆಚ್ಚಳ

ಬಿಜೆಪಿಗೆ ಶೇ. 37.81, ಕಾಂಗ್ರೆಸ್ ಶೇ.29.84

ಗುವಾಹಟಿ: 2021ರ ಚುನಾವಣೆಗೆ ಹೋಲಿಸಿದರೆ ಅಸ್ಸಾಂನಲ್ಲಿ ಈ ಬಾರಿ ಹೆಚ್ಚುವರಿ 22 ಸ್ಥಾನಗಳನ್ನು (ಒಟ್ಟು 82) ಗಳಿಸಿರುವ ಬಿಜೆಪಿಯ ಮತ ಹಂಚಿಕೆ ಪ್ರಮಾಣದಲ್ಲಿ ಶೇ.4.6 ರಷ್ಟು ಏರಿಕೆ ದಾಖಲಿಸಿರುವುದು ಚುನಾವಣಾ ಆಯೋಗದ ದಾಖಲೆಯಲ್ಲಿ ಬಹಿರಂಗಗೊಂಡಿದೆ. ಪ್ರತಿ ಪಕ್ಷ ಕಾಂಗ್ರೆಸ್ ಕಳೆದ ಬಾರಿ ಗಳಿಸಿದ್ದ 29 ಸ್ಥಾನಗಳ ಪೈಕಿ 10 ಸ್ಥಾನಗಳನ್ನು ಕಳೆದುಕೊಂಡಿದ್ದರೂ ಅದರ ಮತ ಹಂಚಿಕೆ ಪ್ರಮಾಣದಲ್ಲಿ ಶೇ.0.17 ಏರಿಕೆ ದಾಖಲಿಸಿದೆ. ವಿಧಾನಸಭೆಯ 126 ಸ್ಥಾನಗಳ ಪೈಕಿ ಸರಳ ಬಹುಮತಕ್ಕೆ 64 ಸ್ಥಾನ ಅಗತ್ಯವಾದರೂ ಎನ್‌ಡಿಎ ಮೈತ್ರಿಕೂಟ ದಾಖಲೆಯ 102 ಸ್ಥಾನಗಳನ್ನು ಗಳಿಸಿದೆ. ಆಯೋಗ ಬಿಡುಗಡೆ ಮಾಡಿರುವ ಅಂಕಿಅಂಶಗಳ ಪ್ರಕಾರ ಆಡಳಿತಾರೂಢ ಬಿಜೆಪಿಗೆ ಈ ಬಾರಿ (2026) ಚಲಾವಣೆಯಾದ ಒಟ್ಟು ಮತಗಳ ಪೈಕಿ ಶೇ. 37.81 ಮತ ಹಂಚಿಕೆಯಾಗಿದ್ದು 82 ಸ್ಥಾನಗಳನ್ನು ಗಳಿಸಿದೆ. ಕಳೆದ ಬಾರಿ 60 ಸ್ಥಾನಗಳೊಂದಿಗೆ ಬಿಜೆಪಿಗೆ ಶೇ. 33.21 ರಷ್ಟು ಮತಗಳ ಹಂಚಿಕೆಯಾಗಿತ್ತು. ಕಾಂಗ್ರೆಸ್‌ಗೆ ಕಳೆದ ಬಾರಿ ಶೇ. 29.67 ಇದ್ದ ಮತ ಹಂಚಿಕೆ ಪ್ರಮಾಣವು ಈ ಬಾರಿ ಶೇ. 29.84 ಕ್ಕೆ ತಲುಪಿದೆ.

ಬಂಗಾಳದ ಮುಸ್ಲಿಂ ಬಾಹುಳ್ಯ ಕ್ಷೇತ್ರಗಳಲ್ಲೂ ಬಿಜೆಪಿಗೆ ಲಾಭ!

ಮೂರು ಜಿಲ್ಲೆಗಳಲ್ಲಿ ಬಿಜೆಪಿ ಬಲ 19ಕ್ಕೇರಿಕೆ

ಕೋಲ್ಕತಾ: ಪಶ್ಚಿಮ ಬಂಗಾಳದ ಮುಸ್ಲಿಮರು ಬಹುಸಂಖ್ಯಾತರಾಗಿರುವ ಜಿಲ್ಲೆಗಳಲ್ಲಿ ಟಿಎಂಸಿ ಭದ್ರಕೋಟೆಗಳು ಬಿರುಕು ಬಿಟ್ಟಿದ್ದು, ಅಲ್ಪಸಂಖ್ಯಾತರ ಮತಗಳು ಬಿಜೆಪಿಯ ಬಲವರ್ಧನೆಗೆ ಕಾರಣವಾಗಿವೆ.

ಒಂದು ದಶಕಕ್ಕೂ ಹೆಚ್ಚು ಕಾಲ ಶೇ.50ಕ್ಕಿಂತಲೂ ಹೆಚ್ಚು ಮುಸ್ಲಿಮರಿರುವ ಮುರ್ಷಿದಾಬಾದ್, ಮಾಲ್ಡಾ ಮತ್ತು ಉತ್ತರ ದಿನಾಜ್‌ಪುರ ಜಿಲ್ಲೆಗಳ ಮೇಲಿನ ಟಿಎಂಸಿಯ ಹಿಡಿತ ಸಾಧಿಸಿತ್ತು. ಆದರೀಗ ಬಿಜೆಪಿ ತನ್ನ ಸಾಂಪ್ರದಾಯಿಕ ಹಿಂದೂ ಭದ್ರಕೋಟೆಗಳಲ್ಲದೆ, ಮುಸ್ಲಿಮ್ ಪ್ರಾಬಲ್ಯ ಇರುವ ಕ್ಷೇತ್ರಗಳಲ್ಲೂ ಅನಿರೀಕ್ಷಿತ ಲಾಭ ಪಡೆದುಕೊಂಡಿದೆ. 2011ರಲ್ಲಿ ಎಡರಂಗ ಪತನಗೊಂಡ ನಂತರ ಮುಸ್ಲಿಮರ ಗುಂಪು ಚುನಾವಣಾ ಸಮಯದಲ್ಲಿ ರಾಜಕೀಯವಾಗಿ ಧ್ರುವೀಕರಣಗೊಂಡಿತ್ತು. 2021ರ ವೇಳೆ ಈ ಧ್ರುವೀಕರಣ ಬಲಗೊಂಡಿತ್ತು.

ಹೀಗಾಗಿ ಮುಸ್ಲಿಮರ ಪ್ರಾಬಲ್ಯ ಇರುವ ಮೂರು ಜಿಲ್ಲೆಗಳಲ್ಲಿರುವ 43 ವಿಧಾನಸಭಾ ಸ್ಥಾನಗಳಲ್ಲಿ, ಬಿಜೆಪಿ 2021ರಲ್ಲಿ ಕೇವಲ ಎಂಟು ಸ್ಥಾನಗಳನ್ನು ಪಡೆದಿದ್ದು ಈಗ 19 ಸ್ಥಾನಗಳಿಗೆ ಏರಿದೆ. 35 ಸ್ಥಾನಗಳೊಂದಿಗೆ ಪ್ರಾಬಲ್ಯ ಹೊಂದಿದ್ದ ಟಿಎಂಸಿ 22 ಸ್ಥಾನಗಳಿಗೆ ಇಳಿದಿದೆ.

ಬಂಗಾಳ: 294ಕ್ಕೆ 207 ಸೀಟು ಗೆದ್ದು ಬಿಜೆಪಿ ಇತಿಹಾಸ ಸೃಷ್ಟಿ

ಚು.ಆಯೋಗ ವಿರುದ್ಧ ಹರಿಹಾಯ್ದ ಮಮತಾ

ಕೋಲ್ಕತಾ: ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದಿರುವ ಬಿಜೆಪಿ, ಚುನಾವಣಾ ಫಲಿತಾಂಶ ಪ್ರಕಟವಾದ ಮರುದಿನವೇ ಮತ್ತೊಂದು ಸ್ಥಾನವನ್ನು ತನ್ನದಾಗಿಸಿಕೊಂಡಿದೆ. ವಿವಾದಾತ್ಮಕವಾಗಿದ್ದ ಕ್ಷೇತ್ರದಲ್ಲಿ ನಡೆದ ಮರು ಎಣಿಕೆಯಲ್ಲಿ ಬಿಜೆಪಿ ಅಭ್ಯರ್ಥಿ ಜಯಭೇರಿ ಬಾರಿಸುವುದರೊಂದಿಗೆ, ಒಟ್ಟು 294 ಸ್ಥಾನಗಳ ಪೈಕಿ ಬಿಜೆಪಿಯ ಸಂಖ್ಯಾಬಲ 207ಕ್ಕೆ ತಲುಪಿದೆ. ಕಳೆದ 15 ವರ್ಷಗಳಿಂದ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಭದ್ರಕೋಟೆಯಾಗಿದ್ದ ಬಂಗಾಳದಲ್ಲಿ ಈ ಬಾರಿ ಕೇಸರಿ ಅಲೆ ಅಕ್ಷರಶಃ ಅಪ್ಪಳಿಸಿದೆ. ಫಲಿತಾಂಶದ ಅಂಕಿ-ಅಂಶಗಳ ಪ್ರಕಾರ, ಟಿಎಂಸಿ ಕೇವಲ 80 ಸ್ಥಾನಗಳಿಗೆ ತೃಪ್ತಿಪಟ್ಟುಕೊಳ್ಳುವಂತಾಗಿದೆ. ಉಳಿದ ಸ್ಥಾನಗಳು ಕಾಂಗ್ರೆಸ್, ಎಡಪಕ್ಷಗಳು ಮತ್ತು ಇತರ ಪಕ್ಷಗಳ ಪಾಲಾಗಿವೆ. ಬಂಗಾಳದಲ್ಲಿ ಮೊದಲ ಬಾರಿಗೆ ಬಿಜೆಪಿ ಅಧಿಕಾರ ಹಿಡಿಯಲು ಸಜ್ಜಾಗಿದ್ದು, ಮೇ 9 ರಂದು ನೂತನ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ.

ಮಮತಾ ಬ್ಯಾನರ್ಜಿ ಸೇರಿದಂತೆ ಅವರ ಸಂಪುಟದ ಸುಮಾರು 63% ಸಚಿವರು ಈ ಚುನಾವಣೆಯಲ್ಲಿ ಸೋಲನುಭವಿಸಿದ್ದಾರೆ.

ಕೇರಳದಲ್ಲಿ ಆರು ಕ್ಷೇತ್ರಗಳಲ್ಲಿ ಬಿಜೆಪಿಗೆ 2ನೇ ಸ್ಥಾನ ಪ್ರಾಪ್ತಿ

ತಿರುವನಂತಪುರಂ: ಕೇರಳ ವಿಧಾನಸಭೆ ಚುನಾವಣೆಯಲ್ಲಿ ಇದೇ ಮೊದಲ ಬಾರಿಗೆ ಮೂರು ಸ್ಥಾನಗಳಲ್ಲಿ ಐತಿಹಾಸಿಕ ಜಯ ಗಳಿಸಿರುವ ಬಿಜೆಪಿ ಒಟ್ಟು ಆರು ಕ್ಷೇತ್ರಗಳಲ್ಲಿ ಎರಡನೇ ಸ್ಥಾನ ಪಡೆದುಕೊಂಡಿದೆ. ರಾಜ್ಯದ ತಿರುವಳ್ಳ, ಪಲಕ್ಕಾಡ್, ಮಲಂಪುಳ, ಅತ್ತಿಂಗಳ್, ಕಾಸರಗೋಡು ಮತ್ತು ಮಂಜೇಶ್ವರ ವಿಧಾಬಸಭೆ ಕ್ಷೇತ್ರದಲ್ಲಿ ಬಿಜೆಪಿ ಎರಡನೇ ಸ್ಥಾನ ಪಡೆದಿದೆ. ತಿರುವಳ್ಳ ಕ್ಷೇತ್ರದಿಂದ ಕಣಕ್ಕಿಳಿದಿದ್ದ ಬಿಜೆಪಿ ರಾಜ್ಯ ಘಟಕದ ಪ್ರದಾನ ಕಾರ್ಯದರ್ಶಿ ಅನೂಪ್ ಆಂಟನಿ, ಪಾಲಕ್ಕಾಡ್ ಬಿಜೆಪಿ ಅಭ್ಯರ್ಥಿ ಶೋಭಾ ಸುರೇಂದ್ರನ್, ಅಂತಿಗಲ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ಬಿಜೆಪಿ ಅಭ್ಯರ್ಥಿ ಪಿ.ಸುಧೀರ್ ಅವರಲ್ಲದೆ, ಮಲಂಪುಳ, ಕಾಸರಗೋಡು ಮತ್ತು ಮಂಜೇಶ್ವರ ವಿಧಾನಸಭೆ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಎರಡನೇ ಸ್ಥಾನ ಪಡೆದಿದ್ದಾರೆ. ದಶಕದ ಬಳಿಕ ಕೇರಳದಲ್ಲಿ ಎಲ್‌ಡಿಎಫ್ ಮಕಾಡೆ ಮಲಗಿದ್ದು, 102 ಸೀಟುಗಳನ್ನು ಗೆಲ್ಲುವ ಮೂಲಕ ಯುಡಿಎಫ್ ಅಧಿಕಾರಕ್ಕೆ ಬಂದಿದೆ.

ಮನೆಗೆಲಸ ಮಾಡ್ತಿದ್ದ ಮಹಿಳೆ ಈಗ ಬಂಗಾಳ ಬಿಜೆಪಿ ಶಾಸಕಿ

ಕೋಲ್ಕತಾ: ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣಾ ಫಲಿತಾಂಶವು ಇಡೀ ದೇಶದ ಗಮನ ಸೆಳೆದಿದೆ. ಈ ಚುನಾವಣೆಯಲ್ಲಿ ಎಲ್ಲಕ್ಕಿಂತ ಹೆಚ್ಚು ಚರ್ಚೆಯಾಗುತ್ತಿರುವುದು ಕಲಿತಾ ಮಾಝಿ ಎಂಬ ಅಸಾಮಾನ್ಯ ಮಹಿಳೆಯ ಗೆಲುವು. ಕಳೆದ ಎರಡು ದಶಗಕಗಳಿಂದ ತಿಂಗಳಿಗೆ ಕೇವಲ 2,500 ರೂಪಾಯಿ ವೇತನಕ್ಕೆ ನಾಲ್ಕು ಮನೆಗಳಲ್ಲಿ ಪಾತ್ರೆ ತೊಳೆದು, ಕಸ ಗುಡಿಸಿ ಜೀವನ ನಡೆಸುತ್ತಿದ್ದ ಈ ಬಡ ಮಹಿಳೆ, ಈಗ ಶಾಸಕಿಯಾಗಿ ವಿಧಾನಸಭೆ ಪ್ರವೇಶಿಸಿದ್ದಾರೆ. ಬಿಜೆಪಿ ಟಿಕೆಟ್‌ನಿಂದ ಔಸಾಗ್ರಾಂ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಲಿತಾ ಮಾಝಿ, ಟಿಎಂಸಿ ಅಭ್ಯರ್ಥಿ ಶ್ಯಾಮ ಪ್ರಸನ್ನ ಲೋಹರ್ ಅವರ ವಿರುದ್ಧ 12,535 ಮತಗಳ ಭರ್ಜರಿ ಅಂತರದಿಂದ ಜಯಗಳಿಸಿದ್ದಾರೆ. ಕಲಿತಾ ಒಟ್ಟು 1,07,692 ಮತಗಳನ್ನು ಪಡೆದು ಇತಿಹಾಸ ಸೃಷ್ಟಿಸಿದ್ದಾರೆ.

ಸುಪ್ರೀಂ ನ್ಯಾಯಮೂರ್ತಿಗಳ ಸಂಖ್ಯೆ 34 ರಿಂದ 38ಕ್ಕೆ ಏರಿಕೆ

ನವದೆಹಲಿ: ಸುಪ್ರೀಂ ಕೋರ್ಟಿನಲ್ಲಿ ನ್ಯಾಯಾಧೀಶರ ಪ್ರಮಾಣವನ್ನು 34 ರಿಂದ 38ಕ್ಕೆ ಏರಿಸಲು ಮಂಗಳವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಈ ಹಿಂದೆ 2019ರಲ್ಲಿ ನ್ಯಾಯಾಧೀಶರುಗಳ ಸಂಖ್ಯೆಯನ್ನು (ಮು.ನ್ಯಾ. ಹೊರತು) 30 ರಿಂದ 33ಕ್ಕೆ ಏರಿಸಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕ್ಯಾಬಿನೆಟ್ ಸಭೆಯಲ್ಲಿ 'ಸುಪ್ರೀಂ ಕೋರ್ಟ್ (ನ್ಯಾಯಾಧೀಶರ ಸಂಖ್ಯೆ) ತಿದ್ದುಪಡಿ ಮಸೂದೆ 2026ರಲ್ಲಿ ಸಂಖ್ಯೆಯನ್ನು 4ಕ್ಕೆ ಏರಿಸಲು 1956ರ ಸುಪ್ರೀಂ ಕೋರ್ಟ್ (ನ್ಯಾ. ಸಂಖ್ಯೆ) ಕಾಯ್ದೆಗೆ ತಿದ್ದುಪಡಿ ತರಬೇಕಾಗುತ್ತದೆ. ಆ ಪ್ರಕಾರ ಇದೀಗ ನ್ಯಾಯಮೂರ್ತಿಗಳ ಸಂಖ್ಯೆ ಮು.ನ್ಯಾ. ಸೇರಿದಂತೆ 34 ರಿಂದ 38ಕ್ಕೆ ಏರಿಸಲಾಗಿದೆ.

ಪಿಐಲ್ 'ಪೈಸಾ ಇಂಟರೆಸ್ಟ್ ಲಿಟಿಗೇಶನ್' ಆಗಿದೆ: ಸುಪ್ರೀಂ

ನವದೆಹಲಿ: ಸಾರ್ವಜನಿಕ ಹಿತಾಸಕ್ತಿ ಅರ್ಜಿಯು ದುರ್ಬಳಕೆ ಆಗುತ್ತಿದ್ದು ಈಗ ಪೈಸಾ ಮತ್ತು ರಾಜಕೀಯ ಹಿತಾಸಕ್ತಿ ಅರ್ಜಿಯಾಗೂ ಮಾರ್ಪಟ್ಟಿದೆ ಎಂದು ಮಂಗಳವಾರ ಸುಪ್ರೀಂಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಶಬರಿಮಲೆ ಮರುಪರಿಶೀಲನಾ ಅರ್ಜಿಗಳಿಗೆ ಸಂಬಂಧಿಸಿದಂತೆ ಸಾಂವಿಧಾನಿಕ ಪೀಠದ ಮುಂದೆ ನಡೆಯುತ್ತಿದ್ದ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಮೂರ್ತಿಗಳು ಈ ಕಟು ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಸಿಜೆಐ ನೇತೃತ್ವದ ಪೀಠದಲ್ಲಿ ನ್ಯಾ. ಬಿ.ವಿ.ನಾಗರತ್ನ ಅವರು ಮಾತನಾಡಿ, ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಈಗ ಖಾಸಗಿ ಹಿತಾಸಕ್ತಿ, ಪ್ರಚಾರದ ಹಿತಾಸಕ್ತಿ, ಪೈಸಾ ಹಿತಾಸಕ್ತಿ ಮತ್ತು ರಾಜಕೀಯ ಹಿತಾಸಕ್ತಿಯ ಅರ್ಜಿಗಳಾಗಿ ಮಾರ್ಪಟ್ಟಿವೆ. ಇವೆಲ್ಲವನ್ನೂ ಈಗ ಪಿಐಎಲ್ ಎಂದೇ ಕರೆಯಲಾಗುತ್ತಿದೆ ಎಂದು ವ್ಯಂಗ್ಯವಾಡಿದರು.

ಕೇವಲ ಪತ್ರಿಕಾ ವರದಿಗಳನ್ನು ಆಧರಿಸಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸುವ ಪ್ರವೃತ್ತಿಯನ್ನು ಸಿಜೆಐ ಸೂರ್ಯ ಕಾಂತ್ ಖಂಡಿಸಿದರು.

ಬಿಜೆಪಿ ಸಿಎಂಗಳ ಆಯ್ಕೆಗೆ ಅಮಿತ್‌ಶಾ, ನಡ್ಡಾ ವೀಕ್ಷಕರು

ನವದೆಹಲಿ: ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ವಿಧಾನಸಭೆಗಳ ಶಾಸಕಾಂಗ ಪಕ್ಷಗಳ ನಾಯಕರ (ಮುಖ್ಯಮಂತ್ರಿಗಳ) ಆಯ್ಕೆ ಪ್ರಕ್ರಿಯೆಗೆ ಕೇಂದ್ರ ವೀಕ್ಷಕರುಗಳನ್ನಾಗಿ ಕ್ರಮವಾಗಿ ಕೇಂದ್ರ ಸಚಿವರುಗಳಾದ ಅಮಿತ್ ಶಾ ಹಾಗೂ ಜಗತ್ ಪ್ರಕಾಶ್ ನಡ್ಡಾರನ್ನು ಭಾರತೀಯ ಜನತಾ ಪಕ್ಷವು ಮಂಗಳವಾರ ನಿಯೋಜನೆ ಮಾಡಿದೆ. ಜೊತೆಗೆ ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಅವರನ್ನು ಅಸ್ಸಾಂಗೆ ಹಾಗೂ ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿರನ್ನು ಪಶ್ಚಿಮ ಬಂಗಾಳಕ್ಕೆ ಸಹ ವೀಕ್ಷಕರುಗಳನ್ನಾಗಿ ನಿಯೋಜಿಸಿ ಪಕ್ಷವು ಅಧಿಸೂಚನೆ ಹೊರಡಿಸಿದೆ.

ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸುವ ಮೂಲಕ ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸರ್ಕಾರವನ್ನು ಬಿಜೆಪಿ ಕಿತ್ತೊಗೆದಿದೆ. ಅಲ್ಲದೆ ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ ಗೆಲುವು ಸಾಧಿಸಿದೆ.

ಮೋದಿಗೆ ಟ್ರಂಪ್ ಅಭಿನಂದನೆ

ನವದೆಹಲಿ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸಿದ್ದಕ್ಕೆ ಪ್ರಧಾನಿ ನರೇಂದ್ರ ಮೋದಿಗೆ ಅಮೆರಿಕ ಅಧ್ಯಕ್ಷ ಟ್ರಂಪ್ ಅಭಿನಂದನೆ ತಿಳಿಸಿದ್ದಾರೆ. ಬಂಗಾಳದ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಟ್ರಂಪ್, "ನನ್ನ ಆತ್ಮೀಯ ಗೆಳೆಯ ನರೇಂದ್ರ ಮೋದಿ ಅವರಿಗೆ ಅಭಿನಂದನೆಗಳು. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸಾಧಿಸಿರುವ ಈ ಗೆಲುವು ಅದ್ಭುತವಾದುದು. ಮೋದಿ ಒಬ್ಬ ಶಕ್ತಿಶಾಲಿ ಮತ್ತು ದಕ್ಷ ನಾಯಕ 'ಎಂದು ಹೇಳಿದ್ದಾರೆ.

ವಿದೇಶ ಸಮಾಚಾರ

ಯುಎಇ ಮೇಲೆ ಇರಾನ್ ದಾಳಿ: ಭಾರತೀಯರಿಗೆ ಗಾಯ

ಜನರ ಮೇಲೆ ದಾಳಿ ಒಪ್ಪಿತವಲ್ಲ: ಮೋದಿ

ಅಬುಧಾಬಿ: ಯುಎಇನ ಫುಜೈರಾ ತೈಲ ಕೈಗಾರಿಕಾ ವಲಯದ ಮೇಲೆ ಇರಾನ್ ನಡೆಸಿದ ಡ್ರೋನ್ ದಾಳಿಯಲ್ಲಿ ಮೂವರು ಭಾರತೀಯರು ಗಾಯಗೊಂಡಿದ್ದಾರೆ. ಆಯಕಟ್ಟಿನ ಬಂದರು ನಗರಿ ಫುಜೈರಾದ ಮೇಲೆ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆದಾಗ ಅಲ್ಲಿ ಕೆಲಸ ಮಾಡುತ್ತಿದ್ದ ಮೂವರು ಭಾರತೀಯ ಕಾರ್ಮಿಕರು ಗಾಯಗೊಂಡಿದ್ದು, ಸದ್ಯ ಅವರು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಭಾರತೀಯ ವಿದೇಶಾಂಗ ಸಚಿವಾಲಯ ತಿಳಿಸಿದೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, ಯುಎಇ ಮೇಲಿನ ದಾಳಿಯನ್ನು ನಾನು ಬಲವಾಗಿ ಖಂಡಿಸುತ್ತೇನೆ. ಸಾಮಾನ್ಯ ನಾಗರಿಕರು ಮತ್ತು ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ನಡೆಸುವ ಇಂತಹ ಕೃತ್ಯಗಳು ಸ್ವೀಕಾರಾರ್ಹವಲ್ಲ. ಈ ಸಂಕಷ್ಟದ ಸಮಯದಲ್ಲಿ ಭಾರತವು ಯುಎಇ ಜೊತೆಗೆ ದೃಢವಾಗಿ ನಿಲ್ಲುತ್ತದೆ ಎಂದಿದ್ದಾರೆ.

ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಮಾತನಾಡಿ, ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಧಕ್ಕೆ ತರುವ ಇಂತಹ ಹಿಂಸಾಚಾರಗಳನ್ನು ತಕ್ಷಣವೇ ನಿಲ್ಲಿಸಬೇಕು. ಪಶ್ಚಿಮ ಏಷ್ಯಾದಲ್ಲಿ ಶಾಂತಿ ನೆಲೆಸಲು ರಾಜತಾಂತ್ರಿಕ ಮಾತುಕತೆಯೇ ಏಕೈಕ ಮಾರ್ಗ ಎಂದು ತಿಳಿಸಿದ್ದಾರೆ. ಗಾಯಾಳು ಭಾರತೀಯರ ಕ್ಷೇಮ ವಿಚಾರಿಸಲು ಮತ್ತು ಅವರಿಗೆ ಅಗತ್ಯ ನೆರವು ನೀಡಲು ಅಬುಧಾಬಿಯಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಸ್ಥಳೀಯ ಅಧಿಕಾರಿಗಳೊಂದಿಗೆ ಸತತ ಸಂಪರ್ಕದಲ್ಲಿದೆ ಎಂದವರು ವಿವರಿಸಿದ್ದಾರೆ.

ಡಚ್ ಹಡಗಿನಲ್ಲಿ ಅಪರೂಪದ ಸೋಂಕಿಗೆ ಮೂವರು ಬಲಿ

ಕೇಪ್ ಟೌನ್: ಡಚ್ ಕ್ರೂಸ್ ಹಡಗಿನಲ್ಲಿ ಮನುಷ್ಯರಿಂದ ಮನುಷ್ಯರಿಗೆ ಹರಡುವ ಅಪರೂಪದ ಹ್ಯಾಂಟವೈರಸ್‌ನಿಂದಾಗಿ ಮೂವರು ಪ್ರಯಾಣಿಕರು ಸಾವನ್ನಪ್ಪಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಇದೇ ವೇಳೆ ಎಂವಿ ಹೊಂಡಿಯಸ್ ಹಡಗಿನ ಇಬ್ಬರು ಸಿಬ್ಬಂದಿಗಳಲ್ಲಿ ತೀವ್ರ ಉಸಿರಾಟದ ತೊಂದರೆ ಕಂಡುಬಂದಿರುವುದರಿಂದ ಅವರನ್ನು ವೈದ್ಯಕೀಯ ಚಿಕಿತ್ಸೆಗಾಗಿ ವಿಮಾನ ಮೂಲಕ ನೆದರ್‌ಲ್ಯಾಂಡ್‌ಗೆ ಸಾಗಿಸಲಾಗುತ್ತಿದೆ. ಅಸ್ವಸ್ಥಪೀಡಿತರಲ್ಲಿ ಓರ್ವ ಬ್ರಿಟಿಷ್ ಹಾಗೂ ಮತ್ತೊಬ್ಬ ಡಚ್ ಪ್ರಜೆಯಾಗಿದ್ದಾರೆ. ಈ ಹಡಗು ಒಂದು ತಿಂಗಳ ಹಿಂದೆ ಅರ್ಜೆಂಟೀನಾದಿಂದ ಅಟ್ಲಾಂಟಿಕ್ ಸಾಗರದಲ್ಲಿ ಯಾನ ಮುಂದುವರಿಸಿದ್ದು ಸದ್ಯ ಆಫ್ರಿಕಾದ ಪಶ್ಚಿಮ ಕರಾವಳಿಯ ಕೇಪ್ ವರ್ಡೆ ಬಳಿ ಲಂಗರು ಹಾಕಿದೆ.

ರಷ್ಯಾ ವಿಜಯ ದಿನಕ್ಕೆ ಮುನ್ನ ಜೆಲನ್‌ಸ್ಕಿ, ಪುಟಿನ್ ಕದನ ವಿರಾಮ ಘೋಷಣೆ

ಮಾಸ್ಕೋ: ರಷ್ಯಾದ ವಿಜಯ ದಿನಾಚರಣೆಗೆ ಮೊದಲೇ ಉಕ್ರೇನ್ ಹಾಗೂ ರಷ್ಯಾ ಪ್ರತ್ಯೇಕವಾದ ಕದನವಿರಾಮ ಘೋಷಿಸಿವೆ. ಈ ಕದನವಿರಾಮ ಘೋಷಿಸುವಲ್ಲಿ ಎರಡೂ ದೇಶಗಳ ಮಧ್ಯೆ ಸಮನ್ವಯ ಇರಲಿಲ್ಲ. ಎರಡೂ ದೇಶಗಳು ಏಕಕಾಲದಲ್ಲಿ ಇಂತಹ ಘೋಷಣೆ ಮಾಡಿರುವುದನ್ನು ಗಮನಿಸಿದರೆ ತಾಂತ್ರಿಕವಾಗಿಯಷ್ಟೇ ಅಲ್ಲದೆ, ಉದ್ದೇಶ, ಸಮಯ ಹಾಗೂ ಜಾರಿಯಲ್ಲೂ ವಿಶ್ವಾಸದ ಕೊರತೆ ಇರುವುದು ಗೋಚರಿಸಿದೆ. ಉಕ್ರೇನ್ ಘೋಷಣೆಯನುಸಾರ ಮೇ 5-6ರ ಮಧ್ಯರಾತ್ರಿಯಿಂದ ಕದನವಿರಾಮ ಜಾರಿಗೆ ಬರಲಿದೆ. ಇದೇ ರೀತಿಯಾಗಿ ರಷ್ಯಾವೂ ಕದನವಿರಾಮ ಘೋಷಿಸಿದೆ. ಆದರೆ ಈ ಕದನವಿರಾಮ ಯಾವ ರೀತಿಯಲ್ಲಿ ಜಾರಿಗೆ ಬರುತ್ತದೆ ಎಂಬುದರ ಕುರಿತು ರಷ್ಯಾದಿಂದ ಯಾವುದೇ ಔಪಚಾರಿಕ ಸಂವಹನ ನಡೆದಿಲ್ಲ. ಜೆಲೆನ್‌ಸ್ಕಿ ಹೇಳುವ ಪ್ರಕಾರ, ಕದನವಿರಾಮ ಘೋಷಣೆ ಕುರಿತು ರಷ್ಯಾದಿಂದ ಇದುವರೆಗೂ ಯಾವುದೇ ಘೋಷಣೆ ಹೊರಬಿದ್ದಿಲ್ಲ.

ವಿಜಯ್ ಸರ್ಕಾರ ರಚನೆಗೆ ಕೈ, ಸಣ್ಣ ಪಕ್ಷಗಳ ಬೆಂಬಲ ಕೋರಿಕೆ?

ಅತಂತ್ರ ವಿಧಾನಸಭೆಯಲ್ಲಿ ಬಹುಮತಕ್ಕೆ 10 ಶಾಸಕರು ಅಗತ್ಯ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ನಟ-ರಾಜಕಾರಣಿ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ ಚುನಾವಣಾ ತೀರ್ಪು ಅತಂತ್ರ ವಿಧಾನಸಭೆಗೆ ಕಾರಣವಾಗಿದೆ. ಟಿವಿಕೆ ಈಗ ಕಾಂಗ್ರೆಸಿನಿಂದ ಬೆಂಬಲ ಕೋರುವ ಕುರಿತು ಮಾತುಕತೆ ನಡೆಯುತ್ತಿದೆ. ಆದರೂ ಇಲ್ಲಿಯವರೆಗೂ ಔಪಚಾರಿಕ ಮಾತುಕತೆ ನಡೆದಿಲ್ಲ. ವಿಜಯ್ ಈ ಸಣ್ಣ ಪಕ್ಷಗಳನ್ನು ಆಡಳಿತಾರೂಢ ಮಿತ್ರಕೂಟಕ್ಕೆ ಯಶಸ್ವಿಯಾಗಿ ತಂದರೆ, ಸ್ಥಿರ ಆಡಳಿತವನ್ನು ರಚಿಸಲು ಅಗತ್ಯವಾದ ಸಂಖ್ಯೆಗಳನ್ನು ಪಡೆದುಕೊಳ್ಳಬಹುದು.

234 ಸದಸ್ಯರ ಬಲದ ಸದನದಲ್ಲಿ ಯಾವುದೇ ಪಕ್ಷ ಅಥವಾ ಒಕ್ಕೂಟವು ಸರ್ಕಾರ ರಚಿಸಲು 118 ಸ್ಥಾನಗಳ ಸರಳ ಬಹುಮತ ಹೊಂದಿರಬೇಕು. ಆದರೆ ಟಿವಿಕೆ 108 ಸ್ಥಾನಗಳನ್ನು ಮಾತ್ರ ಪಡೆದು ಸರಳ ಬಹುಮತಕ್ಕೆ ಇನ್ನೂ 10 ಸ್ಥಾನಗಳನ್ನು ಹೊಂದಲು ಪರದಾಟ ನಡೆಸುತ್ತಿರುವುದರಿಂದ ಎಲ್ಲರ ಕಣ್ಣು ವಿಜಯ್ ಅವರ ಮೇಲೆ ನೆಟ್ಟಿದೆ. ಸ್ಪಷ್ಟ ಜನಾದೇಶ ಇಲ್ಲದ ಕಾರಣ ತಮಿಳುನಾಡಿನಲ್ಲಿ ಟಿವಿಕೆ ಅಧಿಕಾರದ ಹಿಡಿತವನ್ನು ಹೇಗೆ ಭದ್ರಪಡಿಸಿಕೊಳ್ಳಬಹುದು ಎಂಬುದರ ಸಂಭಾವ್ಯತೆಗಳು ಇಲ್ಲಿವೆ.

ಸಣ್ಣ ಪಕ್ಷಗಳೊಂದಿಗೆ ಮೈತ್ರಿ

ಚುನಾವಣೋತ್ತರದಲ್ಲಿ ಸಣ್ಣ ಪಕ್ಷಗಳೊಂದಿಗೆ ಮಾತುಕತೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಟಿವಿಕೆ ಬಹುಮತ ತಲುಪಬಹುದು. ಟಿವಿಕೆ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿದರೂ ಪ್ರಮುಖ ಬಣಗಳಿಂದ ಹೊರಗಿರುವ ಅಥವಾ ಹಿಂದಿನ ಮೈತ್ರಿಗಳಿಂದ ಹೊರಬರಲು ಸಿದ್ಧರಿರುವ ಪಕ್ಷಗಳ ಶಾಸಕರ ಬೆಂಬಲ ಪಡೆಯಬಹುದು. ಕಾಂಗ್ರೆಸ್, ಐಯುಎಂಎಲ್, ಎಡ ಪಕ್ಷಗಳು (ಸಿಪಿಐ, ಸಿಪಿಐ-ಎಂ), ಅಥವಾ ವಿಸಿಕೆಯಂತಹ ಸಣ್ಣ ಪಕ್ಷಗಳು ಈ ಬಹುಮತಕ್ಕೆ ನಿರ್ಣಾಯಕವಾಗಬಹುದು. ಕಾಂಗ್ರೆಸ್ ಐದು ಸ್ಥಾನಗಳನ್ನು ಗೆದ್ದಿದ್ದರೆ, ವಿಸಿಕೆ, ಸಿಪಿಐ(ಎಂ), ಸಿಪಿಐ ಮತ್ತು ಐಯುಎಂಎಲ್ ತಲಾ ಎರಡು ಸ್ಥಾನಗಳನ್ನು ಗೆಲುವು ಸಾಧಿಸಿವೆ.

ಬಾಹ್ಯ ಬೆಂಬಲ ಕೋರುವುದು

ಸೈದ್ಧಾಂತಿಕ ಅಥವಾ ರಾಜಕೀಯ ಹಿತಾಸಕ್ತಿಗಳ ಸಂಘರ್ಷದಿಂದಾಗಿ ಔಪಚಾರಿಕ ಒಕ್ಕೂಟವನ್ನು ಹೆಣೆಯುವುದು ತುಂಬಾ ಜಟಿಲಕರ ಸಂಗತಿ. ಹೀಗಾಗಿ ಟಿವಿಕೆ ಸಣ್ಣ ಪಕ್ಷಗಳಿಂದ ಬಾಹ್ಯ ಬೆಂಬಲ ಪಡೆಯಬಹುದು. ಈ ಸನ್ನಿವೇಶದಲ್ಲಿ ಸಣ್ಣ ಪಕ್ಷಗಳು ಔಪಚಾರಿಕ ಸಚಿವ ಸಂಪುಟದ ಭಾಗವಾಗಿರದೇ ನಿರ್ಣಾಯಕ ವಿಷಯಗಳಲ್ಲಿ ವಿಶೇಷವಾಗಿ ಬಹುಮತ ಪರೀಕ್ಷೆಗಳು, ಬಜೆಟ್ ಅಥವಾ ಅವಿಶ್ವಾಸ ನಿರ್ಣಯಗಳ ಸಮಯದಲ್ಲಿ - ಟಿವಿಕೆ ಸರ್ಕಾರಕ್ಕೆ ಬೆಂಬಲ ನೀಡುತ್ತವೆ. ವಿರೋಧ ಪಕ್ಷಗಳಿಂದ ಸಂಭಾವ್ಯ ಪಕ್ಷಾಂತರ ಚುನಾವಣಾ ಫಲಿತಾಂಶಗಳ ಅನುಸಾರ ಡಿಎಂಕೆ ಮತ್ತು ಎಐಎಡಿಎಂಕೆ ಮೈತ್ರಿಕೂಟಗಳು ದುರ್ಬಲ ಸ್ಥಿತಿಯಲ್ಲಿವೆ. ಟಿವಿಕೆ ಈಗ ಈ ಮೈತ್ರಿಕೂಟಗಳಲ್ಲಿ ಒಡಕು ಮೂಡಿಸಿದರೆ ಇಂತಹ ಮಿತ್ರಕೂಟದ ನಾಯಕತ್ವ ಕುರಿತು ಅಪಸ್ವರ ಹೊಂದಿರುವ ಅಥವಾ ಅನ್ಯ ಕಾರಣಗಳಿಂದ ಅವುಗಳ ಶಾಸಕರು ಟಿವಿಕೆ ಸರ್ಕಾರವನ್ನು ಬೆಂಬಲಿಸಲು ಪಕ್ಷಾಂತರಗೊಳ್ಳಬಹುದು

> ತಮಿಳುನಾಡಿನ ಜನರು ಟಿವಿಕೆ ಪರ ಜನಾದೇಶ ನೀಡಿರುವುದರಿಂದ ಆ ಪಕ್ಷಕ್ಕೆ ಬೆಂಬಲ ನೀಡುವ ಬಗ್ಗೆ ಕಾಂಗ್ರೆಸ್ ಪರಿಶೀಲನೆ ನಡೆಸುತ್ತಿದೆ. ಒಂದೆರಡು ದಿನಗಳಲ್ಲಿ ಕಾಂಗ್ರೆಸ್ ಈ ವಿಷಯವಾಗಿ ತೀರ್ಮಾನಕ್ಕೆ ಬರಬಹುದು.
>
> ▪ **ಕೆ.ಸಿ.ವೇಣುಗೋಪಾಲ್**, ಕಾಂಗ್ರೆಸ್ ನಾಯಕ

ಬಂಗಾಳ ಚುನಾವಣೋತ್ತರ ಹಿಂಸೆ : 2 ಕಾರ್ಯಕರ್ತರ ಬಲಿ

ಟಿಎಂಸಿಯ ಹಲವು ಕಚೇರಿಗಳು ಧ್ವಂಸ

ಕೋಲ್ಕತಾ: ಪಶ್ಚಿಮಬಂಗಾಳದಲ್ಲಿ ಚುನಾವಣಾ ಫಲಿತಾಂಶ ಘೋಷಣೆಯಾದ ಬಳಿಕ ರಾಜಕೀಯ ಪಕ್ಷಗಳ ಕಾರ್ಯಕರ್ತರ ಹಿಂಸಾಚಾರ ತಾರಕಕ್ಕೇರಿದ್ದು ಬಿಜೆಪಿ ಹಾಗೂ ಟಿಎಂಸಿಯ ತಲಾ ಒಬ್ಬೊಬ್ಬ ಕಾರ್ಯಕರ್ತರು ಹತ್ಯೆಗೀಡಾಗಿದ್ದಾರೆ. ಹೌರಾದ ನಾರಾಯಣಪುರದಲ್ಲಿ ಯಾದವ್ ಬಾರ್(48) ಎನ್ನುವ ಬಿಜೆಪಿ ಕಾರ್ಯಕರ್ತನನ್ನು ತೃಣಮೂಲ ಕಾಂಗ್ರೆಸಿಗರು ಥಳಿಸಿ ಕೊಂದಿದ್ದಾರೆಂದು ಆರೋಪಿಸಲಾಗಿದೆ. ಚುನಾವಣಾ ಫಲಿತಾಂಶ ಹೊರಬಿದ್ದ ನಂತರ ನಡೆದ ವಿಜಯೋತ್ಸವ ಮೆರವಣಿಗೆಯಲ್ಲಿ ಭಾಗವಹಿಸಿದ ಯಾದವ್ ಅವರನ್ನು ಅವರ ಮನೆಯ ಸಮೀಪದಿಂದ ರಾತ್ರಿ 11 ಗಂಟೆ ವೇಳೆ ಟಿಎಂಸಿ ಕಾರ್ಯಕರ್ತರು ಹೊತ್ತೊಯ್ದು ಮಾರಣಾಂತಿಕವಾಗಿ ಥಳಿಸಿ ಕೊಂದು ಹಾಕಿದ್ದಾರೆ ಎನ್ನಲಾಗುತ್ತಿದೆ.

ಇದೇ ವೇಳೆ ಬಿರ್ಭೂಮ್‌ನ ನನೂರ್‌ನಲ್ಲಿ ಅಬೀರ್ ಶೇಖ್ ಎನ್ನುವ ಟಿಎಂಸಿ ಕಾರ್ಯಕರ್ತನನ್ನು ಬಿಜೆಪಿ ಬೆಂಬಲಿಗರು ಕೊಲೆ ಮಾಡಿದ್ದಾರೆ. ಆತ ನನೂರ್‌ನ ರಸ್ತೆಯಲ್ಲಿ ಒಂಟಿಯಾಗಿ ನಡೆದುಕೊಂಡು ಹೋಗುವಾಗ ಬಿಜೆಪಿ ಕಾರ್ಯಕರ್ತರು ಅಡ್ಡಗಟ್ಟಿ ಹರಿತವಾದ ಆಯುಧಗಳಿಂದ ಕೊಂದು ಹಾಕಿದ್ದಾರೆ ಎಂದು ಆರೋಪಿಸಲಾಗುತ್ತಿದೆ. ತನ್ಮಧ್ಯೆ ತೃಣಮೂಲ ಕಾಂಗ್ರೆಸಿನ ಹಲವಾರು ಕಚೇರಿಗಳು ಹಾಗೂ ಕಾರ್ಯಕರ್ತರ ಮೇಲೆ ವ್ಯಾಪಕ ದಾಳಿ ನಡೆದಿದೆ. ಟಿಎಂಸಿ ಮೂಲಗಳ ಪ್ರಕಾರ, ಟಾಲಿಗಂಜ್, ಕಸ್ಬಾ, ಬರುಯಿಪುರ್, ಕಮರ್ಹತಿ ಮತ್ತು ಬಾರಾನಗರ ಸೇರಿದಂತೆ ಹೌರಾ ಮತ್ತು ಬೆಹಾರ್ಂಪೋರ್‌ನಂತಹ ಜಿಲ್ಲೆಗಳಲ್ಲಿನ ಪಕ್ಷದ ಕಚೇರಿಗಳನ್ನು ಧ್ವಂಸಗೊಳಿಸಲಾಗಿದೆ.

ಬೆಲೆಘಾಟದಲ್ಲಿ, ಸ್ಥಳೀಯ ಪಕ್ಷದ ಕಚೇರಿಯ ಮೇಲೆ ದಾಳಿ ನಡೆಸಲಾಯಿತು ಮತ್ತು ಬ್ಲಾಕ್ ಅಧ್ಯಕ್ಷ ಪಬಿತ್ರ ಬಿಸ್ವಾಸ್ ಮೇಲೆ ಹಲ್ಲೆ ನಡೆಸಲಾಯಿತು, ಕೌನ್ಸಿಲರ್ ಸುಶಾಂತ ಘೋಷ್ ಅವರ ಕಚೇರಿಗೂ ಹಾನಿಯಾಗಿದೆ.

ಬಂಗಾಳ, ಅಸ್ಸಾಂ: ಗೆದ್ದ ಕಾಂಗ್ರೆಸಿಗರೆಲ್ಲ ಮುಸ್ಲಿಮರು

ಬಿಜೆಪಿ ಎದುರಿಸಲು ಮುಸ್ಲಿರಿಗೆ ಹೆಚ್ಚು ಒತ್ತು

ನವದೆಹಲಿ: ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಸ್ಪರ್ಧಿಸಿದ 390 ಕ್ಕೂ ಹೆಚ್ಚು ಸ್ಥಾನಗಳಲ್ಲಿ ಕೇವಲ 21 ಸ್ಥಾನಗಳನ್ನು ಗೆದ್ದಿದೆ. ಆದರೆ 21 ಮಂದಿ ಕಾಂಗ್ರೆಸ್ ವಿಜೇತರಲ್ಲಿ 20 ಮುಸ್ಲಿಂ ಅಭ್ಯರ್ಥಿಗಳಾಗಿದ್ದಾರೆ. ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟ ಸರ್ಕಾರ ರಚಿಸಲು ಮುಂದಾದರೂ ಅದರಲ್ಲಿ ಇಂಡಿಯನ್ ಯುನಿಯನ್ ಮುಸ್ಲಿಮ್ ಲೀಗ್ ಪ್ರಮುಖ ಮಿತ್ರಪಕ್ಷವಾಗಿದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸಿನಲ್ಲಿ ಮುಸ್ಲಿಮ್ ಶಾಸಕರ ಸಂಖ್ಯೆ ಹೆಚ್ಚಾಗುತ್ತಿದೆ. 2014ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಹೀನಾಯ ಸೋಲಿನ ನಂತರ ಸಲ್ಲಿಸಲಾಗಿದ್ದ ಕಾಂಗ್ರೆಸ್‌ನ ಆಂತರಿಕ ವರದಿಯಲ್ಲಿ ಮುಸ್ಲಿಮರು ಪಕ್ಷಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿರುವುದರ ಬಗ್ಗೆ ಉಲ್ಲೇಖವಾಗಿತ್ತು. 2026ರ ವಿಧಾನಸಭಾ ಚುನಾವಣೆಯಲ್ಲಿ ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ಎರಡೂ ರಾಜ್ಯಗಳಲ್ಲಿ ಹಿಂದೂ ಮತಗಳ ಕ್ರೋಢೀಕರಣ ಕಂಡುಬಂದಿದೆ. ಆದರೆ ವಿವಿಧ ರೀತಿಯ ಸಿದ್ಧಾಂತಗಳು ಹಾಗೂ ಮತ್ತು ನಾಯಕರನ್ನು ಹೊಂದಿರುವ ಹಳೆಯ ಪಕ್ಷವಾದ ಕಾಂಗ್ರೆಸ್, ಅಲ್ಪಸಂಖ್ಯಾತರೊಂದಿಗೆ ನಿಕಟ ಸಂಬಂಧ ಹೊಂದಿದೆ. ಬಿಜೆಪಿ ಹಿಂದೂ ಮತದಾರರ ಕ್ರೋಢೀಕರಣವನ್ನು ದುಪ್ಪಟ್ಟಾಗಿಸಿದರೆ ಕಾಂಗ್ರೆಸ್ ತನ್ನ ಮಿತ್ರಪಕ್ಷಗಳ ಆಯ್ಕೆ ಮತ್ತು ಉಳಿವಿಗಾಗಿ ಶ್ರಮಿಸುತ್ತಿದೆ. ಹೀಗಾಗಿ ಮುಸ್ಲಿಂ ಮತದಾರರ ಕಡೆಗೆ ಕಾಂಗ್ರೆಸ್ ಹೆಚ್ಚು ಒಲವು ತೋರಿದೆ. ಈ ಕಾರಣದಿಂದ ಕಾಂಗ್ರೆಸ್ ಅಲ್ಪಸಂಖ್ಯಾತರನ್ನು ಮೆಚ್ಚಿಸುವ ಪಕ್ಷವೆಂದು ಬಿಜೆಪಿ ಬಿಂಬಿಸುತ್ತಿರುವುದಲ್ಲದೆ, 2014ರಿಂದಲೇ ಕಾಂಗ್ರೆಸ್ ವಿರುದ್ಧ ಪ್ರತಿ ಧ್ರುವೀಕರಣ ತಂತ್ರ ಅನುಸರಿಸುತ್ತಿದೆ. ಅಸ್ಸಾಂನಲ್ಲಿ ಕಾಂಗ್ರೆಸ್ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡ ನಂತರ 126 ಸ್ಥಾನಗಳ ಪೈಕಿ 99ರಲ್ಲಿ ಸ್ಪರ್ಧಿಸಿತ್ತು, ಆದರೆ ಅದು ಕೇವಲ 19ರಲ್ಲಿ ಮಾತ್ರ ಜಯಗಳಿಸಿತು. ಹಾಗಿದ್ದರೂ ಗೆದ್ದ 18 ಶಾಸಕರು ಮುಸ್ಲಿಮರು. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ 292 ಸ್ಥಾನಗಳಲ್ಲಿ ಸ್ಪರ್ಧಿಸಿ ಎರಡರಲ್ಲಿ ಗೆದ್ದರೂ ಅವರಿಬ್ಬರೂ ಮುಸ್ಲಿಮರು.

ಸುದ್ದಿ ಸಮಗ್ರ

ಭರವಸೆಗಳ ಭಾರದಲ್ಲಿ ಟಿ.ವಿ.ಕೆ.

ಜನರಿಗೆ ಕೊಟ್ಟ ಮಾತು ಉಳಿಸಿಕೊಳ್ಳುವರೇ ವಿಜಯ್?

ತಮಿಳಿಗ ವೆಟ್ರಿ ಕಜ್ಞಗಂ (ಟಿ.ವಿ.ಕೆ.) ತಮಿಳುನಾಡಿನಲ್ಲಿ ಗೆದ್ದು ಬೀಗಿದ್ದಾಯಿತು. ಒಟ್ಟು 234 ಸ್ಥಾನಗಳ ಪೈಕಿ ಅತ್ಯಧಿಕ 107 ಸ್ಥಾನ ಗಳಿಸಿದ ಏಕೈಕ ದೊಡ್ಡ ಪಕ್ಷವಾಗಿ ಅಧಿಕಾರಕ್ಕೇರುವುದೂ ಬಹುತೇಕ ಖಚಿತವಾಗಿದೆ. ಸರ್ಕಾರ ರಚನೆಗೆ ಅಗತ್ಯವಾದ 118 ಸ್ಥಾನಗಳಿಗೆ ಇನ್ನು ಕೇವಲ 11 ಸ್ಥಾನಗಳಷ್ಟೇ ಕೊರತೆ ಇರುವುದರಿಂದ ಆ ಸ್ಥಾನಗಳಿಗಾಗಿ ಇನ್ನೊಂದು ಪಕ್ಷದ ಬೆಂಬಲ ಪಡೆದು ಮೈತ್ರಿ ಸರ್ಕಾರ ರಚನೆಗೇನೋ ಅವಕಾಶವಿದೆ. ಆದರೆ ಚುನಾವಣಾ ಪೂರ್ವದಲ್ಲಿ ಟಿ.ವಿ.ಕೆ. ನಾಯಕ ಹಾಗೂ ಚಿತ್ರ ನಟ ವಿಜಯ್ ತಮ್ಮ ಪ್ರಣಾಳಿಕೆಯಲ್ಲಿ ನಿಬ್ಬೆರಗಾಗುವಂತಹ ಹಾಗೂ ಕೆಲವೊಮ್ಮೆ ಕೇವಲ 'ಆಮಿಷ ಹಾಗೂ ಅಸಹಜ' ಎನಿಸುವಂತಹ ಭರ್ಜರಿ ಭರವಸೆಗಳ ಭಾರ ಹೊತ್ತಿದ್ದಾರೆ. ತಾವು ರಚಿಸುವ ಹೊಸ ಸರ್ಕಾರದಲ್ಲಿ ಅವನ್ನು ನಿಜಕ್ಕೂ ಈಡೇರಿಸುವರೇ ಎಂಬ ಕುತೂಹಲ ಎಲ್ಲರಲ್ಲೂ ಮನೆ ಮಾಡಿದೆ. ಈ ವಿಷಯವಾಗಿ ಒಂದು ಸಮಗ್ರ ನೋಟ ಇಲ್ಲಿದೆ:

ಭರವಸೆಗಳ ಪ್ರಮಾಣ

ವಿಜಯ್ ಒಟ್ಟು 10 ವಲಯಗಳಿಗೆ ಸಂಬಂಧಿಸಿದಂತೆ ಒಟ್ಟಾರೆ 26 ಭರವಸೆಗಳನ್ನು ನೀಡಲಾಗಿದೆ. ಈ ಪೈಕಿ ಮಹಿಳೆಯರಿಗೆ 6, ಮಕ್ಕಳಿಗೆ 2, ಮನೆಗಳಿಗೆ 2, ರೈತರಿಗೆ 3, ಯವಜನ/ವಿದ್ಯಾರ್ಥಿಗಳಿಗೆ 6, ಸಾಮಾಜಿಕ ಭದ್ರತೆ ಮತ್ತು ಆರೋಗ್ಯ 4 ಮತ್ತು ಮೀನುಗಾರರಿಗೆ 3 ಆಶ್ವಾಸನೆಗಳನ್ನು ನೀಡಲಾಗಿದೆ.

ಮಹಿಳೆಯರಿಗೆ ವರ್ಷಕ್ಕೆ 6 ಉಚಿತ ಗ್ಯಾಸ್ ಸಿಲಿಂಡರ್!

ಅಡುಗೆ ಅನಿಲ ಪೂರೈಸುವುದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಆದರೆ ಪೂರೈಸಿದ್ದನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವುದು ಆಯಾ ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಬರುತ್ತದೆ. ಸಿಲಿಂಡರ್‌ಗಳಿಗೆ ಕೃತಕ ಅಭಾವ ಉಂಟಾಗದಂತೆ ನೋಡಿಕೊಳ್ಳುವುದು, ಗ್ರಾಹಕರಿಗೆ ಸಮರ್ಪಕ ವಿತರಣೆ ಮಾಡುವುದು, ಕಾಳಸಂತೆ ವ್ಯಾಪಾರ ತಡೆಗಟ್ಟುವುದು ಇತ್ಯಾದಿ ರಾಜ್ಯ ಸರ್ಕಾರದ ಕರ್ತವ್ಯ.ಸದ್ಯಕ್ಕೆ ಪಶ್ಚಿಮ ಏಷ್ಯಾ ಯುದ್ಧದ ಬಿಕ್ಕಟ್ಟಿನ ನಡುವೆ ಭಾರತಕ್ಕೆ ಅಡುಗೆ ಅನಿಲ ಆಮದು ಮಾಡಿಕೊಳ್ಳುವುದೇ ಹರಸಾಹಸವಾಗಿದ್ದು, ಇತರ ದೇಶಗಳಿಗೆ ಹೋಲಿಸಿದರೆ ಭಾರತ ಜಾಗತಿಕವಾಗಿ ತನ್ನ ಪ್ರಭಾವ ಬಳಸಿ ಹೇಗೋ ಅಡುಗೆ ಅನಿಲ ಪೂರೈಕೆ ನಿಯಂತ್ರಿಸಿ, ನಿಭಾಯಿಸುತ್ತಿದೆ.

ಇಂತಹ ಸ್ಥಿತಿಯಲ್ಲಿ ವಿಜಯ್ ಈ ಭರವಸೆಯನ್ನು ಸಮರ್ಪಕವಾಗಿ ಈಡೇರಿಸುವರೇ?

ಕಷ್ಟಸಾಧ್ಯವಾಗಿರುವ ಭರವಸೆಗಳು

ಮದುವೆಗೆ 8 ಗ್ರಾಂ ಚಿನ್ನ ಮತ್ತು ರೇಷ್ಮೆ ಸೀರೆ!

ಜಾಗತಿಕ ವಿದ್ಯಮಾನಗಳಿಂದಾಗಿ ಇತ್ತೀಚೆಗೆ ಕೆಲವು ತಿಂಗಳುಗಳಿಂದ ಚಿನ್ನದ ದರಗಳು ಗಗನ ಮುಟ್ಟಿದೆ. ಪ್ರಸ್ತುತ 1 ಗ್ರಾಂ ಚಿನ್ನ ಅಂದಾಜು 15 ಸಾವಿರ ಅಂದರೂ 8 ಗ್ರಾಂ ಚಿನ್ನಕ್ಕೆ 1 ಲಕ್ಷ 20 ಸಾವಿರ ರೂ. ಆಗುತ್ತದೆ. ಪ್ರತಿ ವಧುವಿಗೆ ಈ ಪ್ರಮಾಣದ ಚಿನ್ನ ಹಾಗೂ ರೇಷ್ಮೆ ಸೀರೆ ಒದಗಿಸಲು ಸಾಧ್ಯವೆ?

▪ **ಮಕ್ಕಳ ಶಿಕ್ಷಣಕ್ಕೆ ವರ್ಷಕ್ಕೆ 15 ಸಾವಿರ ರೂ. ಸಹಾಯ ಧನ**

▪ **ನವಜಾತ ಶಿಶುವಿಗೆ ಚಿನ್ನದ ಉಂಗುರ**

ಇವರೆಡೂ ಭರವಸೆಗಳೂ ಸಹ ಈಡೇರಿಸುವುದು ಕಷ್ಟಸಾಧ್ಯ. ಪ್ರಾಥಮಿಕ ಹಾಗೂ ಪ್ರೌಢಶಾಲೆಗೆ ಪ್ರವೇಶ ಪಡೆಯುವ ಮಕ್ಕಳು ಎಂಬ ಲೆಕ್ಕ ಇಟ್ಟುಕೊಂಡರೂ ತಮಿಳುನಾಡಿನಾದ್ಯಂತ ಇರುವ ಶಾಲಾ ಮಕ್ಕಳಿಗೆ ಈ ಸೌಲಭ್ಯ ಸಮರ್ಪಕವಾಗಿ ತಲುಪಿಸಲು ಸಾಧ್ಯವೇ? ಅಂತೆಯೇ ಪ್ರತಿ ದಿನ ಜನಿಸುವ ಶಿಶುಗಳಿಗೆ ಚಿನ್ನದ ಉಂಗುರ ಮಾಡಿಸಿಕೊಡುವುದು ಎಷ್ಟು ಕಾರ್ಯಸಾಧು, ಇದನ್ನು ಹೇಗೆ ನಿರ್ವಹಿಸುವರು ಎಂಬುದು ಕುತೂಹಲಕಾರಿ!

ಉಳಿದ ಭರವಸೆಗಳ ಕತೆಯೇನು

ಉಳಿದಂತೆ ಮನೆ ಯಜಮಾನಿಗೆ ಮಾಸಿಕ 2,500 ರೂ. ಸಹಾಯಧನ, ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ, ಪದವೀಧರರಿಗೆ 4 ಸಾವಿರ ರೂ. ನಿರುದ್ಯೋಗ ಭತ್ಯೆ, ವೃದ್ಧರು ಹಾಗೂ ವಿಕಲಚೇತನರಿಗೆ ಮಾಸಿಕ 3 ಸಾವಿರ ರೂ. ಪಿಂಚಣಿ, ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ಹಾಗೂ ಉಚಿತ ಕುಡಿಯುವ ನೀರು, ರೈತರ ಬೆಳೆ ಸಾಲದ ಶೇ 50 ಮನ್ನಾ, ಮೀನುಗಾರರಿಗೆ 27 ಸಾವಿರ ಸಹಾಯಧನ ಹಾಗೂ ಖಾಯಂ ವಸತಿ ಇತ್ಯಾದಿಗಳೆಲ್ಲವೂ ನೇರವಾಗಿ ಸರ್ಕಾರದ ಬೊಕ್ಕಸವನ್ನು ಆಧರಿಸಿದ ಭರವಸೆಗಳಾಗಿವೆ.

ಬಜೆಟ್ ಮೀರಿ ಸಾಲ?

ತಮಿಳುನಾಡು 'ರಾಜ್ಯದ ಒಟ್ಟು ದಿನಬಳಕೆ ಉತ್ಪನ್ನಗಳ (ಜಿಎಸ್‌ಡಿಪಿ)' ಪ್ರಮಾಣ 1,06,968 ಕೋಟಿ ರೂ. ಇದ್ದು, ಇದರ ಶೇ. 3 ರಷ್ಟು ಹಣಕಾಸು ಕೊರತೆಯ ಬಜೆಟ್ 2025-26ರಲ್ಲಿ ಮಂಡಿಸಲಾಗಿದೆ. ಇದು ತಮಿಳುನಾಡಿನ ಹಣಕಾಸು ಸ್ಥಿತಿಗತಿಯ ಒಂದು ಸ್ಯಾಂಪಲ್ ಮಾತ್ರ. ಟಿ.ವಿ.ಕೆಯ ಭರವಸೆಗಳನ್ನು ಈಡೇರಿಸಬೇಕೆಂದರೆ ಬಜೆಟ್ ಮೀರಿ ಹೊರಗಿನಿಂದ ಸಾಲ ತರುವುದು ಅನಿವಾರ್ಯವಾಗಲಿದೆ. ಟಿ.ವಿ.ಕೆ ವಿಜಯ್ ತಮ್ಮ ಪ್ರಣಾಳಿಕೆಯ ಭರವಸೆಗಳನ್ನು ಹೇಗೆ ಈಡೇರಿಸುವರು ಕಾದುನೋಡಬೇಕಾಗಿದೆ.

ಐಪಿಎಲ್ ಟೈಮ್

ಮಾ. 28-ಮೇ 31, 2026

ಎಕ್ಸ್‌ಟ್ರಾ ಕವರ್

ಆರ್‌ಸಿಬಿಯ ಫಿಸಿಯೋ ನಿವೃತ್ತಿ: ಇವಾನ್‌ಗೆ ಕೊಹ್ಲಿ ಬೀಳ್ಕೊಡುಗೆ



ಲಖನೌ: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದೊಂದಿಗೆ 18 ವರ್ಷಗಳ ಸುದೀರ್ಘ ಪಯಣ ಮುಗಿಸಿದ ಫಿಸಿಯೋ ಇವಾನ್ ಸ್ಪೀಚ್ಲಿಗೆ ವಿರಾಟ್ ಕೊಹ್ಲಿ ಭಾವನಾತ್ಮಕ ವಿದಾಯ ಕೋರಿದ್ದಾರೆ. 2008 ರಿಂದ ತಂಡದ ಭಾಗವಾಗಿದ್ದ ಇವಾನ್ ಅವರನ್ನು ಕೊಹ್ಲಿ 'ಒರಿಜಿನಲ್ ಗ್ಯಾಂಗ್‌ಸ್ಟರ್' ಎಂದು ಬಣ್ಣಿಸಿದ್ದಾರೆ. "ತಂಡದಲ್ಲಿ ನಾನು ಅತಿ ಹೆಚ್ಚು ಸಮಯ ಕಳೆದಿದ್ದು ನಿಮ್ಮೊಂದಿಗೆ. ನಿಮ್ಮ ಪ್ರಾಮಾಣಿಕತೆ ಮತ್ತು ಕಾಳಜಿ ಸದಾ ನೆನಪಿನಲ್ಲಿರುತ್ತದೆ" ಎಂದು ಕೊಹ್ಲಿ ಗುಣಗಾನ ಮಾಡಿದರು.

15ರಿಂದ ಆಸ್ಟ್ರೇಲಿಯಾ ವಿರುದ್ಧ ಭಾರತ ಕಿರಿಯರ ಹಾಕಿ ಸರಣಿ

ಭೋಪಾಲ್: ಮುಂಬರುವ ಏಷ್ಯಾ ಕಪ್‌ಗೆ ಸಿದ್ಧತೆ ನಡೆಸುವ ದೃಷ್ಟಿಯಿಂದ ಭಾರತದ 18 ವರ್ಷದೊಳಗಿನ ಪುರುಷ ಮತ್ತು ಮಹಿಳಾ ಹಾಕಿ ತಂಡಗಳು ಆಸ್ಟ್ರೇಲಿಯಾ ವಿರುದ್ಧ ನಾಲ್ಕು ಪಂದ್ಯಗಳ ಸರಣಿಯನ್ನು ಆಡಲಿವೆ. ಈ ರೋಚಕ ಪಂದ್ಯಗಳು ಮೇ 15 ರಿಂದ 20 ರವರೆಗೆ ಭೋಪಾಲ್‌ನ ಉದ್ಧವ್ ದಾಸ್ ಮೆಹ್ತಾ ಕ್ರೀಡಾಂಗಣದಲ್ಲಿ ನಡೆಯಲಿವೆ.

277 ಐಪಿಎಲ್ ಪಂದ್ಯ ಆಡಿ ದಾಖಲೆ ಮುರಿದ ರೋಹಿತ್

ಮುಂಬೈ: ಐಪಿಎಲ್ ಇತಿಹಾಸದಲ್ಲಿ ಮುಂಬೈ ಇಂಡಿಯನ್ಸ್ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ ಹೊಸ ಮೈಲಿಗಲ್ಲು ಸ್ಥಾಪಿಸಿದ್ದಾರೆ.

ಲಖನೌ ಸೂಪರ್ ಜೈಂಟ್ಸ್ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯುವ ಮೂಲಕ ರೋಹಿತ್, ವಿರಾಟ್ ಕೊಹ್ಲಿ (276 ಪಂದ್ಯ) ಅವರ ದಾಖಲೆಯನ್ನು ಹಿಂದಿಕ್ಕಿ ಅತಿ ಹೆಚ್ಚು ಪಂದ್ಯಗಳನ್ನಾಡಿದ ಎರಡನೇ ಆಟಗಾರ ಎನಿಸಿಕೊಂಡರು. ರೋಹಿತ್ ಶರ್ಮಾ ಸದ್ಯ 277 ಪಂದ್ಯಗಳನ್ನಾಡಿದ್ದು, ಎಂ.ಎಸ್. ಧೋನಿ ಅವರ ಸಾರ್ವಕಾಲಿಕ ದಾಖಲೆಯತ್ತ ಕಣ್ಣಿಟ್ಟಿದ್ದಾರೆ.

ಸಂಜು ಆಟಕ್ಕೆ ಡೆಲ್ಲಿ ನಜ್ಜುಗುಜ್ಜು

ಚೆನ್ನೈ 8 ವಿಕೆಟ್‌ಗಳ ಜಯ | ಕ್ಯಾಪಿಟಲ್ಸ್‌ಗೆ ಹೀನಾಯ ಸೋಲು

ನವದೆಹಲಿ: ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐಪಿಎಲ್ 2026ರ 48ನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಹೀನಾಯವಾಗಿ ಸೋತಿದೆ. ಕೇವಲ 156 ರನ್‌ಗಳನ್ನು ಗುರಿಯಾಗಿ ಪಡೆದ ಸಿಎಸ್‌ಕೆ 17.3 ಓವರ್‌ಗಳಲ್ಲೇ 8 ವಿಕೆಟ್ ಉಳಿಸಿಕೊಂಡು ಗೆಲುವು ಸಾಧಿಸಿತು. ಸಂಜು ಸ್ಯಾಮ್ಸನ್‌ನ 87(52) ರನ್‌ಗಳ ಕಾಣಿಕೆ ಡೆಲ್ಲಿ ಸೋಲಿಗೆ ಕಾರಣವಾಯಿತು.

ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಆರಂಭದಲ್ಲೇ ಆಘಾತ ಎದುರಾಯಿತು. ಸ್ಟಾರ್ ಬ್ಯಾಟರ್ ಕೆ.ಎಲ್. ರಾಹುಲ್ (12) ಮತ್ತು ಪಥುಮ್ ನಿಸ್ಸಾಂಕ (19) ದೊಡ್ಡ ಮೊತ್ತ ಗಳಿಸುವಲ್ಲಿ ವಿಫಲರಾದರು. ನಾಯಕ ಅಕ್ಷರ್ ಪಟೇಲ್ ಕೇವಲ 2 ರನ್ ಗಳಿಸಿ ಔಟಾಗುವ ಮೂಲಕ ತಂಡವನ್ನು ಸಂಕಷ್ಟಕ್ಕೆ ತಳ್ಳಿದರು. ನಿರಂತರವಾಗಿ ವಿಕೆಟ್ ಕಳೆದುಕೊಂಡ ಡೆಲ್ಲಿ ಒಂದು ಹಂತದಲ್ಲಿ 69 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ತತ್ತರಿಸಿತ್ತು.

ತಂಡದ ಬ್ಯಾಟಿಂಗ್ ಕುಸಿತದ ವೇಳೆ ಟ್ರಿಸ್ಟಾನ್ ಸ್ಟಬ್ಸ್ ಜವಾಬ್ದಾರಿಯುತ ಆಟವಾಡಿದರು. ಅವರು 31 ಎಸೆತಗಳಲ್ಲಿ 1 ಬೌಂಡರಿ ಹಾಗೂ 2 ಸಿಕ್ಸರ್‌ಗಳ ನೆರವಿನಿಂದ 38 ರನ್ ಗಳಿಸಿ ತಂಡಕ್ಕೆ ಆಸರೆಯಾದರು. ಇವರಿಗೆ ಉತ್ತಮ ಸಾಥ್

ನೀಡಿದ ಇಂಪ್ಯಾಕ್ಟ್ ಪ್ಲೇಯರ್ ಸಮೀರ್ ರಿಜ್ವಿ, ಅಬ್ಬರದ ಬ್ಯಾಟಿಂಗ್ ನಡೆಸಿ 24 ಎಸೆತಗಳಲ್ಲಿ 4 ಸಿಕ್ಸರ್‌ಗಳ ಸಹಿತ 40 ರನ್ ಚಚ್ಚಿದರು. ಈ ಇಬ್ಬರ ಹೋರಾಟದಿಂದಾಗಿ ಡೆಲ್ಲಿ ತಂಡವು 150ರ ಗಡಿ ದಾಟಲು ಸಾಧ್ಯವಾಯಿತು.

ಚೆನ್ನೈ ಬೌಲರ್‌ಗಳ ಶಿಸ್ತಿನ ದಾಳಿ: ಚೆನ್ನೈ ಸೂಪರ್ ಕಿಂಗ್ಸ್ ಪರ ಬೌಲರ್‌ಗಳು ಅತ್ಯಂತ ಶಿಸ್ತಿನ ದಾಳಿ ಸಂಘಟಿಸಿದರು. ನೂರ್ ಅಹ್ಮದ್ 22 ರನ್‌ಗಳಿಗೆ 2 ಪ್ರಮುಖ ವಿಕೆಟ್ ಪಡೆದು ಮಿಂಚಿದರು.

ಜೇಮಿ ಓವರ್‌ಟನ್, ಮುಖೇಶ್ ಚೌಧರಿ ಮತ್ತು ಎಕೀಲ್ ಹೊಸೈನ್ ತಲಾ ಒಂದು ವಿಕೆಟ್ ಪಡೆಯುವ ಮೂಲಕ ಡೆಲ್ಲಿ ಬ್ಯಾಟರ್‌ಗಳನ್ನು ಕಟ್ಟಿಹಾಕಿದರು. ಅಂತಿಮವಾಗಿ ಡೆಲ್ಲಿ 20 ಓವರ್‌ಗಳಲ್ಲಿ 155/7 ರನ್‌ಗಳಿಗೆ ತನ್ನ ಇನಿಂಗ್ಸ್ ಮುಗಿಸಿತು.

ಸಂಕ್ಷಿಪ್ತ ಸ್ಕೋರ್: ಡೆಲ್ಲಿ ಕ್ಯಾಪಿಟಲ್ಸ್ 155/7. ಸಮೀರ್ ರಿಜ್ವಿ 40, ಟ್ರಿಸ್ಟಾನ್ ಸ್ಟಬ್ಸ್ 38. ಚೆನ್ನೈಸೂಪರ್ ಕಿಂಗ್ಸ್ 17.3 ಓವರ್‌ಗಳಲ್ಲಿ 2 ವಿಕೆಟ್‌ಗೆ 159 ರನ್.

ಇಂದಿನ ಪಂದ್ಯ	
ಹೈದರಾಬಾದ್ – ಪಂಜಾಬ್	ರಾತ್ರಿ 7.30ಕ್ಕೆ

ಐಪಿಎಲ್ 2026

ನಂ	ತಂಡ	ಪಂದ್ಯ	ಜಯ	ಸೋಲು	ಅಂಕ
01	ಪಂಜಾಬ್	09	06	02	13
02	ಆರ್‌ಸಿಬಿ	09	06	03	12
03	ಹೈದ್ರಾಬಾದ್	10	06	04	12
04	ರಾಜಸ್ಥಾನ	10	06	04	12
05	ಗುಜರಾತ್	10	06	04	12
06	ಚೆನ್ನೈ	10	05	05	10
07	ಡೆಲ್ಲಿ	10	04	06	08
08	ಕೆಕೆಆರ್	09	03	05	07
09	ಮುಂಬೈ	10	03	07	06
10	ಲಖನೌ	09	02	07	04

ಬೆಂಗಳೂರಿನಲ್ಲಿ ಸತತ 2 ಎಟಿಪಿ ಚಾಲೆಂಜರ್ ಟೆನಿಸ್ ಪಂದ್ಯಾವಳಿ

ಬೆಂಗಳೂರು: ಉದ್ಯಾನ ನಗರಿ ಬೆಂಗಳೂರು ಮತ್ತೊಮ್ಮೆ ಅಂತಾರಾಷ್ಟ್ರೀಯ ಟೆನಿಸ್ ಪಂದ್ಯಾವಳಿಗಳಿಗೆ ಸಜ್ಜಾಗಿದೆ. ನಗರದ ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ಮೇ 10ರಿಂದ 24ರವರೆಗೆ ಸತತ ಎರಡು ವಾರಗಳ ಕಾಲ ಎಟಿಪಿ ಚಾಲೆಂಜರ್ ಪಂದ್ಯಾವಳಿಗಳು ನಡೆಯಲಿವೆ.ಮೊದಲ ಪಂದ್ಯಾವಳಿಯು ಮೇ 10 ರಿಂದ 17 ರವರೆಗೆ ಹಾಗೂ ಎರಡನೇ ಪಂದ್ಯಾವಳಿಯು ಮೇ 18 ರಿಂದ 24 ರವರೆಗೆ ಜರುಗಲಿವೆ.

ಪ್ರತಿ ಪಂದ್ಯಾವಳಿಯು 63,000 ಯುಎಸ್ ಡಾಲರ್ ಮೊತ್ತದ ಬಹುಮಾನವನ್ನು ಹೊಂದಿದ್ದು, ವಿಶ್ವದಾದ್ಯಂತ ಹಲವು ಪ್ರತಿಭಾವಂತ ಆಟಗಾರರು ಭಾಗವಹಿಸಲಿದ್ದಾರೆ. ಈ ವರ್ಷ ಈಗಾಗಲೇ ಬೆಂಗಳೂರು ಓಪನ್ ಯಶಸ್ವಿಯಾಗಿ ಮುಕ್ತಾಯಗೊಂಡಿದ್ದು, ಇದು ನಗರದಲ್ಲಿ ನಡೆಯುತ್ತಿರುವ ಮೂರನೇ ಚಾಲೆಂಜರ್ ಪಂದ್ಯಾವಳಿಯಾಗಿದೆ.

ತುಮಕೂರು ಓಪನ್ ಟೆನಿಸ್ 2026 ಮಧುರಿಮಾಗೆ ಭರ್ಜರಿ ಗೆಲುವು

ತುಮಕೂರು: ಇಲ್ಲಿನ ತುಮಕೂರು ವಿಶ್ವವಿದ್ಯಾಲಯದ ಟೆನಿಸ್ ಕ್ರೀಡಾಂಗಣದಲ್ಲಿ ಮಂಗಳವಾರ ಆರಂಭವಾದ 'ಐಟಿಎಫ್ ಡಬ್ಲ್ಯೂ35 ತುಮಕೂರು ಓಪನ್' ಮಹಿಳಾ ಟೆನಿಸ್ ಪಂದ್ಯಾವಳಿಯಲ್ಲಿ ಭಾರತೀಯ ಆಟಗಾರರು ಶುಭಾರಂಭ ಮಾಡಿದ್ದಾರೆ. ದಿನದ ಪ್ರಮುಖ ಪಂದ್ಯದಲ್ಲಿ ಭಾರತದ ಮಧುರಿಮಾ ಸಾವಂತ್ ರಷ್ಯಾದ ಮರಿಯಾ ಮಿಖೈಲೋವಾ ವಿರುದ್ಧ 6–2, 3–6, 6–1 ಸೆಟ್‌ಗಳಿಂದ ಜಯಗಳಿಸಿ ಎರಡನೇ ಸುತ್ತು ಪ್ರವೇಶಿಸಿದರು.

ಇದಕ್ಕೂ ಮುನ್ನ ಪಂದ್ಯಾವಳಿಯನ್ನು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶಾಸಕ ಜ್ಯೋತಿ ಗಣೇಶ್, ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಹಾಗೂ ಕರ್ನಾಟಕ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಡಾ. ಕೆ. ಗೋವಿಂದರಾಜ್ ಉಪಸ್ಥಿತರಿದ್ದರು. ಭಾರತದ ಹಲವು ಉದಯೋನ್ಮುಖ ಪ್ರತಿಭೆಗಳು ಸಿಂಗಲ್ಸ್ ಮತ್ತು ಡಬಲ್ಸ್ ವಿಭಾಗಗಳಲ್ಲಿ ಮುನ್ನಡೆ ಸಾಧಿಸುವ ಮೂಲಕ ಸ್ಥಳೀಯ ಕ್ರೀಡಾಭಿಮಾನಿಗಳಲ್ಲಿ ಭರವಸೆ ಮೂಡಿಸಿದ್ದಾರೆ. ಈ ಪಂದ್ಯಾವಳಿಯು ಸ್ಥಳೀಯ ಆಟಗಾರ್ತಿಯರಿಗೆ ಅಂತರಾಷ್ಟ್ರೀಯ ವೇದಿಕೆ ಕಲ್ಪಿಸಿಕೊಟ್ಟಿದೆ.

ಟಿ20 ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದ ಭಾರತ

ದುಬೈ: ವಿಶ್ವ 'ಚುಟುಕು ಕ್ರಿಕೆಟ್'ನಲ್ಲಿ ತನ್ನ ಪಾರಮ್ಯ ಉಳಿಸಿಕೊಂಡಿರುವ ಭಾರತ ವಿಶ್ವ ಟಿ20 ಕ್ರಿಕೆಟ್‌ನಲ್ಲಿ ಅಗ್ರಸ್ಥಾನವನ್ನು ಇನ್ನಷ್ಟು ಬಲಪಡಿಸಿಕೊಂಡಿದೆ. ಮಂಗಳವಾರ ಬಿಡುಗಡೆಗೊಳಿಸಲಾದ ಐಸಿಸಿ ಪುರುಷರ ಟಿ20 ತಂಡ ರ್‍ಯಾಂಕಿಂಗ್ ಪಟ್ಟಿಯನ್ವಯ ಭಾರತ ಅಗ್ರಸ್ಥಾನ ಕಾದುಕೊಂಡಿದೆ.

ಒಟ್ಟು 275 ರೇಟಿಂಗ್ಸ್ ಪಾಯಿಂಟ್‌ಗಳೊಡನೆ ಸೂರ್ಯಕುಮಾರ ಯಾದವರ ಸಾರಥ್ಯದ ಭಾರತ ರ್‍ಯಾಂಕಿಂಗ್ ಪಟ್ಟಿಯ ಅಗ್ರಸ್ಥಾನದಲ್ಲಿದ್ದರೆ, ಇಂಗ್ಲೆಂಡ್ ಒಟ್ಟು 262 ಪಾಯಿಂಟ್‌ಗಳೊಡನೆ ಎರಡನೇಯದಾಗಿದೆ. ಕೇವಲ ನಾಲ್ಕೇ ನಾಲ್ಕು ಪಾಯಿಂಟ್‌ಗಳ ದೂರದಲ್ಲಿರುವ ಆಸ್ಟ್ರೇಲಿಯಾ(258) ಮೂರನೇ ಸ್ಥಾನದಲ್ಲಿದೆ.

ನ್ಯೂಜಿಲೆಂಡ್(247) ನಾಲ್ಕನೇ ಸ್ಥಾನದಲ್ಲಿಯೇ ಮುಂದುವರಿದರೆ, ದಕ್ಷಿಣ ಆಫ್ರಿಕ(244), ಪಾಕಿಸ್ತಾನ(240) ಹಾಗೂ ವೆಸ್ಟ್ ಇಂಡೀಸ್‌ಗಳು ಅನುಕ್ರಮವಾಗಿ ಐದು, ಆರು ಹಾಗೂ ಏಳನೇ ಸ್ಥಾನಗಳಲ್ಲುಳಿದವು. ಆ ನಂತರ ಬಾಂಗ್ಲಾದೇಶ ಎಂಟನೇ ಸ್ಥಾನಕ್ಕೇರಿದರೆ 6 ಪಾಯಿಂಟ್ ಕಳೆದುಕೊಂಡಿರುವ ಶ್ರೀಲಂಕಾ ಒಂಭತ್ತನೇ ಸ್ಥಾನಕ್ಕೆ ಕುಸಿದಿದೆ. ಶ್ರೀಲಂಕಾ ರ್‍ಯಾಂಕಿಂಗ್ ಪಟ್ಟಿಯಲ್ಲಿ ಹತ್ತನೇಯದಾಗಿದೆ.

ಚಿನ್ನಸ್ವಾಮಿ ಸ್ಟೇಡಿಯಂನಿಂದ ಐಪಿಎಲ್ ಫೈನಲ್ ಔಟ್?

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿರುವ ಐಪಿಎಲ್ 2026ರ ಫೈನಲ್ ಪಂದ್ಯವು ಈಗ ಅನಿಶ್ಚಿತತೆಯಲ್ಲಿದೆ. ಶಾಸಕರಿಗೆ ಪ್ರತಿ ಪಂದ್ಯಕ್ಕೆ ತಲಾ 5 ವಿಐಪಿ ಟಿಕೆಟ್ ನೀಡಬೇಕೆಂಬ ಬೇಡಿಕೆಯು ದೊಡ್ಡ ವಿವಾದಕ್ಕೆ ಕಾರಣವಾಗಿದ್ದು ಇದಕ್ಕೆ ಕಾರಣ ಎನ್ನಲಾಗಿದೆ.

ರಾಜಕಾರಣಿಗಳ ಈ ಒತ್ತಡದಿಂದ ಬೇಸತ್ತಿರುವ ಬಿಸಿಸಿಐ, ಫೈನಲ್ ಪಂದ್ಯವನ್ನು ಬೆಂಗಳೂರಿನಿಂದ ಬೇರೆ ನಗರಕ್ಕೆ ಸ್ಥಳಾಂತರಿಸಲು ಗಂಭೀರ ಚಿಂತನೆ ನಡೆಸುತ್ತಿದೆ. ಕಳೆದ ವರ್ಷದ ವಿಜೇತ ತಂಡವಾಗಿ ಆರ್‌ಸಿಬಿ ತವರು ನೆಲದಲ್ಲಿ ಫೈನಲ್ ಆಯೋಜಿಸುವ ಹಕ್ಕನ್ನು ಹೊಂದಿತ್ತು. ಆದರೆ ಟಿಕೆಟ್ ಹಂಚಿಕೆ ವಿವಾದ ಮತ್ತು ಭದ್ರತಾ ಕಾರಣಗಳಿಂದಾಗಿ ಈ ಅವಕಾಶ ಕೈತಪ್ಪುವ ಸಾಧ್ಯತೆ ದಟ್ಟವಾಗಿದೆ. ಇದು ಕ್ರಿಕೆಟ್ ಪ್ರೇಮಿಗಳಲ್ಲಿ ತೀವ್ರ ನಿರಾಸೆ ಮೂಡಿಸಿದೆ.

ಕೃಷಿ ವಾಣಿಜ್ಯ

skeditorkv@gmail.com

ಭಾರತದ ಒಟ್ಟು ಎಲ್‌ಪಿಜಿ ಆಮದಿನಲ್ಲಿ ಮಧ್ಯ ಪ್ರಾಚ್ಯದ ಪಾಲು ಶೇ.90ರಷ್ಟಿದೆ. ಈಗ ಯುದ್ಧದ ದೆಸೆಯಿಂದಾಗಿ ಇಡೀ ಮಧ್ಯಪ್ರಾಚ್ಯವೇ ಲಕ್ವ ಹೊಡೆದು ಕೂತಿದೆ. ಈಗಿನ ಪರಿಸ್ಥಿತಿ ಸುಧಾರಿಸಲು ಹೊರ್ಮುಜ್ ಜಲಸಂಧಿ ದಾಟಿ ಸಾಕಷ್ಟು ಪ್ರಮಾಣದ ಹಡಗುಗಳು ಭಾರತದ ಬಂದರುಗಳಿಗೆ ಬಂದಿಳಿಯಬೇಕು. ಅಂದಾಗ ಮಾತ್ರ ಈಗ ಎದ್ದಿರುವ ಹಾಹಾಕಾರವನ್ನು ಶಮನಗೊಳಿಸಲು ಸಾಧ್ಯ.

ವಾಣಿಜ್ಯ ಎಲ್‌ಪಿಜಿ ತುಟ್ಟಿ ಇದು ದುಬಾರಿ ದುನಿಯಾ...!

ಕೊಲ್ಲಿ ಯುದ್ಧದ ಬಿಕ್ಕಟ್ಟಿನ ಪರಿಣಾಮವಾಗಿ ಮತ್ತೊಮ್ಮೆ ಎಲ್‌ಪಿಜಿ ದರ ಏರಿಕೆ ವಿವಾದ ಸ್ಫೋಟವಾಗಿದೆ. ಸದ್ಯಕ್ಕೆ ವಾಣಿಜ್ಯ ಎಲ್‌ಪಿಜಿ ದರ ಏರಿಕೆಯಾಗಿದ್ದು, ಆಹಾರ ಹಣದುಬ್ಬರ ಹೆಚ್ಚಳಕ್ಕೆ ಹಾದಿ ಸುಗಮವಾಗುವ ಆತಂಕ ವ್ಯಕ್ತವಾಗುತ್ತಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಏರಿಕೆ ಹಾಗೂ ಹೊರ್ಮುಜ್ ಜಲಸಂಧಿ ಬಂದ್ ಆಗಿರುವದರಿಂದ ಎಲ್‌ಪಿಜಿ ತುಂಬಿಕೊಂಡ ಹಡಗುಗಳು ಬರುವುದು ನಿಂತುಹೋಗಿದ್ದರಿಂದ ಸಮಸ್ಯೆ ಉಲ್ಬಣಿಸಲು ಕಾರಣವಾಗಿದೆ.

ವಾಣಿಜ್ಯ ಎಲ್‌ಪಿಜಿ ದರ 19 ಕೆಜಿ ಸಿಲಿಂಡರ್ ದರ ಏಪ್ರಿಲ್‌ದಲ್ಲಿ 195.90 ರೂದಷ್ಟು ಏರಿಕೆಯಾಗಿತ್ತು. ಈಗ ಮೇ.1ರಂದು 993 ರೂದಷ್ಟು ಏರಿಕೆಯಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಫೆ.28ರಂದು ಬ್ಯಾರಲ್ ಒಂದಕ್ಕೆ 71 ಡಾಲರ್ ಇದ್ದ ದರ ಮೇ.1ರ ಹೊತ್ತಿಗೆ 112 ಡಾಲರ್‌ಗೆ ಜಿಗಿದಿದೆ. ಭಾರತ ತನ್ನ ಬಳಕೆಯ ಶೇ.87ರಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತದೆ. ಈಗ ಕಚ್ಚಾ ತೈಲ ಬೆಲೆ ಏರಿಕೆ ಜೊತೆಗೆ ರೂಪಾಯಿ ಮೌಲ್ಯ ಗಣನೀಯವಾಗಿ ಕುಸಿದಿದ್ದರಿಂದ ಆಮದು ವೆಚ್ಚ ಹಾಗೂ ವಾಣಿಜ್ಯ ಕೊರತೆ ಹೆಚ್ಚಳವಾಗಿದೆ. ಇದರಿಂದಾಗಿ ಸಾರ್ವಜನಿಕ ತೈಲ ಕಂಪನಿಗಳಿಗೆ ತೀವ್ರ ನಷ್ಟವಾಗುತ್ತಿದೆ. ಕೇಂದ್ರ ಸರ್ಕಾರ ಮಾರ್ಚ್ ತಿಂಗಳಿನಲ್ಲಿ ಪೆಟ್ರೋಲ್ ಮತ್ತು ಡೀಸೇಲ್ ಮೇಲಿನ ಅಬಕಾರಿ ಸುಂಕವನ್ನು ಶೇ.10ರಷ್ಟು ಇಳಿಸಿದ್ದರೂ ಅದರಿಂದ ಹೆಚ್ಚಿನ ಪ್ರಯೋಜನವೇನೂ ಆಗುವದಿಲ್ಲ. ಏಕೆಂದರೆ ಆಮದು ವೆಚ್ಚ ಇದರ ದುಪ್ಪಟ್ಟು ದುಬಾರಿಯಾಗಿರುವದರಿಂದ ಈ ಅಲ್ಪ ಇಳಿಕೆ ತೈಲ ಕಂಪನಿಗಳ ಗುಡಾಣದಂತಹ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯೇ ಸರಿ.

ಹಬ್ಬಿದ ವದಂತಿ

ಇದ್ದುದರಲ್ಲಿ ಒಂದು ಸಮಾಧಾನ ಏನೆಂದರೆ ಕೇಂದ್ರ ಸರ್ಕಾರ ಗೃಹ ಬಳಕೆ ಎಲ್‌ಪಿಜಿ, ಪೆಟ್ರೋಲ್, ಡೀಸೇಲ್ ಕಡೆ ಇನ್ನೂ ಮುಖ ಮಾಡಿಲ್ಲ. ಆದರೆ ಶೀಘ್ರದಲ್ಲೇ ಅವು ಕೂಡ ಜಾಸ್ತಿಯಾಗುವ ಸಾಧ್ಯತೆ ಇದೆ ಎಂಬ ವದಂತಿ ಹಬ್ಬಿದೆ. ಈ ವದಂತಿ ಸುಳ್ಳಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಬೇಕಿದೆ. ಏಕೆಂದರೆ ಒಂದು ವೇಳೆ ಈ ಮೂರು

ಉದ್ಯಮಗಳಿಗೆ ಆಘಾತ

ವಾಣಿಜ್ಯ ಎಲ್‌ಪಿಜಿ ದರ ಏರಿಕೆಯಿಂದ ಪ್ಯಾಕೇಜ್ಡ್ ಫುಡ್ ಕಂಪನಿಗಳು ತಲೆ ಮೇಲೆ ಕೈ ಹೊತ್ತು ಕೂರುವಂತಾಗಿದೆ. ಉತ್ಪಾದನಾ ವೆಚ್ಚ ಶೇ.1–2ರಷ್ಟು ಏರಿಕೆಯಾಗಿದೆ. ಈಗ ಅವುಗಳ ಕಾರ್ಯಾಚರಣೆಗೆ ಒಮ್ಮೆಲೇ ಬೇರೆ ವಿಧಾನ ಅಳವಡಿಸಿಕೊಳ್ಳುವದು ಕಷ್ಟ. ಆದರೆ ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಪರ್ಯಾಯ ಇಂಧನದ ಮೊರೆ ಹೋಗುವುದು ಅನಿವಾರ್ಯ. ಇನ್ನು ಹೋಟೆಲ್, ರೆಸ್ಟೋರೆಂಟ್‌ಗಳ ಮೇಲೆ ಎಂಥ ಪರಿಣಾಮ ಉಂಟಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಹಠಾತ್ತಾಗಿ 1,332 ರೂಗೆ ಏರಿದ ದರ ಕಂಡು ಹೋಟೆಲ್ ಉದ್ಯಮ ದಿಗ್ಭ್ರಮೆಗೊಂಡಿದೆ. ತಿಂಡಿ, ತಿನಿಸುಗಳ ದರವನ್ನು ಭಾರೀ ಏರಿಕೆ ಮಾಡಿದರೆ ಗ್ರಾಹಕರ ಸಂಖ್ಯೆ ಅರ್ಧಕ್ಕರ್ಧ ಕುಸಿಯುವದು ಗ್ಯಾರಂಟಿ. ಇಲ್ಲದಿದ್ದರೆ ಉತ್ಪಾದನಾ ವೆಚ್ಚ ಗಗನಕ್ಕೇರಲಿದೆ. ಇನ್ನು ನೈಸರ್ಗಿಕ ಅನಿಲವನ್ನು ಅವಲಂಬಿಸಿರುವ ರಸಗೊಬ್ಬರ, ಆಹಾರ ಸಂಸ್ಕರಣೆ, ಸಿರಾಮಿಕ್ಸ್, ಗಾಜು ತಯಾರಿಕೆ ಉದ್ಯಮಗಳು ಬೆಲೆ ಏರಿಕೆ ಆಘಾತ ತಡೆಯಲಾರದೇ ತೇಲುಗಣ್ಣು ಮೇಲುಗಣ್ಣು ಬಿಡತೊಡಗಿವೆ. ಒಟ್ಟಿನಲ್ಲಿ ಈ ಪರದಾಟ ಎಲ್ಲಿಯವರೆಗೆ ಹೋಗಿ ಮುಟ್ಟುತ್ತದೋ ದೇವರೇ ಬಲ್ಲ.

ಉತ್ಪನ್ನಗಳು ತುಟ್ಟಿಯಾದರೆ ಹಣದುಬ್ಬರದ ಪೆಡಂಭೂತಕ್ಕೆ ಕೆಂಪು ಹಾಸಿನ ಸ್ವಾಗತ ನೀಡಿ ಬರಮಾಡಿಕೊಂಡಂತಾಗುತ್ತದೆ. ಈಗಾಗಲೇ ಇರುವ ದುಬಾರಿ ದುನಿಯಾಕ್ಕೆ ಮತ್ತಷ್ಟು ಪುಷ್ಟಿ ನೀಡಿದಂತಾಗುತ್ತದೆ.

ತೈಲ ಕಂಪನಿಗಳಿಗೆ ಸಂಕಷ್ಟ

ಪ್ರಸ್ತುತ ಎಲ್‌ಪಿಜಿಗೆ ಸಂಬಂಧಿಸಿದಂತೆ ಸಾರ್ವಜನಿಕ ತೈಲ ಕಂಪನಿಗಳ ಅಂಡರ್‌ರಿಕವರಿ 2026–27ನೇ ಸಾಲಿಗೆ 80,000 ಕೋಟಿ ರೂದಷ್ಟಾಗಲಿದೆ ಎಂದು ಇಕ್ರಾ ವರದಿಯು ತಿಳಿಸಿದೆ. ಕೇಂದ್ರ ಸರ್ಕಾರದ ಉಭಯ ಸಂಕಟ ಏನೆಂದರೆ ಅತ್ತಲಾಗೆ ಜನರ ಮೇಲೂ ಹೊರೆಯಾಗದಂತೆ ನೋಡಿಕೊಳ್ಳಬೇಕು ಇತ್ತಲಾಗೆ ತೈಲ ಕಂಪನಿಗಳಿಗೂ ನಷ್ಟವಾಗದಂತೆ ಕಾಪಾಡಬೇಕು. ಜೊತೆಗೆ ಸಬ್ಸಿಡಿ ಹೊರೆಯನ್ನೂ ಭರಿಸಬೇಕು. ಹಿಂದೆ ಯುಪಿಎ ಸರ್ಕಾರ ತೈಲ ಕಂಪನಿಗಳಿಗೆ ತೈಲ ಬಾಂಡ್‌ಗಳನ್ನು ವಿತರಿಸಿ ನಷ್ಟದ ಹೊರೆಯನ್ನು ಕಡಿಮೆ ಮಾಡಿತ್ತು. ಈಗ ಕೇಂದ್ರದ ಎನ್‌ಡಿಎ ಸರ್ಕಾರ ಯಾವ ತಂತ್ರಗಾರಿಕೆ ಅನುಸರಿಸುತ್ತದೆ ಎಂದು ಕಾದು ನೋಡಬೇಕು.

ಒಂದು ಎರಡು ಸಾಲದು

ಭಾರತದ ಒಟ್ಟು ಎಲ್‌ಪಿಜಿ ಆಮದಿನಲ್ಲಿ ಮಧ್ಯ ಪ್ರಾಚ್ಯದ ಪಾಲು ಶೇ.90ರಷ್ಟಿದೆ. ಈಗ ಯುದ್ಧದ ದೆಸೆಯಿಂದಾಗಿ ಇಡೀ ಮಧ್ಯಪ್ರಾಚ್ಯವೇ ಲಕ್ವ ಹೊಡೆದು ಕೂತಿದೆ. ಹೊರ್ಮುಜ್ ಜಲಸಂಧಿ ದಾಟಿ ಒಂದನೇ ಹಡಗು ಬಂತು ಎರಡನೇ ಹಡಗು ಆಗಮಿಸಿತು ಎಂದು ದಿನಪತ್ರಿಕೆ, ಟಿವಿ ಚಾನಲ್‌ಗಳ ವರದಿಗಳನ್ನು ನೋಡಿ ಸಂಭ್ರಮಿಸಿದ್ದೊಂದೇ ಬಂತು. ಆದರೆ ಕೇವಲ ಒಂದು ಎರಡು ಎಲ್‌ಪಿಜಿ ಹಡಗುಗಳು ಬಂದರೆ ಪ್ರಯೋಜನವಿಲ್ಲ. ಈಗಿನ ಪರಿಸ್ಥಿತಿ ಸುಧಾರಿಸಲು ಹೊರ್ಮುಜ್ ಜಲಸಂಧಿ ದಾಟಿ ಸಾಕಷ್ಟು ಪ್ರಮಾಣದ ಹಡಗುಗಳು ಭಾರತದ ಬಂದರುಗಳಿಗೆ ಬಂದಿಳಿಯಬೇಕು. ಅಂದಾಗ ಮಾತ್ರ ಈಗ ಎದ್ದಿರುವ ಹಾಹಾಕಾರವನ್ನು ಶಮನಗೊಳಿಸಲು ಸಾಧ್ಯ.

2025-26ನೇ ಸಾಲಿಗೆ ತೋಟಗಾರಿಕೆ ಬೆಳೆಗಳ ಹೆಕ್ಟೇರ್‌ವಾರು ಕ್ಷೇತ್ರದ ಪ್ರಮಾಣ ಕಡಿಮೆಯಾಗಿದ್ದರೂ ಕೆಲವು ಬೆಳೆಗಳ ಇಳುವರಿ ಹೆಚ್ಚಾಗಿದೆ. ಹೀಗಾಗಿ ಉತ್ಪಾದನೆ ಅಲ್ಪ ಏರಿಕೆಯಾಗಲಿದೆ ಎಂದು ಕೇಂದ್ರ ಕೃಷಿ ಸಚಿವಾಲಯವು ಅಂದಾಜಿಸಿದೆ.

ತೋಟಗಾರಿಕೆ ಬೆಳೆಗಳು

ಕ್ಷೇತ್ರ ಇಳಿಕೆ ಇಳುವರಿ ಏರಿಕೆ

ಹೆಕ್ಟೇರ್‌ವಾರು ಕ್ಷೇತ್ರದಲ್ಲಿ ಇಳಿಕೆಯಾಗಿದ್ದರೂ ಇಳುವರಿ ಹೆಚ್ಚಾಗಿದ್ದರಿಂದ 2025–26ನೇ ಸಾಲಿಗೆ ತೋಟಗಾರಿಕಾ ಬೆಳೆ ಉತ್ಪಾದನೆ ಅಲ್ಪ ಪ್ರಮಾಣದಲ್ಲಿ ಹೆಚ್ಚಳವಾಗಲಿದೆ ಎಂದು ಅಂದಾಜಿಸಲಾಗಿದೆ. ಹಣ್ಣು, ತರಕಾರಿ, ಸಾಂಬಾರ ಉತ್ಪನ್ನಗಳು, ಜೇನು ಸೇರಿದಂತೆ ವಿವಿಧ ಬೆಳೆಗಳ ಉತ್ಪಾದನೆ ಕಳೆದ ವರ್ಷ ಇದ್ದ 370.74 ದಶಲಕ್ಷ ಟನ್‌ಗೆ ಹೋಲಿಸಿದರೆ 370.85 ದಶಲಕ್ಷ ಟನ್‌ಗೆ ಅಲ್ಪ ಏರಿಕೆಯಾಗಲಿದೆ ಎಂದು ಹೇಳಲಾಗಿದೆ. ಎಲ್ಲಾ ತೋಟಗಾರಿಕೆ ಬೆಳೆಗಳ ಒಟ್ಟು ಹೆಕ್ಟೇರ್‌ವಾರು ಕ್ಷೇತ್ರ 30.13 ದಶಲಕ್ಷ ಹೆಕ್ಟೇರ್‌ದಷ್ಟಾಗಿದೆ. 2024–25ರಲ್ಲಿ ಇದು 30.14 ದಶಲಕ್ಷ ಹೆಕ್ಟೇರ್‌ದಷ್ಟಿತ್ತು ಎಂದು ಕೇಂದ್ರ ಕೃಷಿ ಸಚಿವಾಲಯವು ತಿಳಿಸಿದೆ.

ತಳಿ ಅಭಿವೃದ್ಧಿ

ಕಳೆದ ಬಾರಿ ಬೇಸಿಗೆ ಮಳೆ ಹಾಗೂ ಮುಂಗಾರು ಉತ್ತಮವಾಗಿರುವುದು ತೋಟಗಾರಿಕೆ ಬೆಳೆಗಳಿಗೆ ವರದಾನವಾಗಿದೆ. ಇದೇ ಸಂದರ್ಭದಲ್ಲಿ ದೇಶಾದ್ಯಂತ ಇರುವ ವಿವಿಧ ತೋಟಗಾರಿಕೆ ಮಹಾವಿದ್ಯಾಲಯಗಳು, ಕೃಷಿ ವಿಶ್ವವಿದ್ಯಾಲಯಗಳು ಅಧಿಕ ಇಳುವರಿ ನೀಡುವ ಉತ್ತಮ ಗುಣಮಟ್ಟದ ತೋಟಗಾರಿಕೆ ಬೆಳೆಗಳ ವೈವಿಧ್ಯಮಯ ನೂತನ ತಳಿ ಮಾದರಿಗಳನ್ನು ಅಭಿವೃದ್ಧಿಪಡಿಸಿ ಪರಿಚಯಿಸಿದ್ದು, ರೈತರ ಪಾಲಿಗೆ ವರದಾನವಾಯಿತು. ಸಾವಯವ ಪದ್ಧತಿ ಹಾಗೂ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿಕೊಂಡಿದ್ದು ಕೂಡ ಬೆಳೆಗಳ ಇಳುವರಿ ಹೆಚ್ಚಿಸಲು ನೆರವಾಯಿತು. ತೋಟಗಾರಿಕೆ ಬೆಳೆಗಳ ಹೆಕ್ಟೇರ್‌ವಾರು ಕ್ಷೇತ್ರ ಕೊಂಚ ಕಡಿಮೆಯಾಗಿದ್ದರೂ

- ತೋಟಗಾರಿಕೆ ಬೆಳೆ ಕ್ಷೇತ್ರ 30.13 ದಶಲಕ್ಷ ಹೆಕ್ಟೇರ್
- ಉತ್ಪಾದನೆ 370.85 ದಶಲಕ್ಷ ಟನ್ ಏರಿಕೆ
- ತಂತ್ರಜ್ಞಾನದ ಬಲ

ಕೆಲವು ಬೆಳೆಗಳ ಇಳುವರಿ ಹೆಚ್ಚಾಗಿದ್ದರಿಂದ ಉತ್ಪಾದನೆ ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಲು ಸಹಕಾರಿಯಾಗಿದೆ ಎಂದು ತಿಳಿಸಿದೆ.

ಹಣ್ಣು,ತರಕಾರಿ ಏರುಪೇರು

ಪ್ರಮುಖ ಹಣ್ಣುಗಳ ಪೈಕಿ ಬಾಳೆಹಣ್ಣು 39.62 ದಶಲಕ್ಷ ಟನ್, ಮಾವು 23.45 ದಶಲಕ್ಷ ಟನ್, ಸೇಬು 2.79 ದಶಲಕ್ಷ ಟನ್, ಪಪ್ಪಾಯ 5.81 ದಶಲಕ್ಷ ಟನ್‌ದಷ್ಟಾಗುವದೆಂದು ನಿರೀಕ್ಷಿಸಲಾಗಿದೆ. ಆದರೆ ಕಿತ್ತಳೆ 6.46 ಧಶಲಕ್ಷ ಟನ್, ದ್ರಾಕ್ಷಿ 3.4 ದಶಲಕ್ಷ ಟನ್, ಅನಾನಸು 1.7 ದಶಲಕ್ಷ ಟನ್, ದಾಳಿಂಬೆ 2.8 ದಶಲಕ್ಷ ಟನ್, ಕಲ್ಲಂಗಡಿ 4.62 ದಶಲಕ್ಷ ಟನ್‌ಗೆ ಇಳಿಮುಖವಾಗಲಿದೆ ಎಂದು ಅಂದಾಜಿಸಲಾಗಿದೆ. ತರಕಾರಿಗಳ ಪೈಕಿ ಟೊಮೆಟೋ, ಕುಂಬಳಕಾಯಿ, ಗೆಣಸು, ಹಸಿ ಮೆಣಸಿನಕಾಯಿ, ಮೂಲಂಗಿ ಉತ್ಪಾದನೆ ಹೆಚ್ಚಾಗುವದೆಂದು ಹೇಳಲಾಗಿದೆ. ಟೊಮೆಟೋ ಉತ್ಪಾದನೆ ಶೇ.10ರಷ್ಟು ಹೆಚ್ಚಾಗಲಿದ್ದರೆ ಉಳ್ಳಾಗಡ್ಡಿ ಶೇ.11ರಷ್ಟು ಇಳಿಕೆಯಾಗಲಿದೆ. ಆಲೂಗಡ್ಡೆ ಉತ್ಪಾದನೆ ಕಳೆದ ವರ್ಷದ ಮಟ್ಟದಲ್ಲೇ ಇರಲಿದೆ ಎಂದು ಹೇಳಲಾಗಿದೆ.

ತಂತ್ರಜ್ಞಾನದ ಬಲ

ಸಾಂಬಾರು ಉತ್ಪನ್ನಗಳ ಉತ್ಪಾದನೆ 12.82 ದಶಲಕ್ಷ ಟನ್‌ದಷ್ಟಾಗುವ ಸಾಧ್ಯತೆ ಇದೆ. ತೆಂಗಿನಕಾಯಿ 14.92 ದಶಲಕ್ಷ ಟನ್, ಅಡಿಕೆ 1.53 ದಶಲಕ್ಷ ಟನ್, ವೀಳ್ಯದೆಲೆ 6,84,000 ಟನ್, ಗೋಡಂಬಿ ಮತ್ತು ಕೋಕಾ ಅನುಕ್ರಮವಾಗಿ 8,02,000 ಟನ್, 33,000 ಟನ್‌ದಷ್ಟಾಗಲಿದೆ ಎಂದು ನಿರೀಕ್ಷಿಸಲಾಗಿದೆ.

ಇತ್ತೀಚೆಗೆ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ ನೂತನ ತಂತ್ರಜ್ಞಾನಗಳ ಮೇಲೆ ಹೂಡಿಕೆ ಮಾಡಲಾಗುತ್ತಿದೆ. ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನ ತೋಟಗಾರಿಕೆ ಬೆಳೆಗಾರರಿಗೆ ಅನುಕೂಲವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಲಾಗಿದೆ. ಹಣ್ಣು, ತರಕಾರಿಗಳ ಸಂಸ್ಕರಣೆ, ಮೌಲ್ಯವರ್ಧನೆಗೆ ಸಂಬಂಧಿಸಿದಂತೆ ಎಐ ತಂತ್ರಜ್ಞಾನ ನೆರವಿಗೆ ಬರಲಿದೆ ಎಂದು ನಿರೀಕ್ಷಿಸಲಾಗಿದೆ.